ಶ್ರೀ:

ಶ್ರೀವಾಸಿಷ್ಠರಾಮಾಯಣಂ.

ಮುಮುಕ್ಷುವ್ಯವಹಾರ ಪ್ರಕರಣಂ.

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್

ಬಹದ್ದೂರ್ ಜಿ. ಸಿ. ಎಸ್. ಐ.

ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ

ಗುಂಡಶಾಸ್ತ್ರಿಕೃತ

ಶ್ರೀ ಕೃಷ್ಣರಾಜವಿಜ್ಞಾನವೈಭವ

ನಾಮಕಟೀಕಾಸಹಿತಂ

ಸೌಮ್ಯ ಸಂ|| ಜ್ಯೇಷ್ಠ ಶು|| ಏಕಾದಶೀ

ಮೈಸೂರು:

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್

೧೯೦೯.

ಕ್ರಯ ರೂ ೧—೪—೦

॥ ಶ್ರೀಃ ॥

ಶ್ರೀವಾಸಿಷ್ಠರಾಮಾಯಣಂ

ಮುಮುಕ್ಷುವ್ಯವಹಾರಪ್ರಕರಣಂ.

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್

ಬಹದ್ದೂರ್ ಜಿ. ಸಿ. ಎಸ್. ಐ.

ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ

ಗುಂಡಶಾಸ್ತ್ರಿಕೃತ

ಶ್ರೀ ಕೃಷ್ಣರಾಜವಿಜ್ಞಾನಪ್ರದೀಪ

ನಾಮಕಟೀಕಾಸಹಿತಂ

ಸೌಮ್ಯ ಸಂ॥ ಜ್ಯೇಷ್ಠ ಶು॥ ಏಕಾದಶೀ

ಮೈಸೂರು :

ಗ್ರಾಜುಯೇಟ್ಸ ಟ್ರೇಡಿಂಗ್ ಆಸೋಸಿಯೇಷನ್ ಪ್ರೆಸ್

೧೯೦೯.

ಶ್ರೀ ವಾಸಿಷ್ಠರಾಮಾಯಣ.

ಮುಮುಕ್ಷುವ್ಯವಹಾರಪ್ರಕರಣವಿಷಯಸೂಚನೆ.

ಓಮ್

ಶ್ರೀ ರಾಮಚಂದ್ರಾಯ ಪರಬ್ರಹ್ಮಣೇ
ನಮೋ ನಮಃ.

ಶ್ರೀ ವಾಸಿಷ್ಠ ರಾಮಾಯಣೇ

ಮುಮುಕ್ಷುವ್ಯವಹಾರ ಪ್ರಕರಣಮ್.

ಶ್ರೀ ವಾಲ್ಮೀಕಿರುವಾಚ.

ಇತಿ ನಾದೇನ ಮಹತಾ ವಚಸ್ಯುಕ್ತೇ ಸಭಾಗತೈಃ ।
ರಾಮಮಗ್ರಗತಂ ಪ್ರೀತ್ಯಾ ವಿಶ್ವಾಮಿತ್ರೋಭ್ಯಭಾಷತ ॥ ೧ ॥

ಶ್ರೀಃ.

ಶ್ರೀ ವಾಸಿಷ್ಠರಾಮಾಯಣದಲ್ಲಿ
ಮುಮುಕ್ಷು ವ್ಯವಹಾರ ಪ್ರಕರಣವು.

ಸ್ವಯಂ ವಿಚಾರಾತ್ ಸಂಬುದ್ಧೇ ಪಿತ್ರಾಚೋಕ್ತೇಪ್ಯವಿಶ್ವಸನ್ ।
ಜನಕೋಕ್ತ್ಯಾ ಶುಕಸ್ತತ್ತ್ವೇ ವಿಶ್ರಾಂತ ಇತಿ ಕೀರ್ತ್ಯತೇ ॥

ಶುಕಮಹರ್ಷಿಯು, ತಾನು ವಿಚಾರಮಾಡಿ ತಿಳಿದುದರಲ್ಲಿಯೂ ತಂದೆ ಹೇಳಿದುದರಲ್ಲಿಯೂ ನಂಬುಗೆಯಿಲದವನಾಗಿ, ಜನಕರಾಜನು ಹೇಳಿದ ಮಾತನ್ನು ಕೇಳಿ ತತ್ತ್ವಮಾರ್ಗದಲ್ಲಿ ವಿಶ್ರಾಂತಿಹೊಂದಿದನೆಂದು ಈ ಸರ್ಗದಲ್ಲಿ ಹೇಳಲ್ಪಡುವುದು.

ಮೊದಲನೆಯದಾದ ವೈರಾಗ್ಯಪ್ರಕರಣದಲ್ಲಿ ಶ್ರೀರಾಮಚಂದ್ರನು ಬಹಳವಾಗಿ ವಿವರಿಸಿರುವ ವೈರಾಗ್ಯಸಂಪತ್ತನ್ನು ಪಡೆಯುವುದಕ್ಕೆ ಯಾವವಿಧವಾಗಿ ವ್ಯವಹಾರವಿಟ್ಟುಕೊಂಡಿರಬೇಕೆಂದೂ—ಅದರಿಂದ ತತ್ವಜ್ಞಾನವುಂಟಾಗುವಬಗೆ ಯಾವುದೆಂದೂ ಜಿಜ್ಞಾಸೆಯುಂಟಾದರೆ, ಅದನ್ನು ವಿವರಿಸುವುದಕ್ಕೋಸ್ಕರವೇ ಈಯೆರಡನೆಯ ಪ್ರಕರಣವನ್ನುಪಕ್ರಮಿಸಿರುವ ಶ್ರೀ ವಾಲ್ಮೀಕಿಮುನಿಯು, ಮತ್ತೆ ಭರದ್ವಾಜನೆಂಬ ಶಿಷ್ಯನನ್ನು ಕುರಿತು ಹೇಳಿದರು.

ಕೇಳಯ್ಯಾ! ಭರದ್ವಾಜನೆ! ಪೂರ್ವಪ್ರಕರಣದಲ್ಲಿ ಹೇಳಿದಂತೆ ಆ ಸಭೆಯಲ್ಲಿರತಕ್ಕವರೆಲ್ಲರೂ ಮಹಾಶಬ್ದದಿಂದ ಹೇಳಲಾಗಿ, ವಿಶ್ವಾಮಿತ್ರಮುನಿಯು ಮುಂಭಾಗದಲ್ಲಿ ಕುಳಿತಿರುವ ಶ್ರೀರಾಮನನ್ನು ಕುರಿತು, ಪ್ರೀತಿಯಿಂದ ಮಾತಾಡಲುಪಕ್ರಮಿಸಿದರು ॥೧॥

ನ ರಾಘವ ತವಾಸ್ತ್ಯನ್ಯತ್ ಜ್ಞೇಯಂ ಜ್ಞಾನವತಾಂ ವರ |
ಸ್ವಯೈವ ಸೂಕ್ಷ್ಮಯಾ ಬುದ್ಧ್ಯಾ ಸರ್ವಂ ವಿಜ್ಞಾತವಾನಸಿ || ೨ ||
ಕೇವಲಂ ಮಾರ್ಜನಾಮಾತ್ರಂ ಮನಾಗೇವೋಪಯುಜ್ಯತೇ |
ಸ್ವಭಾವವಿಮಲೇ ನಿತ್ಯಂ ಸ್ವಬುದ್ಧಿಮುಕುರೇ ತವ || ೩ ||
ಭಗವದ್ವ್ಯಾಸಪುತ್ರಸ್ಯ ಶುಕಸ್ಯೇವ ಮತಿಸ್ತವ |
ವಿಶ್ರಾನ್ತಿಮಾತ್ರಮೇವಾನ್ತಃ ಜ್ಞಾತಜ್ಞೇಯಾಪ್ಯಪೇಕ್ಷತೇ || ೪ ||

ಶ್ರೀರಾಮಉವಾಚ.

ಭಗವದ್ವ್ಯಾಸಪುತ್ರಸ್ಯ ಶುಕಸ್ಯ ಭಗವನ್ ಕಥಮ್ |
ಜ್ಞೇಯೇಽಪ್ಯಾದೌ ನ ವಿಶ್ರಾನ್ತಂ ವಿಶ್ರಾನ್ತಂ ಚ ಧಿಯಾ ಪುನಃ || ೫ ||

ವಿಶ್ವಾಮಿತ್ರಉವಾಚ.

ಆತ್ಮೋದನ್ತಸಮಂ ರಾಮ ಕಥ್ಯಮಾನಮಿದಂ ಮಯಾ |
ಶೃಣು ವ್ಯಾಸಾತ್ಮಜೋದನ್ತಂ ಜನ್ಮನಾಮನ್ತಕಾರಣಮ್ || ೬ ||

ಜ್ಞಾನಿಗಳಲ್ಲೆಲ್ಲ ಶ್ರೇಷ್ಠನಾದ ಶ್ರೀರಾಮನೆ! ನಿನಗೆ ತಿಳಿಯಬೇಕಾದ ಮತ್ತೊಂದು ವಿಷಯವೇ ಇಲ್ಲ; ಸೂಕ್ಷ್ಮವಾಗಿರುವ ನಿನ್ನ ಬುದ್ಧಿಯಿಂದಲೇ ಎಲ್ಲವನ್ನೂ ತಿಳಿದವನಾಗಿರುವೆ ||೨||

ಆದರೆ ಸ್ವಭಾವವಾಗಿ ನಿರ್ಮಲವಾದ ನಿನ್ನ ಬುದ್ಧಿಯೆಂಬ ಕನ್ನಡಿಗೆ ಸಂದೇಹವೆಂಬ ಮಾಲಿನ್ಯವುಂಟಾಗಿರುವುದು; ಈ ಕೊಳೆಯನ್ನು ಸ್ವಲ್ಪವಾಗಿ ಒಂದಾವರ್ತಿ ತೊಳೆಯುವುದು ಮಾತ್ರ ಈಗಲುಪಯುಕ್ತವಾಗಿರುವುದು ||೩||

ಮಹಾತ್ಮನಾದ (೧) ವ್ಯಾಸಮಹರ್ಷಿಯ ಪುತ್ರನಾದ ಶುಕಮುನಿಯಂತೆ, ನಿನ್ನ ಬುದ್ಧಿಯೂ ಕೂಡ ತತ್ವಜ್ಞಾನವನ್ನು ಪಡೆದಿದ್ದರೂ, ಅಂತರವಾಗಿ ವಿಶ್ರಾಂತಿಮಾತ್ರವನ್ನಪೇಕ್ಷಿಸತಕ್ಕದಾಗಿರುವುದು ||೪||

ಹೀಗೆ ವಿಶ್ವಾಮಿತ್ರಮುನಿಯು ಹೇಳಿದ ಮಾತನ್ನು ಕೇಳಿ, ಶ್ರೀರಾಮನು ಕುತೂಹಲವುಳ್ಳವನಾಗಿ ಅವರನ್ನು ಕುರಿತು ಹೇಳಿದನು.

ಪೂಜ್ಯರೆ! ಮಹಾತ್ಮನಾದ—ವೇದವ್ಯಾಸರ ಪುತ್ರರಾದ—ಶುಕಮಹರ್ಷಿಗಳ ಬುದ್ಧಿಯು, ತತ್ವಮಾರ್ಗದಲ್ಲಿ ಮೊದಲು ವಿಶ್ರಾಂತಿಯಿಲ್ಲದಿದ್ದು ಆಮೇಲೆ ವಿಶ್ರಾಂತಿಪಡೆದ ಬಗೆಯಾವುದು? ||೫||

ಇದಕ್ಕುತ್ತರವಾಗಿ ಶ್ರೀವಿಶ್ವಾಮಿತ್ರರು ಹೇಳಿದರು.

ಹೇರಾಮ! ವ್ಯಾಸಪುತ್ರನಾದ ಶುಕಮುನಿಯ ವೃತ್ತಾಂತವನ್ನು ನಾನು ಹೇಳುವೆನು; ಕೇಳು. ಇದು ನಿನ್ನ ವೃತ್ತಾಂತಕ್ಕೆ ಸಮಾನವಾಗಿಯೇ ಇರುವುದು; ಇದು ಜನ್ಮನಾಶಕ್ಕೆ (ಮೋಕ್ಷಕ್ಕೆ) ಕಾರಣವಾದುದು ||೬||

---

(೧) ಪ್ರತಿ ದ್ವಾಪರಯುಗದ ಕೊನೆಯಲ್ಲೂ ವ್ಯಾಸಮುನಿಯುವತರಿಸುವರೆಂದು ಪುರಾಣೋಕ್ತವಾಗಿರುವಕಾರಣ, ಶ್ರೀರಾಮಾವತಾರಕ್ಕೆ ಹಿಂದೆಯೂ ವ್ಯಾಸಮುನಿಯುವತರಿಸಿದ್ದರೆಂದು ಸಿದ್ಧವಾಗುವುದು.

[1]ಯೋಯಮಞ್ಜನಶೈಲಾಭೋ ನಿವಿಷ್ಟೋ ಹೇಮವಿಷ್ಟರೇ ।
ಪಾರ್ಶ್ವೇ ತವ ಪಿತುರ್ವ್ಯಾಸೋ ಭಗವಾನ್ ಭಾಸ್ಕರದ್ಯುತಿಃ ॥ ೭ ॥
ಅಸ್ಯಾಭೂದಿನ್ದುವದನಃ ತನಯೋ ನಯಕೋವಿದಃ ।
ಶುಕೋನಾಮ ಮಹಾಪ್ರಾಜ್ಞೋ ಯಜ್ಞೋ ಮೂರ್ತ್ಯೇವ ಸುಸ್ಥಿತಃ ॥
ಪ್ರವಿಚಾರಯತೋ ಲೋಕಯಾತ್ರಾಮಲಮಿಮಾಂ ಹೃದಿ ।
ತವೇವ ಕಿಲ ತಸ್ಯಾಪಿ ವಿವೇಕಲುದಭೂದಯಮ್ ॥ ೯ ॥
ತೇನಾಸೌ ಸ್ವವಿವೇಕೇನ ಸ್ವಯಮೇವ ಮಹಾಮನಾಃ ।
ಪ್ರವಿಚಾರ್ಯ ಚಿರಂ ಚಾರು ಯತ್ ಸತ್ಯಂ ತದವಾಪ್ತವಾನ್ ॥ ೧೦ ॥
ಸ್ವಯಂ ಪ್ರಾಪ್ತೇ ಪರೇ ವಸ್ತುನ್ಯವಿಶ್ರಾನ್ತಮನಾಃ ಸ್ಥಿತಃ ।
ಇದಂ ವಸ್ತ್ವಿತಿ ವಿಶ್ವಾಸಂ ನಾಸಾವಾತ್ಮನ್ಯುಪಾಯಯೌ ॥ ೧೧ ॥
ಕೇವಲಂ ವಿರರಾಮಾಸ್ಯ ಚೇತೋ ವಿಗತಚಾಪಲಮ್ ।
ಭೋಗೇಭ್ಯೋ ಭೂರಿಭಙ್ಗೇಭ್ಯೋ ಧಾರಾಭ್ಯಇವ ಚಾತಕಃ ॥ ೧೨ ॥
ಏಕದಾ ಸೋಮಲಪ್ರಜ್ಞೋ ಮೇರಾವೇಕಾನ್ತಸುಸ್ಥಿತಮ್ ।
ಪಪ್ರಚ್ಛ ಪಿತರಂ ಭಕ್ತ್ಯಾ ಕೃಷ್ಣದ್ವೈಪಾಯನಂ ಮುನಿಮ್ ॥ ೧೩ ॥

ನಿಮ್ಮ ತಂದೆಯ ಮಗ್ಗುಲಿನಲ್ಲಿ, ಅಂಜನಪರ್ವತ ಸಮಾನನಾಗಿ--ಸೂರ್ಯನಂತೆ ಪ್ರಕಾಶಿಸುತಿರುವ – ಪೂಜ್ಯನಾದ ಯಾವ ವೇದವ್ಯಾಸಮುನಿಯು, ಸುವರ್ಣಮಯವಾದ ಆಸನದಲ್ಲಿ ಕುಳಿತಿರುವನೋ; ಇವನಿಗೆ, ಸಕಲ ಶಾಸ್ತ್ರ ತತ್ವಜ್ಞನಾದ—ಮಹಾಪ್ರಾಜ್ಞನಾದ – ಚಂದ್ರನಂತೆ ಆಹ್ಲಾದಕವಾದ ಮುಖವುಳ್ಳ—ಮೂರ್ತಿಮತ್ತಾದ ಯಜ್ಞಕರ್ಮದಂತಿರುವ – ಶುಕನೆಂಬ ಪುತ್ರನಾದನು ॥೭—೮॥

ಮನಸ್ಸಿನಲ್ಲಿ ಈ ಲೋಕವ್ಯಾಪಾರವನ್ನು ಚೆನ್ನಾಗಿ ಪರ್ಯಾಲೋಚಿಸುತಿರುವಾಗ, ಅವನಿಗೂ ನಿನ್ನಂತೆಯೇ ಈ ರೀತಿಯಾದ ವಿವೇಕವುಂಟಾಯಿತು ॥೯॥

ಮಹಾಮತಿಯಾದ ಆ ಶುಕನು, ಆ ತನ್ನ ವಿವೇಕದಿಂದ ಬಹುಕಾಲ ಚೆನ್ನಾಗಿ ವಿಚಾರಮಾಡಿ, ಬಳಿಕ ಯಾವುದು ಸತ್ಯವೋ - ಅದನ್ನು ಹೊಂದಿದನು (೧) ॥೧೦॥

ಆ ಪರತತ್ವವು ತಾನಾಗಿ ಇವನಿಗೆ ಸಿಕ್ಕಿದ್ದರೂ ಕೂಡ, ಇದೇ ಪರಮಾರ್ಥವೆಂದು ತನ್ನಲ್ಲಿ ತನಗೆ ನಂಬುಗೆಯಿಲ್ಲದವನಾಗಿ, ಆ ಶುಕಮುನಿಯು ಶಾಂತಿಪಡೆಯಲಿಲ್ಲ ॥೧೧॥

ಬಳಿಕ ಇವನ ಚಿತ್ತವು ಚಾಂಚಲ್ಯಹೀನವಾಗಿ, ಗ್ರೀಷ್ಮಕಾಲದಲ್ಲಿ ಬಿಸಿಬಿಸಿಯಾಗಿ ಖಂಡಖಂಡವಾಗಿ ಸುರಿಯುವ ಜಲಧಾರೆಗಳನ್ನು ಚಾತಕಪಕ್ಷಿಯು ಬಿಟ್ಟುಬಿಡುವಂತೆ, ನಾನಾವಿಧದುಃಖಹೇತುವಾದ ಪ್ರಾಪಂಚಿಕ ಭೋಗಗಳನ್ನು ಬಿಟ್ಟುಬಿಟ್ಟಿತು ॥೧೨॥

ನಿರ್ಮಲವಾದ ಜ್ಞಾನವುಳ್ಳ ಆ ಶುಕನು, ಒಂದುವೇಳೆ ಮೇರುಪರ್ವತದಲ್ಲಿ ವಿವಿಕ್ತವಾಗಿ ಕುಳಿತಿದ್ದ—ತಂದೆಯಾದ ವ್ಯಾಸಮುನಿಯನ್ನು ಕುರಿತು, ಭಕ್ತಿಯಿಂದ ಪ್ರಶ್ನೆ ಮಾಡಿದನು ॥೧೩॥

---

[1] ದ್ವಾಭ್ಯಾಂ ಯುಗ್ಮಮ್,

(೧) ಜ್ಞಾನಿಯಾದನೆಂದು ಭಾವವು.

ಸಂಸಾರಾಡಂಬರಮಿದಂ ಕಥಮಭ್ಯುತ್ಥಿತಂ ಮುನೇ ।
ಕಥಂ ಚ ಪ್ರಶಮಂ ಯಾತಿ ಕಿಯತ್ ಕಸ್ಯ ಕದೇತಿ ವಾ ॥ ೧೪ ॥
ಇತಿ ಪೃಷ್ಟೇನ ಮುನಿನಾ ವ್ಯಾಸೇನಾಖಿಲಮಾತ್ಮಜೇ ।
ಯಥಾವದಮಲಂ ಪ್ರೋಕ್ತಂ ವಕ್ತವ್ಯಂ ವಿದಿತಾತ್ಮನಾ ॥ ೧೫ ॥
ಅಜ್ಞಾಸಿಷಂ ಪೂರ್ವಮೇತತ್ ಅಹಮಿತ್ಯಥ ತತ್ ಪಿತುಃ ।
ಸ ಶುಕಃ ಶುಭಯಾ ಬುದ್ಧ್ಯಾ ನ ವಾಕ್ಯಂ ಬಹ್ವಮನ್ಯತ ॥ ೧೬ ॥
[1]ವ್ಯಾಸೋಽಪಿ ಭಗವಾನ್ ಬುದ್ಧ್ವಾ ಪುತ್ರಾಭಿಪ್ರಾಯಮೀದೃಶಮ್ ।
ಪ್ರತ್ಯುವಾಚ ಪುನಃ ಪುತ್ರಂ ನಾಹಂ ಜಾನಾಮಿ ತತ್ತ್ವತಃ ॥ ೧೭ ॥
ಜನಕೋ ನಾಮ ಭೂಪಾಲೋ ವಿದ್ಯತೇ ವಸುಧಾತಲೇ ।
ಯಥಾವದ್ವೇತ್ತ್ಯಸೌ ವೇದ್ಯಂ ತಸ್ಮಾತ್ ಸರ್ವಮವಾಪ್ಸ್ಯಸಿ ॥ ೧೮ ॥
ಪಿತ್ರೇತ್ಯುಕ್ತಃ ಶುಕಃ ಪ್ರಾಯಾತ್ ಸುಮೇರೋರ್ವಸುಧಾತಲೇ ।
ವಿದೇಹನಗರೀಂ ಪ್ರಾಪ ಜನಕೇನಾಭಿಪಾಲಿತಾಮ್ ॥ ೧೯ ॥
ಆವೇದಿತೋಽಸೌ ಯಾಷ್ಟೀಕೈಃ ಜನಕಾಯ ಮಹಾತ್ಮನೇ ।
ದ್ವಾರಿ ವ್ಯಾಸಸುತೋ ರಾಜನ್ ಶುಕೋಽತ್ರಾಸ್ಥಿತವಾನಿತಿ ॥ ೨೦ ॥

ಮಹಾಮುನಿಯಾದ ತಂದೆಯೆ! ಈ ಸಂಸಾರವೆಂಬ ಕಪಟ ಚೇಷ್ಟೆಯು ಹೇಗೆ ಉದ್ಭವಿಸಿತು? ಇದು ಶಾಂತಿಹೊಂದುವುದು ಹೇಗೆ? ಇದು ಎಷ್ಟಿರುವುದು? ಈ ಸಂಸಾರವೆಂಬುದು ದೇಹೇಂದ್ರಿಯಾದಿಗಳಿಗಿರುವುದೆ? ಅಥವಾ ನಿರ್ವಿಕಾರವಾದ ಆತ್ಮನಿಗಿರುವುದೆ? ಇದು ಶಾಂತಿಹೊಂದುವುದು ಯಾವಾಗ? ॥೧೪॥

ಈ ರೀತಿಯಾಗಿ ಶುಕನು ಪ್ರಶ್ನೆಮಾಡಲು, ಜ್ಞಾನಿಯಾದ ವ್ಯಾಸಮುನಿಯು, ಮಗನನ್ನು ಕುರಿತು ಹೇಳಬೇಕಾದುದನ್ನೆಲ್ಲ ಕ್ರಮವಾಗಿ ಹೇಳಿದನು ॥೧೫॥

ಬಳಿಕ ಆ ಶುಕನು ಶುಭವಾದ ಬುದ್ಧಿಯಿಂದ,--ಇದನ್ನು ನಾನು ಪೂರ್ವದಲ್ಲಿಯೇ ತಿಳಿದಿದ್ದೆನೆಂದುಕೊಂಡು—ತಂದೆಯ ಆ ಮಾತನ್ನು ಅಷ್ಟು ಹೆಚ್ಚಾಗಿ ಗೌರವಿಸಲಿಲ್ಲ ॥೧೬॥

ಪೂಜ್ಯರಾದ ಆ ವ್ಯಾಸರೂ ಕೂಡ ಈ ವಿಧವಾದ ಮಗನ ಅಭಿಪ್ರಾಯವನ್ನು ತಿಳಿದು, ಮಗನನ್ನು ಕುರಿತು 'ನಾನು ತತ್ವವನ್ನು ಚೆನ್ನಾಗಿ ಅರಿಯೆನು; ಈ ಭೂಮಂಡಲದಲ್ಲಿ ಜನಕನೆಂಬ ದೊರೆಯಿರುವನು; ಇವನು ತತ್ವವನ್ನೆಲ್ಲ ಕ್ರಮವಾಗಿ ಬಲ್ಲನು; ಅವನ ಬಳಿಗೆ ಹೋದರೆ, ನೀನು ತತ್ವವನ್ನೆಲ್ಲ ಸ್ಪಷ್ಟವಾಗಿ ಅರಿಯುವೆ' ಎಂದು ಹೇಳಿದರು ॥೧೭—೧೮॥

ಈ ರೀತಿಯಾಗಿ ತಂದೆಯು ಹೇಳಲು, ಆ ಶುಕಮುನಿಯು ಮೇರುಪರ್ವತದಿಂದ ಭೂಮಿಗೆ ಬಂದು, ಜನಕನಿಂದ ಪರಿಪಾಲಿಸಲ್ಪಡುತ್ತಿದ್ದ ವಿದೇಹಪಟ್ಟಣವನ್ನು ಸೇರಿದನು॥೧೯

ಅಲ್ಲಿ ಅರಮನೆಯ ಬಾಗಿಲಿಗೆ ಹೋಗಲಾಗಿ, ಅಲ್ಲಿದ್ದ ಕಟ್ಟಿಗೆಯವರು ಮಹಾತ್ಮನಾದ ಜನಕನ ಬಳಿಗೆ ಹೋಗಿ, 'ಮಹಾರಾಜ! ವ್ಯಾಸಪುತ್ರರಾದ ಶುಕರು ಈ ಅರಮನೆಯ ಬಾಗಿಲಿಗೆ ಬಂದು ನಿಂತಿರುವರು' ಎಂದು ಶುಕರ ಆಗಮನವನ್ನು ತಿಳುಹಿಸಿದರು ॥೨೦॥

---

1 ದ್ವಾಭ್ಯಾಂ ಯುಗ್ಮಮ್.

ಜಿಜ್ಞಾಸಾರ್ಥಂ ಶುಕಸ್ಯಾಸೌ ಆಸ್ಯತಾಮೇವೇತ್ಯವಜ್ಞಯಾ |
ಉಕ್ತ್ವಾ ಬಭೂವ ಜನಕಃ ತೂಷ್ಣೀಂ ಸಪ್ತ ದಿನಾನ್ಯಥ || ೨೧ ||
ತತಃ ಪ್ರವೇಶಯಾಮಾಸ ಜನಕಃ ಶುಕಮಙ್ಗಣಮ್ |
ತತ್ರಾಹಾನಿ ಸ ಸಪ್ತೈವ ತಥೈವಾವಸದುನ್ಮನಾಃ || ೨೨ ||
[1]ಅಥ ಪ್ರವೇಶಯಾಮಾಸ ಜನಕೋಽನ್ತಃಪುರಂ ಶುಕಮ್ |
ರಾಜಾ ನ ದೃಶ್ಯತೇ ತಾವತ್ ಇತಿ ಸಪ್ತ ದಿನಾನಿ ಚ || ೨೩ ||
ತತ್ರೋನ್ಮದಾಭಿಃ ಕಾನ್ತಾಭಿಃ ಭೋಜನೈರ್ಭೋಗಸಞ್ಚಯೈಃ |
ಜನಕೋ ಲಾಲಯಾಮಾಸ ಶುಕಂ ಶಶಿಸಮಾನನಮ್ || ೨೪ ||
ತೇ ಭೋಗಾಸ್ತಾನಿ ದುಃಖಾನಿ ವ್ಯಾಸಪುತ್ರಸ್ಯ ತನ್ಮನಃ |
ನಾಜಹ್ರುರ್ಮನ್ದಪವನಾಃ ಬದ್ಧಪೀಠಮಿವಾಚಲಮ್ || ೨೫ ||
ಕೇವಲಂ ಸುಸಮಃ ಸ್ವಸ್ಥೋ ಮೌನೀ ಮುದಿತಮಾನಸಃ |
ಅತಿಷ್ಠತ್ ಸ ಶುಕಸ್ತತ್ರ ಸಮ್ಪೂರ್ಣ ಇವ ಚನ್ದ್ರಮಾಃ || ೨೬ ||
ಪರಿಜ್ಞಾತಸ್ವಭಾವಂ ತಂ ಶುಕಂ ಸ ಜನಕೋ ನೃಪಃ |
ಆನೀತಂ ಮುದಿತಾತ್ಮಾನಂ ಅವಲೋಕ್ಯ ನನಾಮ ಹ || ೨೭ ||

ಬಳಿಕ ಆ ಜನಕನು, ಶುಕಮುನಿಯ ಪರೀಕ್ಷಾರ್ಥವಾಗಿ 'ಅಲ್ಲಿರಲಿ' ಎಂದು ಇಷ್ಟುಮಾತ್ರವನ್ನೇ ಅನಾದರದಿಂದ ಹೇಳಿಬಿಟ್ಟು, ಏಳುದಿವಸ ಸುಮ್ಮನಿದ್ದುಬಿಟ್ಟನು ||೨೧||

ಅನಂತರ ಜನಕನು, ಆ ಶುಕಮುನಿಯನ್ನು ಅರಮನೆಯ ಅಂಗಳಕ್ಕೆ ಪ್ರವೇಶಮಾಡಿಸಿದನು; ಅಲ್ಲಿ ಯಥಾಪ್ರಕಾರ ಆ ಶುಕಮುನಿಯು ಏಳುದಿವಸ ಉತ್ಕಂಠಿತನಾಗಿ ವಾಸಮಾಡಿದನು ||೨೨||

ಆಮೇಲೆ ಜನಕನು ಶುಕಮುನಿಯನ್ನು ಅಂತಃಪುರಕ್ಕೆ ಪ್ರವೇಶಮಾಡಿಸಿದನು. ಅಲ್ಲಿ ಜನಕನಪ್ಪಣೆಯಿಂದ ಯುವತಿಯರಾದ ಸುಂದರಿಯರು—'ನೀನು ಭೋಜನಾದಿಗಳನ್ನನುಭವಿಸುವ ವರೆಗೂ ಜನಕಮಹಾರಾಜನು ಕಣ್ಣಿಗೆ ಕಾಣಿಸಿಕೊಳ್ಳುವುದಿಲ್ಲ' ಎಂದು ಹೇಳಿ, ಚಂದ್ರಸಮಾನವಾದ ಮುಖವುಳ್ಳ ಆ ಶುಕನನ್ನು, ದಿವ್ಯ ಭೋಜನಾದಿ ಭೋಗಗಳಿಂದ ಏಳುದಿವಸ ಲಾಲಿಸಿದರು ||೨೩—೨೪||

ಆದರೆ ಆ ದುಃಖಗಳೂ ಆ ಭೋಗಗಳೂ ಕೂಡ,—ದೃಢವಾದ ಪರ್ವತವನ್ನು ಮಂದಮಾರುತಗಳು ಅಳ್ಳಾಡಿಸದಂತೆ, ಆ ಶುಕನ ಮನಸ್ಸನ್ನು ಸ್ವಲ್ಪವೂ ಚಂಚಲಪಡಿಸಲಿಲ್ಲ||

ಆ ಶುಕನು, ಆ ಅಂತಃಪುರದಲ್ಲುಂಟಾದ ಸುಖಕ್ಕೂ ದುಃಖಕ್ಕೂ ಎದೆಗುಂದದೆ, ಸರ್ವಾವಸ್ಥೆಯಲ್ಲೂ ಕೇವಲ ಸಮಾನನಾಗಿದ್ದುಕೊಂಡು, ಸ್ವಸ್ಥನಾಗಿ, ಯಾವಮಾತನ್ನೂ ಆಡದೆ, ಸಂತುಷ್ಟಹೃದಯನಾಗಿ — ಪೂರ್ಣಚಂದ್ರನಂತಿದ್ದುಬಿಟ್ಟನು ||೨೬||

ಬಳಿಕ ಆ ಜನಕನು, ಈರೀತಿಯಾಗಿ ಸ್ವಭಾವವನ್ನು ಪರೀಕ್ಷಿಸಿ ಒಳಗೆ ಕರೆಯಲ್ಪಟ್ಟ—ಹರ್ಷಪರಿಪೂರ್ಣನಾಗಿರುವ—ಆ ಶುಕನನ್ನು ಕಂಡು ನಮಸ್ಕರಿಸಿದನು ||೨೭||

---

1 ದ್ವಾಭ್ಯಾಂ ಯುಗ್ಮಮ್.

ನಿಶ್ಶೇಷಿತಜಗತ್ಕಾರ್ಯ ಪ್ರಾಪ್ತಾಖಿಲಮನೋರಥ |
ಕಿಮೀಪ್ಸಿತಂ ತವೇತ್ಯಾಶು ಕೃತಸ್ವಾಗತಮಾಹ ತಮ್ ‖ ೨೮ ‖

ಶ್ರೀಶುಕಉವಾಚ.

ಸಂಸಾರಾಡಂಬರಮಿದಂ ಕಥಮಭ್ಯುತ್ಥಿತಂ ಗುರೋ |
ಕಥಂ ಪ್ರಶಮಮಾಯಾತಿ ಯಥಾವತ್ ಕಥಯಾಶು ಮೇ ‖ ೨೯ ‖

ವಿಶ್ವಾಮಿತ್ರಉವಾಚ.

ಜನಕೇನೇತಿ ಪೃಷ್ಟೇನ ಶುಕಸ್ಯ ಕಥಿತಂ ತದಾ |
ತದೇವ ಯತ್ ಪುರಾ ಪ್ರೋಕ್ತಂ ತಸ್ಯ ಪಿತ್ರಾ ಮಹಾತ್ಮನಾ ‖ ೩೦ ‖

ಶ್ರೀಶುಕಉವಾಚ.

ಸ್ವಯಮೇವ ಮಯಾ ಪೂರ್ವಂ ಏತಜ್ಜ್ಞಾತಂ ವಿವೇಕತಃ |
ಏತದೇವ ಚ ಪೃಷ್ಟೇನ ಪಿತ್ರಾ ಮೇ ಸಮುದಾಹೃತಮ್ ‖ ೩೧ ‖
ಭವತಾಪ್ಯೇಷಏವಾರ್ಥಃ ಕಥಿತೋ ವಾಗ್ವಿದಾಂ ವರ |
ಏಷಏವ ಚ ವಾಕ್ಯಾರ್ಥಃ ಶಾಸ್ತ್ರೇಷು ಪರಿದೃಶ್ಯತೇ ‖ ೩೨ ‖
ಯಥಾಯಂ ಸ್ವವಿಕಲ್ಪೋತ್ಥಃ ಸ್ವವಿಕಲ್ಪಪರಿಕ್ಷಯಾತ್ |

ಅನಂತರ ಬೇಗನೆ ಶುಭಾಗಮನವನ್ನು ಕೇಳಿ, ಆ ಜನಕನು—'ಪ್ರಪಂಚದಲ್ಲಿ ನಡೆಸಬೇಕಾದ ಕೆಲಸವನ್ನೆಲ್ಲ ನಿಶ್ಶೇಷಮಾಡಿರತಕ್ಕವನೆ! ಸಮಸ್ತವಾದ ಇಷ್ಟಾರ್ಥವನ್ನೂ ಪಡೆದಿರತಕ್ಕವನೆ! ಎಲೈ ಶುಕಮಹರ್ಷಿಯೆ! ನಿನಗೆ ಈಗ ಅಭೀಪ್ಸಿತವಾವುದು?' ಎಂದು ಹೇಳಿದನು ॥೨೮॥

ಬಳಿಕ ಶುಕಮುನಿಯು ಜನಕನನ್ನು ಕುರಿತು ಹೇಳಿದನು.

ಎಲೈ ಗುರುವೆ! ಈ ಸಂಸಾರವೆಂಬ ಕಪಟವ್ಯಾಪಾರವು ಹೇಗೆ ಉತ್ಪನ್ನವಾಯಿತು? ಇದು ಶಾಂತಿಹೊಂದುವ ಬಗೆ ಹೇಗೆ? ನನಗೆ ಕ್ರಮವಾಗಿ ಬೇಗನೆ ಹೇಳು ॥೨೯॥

ವಿಶ್ವಾಮಿತ್ರರು ಶ್ರೀರಾಮನನ್ನು ಕುರಿತು ಹೇಳಿದರು.

ಕೇಳಯ್ಯಾ! ರಾಮ! ಈ ರೀತಿಯಾಗಿ ಪ್ರಶ್ನೆಮಾಡಲ್ಪಟ್ಟವನಾಗಿ ಜನಕನು, ಪೂರ್ವದಲ್ಲಿ ಮಹಾತ್ಮನಾದ ಆ ಶುಕಮುನಿಯ ತಂದೆಯು ಯಾವುದನ್ನು ಹೇಳಿದ್ದನೋ—ಅದನ್ನೇ ಈಗ ಮತ್ತೆ ಹೇಳಿದನು ॥೩೦॥

ಇದನ್ನು ಕೇಳಿ, ಶುಕನು ಮತ್ತೆ ಜನಕನನ್ನು ಕುರಿತು ಹೇಳಿದನು.

ಗುರೋ! ಜನಕ! ನೀನು ಹೇಳಿದ ಈ ವಿಷಯವನ್ನು ಪೂರ್ವದಲ್ಲಿ ನಾನೇ ವಿವೇಕದಿಂದ ತಿಳಿದುಕೊಂಡಿದ್ದೆನು; ಇದಲ್ಲದೆ ನನ್ನ ತಂದೆಯೂ ಕೂಡ ನಾನು ಕೇಳಿದುದಕ್ಕೆ ಇದೇ ವಿಷಯವನ್ನೇ ಹೇಳಿದ್ದನು ॥೩೧॥

ಶಾಸ್ತ್ರಜ್ಞರಲ್ಲಿ ಶ್ರೇಷ್ಠನಾದ ಜನಕನೆ! ನೀನೂಕೂಡ ಇದೇ ವಿಷಯವನ್ನೇ ಹೇಳಿರುವೆ; ಯಾವ ಶಾಸ್ತ್ರವನ್ನು ನೋಡಿದರೂ ಇದೇ ವಾಕ್ಯಾರ್ಥವೇ ಕಾಣುವುದು ॥೩೨॥

ಅದೇನೆಂದರೆ :—ಆತ್ಮನು ಅಜ್ಞಾನದಿಂದ ನಾನಾವಿಧವಾಗಿ ವಿಕಲ್ಪಮಾಡಿದರೆ—ಅದರಿಂದ ಈ ಹಾಳುಸಂಸಾರವೆಂಬುದು ಉದ್ಭವಿಸುವುದೆಂದೂ, ಆ ವಿಕಲ್ಪವು ನಾಶಹೊಂದಿ

ಕ್ಷೀಯತೇ ದಗ್ಧಸಂಸಾರೋ ನಿಸ್ಸಾರಇತಿ ನಿಶ್ಚಯಃ ॥ ೩೩ ॥
ತತ್ ಕಿಮೇತನ್ಮಹಾಬಾಹೋ ಸತ್ಯಂ ಬ್ರೂಹಿ ಮಮಾಚಲಮ್ ।
ತ್ವತ್ತೋ ವಿಶ್ರಾನ್ತಿಮಾಪ್ನೋಮಿ ಚೇತಸಾ ಭ್ರಮತಾ ಜಗತ್ ॥ ೩೪ ॥

ಜನಕಉವಾಚ.

ನಾತಃ ಪರತರಃ ಕಶ್ಚಿತ್ ನಿಶ್ಚಯೋಸ್ತ್ಯಪರೋ ಮುನೇ ।
ಸ್ವಯಮೇವ ತ್ವಯಾ ಜ್ಞಾತಂ ಗುರುತಶ್ಚ ಪುನಃ ಶ್ರುತಮ್ ॥ ೩೫ ॥
ಅವಿಚ್ಛಿನ್ನಚಿದಾತ್ಮೈಕಃ ಪುಮಾನಸ್ತೀಹ ನೇತರತ್ ।
ಸ್ವಸಙ್ಕಲ್ಪವಶಾದ್ಬದ್ಧೋ ನಿಸ್ಸಙ್ಕಲ್ಪಶ್ಚ ಮುಚ್ಯತೇ ॥ ೩೬ ॥

ದರೆ—ಇದೂ ನಾಶಹೊಂದುವುದೆಂದೂ, ಇದು ಸ್ವರೂಪತಃ ನಿಸ್ಸಾರವಾದ (ಇಲ್ಲದ) ಪದಾರ್ಥವೆಂದೂ ನಿಶ್ಚಯುವು ಶಾಸ್ತ್ರವಾಕ್ಯಗಳಲ್ಲಿರುವುದು; ನೀನೂ ಇದನ್ನೇ ಹೇಳುವೆ; ನಮ್ಮ ತಂದೆಯೂ ಇದನ್ನೇ ಹೇಳಿದನು ; ನಾನೂ ಮೊದಲು ನನ್ನ ವಿವೇಕದಿಂದ ಇದನ್ನೇ ನಿಶ್ಚಯಿಸಿದ್ದೆನು ॥೩೩॥

ಮಹಾಬಾಹುವಾದ ಜನಕನೆ! ನಾನು ಮೊದಲು ಯಾವುದನ್ನು ನಿಶ್ಚಯಿಸಿದ್ದೆನೋ, ಅದೇ ಸತ್ಯವೆ? ನನಗೆ ಮತ್ತೆ ಸಂಶಯವುಂಟಾಗದಂತೆ ಹೇಳು. ನನ್ನ ಮನಸ್ಸು ಈಗ ಪ್ರಪಂಚವನ್ನೆಲ್ಲ ಸುತ್ತುತಿರುವುದು; ನಾನು ಇದರಿಂದ ಸುತ್ತಿಸಲ್ಪಡುತಿರುವಕಾರಣ, ನಿನ್ನ ಉಪದೇಶದಿಂದ ವಿಶ್ರಾಂತಿಪಡೆಯಬೇಕಾಗಿರುವೆನು ॥೩೪॥

ಹೀಗೆ ಹೇಳಿದ ಶುಕನನ್ನು ಕುರಿತು ಜನಕರಾಜನು ಹೇಳಿದನು.

ಎಲೈ ಮುನಿಯೆ! ನೀನು ಹೇಳಿದುದೇ ಪರಮಾರ್ಥವು; ಇದಕ್ಕಿಂತ ಪ್ರತ್ಯೇಕವಾಗಿ ಶ್ರೇಷ್ಠವಾದ ನಿಶ್ಚಯುವಾವುದೂ ಇಲ್ಲ. ನೀನು ಮೊದಲೇ ಇದನ್ನು ತಿಳಿದಿದ್ದೆ; ಬಳಿಕ ಗುರುಮುಖದಿಂದಲೂ ಕೇಳಿರುವೆ ॥೩೫॥

ದೃಶ್ಯವಾದ ಈ ಪ್ರಪಂಚದೊಳಗೆಲ್ಲ ದೇಶ ಕಾಲ ವಸ್ತು ಪರಿಚ್ಛೇದರಹಿತಜ್ಞಾನ ಸ್ವರೂಪನಾದ ಆ ಪರಮಪುರುಷನೊಬ್ಬನೇ ಸತ್ಯವಾಗಿರತಕ್ಕವನು ; ಇತರ ಪದಾರ್ಥವೊಂದೂ ಸತ್ಯವಾಗಿರತಕ್ಕುದಲ್ಲ. ಈ ಆತ್ಮನು ತನ್ನ ಸಂಕಲ್ಪದಿಂದ ಬದ್ಧನಾಗುವನು ; ಸಂಕಲ್ಪರಹಿತನಾದರೆ ಮುಕ್ತನಾಗುವನು (೧) ॥೩೬॥

---

(೧) ಸಂಕಲ್ಪವೆಂದರೆ ಮನಸ್ಸಿನಲ್ಲಿ ಮಾಡಿಕೊಳ್ಳುವ ಕಾರ್ಯ್ಯನಿಶ್ಚಯುವೆಂಬರ್ಥವು. ಕಣ್ಣಿಗೆ ಕಾಣತಕ್ಕ ಪದಾರ್ಥಕ್ಕೆ ದೃಶ್ಯವೆಂದು ಹೆಸರು. ಇದರಿಂದ ಈ ಪ್ರಪಂಚವೆಲ್ಲವೂ ದೃಶ್ಯವೆಂದು ಹೇಳಿದಹಾಗಾಯ್ತು. ಈ ದೃಶ್ಯವಾದ ಪದಾರ್ಥವೆಲ್ಲವೂ ಅಸತ್ಯವೆಂದೂ ಪರಮಾತ್ಮನೊಬ್ಬನೇ ಸತ್ಯನೆಂದೂ ಶಾಸ್ತ್ರಾಭಿಪ್ರಾಯುವಿರುವುದು. ಪರಮಾತ್ಮನು ಸತ್ಯನಾಗಿಯೂ ಯಾವ ಬಂಧವೂ ಇಲ್ಲದವನಾಗಿಯೂ, ಇದ್ದರೂ, ಅಜ್ಞಾನಸಂಬಂಧದಿಂದ ಸಂಸಾರವೊಂದುಂಟೆಂದೂ ತಾನು ಸಂಸಾರಿಯೆಂದೂ ಈ ಸಂಸಾರದಿಂದ ತಾನು ಕಟ್ಟಲ್ಪಟ್ಟಿರುವೆನೆಂದೂ ಮನಸ್ಸಿನಲ್ಲಿ ನಿಶ್ಚಯುಮಾಡಿಕೊಳ್ಳುವನು ; ಆಗ ಇವನಿಗೆ ಬಂಧವುಂಟಾದಂತಾಯ್ತು. ಯಾವಾಗ ಇವನು, ಜ್ಞಾನದಿಂದ-ಸಂಸಾರವು ಸುಳ್ಳೆಂದೂ ಅದರಿಂದುಂಟಾಗುವ ಬಂಧವೂ ಸುಳ್ಳೆಂದೂ ತಿಳಿಯುವನೋ, ಆಗ ಈ ಬಂಧವು ತೊಲಗಿ ಮುಕ್ತನಾಗುವನೆಂದು ಭಾವವು.

ತೇನ ತ್ವಯಾ ಸ್ಫುಟಂ ಜ್ಞಾತಂ ಜ್ಞೇಯಂ ಯಸ್ಯ ಮಹಾತ್ಮನಃ ।
ಭೋಗೇಭ್ಯೋ ವಿರತಿರ್ಜಾತಾ ದೃಶ್ಯಾತ್ ಪ್ರಾಕ್ ಸಕಲಾದಿಹ ॥ ೩೭ ॥
ತವ ಬಾಲ ಮಹಾವೀರ ಮತಿರ್ವಿರತಿಮಾಗತಾ ।
ಭೋಗೇಭ್ಯೋ ದೀರ್ಘರೋಗೇಭ್ಯಃ ಕಿಮನ್ಯಚ್ಛ್ರೋತುಮಿಚ್ಛಸಿ ॥೩೮॥
ನ ತಥಾ ಪೂರ್ಣತಾ ಜಾತಾ ಸರ್ವಜ್ಞಾನಮಹಾನಿಧೇಃ ।
ತಿಷ್ಠತಸ್ತಪಸಿ ಸ್ಫಾರೇ ಪಿತುಸ್ತವ ಯಥಾ ತವ ॥ ೩೯ ॥
ವ್ಯಾಸಾದಧಿಕಮೇವಾಹಂ ವ್ಯಾಸಶಿಷ್ಯೋಽಸಿ ತತ್ಸುತಃ ।
ಭೋಗೇಚ್ಛಾತಾನವೇನೇಹ ಮತ್ತೋಽಪ್ಯತ್ಯಧಿಕೋ ಭವಾನ್ ॥ ೪೦ ॥
ಪ್ರಾಪ್ತಂ ಪ್ರಾಪ್ತವ್ಯಮಖಿಲಂ ಭವತಾ ಪೂರ್ಣಚೇತಸಾ ।
ನ ದೃಶ್ಯೇ ಪತಸಿ ಬ್ರಹ್ಮನ್ ಮುಕ್ತಸ್ತ್ವಂ ಭ್ರಾನ್ತಿಮುತ್ಸೃಜ ॥ ೪೧ ॥
ಅನುಶಿಷ್ಟಃ [1]ಸ ಇತ್ಯೇವಂ ಜನಕೇನ ಮಹಾತ್ಮನಾ ।
ಅತಿಷ್ಠತ್ ಸ ಶುಕಸ್ತೂಷ್ಣೀಂ ಸ್ವಚ್ಛೇ ಪರಮವಸ್ತುನಿ ॥ ೪೨ ॥

ನೀನು ಕೇವಲ ಮಹಾತ್ಮನು ; ದೃಶ್ಯವಾದ ಈ ಸಂಸಾರವುಂಟಾಗುವುದಕ್ಕೆ ಮೊದಲೇ ಸಮಸ್ತವಾದ ಭೋಗಗಳಲ್ಲಿಯೂ ವಿರಕ್ತನಾದಕಾರಣ ನೀನೇ ಧನ್ಯನು ; ಇದರಿಂದಲೇ ನೀನು ಇಷ್ಟು ಸ್ಪಷ್ಟವಾಗಿ ತತ್ತ್ವವನ್ನು ತಿಳಿದವನಾಗಿರುವೆ ॥೩೭॥

ಬಾಲಕನಾಗಿದ್ದರೂ ಇಷ್ಟುಮಟ್ಟಿಗೆ ವಿರಕ್ತನಾಗಿರುವಕಾರಣ ಮಹಾಶೂರನೆನಿಸುವ ಶುಕಮುನಿಯೆ! ನಿನ್ನ ಬುದ್ಧಿಯು, ಭೋಗಗಳೆಂಬ ದೀರ್ಘ ರೋಗಗಳಲ್ಲಿ ವಿರಕ್ತವಾಗಿರುವುದು ; ಇನ್ನೇನುಕೇಳಲಪೇಕ್ಷಿಸುವೆ ? ॥೩೮॥

ನಿಮ್ಮ ತಂದೆಯು, ಸಮಸ್ತವಾದ ಜ್ಞಾನಕ್ಕೂ ಮಹಾನಿಧಿಯಾಗಿದ್ದರೂ,—ಅತ್ಯಧಿಕವಾಗಿ ತಪಸ್ಸುಮಾಡುತ್ತಿದ್ದರೂ, ಅವನು ನಿನ್ನಮಟ್ಟಿಗೆ ಆನಂದಪೂರ್ಣನಾಗಿ ವಿರಕ್ತನಾಗಲಿಲ್ಲ ॥೩೯॥

ಎಲೈ ಶುಕಮುನಿಯೆ! ಯದ್ಯಪಿ ನಾನು ವ್ಯಾಸಮುನಿಗಿಂತ ಅಧಿಕನೇ ಅಹುದು! ನೀನು ಆ ವ್ಯಾಸನಿಗೆ ಶಿಷ್ಯನೂ ಅವನ ಮಗನೂ ಆಗಿರುವುದೂ ದಿಟ!! ಆದರೆ ಭೋಗಾಸಕ್ತಿಪರಿತ್ಯಾಗದಲ್ಲಿ ನೋಡಿದರೋ, ನೀನು ನನಗಿಂತಲೂ ಎಷ್ಟೋ ಮೇಲಾಗಿರುವೆ ॥೪೦॥

ನೀನು ಕೇವಲ ಪರಿಪೂರ್ಣ ಹೃದಯನಾಗಿರುವಕಾರಣ, ಹೊಂದಬೇಕಾದುದನ್ನೆಲ್ಲ ಹೊಂದಿದಂತಾಯಿತು ; ಪುನಃ ನೀನೆಂದಿಗೂ ಈ ದೃಶ್ಯವಾದ ಸಂಸಾರಚಕ್ರದಲ್ಲಿ ಬೀಳುವುದಿಲ್ಲ; ನೀನು ನಿಶ್ಚಯವಾಗಿ ಮುಕ್ತನಾಗಿರುವೆ; ಇನ್ನು ಈ ಭ್ರಾಂತಿಯನ್ನು ಬಿಟ್ಟುಬಿಡು ॥೪೧॥

ಈರೀತಿಯಾಗಿ ಆ ಶುಕಮುನಿಯು, ಆ ಸಾಕ್ಷಾತ್ಪರತತ್ತ್ವವಾಗಿರುವೆಯೆಂದು ಜನಕನಿಂದ ಉಪದೇಶಿಸಲ್ಪಟ್ಟವನಾಗಿ, ಸ್ವಲ್ಪಕಾಲ—ನಿರ್ಮಲವಾದ ಆ ಪರಮಾತ್ಮನಲ್ಲಿ ಲೀನನಾಗಿ ಸುಮ್ಮನಿದ್ದನು ॥೪೨॥

---

1 ಸಃ = ಪೂರ್ವೋಕ್ತೋಽಪರಿಚ್ಛಿನ್ನಚಿದಾತ್ಮಾ.

ವೀತಶೋಕಭಯಾಯಾಸೋ ನಿರೀಹಶ್ಛಿನ್ನಸಂಶಯಃ |
ಜಗಾಮ ಶಿಖರಂ ಮೇರೋಃ ಸಮಾಧ್ಯರ್ಥಮನಿನ್ದಿತಮ್ || ೪೩ ||
ತತ್ರ ವರ್ಷಸಹಸ್ರಾಣಿ ನಿರ್ವಿಕಲ್ಪಸಮಾಧಿನಾ |
ದಶ ಸ್ಥಿತ್ವಾ ಶಶಾಮಾಸೌ ಆತ್ಮನ್ಯಸ್ನೇಹದೀಪವತ್ || ೪೪ ||
ವ್ಯಪಗತಕಲನಾಕಳಙ್ಕಶುದ್ಧಃ ಸ್ವಯಮಮಲಾತ್ಮನಿ ಪಾವನೇ ಪದೇಽಸೌ |
ಸಲಿಲಕಣ ಇವಾಮ್ಬುಧೌ ಮಹಾತ್ಮಾ ವಿಗಳಿತವಾಸನಮೇಕತಾಂ ಜಗಾಮ || ೪೫ ||

ಇತ್ಯಾರ್ಷೇ ಶ್ರೀ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ದೇವ
ದೂತೋಕ್ತೇ ಮೋಕ್ಷೋಪಾಯೇ ಮುಮುಕ್ಷುವ್ಯವಹಾರ
ಪ್ರಕರಣೇ ಶುಕನಿರ್ವಾಣಂ ನಾಮ ಪ್ರಥಮಃ ಸರ್ಗಃ.

ಬಳಿಕ–ಶೋಕ ಭಯ ಆಯಾಸ–ಇವುಗಳನ್ನೆಲ್ಲ ಕಳೆದುಕೊಂಡು–ನಿಸ್ಪೃಹನಾಗಿ-ಸಂಶಯಶೂನ್ಯನಾದ ಆ ಶುಕಮುನಿಯು, ಸಮಾಧಿಗೋಸ್ಕರವಾಗಿ—ಅತ್ಯುತ್ತಮವಾದ ಆ ಮೇರುಶಿಖರಕ್ಕೆ ಹೊರಟುಹೋದನು || ೪೩ ||

ಅಲ್ಲಿ ಆವನು, ಹತ್ತುಸಾವಿರವರುಷ (೧) ನಿರ್ವಿಕಲ್ಪಸಮಾಧಿಯುಲ್ಲಿದ್ದು, ಎಣ್ಣೆಯಿಲ್ಲದ ದೀಪದಂತೆ-ತನ್ನಲ್ಲಿ ತಾನೇ ಶಾಂತಿಹೊಂದಿದನು ||೪೪||

ಹೀಗೆ ಮಹಾತ್ಮನಾದ ಆ ಶುಕಮಹರ್ಷಿಯು, ದೃಶ್ಯವಾದ ಪ್ರಪಂಚದಲ್ಲಿ ಅಭಿಮುಖ್ಯವನ್ನೂ ಅದಕ್ಕೆ ಮೂಲಭೂತವಾದ ಅಜ್ಞಾನವನ್ನೂ ಕಳೆದುಕೊಂಡು, ಜಲಕಣವು ಸಮುದ್ರದಲ್ಲಿ ಐಕ್ಯಹೊಂದುವಂತೆ, ಕರ್ಮವಾಸನಾಶೂನ್ಯನಾಗಿ ನಿರ್ಮಲವಾದ ಆ ಪರಮಾತ್ಮಪದದಲ್ಲಿ ಐಕ್ಯಹೊಂದಿದನು (೨) || ೪೫ ||

ಇದು ಆರ್ಷವಾದ ಶ್ರೀ ವಾಸಿಷ್ಠರಾಮಾಯಣದ ಮುಮುಕ್ಷುವ್ಯವಹಾರ
ಪ್ರಕರಣದಲ್ಲಿ ಶುಕನಿರ್ವಾಣನಿರೂಪಣವೆಂಬ
ಮೊದಲನೆಯ ಸರ್ಗವು.

(೧) ಸಮಾಧಿಯೆಂದರೆ-ಪ್ರಪಂಚವ್ಯಾಪಾರವನ್ನು ಮರೆತು ಪರಮಾತ್ಮಧ್ಯಾನದಲ್ಲಿ ಲೀನನಾಗಿರುವಿಕೆಯೆಂದರ್ಥವು. ಇದು ಸವಿಕಲ್ಪವೆಂದೂ ನಿರ್ವಿಕಲ್ಪವೆಂದೂ ಎರಡುವಿಧವಾಗಿರುವುದು. ಸವಿಕಲ್ಪವೆಂದರೆ-ಮಧ್ಯಮಧ್ಯದಲ್ಲಿ ಜ್ಞಾನಾಂತರವಿಶ್ರವೆಂದೂ, ನಿರ್ವಿಕಲ್ಪವೆಂದರೆ-ಇತರವಾದ ಜ್ಞಾನವೇ ಇಲ್ಲದೆ ಆತ್ಮಧ್ಯಾನವೇ ಅವಿಚ್ಛಿನ್ನವಾಗಿರುವುದೆಂದೂ ಮುಖ್ಯಾಭಿಪ್ರಾಯವು.

(೨) ನೀರೆಲ್ಲವೂ ಒಂದೇ ಆಗಿದ್ದರೂ, ಸಮುದ್ರದ ನೀರು ಬೇರೆಯೆಂದೂ ಮೇಘವು ವರ್ಷಿಸುವ ಜಲಕಣವು ಬೇರೆಯೆಂದೂ ವ್ಯವಹರಿಸುವರಲ್ಲವೆ ! ಇದಕ್ಕೆ ಕಾರಣವೇನು ? ಮೇಘವೆಂಬ ಪದಾರ್ಥವೊಂದಿರುವುದರಿಂದ ಹೀಗೆ ಭೇದತೋರುವುದು. ಆ ಮೇಘವೇ ಹೋಗಿಬಿಟ್ಟಾಗ ನೀರೆಲ್ಲವೂ ಒಂದೇ ಆಗಿಬಿಡುವುದು. ಹೀಗೆ ಸಮಸ್ತಪದಾರ್ಥವೂ ಬ್ರಹ್ಮವೇ ಆಗಿದ್ದರೂ, ಅಜ್ಞಾನರೂಪವಾದ ಉಪಾಧಿಯಿಂದ ಬೇರೆಬೇರೆಯಾಗಿ ಕಾಣುವುದು. ಆ ಅಜ್ಞಾನನಿವೃತ್ತಿಯಾದರೆ, ಬ್ರಹ್ಮವೊಂದೇ ನಿಲ್ಲುವುದು.

ಅಥ ಮುಮುಕ್ಷುವ್ಯವಹಾರಪ್ರಕರಣೇ ದ್ವಿತೀಯಃ ಸರ್ಗಃ.

ಶ್ರೀ ವಿಶ್ವಾಮಿತ್ರಉವಾಚ.

ತಸ್ಯ ವ್ಯಾಸತನೂಜಸ್ಯ ಮಲಮಾತ್ರೋಪಮಾರ್ಜನಮ್ ।
ಯಥೋಪಯುಕ್ತಂ ತೇ ರಾಮ ತಾವದೇವೋಪಯುಜ್ಯತೇ ॥ ೧ ॥
ಜ್ಞೇಯಮೇತೇನ ವಿಜ್ಞಾತಂ ಅಶೇಷೇಣ ಮುನೀಶ್ವರಾಃ ।
ಸ್ವದನ್ತೇಽಸ್ಮೈ ನ ಯದ್ಭೋಗಾಃ ರೋಗಾಇವ ಸುಮೇಧಸೇ ॥ ೨ ॥
ಜ್ಞಾತಜ್ಞೇಯಸ್ಯ ಮನಸೋ ನೂನಮೇತದ್ವಿಲಕ್ಷಣಮ್ ।
ನ ಸ್ವದನ್ತೇ ಸಮಗ್ರಾಣಿ ಭೋಗಬೃನ್ದಾನಿ ಯತ್ ಪುನಃ ॥ ೩ ॥
ಭೋಗಭಾವನಯಾ ಯಾತಿ ಬನ್ಧೋ ದಾರ್ಢ್ಯಮವಸ್ತುಜಃ ।
ತಯೋಪಶಾನ್ತಯಾ ಯಾತಿ ಬನ್ಧೋ ಜಗತಿ ತಾನವಮ್ ॥ ೪ ॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಎರಡನೆಯ ಸರ್ಗವು.

ಇಹ ರಾಮೋಪದೇಶಾರ್ಥಂ ವಿಶ್ವಾಮಿತ್ರೇಣ ಧೀಮತಾ ।
ಪ್ರಾರ್ಥಿತಸ್ಯ ವಸಿಷ್ಠಸ್ಯ ತದುತ್ಸಾಹಃ ಪ್ರಕೀರ್ತ್ಯತೇ ॥

ಶ್ರೀರಾಮನ ಉಪದೇಶಕ್ಕೋಸ್ಕರ ಜ್ಞಾನಿಯಾದ ವಿಶ್ವಾಮಿತ್ರರಿಂದ ಪ್ರಾರ್ಥಿಸಲ್ಪಟ್ಟ, ವಸಿಷ್ಠರು ಅದರಲ್ಲುತ್ಸಾಹಪಡುವಿಕೆಯು ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಮತ್ತೆ ವಿಶ್ವಾಮಿತ್ರರು ಶ್ರೀರಾಮನನ್ನು ಕುರಿತು ಹೇಳುವರು.

ಅಯ್ಯ! ರಾಮ! ವ್ಯಾಸಪುತ್ರನಾದ ಆ ಶುಕಮುನಿಗೆ (೧) ಮಲಸಂಮಾರ್ಜನೆ ಮಾತ್ರವೇ ಹೇಗೆ ಅವಶ್ಯಕವಾಗಿದ್ದಿತೋ, ನಿನಗೂ ಅಷ್ಟುಮಾತ್ರವೇ ಅವಶ್ಯಕವಾಗಿರುವುದು ॥ ೧ ॥

ಎಲೈ ಮಹಾಮುನಿಗಳಿರಾ! ಮಹಾಪ್ರಾಜ್ಞನಾದ ಈ ರಾಮನಿಗೆ ಸಮಸ್ತ ಭೋಗಗಳೂ ರೋಗಗಳಂತೆ ರುಚಿಸುವುದಿಲ್ಲವಾದಕಾರಣ, ಇವನು—ತಿಳಿಯಬೇಕಾದ ತತ್ತ್ವವನ್ನೆಲ್ಲ ನಿಶ್ಶೇಷವಾಗಿ ತಿಳಿದಿರುವನು ॥ ೨ ॥

ಈ ಪ್ರಾಪಂಚಿಕಭೋಗಸಮೂಹವೊಂದೂ ಮತ್ತೆ ರುಚಿಸದಿರುವುದು ಯಾವುದುಂಟೋ, ಅದೇ ತತ್ತ್ವಜ್ಞನ ಮನಸ್ಸಿಗೆ ವಿಶೇಷಲಕ್ಷಣವೆನ್ನಿಸುವುದು ॥ ೩ ॥

ಈ ಪ್ರಪಂಚದಲ್ಲಿ ಕೇವಲ ಕಲ್ಪಿತವಾದ ಈ ಸಂಸಾರಬಂಧವು, ವಿಷಯೋಪಭೋಗವಾಸನೆಯಿಂದಲೇ ದೃಢವಾಗುವುದು; ಅದು ಶಾಂತವಾದರೆ, ಈ ಬಂಧವೂ ಕೃಶವಾಗುವುದು ॥ ೪ ॥

---

(೧) ಮಲ = ಕೊಳೆಯನ್ನು, ಸಮ್ಮಾರ್ಜನ = ತೊಳೆಯುವಿಕೆ. ಅಜ್ಞಾನವನ್ನೂ ಭ್ರಮೆಯನ್ನೂ ಹೋಗಲಾಡಿಸುವಿಕೆಯೆಂದು ಭಾವವು.

ವಾಸನಾತಾನವಂ ರಾಮ ಮೋಕ್ಷ ಇತ್ಯುಚ್ಯತೇ ಬುಧೈಃ |
ಪದಾರ್ಥವಾಸನಾದಾರ್ಢ್ಯಂ ಬನ್ಧ ಇತ್ಯಭಿಧೀಯತೇ || ೫ ||
ಸ್ವಾತ್ಮತತ್ತ್ವಾಭಿಗಮನಂ ಭವತಿ ಪ್ರಾಯಶೋ ನೃಣಾಮ್ |
ಮುನೇ ವಿಷಯವೈರಸ್ಯಂ ಕದರ್ಥಾದುಪಜಾಯತೇ || ೬ ||
ಸಮ್ಯಕ್ ಪಶ್ಯತಿ ಯಸ್ತಜ್ಜ್ಞೋ ಜ್ಞಾತಜ್ಞೇಯಸ್ಸ ಪಣ್ಡಿತಃ |
ನ ಸ್ವದನ್ತೇ ಬಲಾದೇವ ತಸ್ಮೈ ಭೋಗಾ ಮಹಾತ್ಮನೇ || ೭ ||
ಯಶಃಪ್ರಭೃತಿನಾ ಯಸ್ಯ ಹೇತುನೈವ ವಿನಾ ಪುನಃ |
ಭುವಿ ಭೋಗಾನ ರೋಚನ್ತೇ ಸ ಜೀವನ್ಮುಕ್ತ ಉಚ್ಯತೇ || ೮ ||
ಜ್ಞೇಯಂ ಯಾವನ್ನ ವಿಜ್ಞಾತಂ ತಾವತ್ತಾವನ್ನ ಜಾಯತೇ |
ವಿಷಯೇಷ್ವರತಿರ್ಜನ್ತೋಃ ಮರುಭೂಮೌ ಲತಾ ಯಥಾ || ೯ ||
ಅತಏವ ಹಿ ವಿಜ್ಞಾತಜ್ಞೇಯಂ ವಿದ್ಧಿ ರಘೂದ್ವಹಮ್ |
ಯದೇನಂ ರಞ್ಜಯನ್ತ್ಯೇತಾಃ ನ ರಮ್ಯಾ ಭೋಗಭೂಮಯಃ || ೧೦ ||

ಆದಕಾರಣ, ಎಲೈ ರಾಮನೆ! ಈ ವಾಸನೆಯು ಕ್ಷಯಿಸುವುದನ್ನೇ ಮೋಕ್ಷವೆಂದೂ, ಇದು ದೃಢವಾಗುವುದನ್ನೇ ಬಂಧವೆಂದೂ ಜ್ಞಾನಿಗಳು ಹೇಳುವರು ॥ ೫॥

ಎಲೈ ವಸಿಷ್ಠಮುನಿಯೆ! ಮನುಷ್ಯರಿಗೆ, ಆತ್ಮತತ್ತ್ವದ (೧) ಆಪಾತಜ್ಞಾನವು ಸ್ವಲ್ಪವಾದ ಶ್ರವಣಾದಿಗಳಿಂದಲೇ ಪ್ರಾಯಶಃ ಉಂಟಾಗಿಬಿಡುವುದು; ಆದರೆ ವಿಷಯಗಳಲ್ಲಿ ವಿರಕ್ತಿಯುಂಟಾಗುವುದು ಬಹು ಕಷ್ಟಸಾಧ್ಯವು ॥ ೬ ॥

ಆದಕಾರಣ, ಯಾವನು ರಾಗಾದಿಗಳಿಗಧೀನನಾಗದೆ, ತತ್ತ್ವವನ್ನು ಕೊನೆಯವರೆಗೂ ಚೆನ್ನಾಗಿ ಪರಿಶೀಲಿಸುವನೋ, ಅವನೇ ಅದನ್ನು ತಿಳಿದವನು; ಅವನೇ ತತ್ತ್ವಜ್ಞನು; ಅವನೇ ಪಂಡಿತನು. ಆ ಮಹಾತ್ಮನಿಗೆ, ಎಷ್ಟು ಬಲಾತ್ಕಾರಪಡಿಸಿದರೂ ಈ ಪ್ರಾಪಂಚಿಕ ಭೋಗಗಳು ರುಚಿಸುವುದೇ ಇಲ್ಲ ॥ ೭ ॥

ಆದರೆ,—ಖ್ಯಾತಿ ಲಾಭ ಪೂಜೆ—ಇವುಗಳಿಗಾಗಿ ಭೋಗಪರಿತ್ಯಾಗಮಾಡತಕ್ಕವರು ಯಾರಾದರೂ ಇರಬಹುದು; ಅವರ ವಿಷಯವಿಲ್ಲಿ ಉಕ್ತವಾದುದಲ್ಲ. ಇಂತಹ ಕಾರಣವೊಂದೂ ಇಲ್ಲದೆ ಯಾವನಿಗೆ ಈ ಪ್ರಾಪಂಚಿಕಭೋಗದಲ್ಲಿ ಆಸಕ್ತಿ ತಪ್ಪುವುದೋ, ಅವನು ಜೀವನ್ಮುಕ್ತನೆಂದು ಹೇಳಲ್ಪಡುವನು ॥ ೮ ॥

ಆದರೆ, ಎಲ್ಲಿಯ ವರೆಗೆ ನಿಶ್ಚಯವಾದ ತತ್ತ್ವಜ್ಞಾನವುಂಟಾಗುವುದಿಲ್ಲವೋ, ಅಲ್ಲಿಯವರೆಗೂ—ಮರುಭೂಮಿಯಲ್ಲಿ ಲತೆ ಹುಟ್ಟದಂತೆ—ಪ್ರಾಣಿಗಳಿಗೆ ವಿಷಯವೈರಾಗ್ಯವು ಹುಟ್ಟುವುದಿಲ್ಲ ॥ ೯ ॥

ಈ ರಾಮನಿಗಾದರೋ, ಆಪಾತರಮಣೀಯಗಳಾದ ಈ ಪ್ರಾಪಂಚಿಕ ವಿಷಯಗಳು ಸ್ವಲ್ಪವೂ ಆಸಕ್ತಿಯುಂಟುಮಾಡುವುದಿಲ್ಲ; ಆದುದರಿಂದಲೇ, ರಘುಶ್ರೇಷ್ಠನಾದ ಈ ಶ್ರೀರಾಮನನ್ನು ತತ್ತ್ವಜ್ಞನೆಂದು ನೀನು ತಿಳಿಯಬೇಕು ॥೧೦॥

(೧) ಆಪಾತಜ್ಞಾನ =ಸಾಧಾರಣವಾಗಿ ತಟ್ಟನುಂಟಾಗುವ ಸ್ಥೂಲಜ್ಞಾನ.

ರಾಮೋ ಯದನ್ತರ್ಜಾನಾತಿ ತದ್ವಸಿಷ್ಠಾತ್ತ್ಯೇವ ಸನ್ಮುಖಾತ್ |
ಆಕರ್ಣ್ಯ ಚಿತ್ತವಿಶ್ರಾನ್ತಿಂ ಆಪ್ನೋತ್ಯೇವ ಮುನೀಶ್ವರಾಃ || ೧೧ ||
ಕೇವಲಂ ಕೇವಲೀಭಾವವಿಶ್ರಾನ್ತಿಂ ಸಮಪೇಕ್ಷತೇ |
ರಾಮಬುದ್ಧಿಃ ಶರಲ್ಲಕ್ಷ್ಮ್ಯಾಃ ಖಲು ವಿಶ್ರಮಣಂ ಯಥಾ || ೧೨ ||
ಅತ್ರಾಸ್ಯ ಚಿತ್ತವಿಶ್ರಾನ್ತ್ಯೈ ರಾಘವಸ್ಯ ಮಹಾತ್ಮನಃ |
ಯುಕ್ತಿಂ ಕಥಯತು ಶ್ರೀಮಾನ್ ವಸಿಷ್ಠೋ ಭಗವಾನಯಮ್ || ೧೩ ||
ರಘೂಣಾಮೇಷ ಸರ್ವೇಷಾಂ ಪ್ರಭುಃ ಕುಲಗುರುಃ ಸದಾ |
ಸರ್ವಜ್ಞಃ ಸರ್ವಸಾಕ್ಷೀ ಚ ತ್ರಿಕಾಲಾಮಲದರ್ಶನಃ || ೧೪ ||
[1]ವಸಿಷ್ಠ ಭಗವನ್ ಪೂರ್ವಂ ಕಚ್ಚಿತ್ ಸ್ಮರಸಿ ಯತ್ ಸ್ವಯಮ್ |
ಆವಯೋರ್ವೈರಶಾನ್ತ್ಯರ್ಥಂ ಶ್ರೇಯಸೇ ಚ ಮಹಾಧಿಯಾಮ್ || ೧೫ ||
ನಿಷಧಾದ್ರೇರ್ಮುನೀನಾಂ ಚ ಸಾನೌ ಸರಳಸಙ್ಕುಲೇ |
ಉಪದಿಷ್ಟಂ ಭಗವತಾ ಜ್ಞಾನಂ ಪದ್ಮಭುವಾ ಬಹು || ೧೬ ||
ಯೇನ ಯುಕ್ತಿಮತಾ ಬ್ರಹ್ಮನ್ ಜ್ಞಾನೇನೇಯಂ ಹಿ ವಾಸನಾ |

ಎಲೈ ಸಭಾಸದರಾದ ಮುನಿಗಳಿರಾ! ರಾಮನು, ತನ್ನ ಮನಸ್ಸಿನಲ್ಲಿ ಏನುತಿಳಿದು ಕೊಂಡಿರುವನೋ, ಅದೇ ಸತ್ಯವಾದ ತತ್ತ್ವವೆಂದು ಮಹಾತ್ಮರಾದ ವಸಿಷ್ಠರ ಮುಖದಿಂದ ಕೇಳಿದಬಳಿಕ, ಚಿತ್ತವಿಶ್ರಾಂತಿಪಡೆಯುವೆನು ||೧೧||

ಶರತ್ಕಾಲದ ಸೊಬಗು—ಮೇಘಗಳ ವಿಶ್ರಾಂತಿಯನ್ನು ಬಯಸುವಂತೆ, ಈ ರಾಮನ ಬುದ್ಧಿಯು—ಸುಖದುಃಖಾದಿಗಳೊಂದೂ ಇಲ್ಲದ ವಿಶ್ರಾಂತಿಮಾತ್ರವನ್ನಪೇಕ್ಷಿಸತಕ್ಕುದಾ ಗಿರುವುದು ||೧೨||

ಆದಕಾರಣ, ಈ ಸಮಯದಲ್ಲಿ—ಮಹಾತ್ಮನಾದ ಈ ರಾಮನ ಚಿತ್ತವು ವಿಶ್ರಾಂತಿ ಪಡೆಯುವುದಕ್ಕೋಸ್ಕರ, ಜ್ಞಾನೈಶ್ವರ್ಯಯುಕ್ತನಾದ ಪರಮಪೂಜ್ಯನಾದ ಈ ವಸಿಷ್ಠಮು ನಿಯು, ತಕ್ಕ ಉಪಾಯವನ್ನು ಹೇಳಬೇಕಾಗಿರುವುದು ||೧೩||

ಇವರೇ ಏತಕ್ಕೆ ಹೇಳಬೇಕೆಂದರೆ:—ಇವರು ಈ ರಘುವಂಶದಲ್ಲಿ ಹುಟ್ಟಿದವರೆಲ್ಲ ರಿಗೂ ಪ್ರಭುವಾಗಿಯೂ ಕುಲಗುರುವಾಗಿಯೂ ಇರುವರು; ಇದಲ್ಲದೆ ಇವರು ಸಕಲ ಶಾಸ್ತ್ರವನ್ನೂ ತಿಳಿದು, ಕಾಲತ್ರಯದಲ್ಲಿಯೂ ನಿರ್ಮಲವಾದ ಜ್ಞಾನವನ್ನು ಪಡೆದು, ಜ್ಞಾನ ದೃಷ್ಟಿಯಿಂದ ಸರ್ವವನ್ನೂ ಪ್ರತ್ಯಕ್ಷಮಾಡಿಕೊಂಡಿರುವರು ||೧೪||

ಎಲೈ ಪೂಜ್ಯರಾದ ವಸಿಷ್ಠಮುನಿಯೆ! ಹಿಂದೆ, ಸರಳವೃಕ್ಷಗಳಿಂದ ವ್ಯಾಪ್ತವಾದ ನಿಷಧಪರ್ವತದ ತೊಪ್ಪಲಿನಲ್ಲಿ, ಆ ಮಹಾತ್ಮನಾದ ಚತುರ್ಮುಖನು, ನಮ್ಮಿಬ್ಬರಿಗೂ ಉಂಟಾ ಗಿದ್ದ ವೈರವು ಶಾಂತಿಹೊಂದುವುದಕ್ಕೂ, ಮಹಾಪ್ರಾಜ್ಞರಾದ ಮುನಿಗಳಿಗೆ ಶ್ರೇಯಸ್ಸುಂ ಟಾಗುವುದಕ್ಕೂಕೂಡ, ಅತ್ಯಂತವಾದ ಯಾವ ಜ್ಞಾನಮಾರ್ಗವನ್ನು ತಾನಾಗಿ ಉಪದೇಶಿ ಸಿದ್ದನೋ; ಮತ್ತು, ಬ್ರಾಹ್ಮಣೋತ್ತಮರೆ! ಸಯುಕ್ತಿಕವಾಗಿ ಬ್ರಹ್ಮನುಪದೇಶಿಸಿದ ಯಾವ ಜ್ಞಾನದಿಂದ, ಈ ಸಾಂಸಾರಿಕವಾದ ವಾಸನೆಯೆಲ್ಲವೂ—ಸೂರ್ಯೋದಯದಿಂದ

---

1 ತ್ರಿಭಿರ್ವಿಶೇಷಕಮ್.

ಸಾಂಸಾರೀ ನಾನನಾಯಾತಿ ಶಮಂ ಶ್ಯಾಮೇವ ಭಾಸ್ವತಾ ॥ ೧೭ ॥
ತದೇವ ಯುಕ್ತಿಮಜ್ಜ್ಞೇಯಂ ರಾಮಾಯಾಸ್ತೇನಿವಾಸಿನೇ ।
ಬ್ರಹ್ಮನ್ನುಪದಿಶಾಶು ತ್ವಂ ಯೇನ ವಿಶ್ರಾನ್ತಿಮೇಷ್ಯತಿ ॥ ೧೮ ॥
ಕದರ್ಥನಾ ಚ ನೈವೈಷಾ ರಾಮೋ ಹಿ ಗತಕಲ್ಮಷಃ ।
ನಿರ್ಮಲೇ ಮುಕುರೇ ವಕ್ತ್ರಂ ಅಯತ್ನೇನೈವ ಬಿಮ್ಬತಿ ॥ ೧೯ ॥
ತಜ್ಜ್ಞಾನಂ ಸಚ ಶಾಸ್ತ್ರಾರ್ಥಃ ತದ್ವೈದಗ್ಧ್ಯಮನಿನ್ದಿತಮ್ ।
ಸಚ್ಛಿಷ್ಯಾಯ ವಿರಕ್ತಾಯ ಸಾಧೋ ಯದುಪದಿಶ್ಯತೇ ॥ ೨೦ ॥
ಅಶಿಷ್ಯಾಯಾವಿರಕ್ತಾಯ ಯತ್ ಕಿಂಚಿದುಪದಿಶ್ಯತೇ ।
ತತ್ ಪ್ರಯಾತ್ಯಪವಿತ್ರತ್ವಂ ಗೋಕ್ಷೀರಂ ಶ್ವದೃತಾವಿವ ॥ ೨೧ ॥
ವೀತರಾಗಭಯಕ್ರೋಧಾಃ ನಿರ್ಮಾನಾಗಳಿತೈನಸಃ ।
ವದನ್ತಿ ತ್ವಾದೃಶಾಯತ್ರ ತತ್ರ ವಿಶ್ರಾಮ್ಯತೀಹ ಧೀಃ ॥ ೨೨ ॥
ಇತ್ಯುಕ್ತೇ ಗಾಧಿಪುತ್ರೇಣ ವ್ಯಾಸನಾರದಪೂರ್ವಕಾಃ ।
ಮುನಯಸ್ತೇ ತಮೇವಾರ್ಥಂ ಸಾಧುಸಾಧ್ವಿತ್ಯಪೂಜಯನ್ ॥ ೨೩ ॥

ರಾತ್ರಿಯು ಶಾಂತವಾಗುವಂತೆ—ನಿಶ್ಚಯವಾಗಿ ಶಾಂತಿಹೊಂದುವುದೋ; ಅಂತಹ ಜ್ಞಾನವನ್ನು ನೀವು ಈಗ ಸ್ಮರಿಸುವಿರಾ? ॥೧೫—೧೭॥

ಎಲೈ ಬ್ರಹ್ಮರ್ಷಿಗಳೆ! ಯಾವುದರಿಂದ ಇವನಿಗೆ ವಿಶ್ರಾಂತಿಯುಂಟಾಗುವುದೋ, ಅಂಥ ಸಕಾರಣವಾದ ತತ್ತ್ವವನ್ನು, ನಿಮ್ಮ ಶಿಷ್ಯನಾದ ಈ ರಾಮನಿಗೆ ನೀವು ಬೇಗನೆ ಉಪದೇಶಿಸಿರಿ ॥ ೧೮ ॥

ಇದು ನಿಮಗೆ ಅಂಥ ಕ್ಲೇಶವೂ ಅಲ್ಲವೇಅಲ್ಲ; ಏಕೆಂದರೆ:—ಈ ರಾಮನು ಮನಸ್ಸಿನ ಕಾಲುಷ್ಯಗಳನ್ನೆಲ್ಲ ಕಳೆದುಕೊಂಡು ನಿರ್ಮಲಹೃದಯನಾಗಿರುವನು. ಕೊಳೆಯಿಲ್ಲದ ಕನ್ನಡಿಯಲ್ಲಿ ಮುಖವು ಯತ್ನವಿಲ್ಲದೆಯೇ ಚೆನ್ನಾಗಿ ಪ್ರತಿಫಲಿಸುವುದಲ್ಲವೆ! ಹಾಗೆ ಈ ರಾಮನ ಹೃದಯದಲ್ಲಿಯೂ ನಿಮ್ಮುಪದೇಶವು ಚೆನ್ನಾಗಿ ಪ್ರವೇಶಹೊಂದುವುದು ॥ ೧೯ ॥

ಎಲೈ ಸಾಧುವರ್ಯರೆ! ಈ ಪ್ರಪಂಚದಲ್ಲಿ ವಿರಕ್ತನಾದ ಸಚ್ಛಿಷ್ಯನಿಗೆ ಯಾವುದುಪದೇಶಿಸಲ್ಪಡುವುದೋ, ಅದೇ ಜ್ಞಾನವು; ಅದೇ ಶಾಸ್ತ್ರಾರ್ಥವು; ಅದೇ ಶ್ಲಾಘ್ಯವಾದ ಪಾಂಡಿತ್ಯವು ॥ ೨೦ ॥

ಅದುಬಿಟ್ಟು, ವಿರಕ್ತನಲ್ಲದ ಅಸಚ್ಛಿಷ್ಯನಿಗೆ ಯಾವುದೊಂದುಪದೇಶಿಸಲ್ಪಡುವುದೋ ಅದು—ನಾಯಿಯ ತೊಗಲಿನ ಚೀಲದಲ್ಲಿ ಹಾಕಿದ ಹಸುವಿನ ಹಾಲಿನಂತೆ-ಅಪರಿಶುದ್ಧವಾಗುವುದು ॥ ೨೧ ॥

ಮುಖ್ಯವಾಗಿ, ರಾಗ ಭಯ ಕ್ರೋಧ ಇವುಗಳನ್ನು ಬಿಟ್ಟಿರುವರಾಗಿಯೂ—ಅಭಿಮಾನಶೂನ್ಯರಾಗಿಯೂ-ಪಾಪವಿಮುಕ್ತರಾಗಿಯೂ ಇರುವ ನಿಮ್ಮಂಥವರು, ಯಾವುದನ್ನು ವಿಷಯಮಾಡಿಕೊಂಡು ಹೇಳುವರೋ, ಅಲ್ಲಿ ಈ ಲೋಕದ ಸಮಸ್ತರ ಬುದ್ಧಿಯೂ ವಿಶ್ರಾಂತಿಪಡೆಯುವುದು ॥ ೨೨ ॥

ಈ ರೀತಿಯಾಗಿ ವಿಶ್ವಾಮಿತ್ರಮುನಿಯು ಹೇಳಲಾಗಿ, ವ್ಯಾಸ ನಾರದ ಮೊದಲಾದ ಆ ಸಮಸ್ತಮುನಿಗಳೂ 'ಸಾಧು! ಸಾಧು!' ಎಂದು ಆ ವಿಷಯವನ್ನೇ ಗೌರವಿಸಿದರು ॥

ಅಥೋವಾಚ ಮಹಾತೇಜಾಃ ರಾಜ್ಞಃ ಪಾರ್ಶ್ವೇ ವ್ಯವಸ್ಥಿತಃ |
ಬ್ರಹ್ಮೇವ ಬ್ರಹ್ಮಣಃ ಪುತ್ರೋ ವಸಿಷ್ಠೋ ಭಗವಾನ್ಮುನಿಃ ||೨೪||

ಶ್ರೀವಸಿಷ್ಠಉವಾಚ.

ಮುನೇ ಯದಾದಿಶಸಿ ಮೇ ತದವಿಘ್ನಂ ಕರೋಮ್ಯಹಮ್ |
ಕಃ ಸಮರ್ಥಃ ಸಮರ್ಥೋಽಪಿ ಸತಾಂ ಲಙ್ಘಯಿತುಂ ವಚಃ || ೨೫ ||
ಅಹಂ ಹಿ ರಾಜಪುತ್ರಾಣಾಂ ರಾಮಾದೀನಾಂ ಮನಸ್ತಮಃ |
ಜ್ಞಾನೇನಾಪನಯಾಮ್ಯಾಶು ದೀಪೇನೇವ ನಿಶಾತಮಃ || ೨೬ ||
ಸ್ಮರಾಮ್ಯಖಣ್ಡಿತಂ ಸರ್ವಂ ಸಂಸಾರಭ್ರಮಶಾನ್ತಯೇ |
ನಿಷಧಾದ್ರೌ ಪುರಾ ಪ್ರೋಕ್ತಂ ಯಜ್ಜ್ಞಾನಂ ಪದ್ಮಜನ್ಮನಾ ||೨೭||

ಶ್ರೀವಾಲ್ಮೀಕಿರುವಾಚ.

ಇತಿ ನಿಗದಿತವಾನಸೌ ಮಹಾತ್ಮಾ ಪರಿಕರಬನ್ಧಗೃಹೀತವಕ್ತೃತೇಜಾಃ |
ಅಕಥಯದಿದಮಜ್ಞತೋಪಶಾನ್ತ್ಯೈ ಪರಮುಪದೈಕವಿಬೋಧನಂ ವಸಿಷ್ಠಃ||
ಇತಿ ಮುಮುಕ್ಷುವ್ಯವಹಾರಪ್ರಕರಣೇ ವಿಶ್ವಾಮಿತ್ರವಾಕ್ಯಂ ನಾಮ
ದ್ವಿತೀಯಃ ಸರ್ಗಃ.

ಆ ಬಳಿಕ, ದೊರೆಯ ಮಗ್ಗುಲಿನಲ್ಲಿ ಕುಳಿತಿದ್ದ-ಮಹಾತೇಜಸ್ವಿಯಾದ-ಬ್ರಹ್ಮಮಾನಸಪುತ್ರರಾದ-ಮಹಾತ್ಮರಾದ-ವಸಿಷ್ಠಮುನಿಯು, ಸಾಕ್ಷಾಚ್ಚತುರ್ಮುಖಬ್ರಹ್ಮನಂತೆ ಮಾತನಾಡಿದರು || ೨೪ ||

ಆ ವಸಿಷ್ಠಮುನಿಯು ಹೇಳಿದುದೇನೆಂದರೆ:—

ಎಲೈ ವಿಶ್ವಾಮಿತ್ರಮುನಿಯೆ! ನೀವು ನನಗೇನನ್ನು ಆಜ್ಞಾಪಿಸುವಿರೋ, ಅದನ್ನು ತಡೆಯಿಲ್ಲದೆ ನಾನು ಮಾಡುವೆನು. ಎಷ್ಟು ಸಮರ್ಥನಾಗಿದ್ದರೂ, ಸತ್ಪುರುಷರ ಮಾತನ್ನು ಮೀರುವುದಕ್ಕೆ ಯಾವನುತಾನೆ ಸಮರ್ಥನಾದಾನು? || ೨೫ ||

ರಾತ್ರಿಯಲ್ಲುಂಟಾಗುವ ಕತ್ತಲೆಯನ್ನು ದೀಪದಿಂದ ನಿವಾರಿಸುವಂತೆ, ಈ ರಾಮ ಮುಂತಾದ ರಾಜಪುತ್ರರಿಗುಂಟಾಗಿರುವ ಅಜ್ಞಾನವನ್ನು-ಜ್ಞಾನೋಪದೇಶದಿಂದ ನಾನು ಶೀಘ್ರವಾಗಿ ಹೋಗಲಾಡಿಸುವೆನು || ೨೬ ||

ಹಿಂದೆ, ನಿಷಧಪರ್ವತದಲ್ಲಿ, ಚತುರ್ಮುಖಬ್ರಹ್ಮನು, ಈ ಸಂಸಾರದ ಭ್ರಾಂತಿಯು ಶಾಂತಿಹೊಂದುವುದಕ್ಕಾಗಿ ಯಾವ ಜ್ಞಾನವನ್ನುಪದೇಶಿಸಿದ್ದನೋ, ಅದೆಲ್ಲವನ್ನೂ ನಾನು ಈಗ ಸ್ವಲ್ಪವೂ ಬಿಡದಂತೆ ಸ್ಮರಿಸುತಿರುವೆನು || ೨೭ ||

ಶ್ರೀ ವಾಲ್ಮೀಕಿಮುನಿಯು ಭರದ್ವಾಜನನ್ನು ಕುರಿತು ಹೇಳಿದರು.

ಈ ರೀತಿಯಾಗಿ ಹೇಳಿದ ಆ ವಸಿಷ್ಠಮುನಿಯು, ಒಂದು ಕೆಲಸಕ್ಕೆ ಹೊರಟವನು ಸೊಂಟ ಕಟ್ಟಿ ನಿಲ್ಲುವಂತೆ-ನಾನಾವಿಧವಾದ ಉಪದೇಶಸಾಮಗ್ರಿಗಳಿಂದ ಉಪದೇಶಕನ ತೇಜಸ್ಸನ್ನು ಸ್ವೀಕರಿಸಿದವರಾಗಿ, ಜನರ ಅಜ್ಞಾನನಿವೃತ್ತಿಗೋಸ್ಕರ, ತತ್ತ್ವಜ್ಞಾನಕ್ಕೆ ಮುಖ್ಯಹೇತುವಾದ ಈ ಮಾತನ್ನು ಹೇಳಲುಪಕ್ರಮಿಸಿದರು || ೨೮ ||

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ವಿಶ್ವಾಮಿತ್ರವಾಕ್ಯವೆಂಬ
ಎರಡನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ತೃತೀಯಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಪೂರ್ವಮುಕ್ತಂ ಭಗವತಾ ಯಜ್ಜ್ಞಾನಂ ಪದ್ಮಜನ್ಮನಾ ।
ಸರ್ಗಾದೌ ಲೋಕಶಾನ್ತ್ಯರ್ಥಂ ತದಿದಂ ಕಥಯಾಮ್ಯಹಮ್ ॥ ೧ ॥

ಶ್ರೀರಾಮ ಉವಾಚ.

ಕಥಯಿಷ್ಯಸಿ ವಿಸ್ತೀರ್ಣಾಂ ಭಗವನ್ ಮೋಕ್ಷಸಂಹಿತಾಮ್ ।
ಇಮಂ ತಾವತ್ ಕ್ಷಣಂ ಜಾತಂ ಸಂಶಯಂ ಮೇ ನಿವಾರಯ ॥ ೨ ॥
ಪಿತಾ ಶುಕಸ್ಯ ಸರ್ವಜ್ಞೋ ಗುರುರ್ವ್ಯಾಸೋ ಮಹಾಮತಿಃ ।

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಮೂರನೆಯ ಸರ್ಗವು.

ಸ್ಥೂಲಾದಿಜಗದಾರೋಪನಿರಾಸಾಭ್ಯಾಂ ಪ್ರಸಾಧ್ಯತೇ ।
ಪ್ರತ್ಯಕ್ಚಿದಾತ್ಮಾ ವಿಷಯೋ ರಾಮಶಙ್ಕಾಪಹ್ನುತಿಚ್ಛಲಾತ್ ॥

ಶ್ರೀರಾಮನಿಗುಂಟಾದ ಶಂಕೆಯನ್ನು ಹೋಗಲಾಡಿಸುವ ವ್ಯಾಜದಿಂದ, ಈ ವೇದಾಂತಶಾಸ್ತ್ರಕ್ಕೆ ಮುಖ್ಯವಿಷಯವಾದ ಪರಮಾತ್ಮನಲ್ಲಿ-ಸ್ಥೂಲಭೂತಗಳೇ ಮೊದಲಾದ ಜಗತ್ತನ್ನು ಆರೋಪಿಸಿರುವ ರೀತಿಯನ್ನೂ-ಈ ಆರೋಪಣೆಯನ್ನು ತಪ್ಪಿಸುವ ರೀತಿಯನ್ನೂ ತಿಳುಹಿಸಿ, ಇದರಿಂದ-ಆ ಪರಮಾತ್ಮನ ನಿರ್ಮಲಸ್ವರೂಪವು ಈ ಸರ್ಗದಲ್ಲಿ ತೋರಿಸಲ್ಪಡುವುದು.

ಪೂರ್ವೋಕ್ತರೀತಿಯಾಗಿ ಶ್ರೀರಾಮನಿಗುಪದೇಶಿಸಲೊಪ್ಪಿಕೊಂಡ ಶ್ರೀ ವಸಿಷ್ಠಮುನಿಗಳು, ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು.

ವತ್ಸ! ಶ್ರೀರಾಮ! ಹಿಂದೆ ಸೃಷ್ಟ್ಯಾದಿಯಲ್ಲಿ, ಪೂಜ್ಯನಾದ ಚತುರ್ಮುಖಬ್ರಹ್ಮನು ಈ ಲೋಕದಲ್ಲಿ ಶಾಂತಿಯು ನೆಲೆಗೊಳ್ಳುವುದಕ್ಕೋಸ್ಕರ ಯಾವ ಜ್ಞಾನವನ್ನು ಅಪ್ಪಣೆಕೊಟ್ಟಿದ್ದನೋ, ಅದನ್ನು ನಾನು ಈಗ ಹೇಳುವೆನು ॥ ೧ ॥

ಹೀಗೆ ವಸಿಷ್ಠಮುನಿಯು ಪ್ರಾರಂಭಿಸಿದೊಡನೆ ಶ್ರೀರಾಮನು ಹೇಳಿದನು.

ಪೂಜ್ಯರೆ! ತಾವು ಹೇಳತೊಡಗಿದ ಮೋಕ್ಷಶಾಸ್ತ್ರವು ಬಲು ವಿಸ್ತೀರ್ಣವಾಗಿರುವ ಕಾರಣ, ಅದನ್ನು ಆಮೇಲೆ ತಾವು ಹೇಳಬಹುದು. ನನಗೀಗ ಉಂಟಾಗಿರುವ ಈ ಸಂಶಯವನ್ನು ಮೊದಲು ಒಂದುಕ್ಷಣ ತಾವು ನಿವಾರಣೆಮಾಡಬೇಕು ॥ ೨ ॥

ಆ ಸಂಶಯವೇನೆಂದರೆ:—ಈಗ ವಿಶ್ವಾಮಿತ್ರಮುನಿಗಳು, ಶುಕಮುನಿಯು ಮುಕ್ತರಾದರೆಂದು ಹೇಳಿದರಲ್ಲವೆ! ಆದರೆ, ಇಂತಹ ಶುಕಮಹರ್ಷಿಗೆ ತಂದೆಯಾಗಿಯೂ ಗುರುವಾಗಿಯೂ ಮಹಾಮತಿಯಾಗಿಯೂ ಸರ್ವಜ್ಞರಾಗಿಯೂ ಇರುವ-ವೇದವ್ಯಾಸರು, (೧) ವಿದೇ

---

(೧) ಮುಕ್ತಿಯಲ್ಲಿ ಜೀವನ್ಮುಕ್ತಿಯೆಂದೂ ವಿದೇಹಮುಕ್ತಿಯೆಂದೂ ಎರಡು ಭೇದವುಂಟು. ಜೀವಂತನಾಗಿಯೇ ಮುಕ್ತನಾಗಿದ್ದರೆ ಜೀವನ್ಮುಕ್ತಿಯೆಂದೂ, ದೇಹಾನಂತರ ಮುಕ್ತನಾದರೆ ವಿದೇಹಮುಕ್ತಿಯೆಂದೂ ಸಾಮಾನ್ಯವಾಗಿ ವ್ಯವಹಾರವು. ಇದರ ಲಕ್ಷಣವೆಲ್ಲ ಮುಂದೆ ವಿಶದವಾಗುವುದು.

ವಿದೇಹಮುಕ್ತೋ ನ ಕಥಂ ಕಥಂ ಮುಕ್ತಃ ಸುತೋಽಸ್ಯ ಸಃ ‖ ೩ ‖

ಶ್ರೀ ವಸಿಷ್ಠ ಉವಾಚ.

ಪರಮಾರ್ಕಪ್ರಕಾಶಾನ್ತಃ ತ್ರಿಜಗತ್ತ್ರಸರೇಣವಃ |
ಉತ್ಪತ್ಯೋತ್ಪತ್ಯ ಲೀನಾಯೇ ನ ಸಙ್ಖ್ಯಾಮುಪಯಾನ್ತಿ ತೇ ‖ ೪ ‖
ವರ್ತಮಾನಾಶ್ಚ ಯಾಃ ಸನ್ತಿ ತ್ರೈಲೋಕ್ಯಗಣಕೋಟಯಃ |
ಶಕ್ಯನ್ತೇ ತಾಶ್ಚ ಸಙ್ಖ್ಯಾತುಂ ನೈವ ಕಾಶ್ಚ ನ ಕೇನಚಿತ್ ‖ ೫ ‖
ಭವಿಷ್ಯನ್ತಿ ಪರಾಮ್ಭೋಧೌ ಜಗತ್ಸರ್ಗತರಙ್ಗಕಾಃ |
ತಾಂಶ್ಚ ವೈ ಪರಿಸಙ್ಖ್ಯಾತುಂ ಸಾ ಕಥೈವ ನ ವಿದ್ಯತೇ ‖ ೬ ‖

ಹಮುಕ್ತಿಯನ್ನು ಪಡೆಯದಿರುವುದು ಹೇಗೆ? ಶುಕಮುನಿಮಾತ್ರ ಮುಕ್ತನಾದುದು ಹೇಗೆ॥

ಈ ರೀತಿಯಾಗಿ ರಾಮನು ಪ್ರಶ್ನೆಮಾಡಲು, ಈ ಸಂಸಾರಬಂಧವು ಮಾಯಾಜನ್ಯವೆಂಬುದನ್ನೂ ಮಾಯಾಸ್ವರೂಪವನ್ನೂ ಆತ್ಮಸ್ವರೂಪವನ್ನೂ ಇವನು ತಿಳಿಯುವ ವರೆಗೂ ಇವನಿಗೆ ತಮ್ಮ ವಾಕ್ಯದಲ್ಲಿ ನಂಬುಗೆ ಹುಟ್ಟುವುದಿಲ್ಲವೆಂದು ಯೋಚಿಸಿ, ಶ್ರೀ ವಸಿಷ್ಠಮುನಿಯು ಆ ರಾಮನನ್ನು ಕುರಿತು ಹೇಳಲುಪಕ್ರಮಿಸಿದರು.

ವತ್ಸ! ರಾಮ! ಆ ಪರಮಾತ್ಮನೆಂಬ ಸೂರ್ಯಕಿರಣದೊಳಗೆ, ಲೋಕತ್ರಯವೆಂಬ ಎಷ್ಟು (೨) ತ್ರಸರೇಣುಗಳು ಹಾರಿಹಾರಿ ಅಡಗಿಹೋಗಿವೆಯೋ; ಅವು ಗಣನೆಗೇ ಬರುವುದಿಲ್ಲ॥ ೪॥

ಮತ್ತು ವರ್ತಮಾನಕಾಲದಲ್ಲಿ ಯಾವ ತ್ರೈಲೋಕ್ಯಸಮೂಹಗಳು ಕೋಟಿಸಂಖ್ಯಾಕಗಳಾಗಿವೆಯೋ, ಅವುಗಳನ್ನೂ ಕೂಡ, ಸ್ವಲ್ಪವೂ-ಯಾವ ಮನುಷ್ಯನೂ-ಲೆಕ್ಕಮಾಡಲು ಶಕ್ತನಾಗುವುದಿಲ್ಲ ॥ ೫॥

ಹೀಗೆಯೇ, ಪರಮಾತ್ಮನೆಂಬ ಸಮುದ್ರದಲ್ಲಿ, ಜಗತ್ಸೃಷ್ಟಿಯೆಂಬ ಸಣ್ಣಸಣ್ಣ ಅಲೆಗಳು ಮುಂದೆಯೂ ಎಷ್ಟು ಆಗುವುವೋ, ಅವನ್ನು ಲೆಕ್ಕಮಾಡುವುದೆಂಬ ಮಾತೇ ಇಲ್ಲ ॥ ೬ ॥

---

(೧) ಇಲ್ಲಿ ತಿಳಿಯಬೇಕಾದ ವಿಷಯವೊಂದುಂಟು. ಪ್ರಪಂಚದಲ್ಲಿ ಜ್ಞಾನಕ್ಕೆ ಫಲವೇನೆಂದರೆ—ವಿದೇಹಮುಕ್ತಿಯೇ-ಆಗಿರುವುದು ; ಅಂಥ ವಿದೇಹಮುಕ್ತಿಯು ಸರ್ವಜ್ಞರಾದ ವ್ಯಾಸರಿಗೂ ಲಭಿಸಲಿಲ್ಲವೆಂದುಬಿಟ್ಟರೆ, ಜ್ಞಾನವೇ ನಿಷ್ಫಲವೆಂದು ಹೇಳಬೇಕಾಗುವುದು. ಅದಲ್ಲದೆ ಜ್ಞಾನದಿಂದ ಅಜ್ಞಾನವು ನಾಶಹೊಂದಿದೆಯೆಂದು ಹೇಳುವಪಕ್ಷದಲ್ಲಿ, ಭೃಗು ಮೊದಲಾದವರಂತೆ ಈ ವ್ಯಾಸರೂ ನಮ್ಮ ಕಣ್ಣಿಗೆ ಕಾಣದೆ ಮುಕ್ತಿಹೊಂದಿರಬೇಕಾಗಿತ್ತು. ಆದಕಾರಣ ಜೀವನ್ಮುಕ್ತಿಯೆಂಬುವುದೂ ಇದು ಜ್ಞಾನದಿಂದ ಉಂಟಾಗುತ್ತದೆಂಬುವುದೂ ನಂಬುವುದಕ್ಕಾಗಲಾರದೆಂದು ರಾಮನ ಗೂಢತಾತ್ಪರ್ಯವಿರಬಹುದೆಂದು ವ್ಯಾಖ್ಯಾನಕಾರರು ಬರೆದಿರುವರು. ಅದರಿಂದಲೇ ಮುಂದಿನ ಶ್ಲೋಕಗಳಲ್ಲಿ ವಸಿಷ್ಠರು ಅಸಂಖ್ಯಾಕರಾಗಿ ವ್ಯಾಸರಿದ್ದರೆಂದು ಸೂಚಿಸಿ, ಯಾವ ವ್ಯಾಸರು ಜೀವನ್ಮುಕ್ತರಾಗಿದ್ದರೋ-ಈಗಿರುವ ವ್ಯಾಸರು ಯಾರೋ-ಎಂದು ಹೇಳಿರುವರು.

(೨) ತ್ರಸರೇಣು = ಬಿಸಿಲುಕೋಲಿನಲ್ಲಿ ಕಾಣುವ ಅತಿ ಸೂಕ್ಷ್ಮವಾದ ಧೂಳಿ.

ಶ್ರೀರಾಮಉವಾಚ.

ಯಾಭೂತಾಯಾ ಭವಿಷ್ಯನ್ತಿ ಜಗತ್ಸರ್ಗಪರಮ್ಪರಾಃ ।
ತಾಸಾಂ ವಿಚಾರಣಾ ಯುಕ್ತಾ ವರ್ತಮಾನಾಸ್ತು ಕಾಽನ ॥ ೭ ॥

ಶ್ರೀ ವಸಿಷ್ಠಉವಾಚ.

ತಿರ್ಯಕ್ಪುರುಷದೇವಾದೇಃ ಯೋ ನಾಮ ಸ ವಿಸಶ್ಯತಿ ।
ಯಸ್ಮಿನ್ನೇವ ಪ್ರದೇಶೇಸೌ ತತ್ರೈವೇದಂ ಪ್ರಸಶ್ಯತಿ ॥ ೮ ॥
ಆತಿವಾಹಿಕನಾಮ್ನಾನ್ತಃ ಸ್ವಹೃದ್ಯೇವ ಜಗತ್ತ್ರಯಮ್ ।

ಈರೀತಿಯಾಗಿ ತಾನು ಕೇಳಿದ ಪ್ರಶ್ನೆಯನ್ನು ಮರೆಮಾಚುವಂತೆ ತೋರಿಸಿ–ವಿಷಯಾಂತರವನ್ನುಪಕ್ರಮಿಸಿದ ವಸಿಷ್ಠಮುನಿಯನ್ನು ಕುರಿತು, ಶ್ರೀರಾಮನು ಅವನ ಗೂಢಾಭಿಪ್ರಾಯವನ್ನು ತಿಳಿದವನಾಗಿ, ಮತ್ತೆ ಹೇಳಿದನು.

ಪೂಜ್ಯರೆ! ತಾವು ಭೂತಭವಿಷ್ಯದ್ವರ್ತಮಾನರೂಪವಾದ ಕಾಲತ್ರಯದಲ್ಲಿಯೂ ಅಸಂಖ್ಯಾಕವಾಗಿ ಜಗತ್ಸೃಷ್ಟಿಯುಂಟೆಂದು ಅಪ್ಪಣೆಕೊಟ್ಟಿರಲ್ಲವೆ! ಆದರೆ ಈ ಜಗತ್ಸೃಷ್ಟಿಯ ಪರಂಪರೆಗಳು, ಹಿಂದೆ ಎಷ್ಟು ಆಗಿರುವುವೋ, ಮುಂದೆ ಎಷ್ಟು ಆಗುವುವೋ,—ಅವುಗಳ ವಿಚಾರಮಾಡುವುದು ಯುಕ್ತವು. ವರ್ತಮಾನವೋ— ಎಂದರೆ, ಅಲ್ಪಕಾಲಿಕವಾದಕಾರಣ, ಇದು ಎಷ್ಟರ ಪದಾರ್ಥವೆಂದು ಹೇಳುವುದು? ॥೭॥

ಹೀಗೆ ಶ್ರೀರಾಮನು ಹೇಳಿದುದನ್ನು ಕೇಳಿ, ತನ್ನಭಿಪ್ರಾಯವನ್ನವನು ತಿಳಿದುದರಿಂದ ಹರ್ಷಯುಕ್ತರಾದ ವಸಿಷ್ಠಮುನಿಯು, ಸ್ಥೂಲಸೂಕ್ಷ್ಮಭೂತಗಳೆಲ್ಲವೂ ಮಿಥ್ಯಾರೂಪಗಳೆಂದು ತಿಳಿಯಪಡಿಸುವುದಕ್ಕೋಸ್ಕರ, ಪುನಃ ಶ್ರೀರಾಮನನ್ನು ಕುರಿತು ಹೇಳಿದರು.

ವತ್ಸ! ರಾಮ! ದೇವತಿರ್ಯಙ್ಮನುಷ್ಯರೇ ಮೊದಲಾದವರಲ್ಲಿ, ಯಾವನು ಯಾವಜನ್ಮದಲ್ಲಿದ್ದು ಮೃತಿಹೊಂದಿದರೂ, ಆಗಲೇ ಅವನು ತನಗೆ ಆಶ್ರಯಕ್ಕೋಸ್ಕರ ಮತ್ತೊಂದು ಸ್ಥಾನವನ್ನು ನೋಡುವನು ॥೮॥

ಅವನು ನೋಡುವ ಬಗೆಯಾವುದೆಂದರೆ:–ಪ್ರಾಣಿಗಳಿಗೆ, ಧೂಮಾದಿಮಾರ್ಗವೆಂದೂ ಅರ್ಚಿರಾದಿಮಾರ್ಗವೆಂದೂ ಈ ದೇಹಾನಂತರದಲ್ಲಿ ಎರಡುಮಾರ್ಗಗಳಿರುವುವು. ಸ್ವರ್ಗಾದಿಲೋಕಗಳನ್ನು ಹೊಂದತಕ್ಕವರು ಧೂಮಾದಿಮಾರ್ಗದಲ್ಲಿಯೂ, ಮೋಕ್ಷಹೊಂದತಕ್ಕವರು ಅರ್ಚಿರಾದಿಮಾರ್ಗದಲ್ಲಿಯೂ ಹೋಗಬೇಕಾಗುವುದು. ಇಂತಹ ಮಾರ್ಗಗಳಲ್ಲಿ ಈ ಜೀವನನ್ನು ಆಯಾ ಮಾರ್ಗಾಭಿಮಾನಿಗಳಾದ ದೇವತೆಗಳು ಕರೆದುಕೊಂಡು ಹೋಗಲನುಕೂಲಿಸುವಂತೆ ಒಂದು ಸೂಕ್ಷ್ಮಶರೀರವಿರುವುದು. ಇದರಿಂದಲೇ ಇದಕ್ಕೆ ಆತಿವಾಹಿಕವೆಂದು ಹೆಸರುಂಟಾಗಿರುವುದು. ಇದರಲ್ಲಿ, ಚಿತ್ತ ಅಹಂಕಾರ ಮನಸ್ಸು ಬುದ್ಧಿ (೧) ಪಂಚಜ್ಞಾನೇಂದ್ರಿಯ ಪಂಚಕರ್ಮೇಂದ್ರಿಯ ಪ್ರಾಣ–ಇವಿಷ್ಟೂ ಸೇರುವುವು. ಇದಕ್ಕೆ ವಾಸನಾಶರೀರವೆಂದೂ ಚಿತ್ತಶರೀರವೆಂದೂ ಹೆಸರಿರುವುದು. ಇಂತಹ ಶರೀರದಿಂದ ತನ್ನ ಹೃದಯಾಕಾಶದಲ್ಲಿ ಆಯಾರೀತಿಯಾಗಿ ಜಗತ್ತ್ರಯವನ್ನೂ ಈ ಜೀವನು ಅನುಭವಿಸುವನು.

---

(೧) ಕಣ್ಣು, ಮೂಗು, ನಾಲಿಗೆ, ಕಿವಿ, ಚರ್ಮ, ಇವು ಐದೂ ಜ್ಞಾನೇಂದ್ರಿಯಗಳು; (ವಿಷಯಗಳನ್ನು ತಿಳಿದುಕೊಳ್ಳುವ ಇಂದ್ರಿಯಗಳು.) ಬಾಯಿ, ಕೈಯಿ, ಕಾಲು, ಮಲದ್ವಾರ, ಮೂತ್ರದ್ವಾರ, ಇವು ಐದೂ ಕರ್ಮೇಂದ್ರಿಯಗಳು. (ಕೆಲಸಮಾಡತಕ್ಕ ಇಂದ್ರಿಯಗಳು.)

ವ್ಯೋಮ್ನಿ ಚಿತ್ತಶರೀರೇಣ ವ್ಯೋಮಾತ್ಮಾನುಭವತ್ಯಜಃ ॥ ೯ ॥
ಏವಂ ಮೃತಾ ಮ್ರಿಯನ್ತೇ ಚ ಮರಿಷ್ಯನ್ತಿ ಚ ಕೋಟಯಃ ।
ಭೂತಾನಾಂ ಯಾಂ ಜಗನ್ತ್ಯಾಶಾಂ [1]ಉದಿತಾನಿ ಪೃಥಕ್ಪೃಥಕ್[2] ॥೧೦॥
[3]ಸಙ್ಕಲ್ಪನಿರ್ಮಾಣಮಿವ ಮನೋರಾಜ್ಯವಿಲಾಸವತ್ ।
[4]ಇನ್ದ್ರಜಾಲಮಾಲಇವ ಕಥಾರ್ಥಪ್ರತಿಭಾಸವತ್ ॥ ೧೧ ॥
ದುರ್ವಾತಭೂಕಮ್ಪಇವ ತ್ರಸ್ತಬಾಲಪಿಶಾಚವತ್ ।

(ಅಂದರೆ ವಾಸನಾರೂಪವಾದ ಆಯಾ ಶರೀರಗಳನ್ನು ಹೊಂದುವನು) ಆದರೆ, ವಸ್ತುಸ್ವರೂಪವನ್ನು ವಿಚಾರಮಾಡಿದರೆ—ಅವನು ಕೇವಲ ಚಿದಾಕಾಶರೂಪನಾಗಿಯೂ, ಅತಏವ ಜನ್ಮಾದಿರಹಿತನಾಗಿಯೂ ಇರುವವನಾಗಿದ್ದರೂ, ಭ್ರಾಂತಿಯಿಂದ ಅವುಗಳನ್ನೆಲ್ಲ ಅನುಭವಿಸುವಂತೆ ಕಾಣಿಸುವನು. ಆದರೆ ಅನೇಕವಾದ ಲೋಕಗಳುಂಟೆಂದೂ ಅವುಗಳನ್ನೆಲ್ಲ ಈ ಜೀವನನುಭವಿಸುವನೆಂದೂ ಶ್ರುತಿಸ್ಮೃತಿಗಳನೇಕವಾಗಿ ಸಾರುವುವು; ಇದು ಸತ್ಯವೇ ಅಹುದು. ಅವುಗಳೆಲ್ಲವೂ (೧) ವ್ಯವಹಾರದಶೆಯಲ್ಲಿ ಕಾಣುವುವಲ್ಲದೆ, ಪರಮಾರ್ಥದಶೆಯಲ್ಲಿ ಕಾಣುವುದಿಲ್ಲ ॥೯॥

ಹೀಗೆ ಅನೇಕಕೋಟಿ ಭೂತಗಳು ಹಿಂದೆ ಮರಣಹೊಂದಿರುವುವು; ಈಗ ಮರಣಹೊಂದುತಲೂ ಇರುವುವು; ಮುಂದೆಯೂ ಮರಣಹೊಂದುವುವು. ಹೀಗೆ ಮರಣಹೊಂದುವಾಗ ಈ ಲೋಕಗಳು ಯಾವಯಾವ ಆಶಾವಿಶೇಷಗಳನ್ನು ಮನಸ್ಸಿನಲ್ಲಿಟ್ಟುಕೊಂಡಿರುವುವೋ, ಹುಟ್ಟಿದಬಳಿಕ ಮತ್ತೆ ಅವವುಗಳನ್ನೇ ಬೇರೆಬೇರೆಯಾಗಿ ಹೊಂದುವುವು ॥೧೦॥

ಈರೀತಿಯಾಗಿ ಪ್ರಪಂಚವೆಲ್ಲವೂ ವಾಸನಾಮಯವಾಗಿ, ಜೀವನು ಅದನ್ನು ಅನುಭವಿಸುವಂತೆ ಕಾಣುವ ಬಗೆಯಾವುದೆಂದರೆ,—ಮನಸ್ಸಿನಲ್ಲಿ ನಾನಾವಿಧವಾದ ಪದಾರ್ಥಜಾತವನ್ನು ಸೃಷ್ಟಿಮಾಡಿಕೊಳ್ಳುವುದಿಲ್ಲವೆ!—ಮನಸ್ಸಿನಲ್ಲಿ ದೊಡ್ಡದೊಂದು ದೊರೆತನವನ್ನು ಏರ್ಪಡಿಸಿಕೊಂಡು, ಅದರಿಂದ ವಿಲಾಸಪಡಬಹುದಲ್ಲವೆ!—ಇಂದ್ರಜಾಲವನ್ನು ಮಾಡಿ,

---

[1] ಯಾಮಿತ್ಯಸ್ಯ ಆಶಾಮಿತ್ಯಸ್ಯ ಚ ಸಪ್ತಮ್ಯನ್ತತಯಾ ವಿಪರಿಣಾಮಃ.

[2] ‘ತಾಂ ಆಪ್ನುವನ್ತಿ’ ಇತಿ ಪದದ್ವಯಮಧ್ಯಾಹಾರ್ಯಮ್.

[3] ತ್ರಿಭಿರ್ವಿಶೇಷಕಮ್.

[4] ಇನ್ದ್ರಜಾಲಾಸಿ ಆ=ಸಮನ್ತಾತ್ ಸ್ಥಿತಾ ಮಾಲೇವ ಯಸ್ಮಿನ್ನಿತಿ ಬಹುವ್ರೀಹಿಃ.

(೧) ಪಾರಮಾರ್ಥಿಕ, ವ್ಯಾವಹಾರಿಕ, ಪ್ರಾತಿಭಾಸಿಕ, ತುಚ್ಛ, ಎಂದು ನಾಲ್ಕುವಿಧ ಪದಾರ್ಥಗಳಿರುವುವು ಪಾರಮಾರ್ಥಿಕವೆಂದರೆ—ಎಂದಿಗೂ ಸತ್ಯವಾದ ಪದಾರ್ಥವು. ಇದು ಪರಬ್ರಹ್ಮವೊಂದೇ ಬಂದು ವ್ಯಾವಹಾರಿಕವೆಂದರೆ—ವ್ಯವಹಾರದಿಂದುಂಟಾಗಿರತಕ್ಕವು. ನಮ್ಮ ಕಣ್ಣಿಗೆ ಕಾಣುವ ಪಂಚಭೂತಾದಿ ಪದಾರ್ಥಗಳೆಲ್ಲವೂ ವ್ಯಾವಹಾರಿಕಗಳು. ಪ್ರಾತಿಭಾಸಿಕವೆಂದರೆ—ಇಲ್ಲದಿದ್ದರೂ ಇದ್ದಂತೆ ಕಾಣತಕ್ಕವುಗಳು. ಹಗ್ಗವನ್ನು ನೋಡಿ ಸರ್ಪವೆಂದು ತಿಳಿಯುವಿಕೆಯೂ, ಮುತ್ತಿನಚಿಪ್ಪನ್ನು ನೋಡಿ ಬೆಳ್ಳಿಯೆಂದು ತಿಳಿಯುವಿಕೆಯೂ ಇದಕ್ಕುದಾಹರಣೆಯು. ತುಚ್ಛವೆಂದರೆ—ಎಂದಿಗೂ ಅಸತ್ಯವಾದ ಪದಾರ್ಥವು. ಬಂಜೆಯಮಗ, ಕುದುರೆಯ ಕೊಂಬು, ಇವುಗಳೆಲ್ಲವೂ ತುಚ್ಛಗಳು. ಮತ್ತೆ ಕೆಲವುಕಡೆಯಲ್ಲಿ ಸತ್ಯ, ಅಸತ್ಯ ಎಂಬ ಎರಡೇ ಭೇದಗಳು ಕಾಣುವುವು.

ಮುಕ್ತಾಳೀವಾಮಲೇ ವ್ಯೋಮ್ನಿ ನೌಸ್ಪನ್ದತರುಯಾನವತ್ ॥ ೧೨ ॥
ಸ್ವಪ್ನಸಂವಿತ್ತಿಪುರವತ್ ಸ್ವಪ್ನಜಾತಖಪುಷ್ಪವತ್ |
ಜಗತ್ಸಂಸರಣಂ ಸ್ವಾನ್ತಃ ಮೃತೋಽನುಭವತಿ ಸ್ವಯಮ್ ॥ ೧೩ ॥
ತತ್ರಾತಿಪರಿಣಾಮೇನ ತದೇವ ಘನತಾಂ ಗತಮ್ |
ಇಹ ಲೋಕೋಽಯಮಿತ್ಯೇವ ಜೀವಾಕಾಶೇ ವಿಜೃಮ್ಭತೇ ॥ ೧೪ ॥
ಪುನಸ್ತತ್ರೈವ ಜನ್ಮೇಹಾಮರಣಾದ್ಯನುಭೂತಿಮಾನ್ |
ಪರಂ ಲೋಕಂ ಕಲ್ಪಯತಿ ಮೃತಸ್ತತ್ರ ತಥಾ ಪುನಃ ॥ ೧೫ ॥
ತದನ್ತರನ್ಯೇ ಪುರುಷಾಃ ತೇಷಾಮನ್ತಸ್ತಥೇತರೇ |
ಸಂಸಾರಇತಿ ಭ್ರಾನ್ತಿಮೇಽ ಕದಳೀದಳಪೀಠವತ್ ॥ ೧೬ ॥
ನ ಪೃಥ್ವ್ಯಾದಿಮಹಾಭೂತಗಣಾನ ಚ ಜಗತ್ಕ್ರಮಾಃ |

ಆದನ್ನು ಒಂದು ಪದಾರ್ಥದಸುತ್ತಲೂ ಸ್ಥಿರಪಡಿಸಿ, ಆ ಪದಾರ್ಥವು ನಾನಾವಿಧವಾಗಿ ಕಾಣುವಂತೆ ಮಾಡುವುದಿಲ್ಲವೆ!—ಯಾರಾದರೊಂದು ಕಥೆಯನ್ನು ಹೇಳಿದರೆ, ಅದರ ವಿಷಯವೆಲ್ಲ ನಮ್ಮೆದುರಿಗೆ ನಿಂತಿರುವಂತೆ ತೋರುವುದಿಲ್ಲವೆ!—ಆದುರುರೋಗಹುಟ್ಟಿದವರಿಗೆ ಭೂಮಿಯೆಲ್ಲವೂ ನಡುಗುವಂತೆ ತೋರುವುದಿಲ್ಲವೆ! - ಬಾಲಕನು ಹೆದರಿದಾಗ ಪಿಶಾಚವನ್ನು ನೋಡುವುದಿಲ್ಲವೆ!—ನಿರ್ಮಲವಾದ ಆಕಾಶದಲ್ಲಿ ಮುಕ್ತಾಸರವಿರುವಂತೆ ಕಾಣುವುದಿಲ್ಲವೆ!—ಹಡಗುಹತ್ತಿ ಹೋಗತಕ್ಕವರಿಗೆ, ಹಡಗು ಅಳ್ಳಾಡಿದಹಾಗೆಲ್ಲ ದಡದಲ್ಲಿರುವ ಮರಗಳು ಓಡಿಬರುವಂತೆ ಕಾಣುವುದಿಲ್ಲವೆ!—ಸ್ವಪ್ನದಲ್ಲಿ ದೊಡ್ಡದೊಂದು ಪಟ್ಟಣವು ಕಾಣುವುದಿಲ್ಲವೆ! ಆಕಾಶದಲ್ಲೊಂದು ಪುಷ್ಪವಿರುವಂತೆ ಸ್ಮರಿಸಿಕೊಂಡರೆ, ಅದು ಹಾಗೆಯೇ ತೋರುತಿರುವುದಿಲ್ಲವೆ!! ಇವೆಲ್ಲವನ್ನೂ ಮನುಷ್ಯನು ಅನುಭವಿಸುವಂತೆಯೇ ತೋರಿದರೂ, ಇದೆಲ್ಲವೂ ಅಸತ್ಯವೆಂದೇ ನಿಶ್ಚಯವಷ್ಟೆ! ಹೀಗೆ ಮೃತನಾದವನು ಈ ಪ್ರಪಂಚಸಂಸಾರವನ್ನೂ ಅಸತ್ಯವಾಗಿದ್ದರೂ ತನ್ನ ಮನಸ್ಸಿನಲ್ಲಿ ಅನುಭವಿಸುವನು ॥೧೧—೧೩॥

ಹಾಗೆ ಅನುಭವಿಸುತ ಅಲ್ಲಿಯೇ ಚಿರಪರಿಚಯವಾಗಿ, ಆ ಜ್ಞಾನವೇ ದೃಢವಾಗಿ ಬಿಟ್ಟು, ಇಲ್ಲಿ ಇದೊಂದು ಲೋಕವಿದೆಯೆಂಬುದಾಗಿ—ಜೀವನ ಹೃದಯಾಕಾಶದಲ್ಲಿ ವಾಸನೆಯು ಬೆಳೆಯುವುದು ॥೧೪॥

ಬಳಿಕ, ಅಲ್ಲಿಯೇ ಮತ್ತೆ ಜನ್ಮವನ್ನೂ ನಾನಾವಿಧವಾದ ವ್ಯಾಪಾರಗಳನ್ನೂ ಮರಳಿ ಮರಣವನ್ನೂ ಅನುಭವಿಸುತ, ಮತ್ತೊಂದು ಲೋಕವನ್ನು ಕಲ್ಪಿಸಿಕೊಳ್ಳುವನು; ಮರಣಹೊಂದಿದಮೇಲೆ, ಆ ಜನ್ಮದಲ್ಲಿ ಯಥಾಪ್ರಕಾರವಾಗಿ ಜನನಾದಿಗಳನ್ನು ಅನುಭವಿಸುತ, ಮತ್ತೆಮತ್ತೆ ಇದೇರೀತಿಯಾಗಿ ವ್ಯವಸ್ಥೆಯೇ ಇಲ್ಲದೆ ಸುತ್ತುತಿರುವನು ॥೧೫॥

ಇಷ್ಟಕ್ಕೇ ಪರ್ಯವಸಾನವಿಲ್ಲ; ಕರ್ಮವಾಸನೆಯಿಂದ ಹೀಗೆ ಸುತ್ತುತಿರುವ ಪುರುಷರೊಳಗೆ ಹುಡುಕಿದರೆ, ಮತ್ತೆ ಕೆಲವು ಪುರುಷರು ಸಿಕ್ಕುವರು; ಅವರೊಳಗೆ ನೋಡಿದರೆ, ಮತ್ತೆ ಕೆಲವರಿರುವರು. ಒಂದು ಬಾಳೆಯ ಕಂಭವನ್ನು ಸುಲಿಯುತ ಬಂದರೆ, ಒಂದರೊಳಗೊಂದು ಪಟ್ಟೆಯು ಸಿಕ್ಕುತಿರುವಂತೆ, ಹೀಗೆ ಈ ಸಂಸಾರದಲ್ಲಿ ಇವರು ವ್ಯವಸ್ಥೆಯೇ ಇಲ್ಲದೆ ಕಾಣುತಿರುವರು ॥೧೬॥

ಇದೂ ಇರಲಿ, ಸತ್ತವರಿಗೆ ಪೃಥಿವಿ ಮೊದಲಾದ ಮಹಾಭೂತ ಸಮುದಾಯವೂ ಇಲ್ಲವಷ್ಟೆ! ಜಗತ್ತಿನ ವ್ಯಾಪಾರಗಳೂ ಇಲ್ಲವಷ್ಟೆ!! ಆದರೂ ಅವರು ಆಗ ಅವುಗಳೆಲ್ಲವೂ

ಮೃತಾನಾಂ ಸನ್ತಿ ತತ್ರಾಪಿ ತಥಾಪ್ಯೇಷಾಂ ಜಗದ್ಭ್ರಮಾಃ ॥ ೧೭ ॥
ಅವಿದ್ಯೈವ ಹ್ಯನನ್ತೇಯಂ ನಾನಾಪ್ರಸರಶಾಲಿನೀ ।
ಜಡಾನಾಂ ಸರಿದಾದೀರ್ಘೋತ್ತರತ್ಸರ್ಗತರಙ್ಗಿಣೀ ॥ ೧೮ ॥
ಪರಮಾರ್ಥಾಮ್ಬುಧೌ ಸ್ಫಾರೇ ರಾಮ ಸರ್ಗತರಙ್ಗಕಾಃ ।
ಭೂಯೋಭೂಯೋನುವರ್ತನ್ತೇ ತಪಿವಾನ್ಯೇ ಚ ಭೂರಿಶಃ ॥ ೧೯ ॥
ಸರ್ವತಃ ಸದೃಶಾಃ ಕೇಚಿತ್ ಕುಲಕ್ರಮಮನೋಗುಣೈಃ ।
ಕೇಚಿದರ್ಧೇನ ಸದೃಶಾಃ ಕೇಚಿಚ್ಚಾತಿವಿಲಕ್ಷಣಾಃ ॥ ೨೦ ॥
ಇಮಂ ವ್ಯಾಸಮುನಿಂ ತತ್ರ ದ್ವಾತ್ರಿಂಶಂ ಸಂಸ್ಮರಾಮ್ಯಹಮ್ ।
ಯಥಾಸಮ್ಭವವಿಜ್ಞಾನದೃಶಾ ಸನ್ದೃಶ್ಯಮಾನಯಾ ॥ ೨೧ ॥
ದ್ವಾದಶಾಲ್ಪಧಿಯಸ್ತತ್ರ ಕುಲಾಕಾರೇಹಿತೈಃ ಸಮಾಃ ।

ಉಂಟೆಂದು ಭ್ರಮಿಸುತಿರುವರು. ಇದರಿಂದ ಗೊತ್ತಾಗುವುದೇನೆಂದರೆ:—ಇದೆಲ್ಲವೂ ವಾಸನಾಮಯವಾದಕಾರಣ, ವಾಸನೆಯಿರುವ ವರೆಗೂ ಎಲ್ಲವೂ ಸತ್ಯವೆಂಬ ಅನುಭವವುಂಟಾಗುತಿದ್ದು, ಬಳಿಕ ಜ್ಞಾನದಿಂದ ವಾಸನಾಕ್ಷಯವುಂಟಾಗಲು, ಇವುಗಳೊಂದೂ ಕಾಣದೆ, ಬ್ರಹ್ಮವೆಂಬ ಪದಾರ್ಥವೊಂದೇಒಂದು ಸತ್ಯವಾಗಿ ನಿಲ್ಲುವುದು ॥೧೭॥

ಆದರೆ, ಇವೆಲ್ಲಕ್ಕೂ ಮೂಲಭೂತವಾದ ಅವಿದ್ಯೆ (ಮಾಯೆ) ಯನ್ನು ನಾಶಪಡಿಸದೆ—ಬಾಯಲ್ಲಿಮಾತ್ರ ಪ್ರಪಂಚವಸತ್ಯವೆಂದು ಹೇಳುತಿದ್ದರೆ, ಪ್ರಯೋಜನಲಾಭವಾಗುವುದಿಲ್ಲ. ಈ ಅವಿದ್ಯೆಯು ಅಪಾರವಾದುದು; ಇದು ನಾನಾಮುಖವಾಗಿ ಪ್ರಸರಿಸುವುದು; ಇದು ಜಡರಾದವರಿಗೆ ಮಹಾನದಿಯಂತೆ ಬಹು ದುಸ್ತರವಾದುದು; ಇದರಲ್ಲಿ ಸೃಷ್ಟಿಯೆಂಬ ತರಂಗಗಳು ಅಸಂಖ್ಯಾಕವಾಗಿ ಹುಟ್ಟುತಿರುವುವು ॥೧೮॥

ಹೇ ರಾಮ! ಆದರೆ ಆ ಸತ್ಪದಾರ್ಥವಾದ ಪರಮಾತ್ಮನೆಂಬ ದೊಡ್ಡ ಸಮುದ್ರದಲ್ಲಿ, ಈ ಅವಿದ್ಯೆ ಮೊದಲಾದ ಅನೇಕ ಸೃಷ್ಟಿಗಳೆಂಬ ಅಲೆಗಳು, ಪುರಾತನಗಳೂ ನೂತನಗಳೂ, ಅಸಂಖ್ಯಾಕವಾಗಿ ಪದೇಪದೇ ತೋರುವುವು ॥೧೯॥

ಆದರೆ ಆ ಸೃಷ್ಟಿಗಳೊಳಗೆ, ಕುಲ ಆಚಾರ ಮನಸ್ಸು ಗುಣ ಇವುಗಳಲ್ಲಿ ಕೆಲವು ಪೂರ್ವಸೃಷ್ಟಿಯಲ್ಲಿದ್ದಂತೆಯೇ ಈಗಲೂ ಇರುತ ಸಂಪೂರ್ಣವಾಗಿ ಹೋಲಿಕೆಯುಳ್ಳವಾಗಿಯೂ, ಕೆಲವು ಅರ್ಧಮಾತ್ರ ಹೋಲತಕ್ಕುವುಗಳಾಗಿಯೂ, ಮತ್ತೆ ಕೆಲವು ಸಂಪೂರ್ಣವಾಗಿ ವ್ಯತ್ಯಾಸವುಳ್ಳವುಗಳಾಗಿಯೂ ಆಗುವುವು ॥೨೦॥

ಹೀಗೆ ನಡೆಯುತಿರುವ ಈ ಸೃಷ್ಟಿಕ್ರಮದಲ್ಲಿ, ಜ್ಞಾನಮುಂತಾದುವನ್ನು ಪರ್ಯಾಲೋಚಿಸಿನೋಡಲಾಗಿ, ಈಮೆದುರಿಗೆ ಕುಳಿತಿರುವ ವ್ಯಾಸಮುನಿಯು ಮುವ್ವತ್ತೆರಡನೆಯ ಜನ್ಮವನ್ನು ಹೊಂದಿದವನೆಂದು ನನಗೆ ಸ್ಮರಣೆಯುಂಟಾಗುತ್ತದೆ ॥೨೧॥

ಹೀಗೆ ಇದುವರೆಗೆ ಜನ್ಮವೆತ್ತಿದ್ದ ಮೂವತ್ತೆರಡುಮಂದಿ ವ್ಯಾಸರೊಳಗೆ, ಹನ್ನೆರಡು ಮಂದಿ—ಕುಲ ಆಕಾರ ನಡತೆ—ಇವುಗಳಿಂದ ಸಮಾನರಾಗಿದ್ದರೂ (೧) ಜ್ಞಾನದಲ್ಲಿ ಸ್ವಲ್ಪ

---

(೧) ಬ್ರಹ್ಮಜ್ಞಾನಿಗಳಲ್ಲಿ, ಬ್ರಹ್ಮವಿತ್. ಬ್ರಹ್ಮವಿದ್ವರ, ಬ್ರಹ್ಮವಿದ್ವರೀಯಾನ್, ಬ್ರಹ್ಮವಿದ್ವರಿಷ್ಠ, ಎಂಬುದಾಗಿ ನಾಲ್ಕು ಭೇದಗಳಿರುವುವು. ಇವರು ಉತ್ತರೋತ್ತರವಾಗಿ ಜ್ಞಾನಾಧಿಕರಾಗಿರುವರು.

ದಶ ಸರ್ವೇ ಸಮಾಕಾರಾಃ ಶಿಷ್ಟಾಃ ಕುಲವಿಚಕ್ಷಣಾಃ ‖ ೨೦ ‖
ಅದ್ಯಾಪ್ಯನ್ಯೇ ಭವಿಷ್ಯನ್ತಿ ವ್ಯಾಸವಾಲ್ಮೀಕಯಸ್ತಥಾ ।
ಭೃಗ್ವಙ್ಗಿರಃಪುಲಸ್ತ್ಯಾಶ್ಚ ತಥೈವಾಪ್ಯನ್ಯಥೈವ ಚ ‖ ೨೩ ‖
ನರಾಃ ಸುರರ್ಷಿದೇವಾನಾಂ ಗಣಾಃ ಸಮುದ್ಭ್ರಮು ಭೂರಿಶಃ ।
ಉತ್ಪದ್ಯನ್ತೇ ವಿಲೀಯನ್ತೇ ಕದಾಚಿಚ್ಚ ಪೃಥಕ್ಪೃಥಕ್ ‖ ೨೪ ‖
[1]ಬ್ರಾಹ್ಮೇ ದ್ವಾಸಪ್ತತಿಸ್ತ್ರೇತಾ ಆಸೀದಸ್ತಿ ಭವಿಷ್ಯತಿ ।
ಪುನಿವಾನ್ಯಶ್ಚ ಲೋಕಾಶ್ಚ ತ್ವಂ ಚಾಹಂ ಚೇತಿ ವೇದ್ಮ್ಯಹಮ್ ‖ ೨೫ ‖
ಕ್ರಮೇಣಾಸ್ಯ ಮುನೇರಿತ್ಥಂ ವ್ಯಾಸಸ್ಯಾದ್ಭುತಕರ್ಮಣಃ ।
ಸಂಲಕ್ಷ್ಯತೇವತಾರೋಯಂ ದಶಮೋ ದೀರ್ಘದರ್ಶಿನಃ ‖ ೨೬ ‖
ಅಭೂಮ ವ್ಯಾಸವಾಲ್ಮೀಕಿಯುಕ್ತಾವಯಮನೇಕಶಃ ।
ಅಭೂಮ ವಸುಮೇವೇಮೇ ಬಹುಶಶ್ಚ ಪೃಥಕ್ಪೃಥಕ್ ‖ ೨೭ ‖

ಕಡಮೆಯಾಗಿದ್ದರು ; ಹತ್ತುಮಂದಿ ಸಾಮಾನ್ಯವಾಗಿದ್ದರು ; ಉಳಿದ ಹತ್ತುಮಂದಿ ತಮ್ಮ ವರಲ್ಲೆಲ್ಲ ಬಹು ಪ್ರಾಜ್ಞರಾಗಿದ್ದರು ॥೨೨॥

ಈಗಲೂ ಬೇರೆಬೇರೆ—ವ್ಯಾಸ, ವಾಲ್ಮೀಕಿ, ಭೃಗು, ಅಂಗಿರಸ್ಸು, ಪುಲಸ್ತ್ಯ—ಇತ್ಯಾದಿಗಳು ಅನೇಕವಾಗಿ ಹುಟ್ಟುವರು ; ಅವರೂ ಕೂಡ, ಕೆಲವರು ಪೂರ್ವಜನ್ಮಕ್ಕೆ ಸಮಾನವಾದ ಸ್ಥಿತಿಯುಳ್ಳವರಾಗಿಯೂ, ಕೆಲವರು ಭಿನ್ನವಾದ ಸ್ಥಿತಿಯುಳ್ಳದಾಗಿಯೂ ಇರುವರು॥

ಹೀಗೆಯೇ, ಮನುಷ್ಯರು ಸುರರು ಋಷಿಗಳು (೧) ದೇವತೆಗಳು–ಇವರ ಸಮೂಹವೆಲ್ಲವೂ, ಒಂದೊಂದುವೇಳೆ ಒಟ್ಟಿಗೂಡಿ ಅನೇಕವಾಗಿ ಜನನಮರಣಗಳನ್ನು ಹೊಂದುವುವು ; ಕೆಲವುವೇಳೆ ಬೇರೆಬೇರೆಯಾಗಿಯೇ ಹೊಂದುವುವು ॥ ೨೪॥

ಹೀಗೆಯೇ ಈ ತ್ರೇತಾಯುಗವು, ಆ ಬ್ರಹ್ಮನ ಕಲ್ಪದಲ್ಲಿ ಒಂದು ಸಣ್ಣಭಾಗವಾಗಿರುವುದು ; ಇದು ಈಗ ಎಪ್ಪತ್ತೆರಡನೆಯುದೆಂದು ತೋರುವುದು ; ಇದು ಹಿಂದೆಯೂ ಇದ್ದಿತು, ಈಗಲೂ ಇರುತದೆ, ಮುಂದೆಯೂ ಇರುವುದು ; ಈ ಲೋಕವೂ ಕೂಡ ಪೂರ್ವದಲ್ಲಿದ್ದಂತೆಯೂ, ಅದಕ್ಕೆ ಭಿನ್ನವಾಗಿಯೂ ಇರುವುದು. ಎಲೈ ರಾಮನೆ! ನೀನೂ ನಾನೂ ಕೂಡ ಹೀಗೆಯೇ ಇದ್ದೆವೆಂದೂ, ಈಗಲೂ ಇರುತ್ತೇವೆಂದೂ, ಮುಂದೆಯೂ ಇರುವೆವೆಂದೂ ನಾನು ತಿಳಿದಿರುವೆನು ॥ ೨೫॥

ಈಗ ಇಲ್ಲಿ ನಮ್ಮೆದುರಿಗೆ ಅತ್ಯಾಶ್ಚರ್ಯಕರ್ಮನಾದ ಈ ವ್ಯಾಸಮುನಿ ಕುಳಿತಿರುವನಷ್ಟೆ! ಇವನಿಗೆ ಆ ಕ್ರಮವನ್ನು ಪರ್ಯಾಲೋಚಿಸಿದರೆ, ನಾನು (೨) ಹಿಂದೆ ಹೇಳಿದ ಜ್ಞಾನಾಧಿಕವಾದ ಜನ್ಮಗಳಲ್ಲಿ ಇವನಿಗಿದು ಹತ್ತನೆಯುವತಾರವೆಂದು ಕಾಣುವುದು ॥ ೨೬॥

ಈಗ ಇಲ್ಲಿರುವ ನಾವುಗಳೇ, ಹಿಂದೆ ಅನೇಕವೇಳೆ ವ್ಯಾಸ ವಾಲ್ಮೀಕಿ ಇವರಿಂದ ಯುಕ್ತರಾಗಿದ್ದೆವು ; ಅನೇಕವೇಳೆ ಬೇರೆಬೇರೆಯಾಗಿಯೂ ಇದ್ದೆವು ॥ ೨೭ ॥

---

1 ಬ್ರಾಹ್ಮೇ=ಬ್ರಹ್ಮಣಃ ಕಲ್ಪಾವಯವಭೂತೇಽತ್ಯರ್ಥಃ.

(೧) ಸುರರಿಗೂ ದೇವತೆಗಳಿಗೂ ಅವಸ್ಥಾಭೇದದಿಂದ ಪ್ರತ್ಯೇಕನಿರ್ದೇಶವು.

(೨) ೨೦ ನೆಯ ಶ್ಲೋಕದಲ್ಲಿ ಹೇಳಿದ್ದಂತೆ.

ಅಭೂಮ ವಯಮೇವೇಮೇ ಸದೃಶಾಇತರೇ ವಿದಃ |
ಅಭೂಮ ವಯಮೇವೇಮೇ ನಾನಾಕಾರಾಃ ಸಮಾಶಯಾಃ || ೨೮ ||
ಭಾವ್ಯಮದ್ಯಾಪ್ಯನೇನೇಹ ಸನು ವಾರಾಷ್ಟಕಂ ಪುನಃ |
ಭೂಯೋಽಪಿ ಭಾರತಂ ನಾಮ [1]ಸೇತಿಹಾಸಂ ಕರಿಷ್ಯತಿ || ೨೯ ||
ಕೃತ್ವಾ ವೇದವಿಭಾಗಂ ಚ ನೀತ್ವಾನೇನ ಕುಲಪ್ರಥಾಮ್ |
ಬ್ರಹ್ಮತ್ವಂ ಚ ತಥಾ ಕೃತ್ವಾ [2]ಭಾವ್ಯಂ [3]ವೈದೇಹಮೋಕ್ಷಣಮ್ ||೩೦||
ವೀತಶೋಕಭಯಃ [4]ಶಾನ್ತನಿರ್ವಾಣೋ ಗತಕಲ್ಪನಃ |
ಜೀವನ್ಮುಕ್ತೋ ಜಿತಮನಾಃ ವ್ಯಾಸೋಽಯಮಿತಿ ವರ್ಣಿತಃ || ೩೧ ||
ವಿತ್ತಬನ್ಧುವಯಃಕರ್ಮವಿದ್ಯಾವಿಜ್ಞಾನಚೇಷ್ಟಿತೈಃ |
ಸಮಾನಿ ಸನ್ತಿ ಭೂತಾನಿ ಕದಾಚಿನ್ನ ತು ತಾನಿ ತು || ೩೨ ||
ಕ್ವಚಿತ್ ಸರ್ಗಶತೈಸ್ತಾನಿ ಭವನ್ತಿ ನ ಭವನ್ತಿ ವಾ |

ಈ ನಾವುಗಳೇ, ಹಿಂದೆ ಒಂದುವೇಳೆ ಸಮಾನರಾಗಿಯೂ—ಒಂದುವೇಳೆ ಪರಸ್ಪರಭಿನ್ನರಾಗಿಯೂ, ಮತ್ತೊಂದುವೇಳೆ ಒಬ್ಬರಿಗಿಂತೊಬ್ಬರು ಪ್ರಾಜ್ಞರಾಗಿಯೂ ಇದ್ದೆವು; ಈ ನಾವುಗಳೇ, ನಾನಾವಿಧವಾದ ಆಕಾರವುಳ್ಳವರಾಗಿಯೂ ಅಭಿಪ್ರಾಯದಲ್ಲಿಮಾತ್ರ ಸಮಾನರಾಗಿಯೂ ಇದ್ದೆವು ॥ ೨೮ ॥

ಅಯ್ಯಾ! ರಾಮ! ಈಗಲೂ ಈ ವ್ಯಾಸನು ಇನ್ನು ಪುನಃ ಎಂಟುವೇಳೆ ಹುಟ್ಟಬೇಕಾಗಿರುವುದು; ಅವನು ಮತ್ತೆಯೂ ಭಾರತವೆಂಬ ಇತಿಹಾಸಗ್ರಂಥವನ್ನು ರಚಿಸುವನು॥

ಪುನಃ ಇವನು ವೇದವಿಭಾಗವನ್ನು ಮಾಡಿ, ತನ್ನ ವಂಶಕ್ಕೆ ಉತ್ತಮವಾದ ಪ್ರಸಿದ್ಧಿಯನ್ನುಂಟುಮಾಡಿ, ಬಳಿಕ ಚತುರ್ಮುಖಬ್ರಹ್ಮನ ಪದವಿಯನ್ನನುಭವಿಸಿ, ಆಮೇಲೆ ವಿದೇಹಮುಕ್ತನಾಗಬೇಕಾಗಿರುವುದು ॥ ೩೦ ॥

ಈಗ ಈ ವ್ಯಾಸಮುನಿಯು, ದುಃಖವನ್ನೂ ಭಯವನ್ನೂ ತ್ಯಜಿಸಿದವನಾಗಿ, ಶಾಂತನಾಗಿ, ಮೋಹಬಂಧದಿಂದ ತಪ್ಪಿಸಿಕೊಂಡು ಹೊರಗೆ ಬಂದಿರುವವನಾಗಿ, ಮನಸ್ಸನ್ನು ಜಯಿಸಿ, ಜೀವನ್ಮುಕ್ತಾವಸ್ಥೆಯನ್ನು ಹೊಂದಿರುವನು; ಹೀಗೆ ಈ ವ್ಯಾಸಮುನಿಯ ವಿಷಯವನ್ನು ನಿನಗೆ ವರ್ಣಿಸಿರುವೆನು ॥ ೩೧ ॥

ಹೀಗೆಯೇ ಈ ಪ್ರಪಂಚದಲ್ಲಿ ಹುಟ್ಟುವ ಪ್ರಾಣಿಗಳು, ಧನ ಬನ್ಧು ವಯಸ್ಸು ಕರ್ಮ ವಿದ್ಯೆ ಜ್ಞಾನ ವ್ಯಾಪಾರ—ಇವುಗಳಿಂದ ಸಮಾನಗಳಾಗಿಯೂ, ಕೆಲವುಕಡೆ ಸಮಾನಗಳಲ್ಲದುವುಗಳಾಗಿಯೂ ಇರುವುವು ॥ ೩೨ ॥

ಮತ್ತೆ ಆ ಪ್ರಾಣಿಗಳು,-ನೂರಾರು ಸೃಷ್ಟಿಗಳಾದರೂ-ಎಲ್ಲಿಯೋ ಒಂದು ಕಡೆಯಲ್ಲಿ-

---

1 ಸಃ + ಇತಿಹಾಸಂ, ಇತಿ ಚ್ಛೇದಃ ಸೋಽಚಿ ಲೋಪೇಚೇದಿತ್ಯಾದಿನಾ ಸಾಧುಃ.

2 ಅನುಭಾವ್ಯಮಿತ್ಯರ್ಥಃ.

3 ವಿದೇಹಮೇವ ವೈದೇಹಮ್. ಮೋಕ್ಷಣಮಿತ್ಯಸ್ಯ ವಿಶೇಷಣಮ್.

4 ಗತ್ಯರ್ಥಕಾತ್ 'ವಾ' ಧಾತೋಃ ಕರ್ತರಿ ಕ್ತೇ ಕೃತೇ, 'ನಿರ್ವಾಣ' ಇತಿ ರೂಪಮ್. ನಿರ್ಗತಇತ್ಯರ್ಥಃ. ಶಾನ್ತಶ್ಚಾಸೌ ನಿರ್ವಾಣಶ್ಚೇತಿ ಕರ್ಮಧಾರಯಃ.

ಕದಾಚಿದಪಿ ಮಾಯೇಯಂ ಇತ್ಥಮನ್ತವಿವರ್ಜಿತಾ ॥ ೩೩ ॥
ಯಚ್ಛತೀಯಂ ವಿಪರ್ಯಾಸಂ ಭೂರಿ ಭೂತಪರಮ್ಪರಾ ।
ಬೀಜರಾಶಿರಿವಾಜಸ್ರಂ ಪೂರ್ಯಮಾಣಃ ಪುನಃಪುನಃ ॥ ೩೪ ॥
ತೇನೈವ ಸನ್ನಿವೇಶೇನ ತಥಾನ್ಯೇನ ಪುನಃಪುನಃ ।
ಸರ್ಗಾಕಾರಾಃ ಪ್ರವರ್ತನ್ತೇ ತರಙ್ಗಾಃ ಕಾಲವಾರಿಧೇಃ ॥ ೩೫ ॥
ಆಶ್ವಸ್ತಾನ್ತಃಕರಣಃ ಶಾನ್ತವಿಕಲ್ಪಃ ಸ್ವರೂಪಸಾರಮಯಃ ।
ಪರಮಶಮಾಮೃತತೃಪ್ತಃ ತಿಷ್ಠತಿ ವಿದ್ವಾನ್ ನಿರಾವರಣಃ ॥ ೩೬ ॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ಭೂಯೋಭೂಯಃ
ಸರ್ಗಾನುವರ್ಣನಂ ನಾಮ ತೃತೀಯಃ ಸರ್ಗಃ.

ಯಾವಾಗಲಾದರೂ ಒಂದುಕಾಲದಲ್ಲಿ-ಹಿಂದೆಯಿದ್ದಂತೆಯೇ ಆಗುವುವೋ ಇಲ್ಲವೋ ತಿಳಿಯದು! ಹೀಗೆ ಈ ಮಾಯೆಯು ಕೊನೆಯಿಲ್ಲದಿರುವುದು ॥ ೩೩॥

ಧಾನ್ಯವನ್ನು ರಾಶಿಹಾಕಿ, ಅದನ್ನು ಸೇರಿನಿಂದ ಅಳೆದು ಮತ್ತೊಂದುಕಡೆಗೆ ಹಾಕಿದರೆ, ಅದು ಪೂರ್ವದಲ್ಲಿದ್ದ ಆಕಾರದಲ್ಲಿಯೇ ರಾಶಿಯಾಗದೆ-ನಾನಾವಿಧವಾದ ವ್ಯತ್ಯಾಸಕ್ಕೊಳಗಾಗುವುದಲ್ಲವೆ! ಹೀಗೆ ಅದನ್ನು ಎಷ್ಟುವೇಳೆ ಅಳೆದರೂ ಅಷ್ಟಷ್ಟು ಬದಲಾಗುವುದು. ಹಾಗೆಯೇ, ಈ ಪ್ರಾಣಿಸಮುದಾಯವೂ ಎಷ್ಟೆಷ್ಟುವೇಳೆ ಸೃಷ್ಟಿಹೊಂದಿದರೂ ಅಷ್ಟಷ್ಟು ವಿಲಕ್ಷಣವಾಗಿಯೇ ಆಗುವುದು ॥ ೩೪॥

ಕಾಲವೆಂಬುದೇ ಒಂದು ದೊಡ್ಡಸಮುದ್ರವು; ಇದರಿಂದ, ಸೃಷ್ಟಿಯೆಂಬ ಅಲೆಗಳು, ಪೂರ್ವದಲ್ಲಿದ್ದ ರೀತಿಯಾಗಿಯೂ- ಅದಕ್ಕೆ ವ್ಯತ್ಯಾಸವಾಗಿಯೂ-ಪದೇಪದೇ ಹುಟ್ಟುತಲೇ ಇರುವುವು ॥ ೩೫॥

ಆದರೆ ಜೀವನ್ಮುಕ್ತನಾದವನು, ಯೋಗಬಲದಿಂದ ನಾನಾವಿಧಶರೀರಗಳನ್ನು ಪರಿಗ್ರಹಿಸಿದರೂ, ಅವನಿಗೆ ಮುಕ್ತಿಯೆಂದಿಗೂ ನಷ್ಟವಾಗುವುದಿಲ್ಲ. ಮುಖ್ಯವಾಗಿ,–ಮನಶ್ಚಾಂಚಲ್ಯ ನಾನಾವಿಧವಿಕಲ್ಪ ಸ್ವಸ್ವರೂಪಜ್ಞಾನವಿಲ್ಲದಿರುವಿಕೆ ಅತೃಪ್ತಿ-ಇವುಗಳೆಲ್ಲ ಮಾಯಾವರಣದಿಂದುಂಟಾಗುವುವು; ಜ್ಞಾನಿಯಾದವನು ಈ ಮಾಯಾವರಣವನ್ನು ಕಳೆದುಕೊಂಡಿರುವಕಾರಣ, ಮನಸ್ಸನ್ನು ಸಮಾಧಾನಸ್ಥಿತಿಯಲ್ಲಿಟ್ಟುಕೊಂಡು, ನಾನಾವಿಧ ವಿಕಲ್ಪಗಳನ್ನೆಲ್ಲ ಶಾಂತಿಗೊಳಿಸಿ, ಸ್ವಸ್ವರೂಪಜ್ಞಾನಪರಿಪೂರ್ಣನಾಗಿ, ಉತ್ತಮವಾದ ಶಾಂತಿಯೆಂಬ ಅಮೃತದಿಂದ ತೃಪ್ತನಾಗಿರುವನು. ಇದೇ ಜೀವನ್ಮುಕ್ತಾವಸ್ಥೆಯು; ಈ ಜೀವನ್ಮುಕ್ತಿಯೇ ಜ್ಞಾನಕ್ಕೆ ಮುಖ್ಯಫಲವೆಂದು ತಿಳಿಯಬೇಕು ॥ ೩೬ ॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಮತ್ತೆಮತ್ತೆ ಸೃಷ್ಟಿಯಾಗುವ
ಕ್ರಮವನ್ನು ವರ್ಣಿಸುವಿಕೆಯೆಂಬ ಮೂರನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಚತುರ್ಥಃಸರ್ಗಃ.

ಶ್ರೀವಸಿಷ್ಠ ಉವಾಚ.

ಸೌಮ್ಯಾಮ್ಬುತ್ವೇ ತರಙ್ಗತ್ವೇ ಸಲಿಲಸ್ಯಾಮ್ಬುತಾ ಯಥಾ ।
ಸಮೈವಾಬ್ಧೌ ತಥಾಽದೇಹಸದೇಹಮುನಿಮುಕ್ತತಾ ॥೧॥
ಸದೇಹಾ ವಾಸ್ತ್ವದೇಹಾ ವಾ ಮುಕ್ತತಾ [1]ವಿಷಯೇ ನ ಚ ।
ಅನಾಸ್ವಾದಿತಭೋಗಸ್ಯ ಕುತೋ ಭೋಗ್ಯಾನುಭೂತಯಃ ॥೨॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ನಾಲ್ಕನೆಯ ಸರ್ಗವು.

ಮುಕ್ತಾನುಭವತೋ ಮುಕ್ತ್ಯೋಃ ಅವಿಶೇಷೋತ್ರ ಕೀರ್ತ್ಯತೇ ।
ಮೂಲದಾರ್ಢ್ಯಾಯ ಶಾಸ್ತ್ರೀಯಂ ಪೌರುಷಂ ಚ ಪ್ರಶಸ್ಯತೇ ॥

ಜೀವನ್ಮುಕ್ತಿ ವಿದೇಹಮುಕ್ತಿಗಳೆರಡಕ್ಕೂ ಮುಕ್ತರ ಅನುಭವವಿರುವಕಾರಣ, ಒಂದೊಂದಕ್ಕೆ ವಿಶೇಷವಿಲ್ಲವೆಂದು ಈ ಸರ್ಗದಲ್ಲಿ ವರ್ಣಿಸಲ್ಪಡುವುದು; ಮತ್ತು, ಎಲ್ಲಕ್ಕೂ ಮೂಲವಾದ ಮಾರ್ಗವನ್ನು ದೃಢಪಡಿಸುವುದಕ್ಕೋಸ್ಕರ, ಶಾಸ್ತ್ರೀಯವಾದ ಪೌರುಷವು ಪ್ರಶಂಸಿಸಲ್ಪಡುವುದು.

ಮತ್ತೆ ಶ್ರೀ ವಸಿಷ್ಠಮುನಿಯು ಶ್ರೀರಾಮನನ್ನು ಕುರಿತು ಹೇಳಿದರು.

ವತ್ಸ! ರಾಮ! ಈಗ ನಿನಗೆ ಮತ್ತೆ ಕೆಲವು ರಹಸ್ಯವಿಷಯುಗಳನ್ನು ಹೇಳುವೆನು. ಆತ್ಮನು ನಿತ್ಯನಾಗಿಯೂ ಮುಕ್ತನಾಗಿಯೂ ಇರುವನು; ಇವನಿಗೆ ಕದಾಚಿತ್ ಅಜ್ಞಾನವು ಆವರಿಸಿಕೊಂಡರೆ, ಅದೇ ಬಂಧವೆನ್ನಿಸುವುದು; ಜ್ಞಾನದಿಂದ ಆ ಅಜ್ಞಾನವು ನಿವರ್ತಿಸುವುದೇ ಮುಕ್ತಿಯು. ಚಿತ್ರದಲ್ಲಿ ಒಂದು ಹುಲಿಯಿರುವುದನ್ನು ದೂರದಲ್ಲಿ ನೋಡಿ, ಅಜ್ಞಾನದಿಂದ ಹುಲಿಯೆಂದು ದಿಗುಲುಬಿದ್ದು, ಬಳಿಕ ಸಮೀಪಕ್ಕೆ ಬಂದು ಅದನ್ನು ಚಿತ್ರವೆಂದು ತಿಳಿದುಕೊಂಡರೆ, ಅದುವರೆಗೆ ಭಯಹೇತುವಾಗಿದ್ದ ಚಿತ್ರದ ಹುಲಿಯು ಎದುರಿಗೇ ಇದ್ದರೂ ಭಯಮಾತ್ರ ಇರದೆ, ಸ್ವಸ್ಥನಾಗಿರುವನಲ್ಲವೆ! ಆಗ ಆ ಚಿತ್ರದ ಹುಲಿಯಿದ್ದರೂ, ಅದು ಚಿತ್ರವೆಂದು ಜ್ಞಾನವುಂಟಾಗಿಬಿಟ್ಟಕಾರಣ, ಆ ಹುಲಿಯಿಂದ ಯಾವ ಕೆಲಸವೂ ನಡೆಯುವುದಿಲ್ಲವಷ್ಟೆ! ಹೀಗೆ ಜೀವನ್ಮುಕ್ತನಿಗೆ ಸಂಸಾರವಿದ್ದರೂ, ಜ್ಞಾನೋದಯವಾಗಿರುವುದರಿಂದ ಆ ಸಂಸಾರದ ಕೆಲಸವೊಂದೂ ನಡೆಯುವುದಿಲ್ಲವಾದಕಾರಣ, ಜೀವನ್ಮುಕ್ತನಿಗೂ ವಿದೇಹಮುಕ್ತನಿಗೂ ಯಾವ ವ್ಯತ್ಯಾಸವೂ ಇಲ್ಲ; ದೊಡ್ಡ ಸಮುದ್ರದಲ್ಲಿರುವ ನೀರು, ಅಲೆಯಾಗಿ ಅಳ್ಳಾಡಿದರೂ-ನಿಶ್ಚಲವಾಗಿ ನಿಂತಿದ್ದರೂ-ಅದು ನೀರೇ ಅಲ್ಲದೆ, ಪರಸ್ಪರ ವ್ಯತ್ಯಾಸವು ಹೇಗಿಲ್ಲವೋ, ಹಾಗೆಯೇ ಜ್ಞಾನಿಗಳು ವಿದೇಹಮುಕ್ತಿಹೊಂದಿದರೂ ಸದೇಹಮುಕ್ತಿಹೊಂದಿದರೂ ಪರಸ್ಪರವಾಗಿ ತಾರತಮ್ಯವಿಲ್ಲವೆಂದು ತಿಳಿಯಬೇಕು ॥೧॥

ಜೀವನ್ಮುಕ್ತಿಯಾದರೂ ಆಗಲಿ,–ವಿದೇಹಮುಕ್ತಿಯಾದರೂ ಆಗಲಿ;—ಇದು ವಿಷಯಾಧೀನವಾಗಿರುವುದಿಲ್ಲವಷ್ಟೆ! ಭೋಗವನ್ನು ಸುತರಾಂ ಆಸಕ್ತಿಯಿಂದ ಆಸ್ವಾದಿಸದಿರುವವನಿಗೆ, ಭೋಗಾರ್ಹಗಳಾದ ವಿಷಯುಗಳ ಅನುಭವವೆಲ್ಲಿ ಬಂದಿತು? ॥೨॥

1 ವಿಷಯೇ = ವಿಷಯಾಧೀನೇತ್ಯರ್ಥಃ.

ಜೀವನ್ಮುಕ್ತಂ ಮುನಿಶ್ರೇಷ್ಠಂ ಕೇವಲಂ ಹಿ ಪದಾರ್ಥವತ್ ।
ಪಶ್ಯಾಮಃ ಪುರತೋ ನಾಸ್ಯ ಪುನರ್ವಿದ್ಮೋಽನ್ತರಾಶಯಮ್ ॥೩॥
ಸದೇಹಾದೇಹಮುಕ್ತಾನಾಂ ಭೇದಃ ಕೋ ಬೋಧರೂಪಿಣಾಮ್ ।
ಯದೇವಾಮ್ಬು ತರಙ್ಗತ್ವೇ ಸೌಮ್ಯತ್ವೇಪಿ ತದೇವ ತತ್ ॥೪॥
ನ ಮನಾಗಪಿ ಭೇದೋಸ್ತಿ ಸದೇಹಾದೇಹಮುಕ್ತಯೋಃ ।
ಸಸ್ಪನ್ದೋಽಪ್ಯಥವಾಸ್ಪನ್ದೋ ವಾಯುರೇವ ಯಥಾನಿಲಃ ॥೫॥
ಸದೇಹಾ ವಾ ವಿದೇಹಾ ವಾ ಮುಕ್ತತಾ ನ ಪ್ರಮೋಸ್ಪದಮ್ ।
ಅಸ್ಮಾಕಮಪಿ ತಸ್ಯಾಸ್ತಿ ಸ್ವೈಕತಾಸ್ತ್ಯವಿಭಾಗಿನೀ ॥೬॥
ತಸ್ಮಾತ್ ಪ್ರಕೃತಮೇವೇದಂ ಶೃಣು ಶ್ರವಣಭೂಷಣಮ್ ।
ಮಯೋಪದಿಶ್ಯಮಾನಂ ತ್ವಂ ಜ್ಞಾನ[1]ಮಜ್ಞಾನ್ಧ್ಯನಾಶನಮ್ ॥೭॥

ಇಲ್ಲಿ ಎದುರಿಗೆ ಕುಳಿತಿರುವ—ಜೀವನ್ಮುಕ್ತನಾದ ಈ ವ್ಯಾಸಮಹಾಮುನಿಯನ್ನು, ನಾವು ಸಾಮಾನ್ಯವಾದ ಪದಾರ್ಥದಂತೆ ನೋಡುವೆವು; ಆದರೆ, ಇವನು ತನ್ನ ಮನಸ್ಸಿನೊಳಗೆ—ತಾನು ವಿದೇಹಮುಕ್ತನೆಂದು—ಮಾಡಿಕೊಂಡಿರುವ ದೃಢನಿಶ್ಚಯವನ್ನು ಮಾತ್ರ ನಾವರಿಯೆವು ॥ ೩ ॥

ಜೀವನ್ಮುಕ್ತ ವಿದೇಹಮುಕ್ತರಿಬ್ಬರೂ ಜ್ಞಾನರೂಪರೇ ಆಗಿರುವುದರಿಂದ, ಇವರಿಬ್ಬರಿಗೂ ಭೇದವಾವುದು? ತೆರೆಯಾಗಿ ಅಳ್ಳಾಡುವಾಗ ಯಾವ ನೀರಿರುವುದೋ, ಸೌಮ್ಯವಾಗಿ ಅಲುಗದಿರುವಾಗಲೂ—ಅಗು-ಅದೇನೀರಲ್ಲವೆ! ॥ ೪ ॥

ಮತ್ತು, ಗಾಳಿಯು ಬೀಸುತ್ತಿದ್ದರೂ - ಬೀಸದೆ ಸ್ತಬ್ಧವಾಗಿದ್ದರೂ—ಅದು ಗಾಳಿಯೇ ಅಲ್ಲವೆ! ಹಾಗೆ ಜೀವನ್ಮುಕ್ತ ವಿದೇಹಮುಕ್ತರಿಗೆ ಸ್ವಲ್ಪವೂ ಭೇದವಿಲ್ಲ ॥ ೫ ॥

ಈಗ ಜೀವನ್ಮುಕ್ತಿಯಾಗಲಿ—ವಿದೇಹಮುಕ್ತಿಯಾಗಲಿ—ನನಗೂ ಆ ವ್ಯಾಸರಿಗೂ ಪರಮಾರ್ಥಜ್ಞಾನಕ್ಕೆ ಆಶ್ರಯವಲ್ಲ; ನಮ್ಮಿಬ್ಬರಿಗೂ ಯಾವ ವಿಭಾಗವೂ ಇಲ್ಲದ ಆತ್ಮೈಕ್ಯವಿರುವುದು (೧) ॥ ೬ ॥

ವತ್ಸ! ರಾಮ! ನೀನು ಮೊದಲು ಹೇಳಬೇಕೆಂದು ಅಪೇಕ್ಷಿಸಿದಕಾರಣ, ಇದುವರೆಗೆ ಶುಕನ ವೃತ್ತಾಂತವನ್ನೂ ವ್ಯಾಸರ ವೃತ್ತಾಂತವನ್ನೂ ಹೇಳಿರುವೆನು. ಈಗ ಜೀವನ್ಮುಕ್ತ ವಿದೇಹಮುಕ್ತರಿಗೆ ಭೇದವೇನೂ ಇಲ್ಲವೆಂದು ಸಿದ್ಧವಾಗಿ, ನಿನ್ನ ಸಂಶಯವೂ ನಿವೃತ್ತಿಹೊಂದಿತಷ್ಟೆ! ಆದಕಾರಣ, ನಿನಗೆ ಈಗ ಅವಶ್ಯಕವಾಗಿರುವ—ನನ್ನಿಂದ ಉಪದೇಶಿಸಲ್ಪಡುವ—ಜ್ಞಾನಮಾರ್ಗವನ್ನು ಕೇಳುವವನಾಗು, ಇದು ಶ್ರವಣವನ್ನು ಅಲಂಕರಿಸತಕ್ಕುದಾಗಿಯೂ, ಅಜ್ಞಾನವೆಂಬ ಅಂಧತೆಯನ್ನು ಪರಿಹರಿಸತಕ್ಕುದಾಗಿಯೂ ಇರುವುದು ॥

---

[1] ಅಜ್ಞಾ = ಅಜ್ಞಾನಮ್. ಸೈವ ಆನ್ಧ್ಯಮ್.

(೧) ನಿದ್ರೆಮಾಡಿ ಎದ್ದವನಿಗೆ, ಸ್ವಲ್ಪಹೊತ್ತು ಆ ನಿದ್ರಾವಸ್ಥೆಯ ಸಂಸ್ಕಾರವಿರುವಂತೆ, ಜೀವನ್ಮುಕ್ತನಾದವನಿಗೂ ಸ್ವಲ್ಪಕಾಲ ದೇಹಾದಿಜ್ಞಾನವಿರುವುದಲ್ಲದೆ, ಅದರಿಂದ ಅವನಿಗೆ ಯಾವ ಹೈನ್ಯವೂ ಇಲ್ಲವೆಂದೂ-ಆತ್ಮತ್ವೇನ ಸರ್ವರೂ ಒಂದೇಯೆಂದೂ ತಾತ್ಪರ್ಯವು.

ಸರ್ವಮೇವೇಹ ಹಿ ಸದಾ ಸಂಸಾರೇ ರಘುನನ್ದನ |
ಸಮ್ಯಕ್ ಪ್ರಯುಕ್ತಾತ್ ಸರ್ವೇಣ ಪೌರುಷಾತ್ ಸಮವಾಪ್ಯತೇ ||೮||
ಇಹ ಹೀನ್ದೋರಿವೋದೇತಿ ಶೀತಲಾಹ್ಲಾದನಂ ಹೃದಿ |
ಪರಿಸ್ಪನ್ದಫಲಪ್ರಾಪ್ತೌ ಪೌರುಷಾದೇವ ನಾನ್ಯತಃ ||೯||
ಪೌರುಷಂ ಸ್ಪನ್ದಫಲವತ್ ದೃಷ್ಟಂ ಪ್ರತ್ಯಕ್ಷತೋ ನ ಯತ್ |
ಕಲ್ಪಿತಂ ಮೋಹಿತೈರ್ಮನ್ದೈಃ ದೈವಂ ಕಿಂಚಿನ್ನ ವಿದ್ಯತೇ ||೧೦||
ಸಾಧೂಪದಿಷ್ಟಮಾರ್ಗೇಣ ಯನ್ಮನೋಙ್ಗವಿಚೇಷ್ಟಿತಮ್ |
ತತ್ ಪೌರುಷಂ ತತ್ ಸಫಲಂ ಅನ್ಯದುನ್ಮತ್ತಚೇಷ್ಟಿತಮ್ ||೧೧||
ಯೋ ಯಮರ್ಥಂ ಪ್ರಾರ್ಥಯತೇ ತದರ್ಥಂ ಚೇಹತೇ[1] ಕ್ರಮಾತ್ |
ಅವಶ್ಯಂ ಸ ತಮಾಪ್ನೋತಿ ನ ಚೇದರ್ಧಾನ್ನಿವರ್ತತೇ ||೧೨||

ವತ್ಸ ! ರಾಮ ! ಶುಕಾದಿಗಳು ಶಮದಮಾದಿಯುಕ್ತರಾಗಿದ್ದ ಕಾರಣ, ಅವರು ಆರೀತಿಯಾಗಿ ಸಿದ್ಧಿಹೊಂದಿದಮಾತ್ರದಿಂದಲೇ, ನಮ್ಮಂಥವರಿಗೆ ಅಂಥ ಸಿದ್ಧಿಯೆಲ್ಲಿ ಸಂಭವಿಸೀತೆಂದು ನೀನು ಶಂಕಿಸಬಹುದಲ್ಲವೆ! ಇದಲ್ಲದೆ ನೀನು ಸರ್ವವೂ ದೈವಾಯತ್ತವೆಂದು ಉಪಸಂಹಾರದಲ್ಲಿ ಹೇಳಿರುವೆಯಲ್ಲವೆ! ಅದಕ್ಕೆ ಮೊದಲು ತಕ್ಕ ಸಮಾಧಾನವನ್ನು ಹೇಳುವೆನು. ಈ ಸಂಸಾರದಲ್ಲಿ ಯಾರು ಯಾವುದನ್ನು ಹೊಂದಬೇಕಾಗಿದ್ದರೂ, ಅದೆಲ್ಲವೂ—ಅವರೆಲ್ಲರಿಂದಲೂ—ದೃಢನಿಶ್ಚಯದಿಂದ ಪ್ರಯೋಗಿಸಲ್ಪಟ್ಟ ಪೌರುಷದಿಂದ ಹೊಂದಲ್ಪಡುತ್ತದೆ ॥

ಈ ಪ್ರಪಂಚದಲ್ಲಿ, ನಾವು ಕರಣತ್ರಯದಿಂದಲೂ ಮಾಡುವ ಕರ್ಮಗಳಿಗೆ ಫಲವುಂಟಾದಾಗ, ಚಂದ್ರೋದಯದಿಂದ ಮನಸ್ಸಿನಲ್ಲಿ ತಣ್ಣಗೆ ಆಹ್ಲಾದವುಂಟಾಗುವಂತೆ—ದಿವ್ಯವಾದ ಹರ್ಷವುಂಟಾಗಬೇಕಾದರೆ, ಪೌರುಷದಿಂದಲೇ ಆಗುವುದಲ್ಲದೆ, ಮತ್ತಾವುದರಿಂದಲೂ ಆಗುವುದಿಲ್ಲ ॥ ೯ ॥

ಹೀಗೆ ನಾವು ಮಾಡುವ ಪ್ರಯತ್ನವು, ಕರ್ಮಫಲವುಳ್ಳುದಾದಾಗ, ನಮ್ಮ ಬುದ್ಧಿಗೆ ಯಾವುದು ಪ್ರತ್ಯಕ್ಷವಾಗುವುದಿಲ್ಲವೋ, ಇದನ್ನು—ಮೂಢರಾದ ಅಜ್ಞಾನಿಗಳು—ದೈವವೆಂದು ಕಲ್ಪಿಸಿಕೊಂಡಿರುವರು; ಇಷ್ಟೇಹೊರತು, ಸತ್ಯವಾಗಿ ದೈವವೆಂಬ ಪದಾರ್ಥವೊಂದೂ ಇಲ್ಲ ॥ ೧೦ ॥

ಈ ಪೌರುಷವೆಂಬುದಾವುದೆಂದರೆ;—ಪ್ರಾಜ್ಞರು ಉಪದೇಶಿಸಿದ ಮಾರ್ಗದಲ್ಲಿ ಮನಸ್ಸನ್ನೂ ಅವಯವಗಳನ್ನೂ ವ್ಯಾಪಾರಗೊಳ್ಳಿಸುವುದಾವುದುಂಟೋ, ಅದೇ ಪೌರುಷವು; ಇಂಥ ಪೌರುಷವೇ ಸಫಲವಾಗುವುದು. ಅದಲ್ಲದೆ ತನ್ನ ಮನಬಂದಂತೆ ನಡೆದರೆ—ಅದು ಉನ್ಮತ್ತವ್ಯಾಪಾರವೆನ್ನಿಸುವುದು ॥ ೧೧ ॥

ಯಾವನು ಯಾವ ಪ್ರಯೋಜನವನ್ನಪೇಕ್ಷಿಸುವನೋ, ಅವನು ಅದಕ್ಕೋಸ್ಕರ ಕ್ರಮವಾಗಿ ಕೆಲಸಮಾಡಿದರೆ—ಅವಶ್ಯವಾಗಿ ಅದನ್ನು ಹೊಂದಿಯೇ ಹೊಂದುವನು; ಅದಲ್ಲದೆ ಕ್ರಮದಪ್ಪಿ ಕೆಲಸಮಾಡಿದರೆ—ಫಲವಿಲ್ಲದೆ ಅರ್ಧದಲ್ಲಿ ಹಿಂದಿರುಗುವನು ॥ ೧೨ ॥

---

1 ಯದೀತಿ ಅಧ್ಯಾಹಾರ್ಯಮ್.

ಪೌರುಷೇಣ ಪ್ರಯತ್ನೇನ ತ್ರೈಲೋಕ್ಯೈಶ್ವರ್ಯಸುನ್ದರಾಮ್ ।
ಕಶ್ಚಿತ್ ಪ್ರಾಣಿವಿಶೇಷೋ ಹಿ ಶಕ್ರತಾಂ ಸಮುಪಾಗತಃ ॥೧೩॥
ಪೌರುಷೇಣೈವ ಯತ್ನೇನ ಸಹಸಾಮ್ಭೋರುಹಾಸ್ಪದಮ್ ।
ಕಶ್ಚಿದೇವ ಚಿದುಲ್ಲಾಸೋ ಬ್ರಹ್ಮತಾಮಧಿತಿಷ್ಠತಿ ॥೧೪॥
ಸಾರೇಣ ಪುರುಷಾರ್ಥೇನ ಸ್ವೇನೈವ ಗರುಡಧ್ವಜಃ ।
ಕಶ್ಚಿದೇವ ಪುಮಾನೇವ ಪುರುಷೋತ್ತಮತಾಂ ಗತಃ ॥೧೫॥
ಪೌರುಷೇಣೈವ ಯತ್ನೇನ ಲಲನಾವಲಿತಾಕೃತಿಃ ।
ಶರೀರೀ ಕಶ್ಚಿದೇವೇಹ ಗತಶ್ಚನ್ದ್ರಾರ್ಧಚೂಡತಾಮ್ ॥ ೧೬ ॥
ಪ್ರಾಕ್ತನಂ ಚೈಹಿಕಂ ಚೇತಿ ದ್ವಿವಿಧಂ ವಿದ್ಧಿ ಪೌರುಷಮ್ ।
ಪ್ರಾಕ್ತನೋದ್ಯತನೇನಾಶು ಪುರುಷಾರ್ಥೇನ ಜೀಯತೇ ॥ ೧೭ ॥
ಯತ್ನವದ್ಭಿರ್ದೃಢಾಭ್ಯಾಸೈಃ ಪ್ರಜ್ಞೋತ್ಸಾಹಸಮನ್ವಿತೈಃ ।
ಮೇರವೋಽಪಿ ನಿಗೀರ್ಯನ್ತೇ ಕೈವ ಪ್ರಾಕ್ಪೌರುಷೇ ಕಥಾ ॥ ೧೮ ॥
ಶಾಸ್ತ್ರನಿಯನ್ತ್ರಿತಪೌರುಷಪರಮಾ ಪುರುಷಸ್ಯ ಪುರುಷತಾ ಯಾ ಸ್ಯಾತ್ ।

ಯಾವುದೋ ಒಂದು ಸಾಮಾನ್ಯವೇ ಆದ ಪ್ರಾಣಿವಿಶೇಷವು, ತನ್ನ ಪುರುಷಪ್ರಯತ್ನದಿಂದಲೇ—ತ್ರೈಲೋಕ್ಯಾಧಿಪತ್ಯದಿಂದ ಸುಂದರವಾದ ಇಂದ್ರಪದವಿಯನ್ನು ಹೊಂದಿರುವುದಲ್ಲವೆ! ॥೧೩॥

ಯಾವುದೋ ಒಂದು ಚೈತನ್ಯವಿಶೇಷವೇ—ತನ್ನ ಪುರುಷಪ್ರಯತ್ನದಿಂದ ದಿವ್ಯವಾದ ಕಮಲವೇ ಆಸನವಾಗುಳ್ಳ ಬ್ರಹ್ಮಪದವಿಯನ್ನು ಹೊಂದಿರುವುದು ॥೧೪॥

ಸಾಮಾನ್ಯನಾಗಿ ಯಾವನೋ ಒಬ್ಬ ಮನುಷ್ಯನೇ ಆಗಿದ್ದ ಆ ಗರುಡಧ್ವಜನಾದ ವಿಷ್ಣುವು, ಉತ್ತಮವಾದ ತನ್ನ ಪುರುಷಕಾರದಿಂದಲೇ ಪುರುಷೋತ್ತಮನಾಗಿರುವನು ॥

ತನ್ನರ್ಧಶರೀರದಲ್ಲಿ ಸ್ತ್ರೀಯನ್ನು ಕಟ್ಟಿಕೊಂಡಿರುವ ಯಾವುದೋ ಒಂದು ಸಾಮಾನ್ಯಪ್ರಾಣಿಯೇ, ತನ್ನ ಪ್ರಯತ್ನದಿಂದ, ಈ ಪ್ರಪಂಚದಲ್ಲೆಲ್ಲ ಹೆಸರಾಗುವಂತೆ ಅರ್ಧಚಂದ್ರಶೇಖರ (ಪರಮೇಶ್ವರ) ನಾಗಿರುವುದು ॥ ೧೬ ॥

ವತ್ಸ! ರಾಮ! ಈ ಪೌರುಷವು—ಜನ್ಮಾಂತರೀಯಪೌರುಷವೆಂದೂ ಈ ಜನ್ಮದ ಪೌರುಷವೆಂದೂ ಎರಡುವಿಧವಾಗಿರುವುದೆಂದು ತಿಳಿ; ಅದರಲ್ಲಿ ಈ ಜನ್ಮದ ಪೌರುಷವು, ಜನ್ಮಾಂತರೀಯಪೌರುಷವನ್ನು ಗೆದ್ದುಬಿಡುವುದು ॥ ೧೭ ॥

ಪ್ರಯತ್ನಶೀಲರಾಗಿ ದೃಢವಾದ ಅಭ್ಯಾಸವನ್ನು ಮಾಡಿದರೆ,—ಪ್ರಜ್ಞೆ ಉತ್ಸಾಹ—ಇವುಗಳೊಡಗೂಡಿರತಕ್ಕವರು, ಅನೇಕ ಮಹಾಮೇರುಪರ್ವತಗಳನ್ನಾದರೂ ನುಂಗಿಬಿಡುವರು; ಹೀಗಿರುವಾಗ, ಪೂರ್ವಜನ್ಮದ ಪೌರುಷವನ್ನು ಗೆಲ್ಲುವುದರಲ್ಲಿ ಹೇಳುವುದೇನು? ॥೧೮

ಆದರೆ ಪುರುಷನು ಶಾಸ್ತ್ರನಿಯಮಕ್ಕೊಳಪಟ್ಟು ಮಾಡುವ ಪುರುಷಕಾರವಾವುದುಂಟೋ—ಅದೇ ಇಷ್ಟಾರ್ಥಸಿದ್ಧಿಯುಂಟುಮಾಡುವುದಲ್ಲದೆ, ಉಚ್ಛೃಂಖಲವಾಗಿ ಪ್ರವರ್ತಿ

ಅಭಿಮತಫಲಭರಸಿದ್ಧ್ಯೈ ಭವತಿ ಹಿ ಸೈವಾನ್ಯಥಾ ತ್ವನರ್ಥಾಯ ‖ ೧೯ ‖
ಕಸ್ಯಾಂ ಚಿತ್ ಸ್ವಯಮಾತ್ಮದುಸ್ಸ್ಥಿತಿವಶಾತ್ ಪುಂಸೋ ದಶಾಯಾಂ ಶನೈಃ
ಅಬ್ಧಿಗ್ಳಗ್ರನಿಪೀಡಿತೈಕಚುಳುಕಾದಾಪಾನಬಿನ್ದುರ್ಮಹಃ ।
ಕಸ್ಯಾಂಚಿಜ್ಜಲರಾಶಿಪರ್ವತಪುರದ್ವೀಪಾನ್ತರಾಳೀಕೃತಾ
ಭರ್ತೃವ್ಯೋಚಿತಸಂವಿಭಾಗಕರಣೇ ಪೃಥ್ವೀ ನ ಪೃಥ್ವೀ ಭವೇತ್ ‖ ೨೦ ‖

ಇತಿ ಮುಮುಕ್ಷುವ್ಯವಹಾರಪ್ರಕರಣೇ ಪೌರುಷಪ್ರಕರಣಂ
ನಾಮ ಚತುರ್ಥಃ ಸರ್ಗಃ.

ಸಿದರೆ–ಆಗ ಅದೇ ಅನರ್ಥಹೇತುವಾಗುವುದು ‖ ೧೯ ‖

ಸಾಮಾನ್ಯವಾಗಿ ಒಬ್ಬ ಮನುಷ್ಯನು ವ್ಯವಸಾಯಮಾಡದೆ ಕೇವಲ ದುರವಸ್ಥೆಯಲ್ಲಿದ್ದರೆ, ಆಗ ಅವನಿಗೆ ಬಂದಾಪೋಶನಕ್ಕೆ ಬೇಕಾಗುವಷ್ಟು ನೀರೂ ಕೂಡ ಬಹುದೊಡ್ಡದಾಗುವುದು ; ಅವನೇ ಪ್ರಯತ್ನಶೀಲನಾಗಿಬಿಟ್ಟರೆ, ಆಗ—ಸಮುದ್ರ ಪರ್ವತ ನಗರ ದ್ವೀಪ—ಇವುಗಳನ್ನೊಳಗೊಂಡಿರುವ ಆ ಸಮಸ್ತ ಭೂಮಿಯೂ ಕೂಡ, ಅವನು ತನ್ನ ಸೇವಕರಿಗೆ ಯೋಗ್ಯವಾದ ವಿಭಾಗಮಾಡುವುದಕ್ಕೂ ದೊಡ್ಡದಾಗಲಾರದು (೧) ‖ ೨೦ ‖

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಪೌರುಷಪ್ರಕರಣವೆಂಬ
ನಾಲ್ಕನೆಯ ಸರ್ಗವು.

(೧) ಚತುಸ್ಸಮುದ್ರಮಧ್ಯಗತವಾದ ಭೂಮಿಯನ್ನು ಭೃತ್ಯರಿಗೆ ಕೊಡುವುದೂ ದೊಡ್ಡದಾಗಲಾರದೆಂದು ಭಾವವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಪಞ್ಚಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಪ್ರವೃತ್ತಿರೇವ ಪ್ರಥಮಂ ಯಥಾಶಾಸ್ತ್ರವಿಹಾರಿಣಾಮ್ ।
ಪ್ರಭೇವ ವರ್ಣಭೇದಾನಾಂ ಸಾಧನೀ ಸರ್ವಕರ್ಮಣಾಮ್ ॥ ೧ ॥
ಮನಸಾ ವಾಞ್ಛ್ಯತೇ ಯಚ್ಚ ಯಥಾಶಾಸ್ತ್ರಂ ನ ಕರ್ಮಣಾ ।
ಸಾಧ್ಯತೇ ಮತ್ತಲೀಲಾಸೌ ಮೋಹನೀ ನಾರ್ಥಸಾಧನೀ ॥ ೨ ॥
ಯಥಾ ಸಂಯತ್ಯತೇ ಯೇನ ತಥಾ ತೇನಾನುಭೂಯತೇ ।
ಸ್ವಕರ್ಮೈವೇತಿ ಚಾಸ್ತೇನ್ಯಾ ವ್ಯತಿರಿಕ್ತಾ ನ ದೈವದೃಕ್ ॥ ೩ ॥
ಉಚ್ಛಾಸ್ತ್ರಂ ಶಾಸ್ತ್ರಿತಂ ಚೇತಿ ದ್ವಿವಿಧಂ ಪೌರುಷಂ ಸ್ಮೃತಮ್ ।

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಐದನೆಯ ಸರ್ಗವು.

ಪ್ರಾಬಲ್ಯೇ ಪೌರುಷಸ್ಯಾತ್ರಾಪ್ಯವಶ್ಯಂ ಫಲಸಙ್ಗಮೇ ।
ದೈವಸ್ಯ ವ್ಯತಿರೇಕೇ ಚ ಯುಕ್ತಿರ್ದೃಷ್ಟಾನ್ತ ಈರ್ಯತೇ ॥

ಪೌರುಷವು ಪ್ರಬಲವಾಗಿದ್ದರೆ ಫಲಪ್ರಾಪ್ತಿಯಾಗುವ ವಿಷಯದಲ್ಲಿಯೂ, ದೈವವು ಪ್ರಬಲವಾಗಿದ್ದರೆ ಫಲಪ್ರಾಪ್ತಿಯಾಗದಿರುವ ವಿಷಯದಲ್ಲಿಯೂ ಕೂಡ, ಸಯುಕ್ತಿಕವಾದ ದೃಷ್ಟಾಂತವು ಈ ಸರ್ಗದಲ್ಲಿಯೂ ಹೇಳಲ್ಪಡುವುದು.

ಮತ್ತೆ ವಸಿಷ್ಠಮುನಿಯು ಶ್ರೀರಾಮನನ್ನು ಕುರಿತು ಹೇಳಿದರು.

ಅಯ್ಯಾ! ರಾಮ! ಲೋಕದಲ್ಲಿ ನಾನಾವಿಧವಾದ ಬಣ್ಣಗಳಿರುವುವಷ್ಟೆ! ಆ ಬಣ್ಣಗಳು ಪ್ರಕಾಶಿಸಬೇಕಾದರೆ ಕಾಂತಿಯು (ಮಿರುಗು) ಮುಖ್ಯವಲ್ಲವೆ! ಕಾಂತಿಯೊಂದಿದ್ದರೆ ಯಾವ ಬಣ್ಣವಾದರೂ ಪ್ರಕಾಶಿಸುವಂತೆ, ಪ್ರಯತ್ನವೊಂದಿದ್ದರೆ ಸರ್ವಕರ್ಮಗಳೂ ಸಿದ್ಧಿಸುವುವು. ಆದರೆ ಆ ಪ್ರಯತ್ನವು ಶಾಸ್ತ್ರನಿಯಮಕ್ಕೊಳಪಟ್ಟಿರಬೇಕು ॥ ೧ ॥

ಆದರೆ ಮನಸ್ಸಿನಲ್ಲಿ ಮಾತ್ರ ಯಾವುದಾದರೊಂದನ್ನಪೇಕ್ಷಿಸಿ, ಯಥಾವಿಧಿಯಾಗಿ ಪ್ರಯತ್ನದಿಂದ ಅದನ್ನು ಸಾಧಿಸದಿರುವುದಾವುದುಂಟೋ, ಅದು—ಮತ್ತಲೀಲೆ (ಮದಿಸಿದವರ ಆಟ) ಯೆನ್ನಿಸುವುದು. ಇದು—ಕೇವಲಮೋಹವುಂಟುಮಾಡುವುದಲ್ಲದೆ, ಕಾರ್ಯಸಾಧನೆ ಮಾಡತಕ್ಕುದಲ್ಲ ॥ ೨ ॥

ಯಾವನು ಎಷ್ಟುಮಟ್ಟಿಗೆ ಪ್ರಯತ್ನಪಡುವನೋ, ಅವನು ಅಷ್ಟುಮಟ್ಟಿಗೆ ಅನುಭವಿಸುವನು; ಹೀಗೆ ತನ್ನ ಕರ್ಮವೊಂದೇ ಇರುವುದರಿಂದ, ಇದಕ್ಕೆ ಭಿನ್ನವಾಗಿ ಬೇರೆಯಾದ ದೈವವೆಂಬ ಜ್ಞಾನವೇ ಇಲ್ಲ ॥ ೩ ॥

ಈ ಪೌರುಷವು, ಶಾಸ್ತ್ರನಿಯಮವನ್ನು ಉಲ್ಲಂಘಿಸಿರತಕ್ಕುದೆಂದೂ—ಶಾಸ್ತ್ರನಿಯಮವನ್ನನುಸರಿಸಿರತಕ್ಕುದೆಂದೂ ಎರಡುವಿಧವೆಂಬುದಾಗಿ ಪ್ರಾಜ್ಞರು ಹೇಳಿರುವರು. ಆದರಲ್ಲಿ

ತತೋಽಚ್ಛಾಸ್ತ್ರಮನರ್ಥಾಯ ಪರಮಾರ್ಥಾಯ ಶಾಸ್ತ್ರತಮ್ ‖ ೪ ‖
ದ್ವೌ ಹುಡಾವಿವ ಯುಧ್ಯೇತೇ ಪುರುಷಾರ್ಥೌ ಸಮಾಸಮೌ ।
ಪ್ರಾಕ್ತನಶ್ಚೈಹಿಕಶ್ಚೈವ ಶಾಮ್ಯತ್ಯತ್ರಾಲ್ಪವೀರ್ಯವಾನ್ ‖ ೫ ‖
ಅತಃ ಪುರುಷಯತ್ನೇನ ಯತಿತವ್ಯಂ ಯಥಾತಥಾ ।
ಪುಂಸಾತನ್ದ್ರೇಣ ಸದ್ಯೋಗಾತ್ ಯೇನಾಶ್ವದ್ಯತನೋ ಜಯೇತ್ ‖ ೬ ‖
ದ್ವೌ ಹುಡಾವಿವ ಯುಧ್ಯೇತೇ ಪುರುಷಾರ್ಥೌ ಸಮಾಸಮೌ ।
ಆತ್ಮೀಯಶ್ಚಾನ್ಯದೀಯಶ್ಚ ಜಯತ್ಯತಿಬಲಸ್ತಯೋಃ ‖ ೭ ‖
ಅನರ್ಥಃ ಪ್ರಾಪ್ಯತೇ ಯತ್ರ ಶಾಸ್ತ್ರತಾದಪಿ ಪೌರುಷಾತ್ ।
ಅನರ್ಥಕರ್ತೃ ಬಲವತ್ ತತ್ರ ಜ್ಞೇಯಂ ಸ್ವಪೌರುಷಮ್ ‖ ೮ ‖
ಪರಂ ಪೌರುಷಮಾಶ್ರಿತ್ಯ ದನ್ತೈರ್ದನ್ತಾನ್ ವಿಚೂರ್ಣಯನ್ ।
ಶುಭೇನಾಶುಭಮುದ್ಯುಕ್ತಂ ಪ್ರಾಕ್ತನಂ ಪೌರುಷಂ ಜಯೇತ್ ‖ ೯ ‖

ನಿಯಮವನ್ನುಲ್ಲಂಘಿಸಿ ಮಾಡಿದ ಪೌರುಷವು ಅನರ್ಥಹೇತುವಾಗುವುದು; ನಿಯಮಾನುಸಾರವಾಗಿ ಮಾಡಿದ ಪೌರುಷವು ಪರಮಪುರುಷಾರ್ಥ (ಮೋಕ್ಷ) ಹೇತುವಾಗುವುದು ‖೪‖

ನಿಯಮಾನುಸಾರವಾಗಿ ಮಾಡಿದ ಪ್ರಯತ್ನವೂ ಅನೇಕವೇಳೆ ವ್ಯರ್ಥವಾಗುವುದಲ್ಲವೆ! ಅದಕ್ಕೆ ಕಾರಣವೇನೆಂದರೆ—ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವೂ ಈ ಜನ್ಮದಲ್ಲಿ ಮಾಡಿದ ಕರ್ಮವೂ ಇವೆರಡೂ ಕೂಡ, ಒಂದಕ್ಕೊಂದು ಸಮವಾಗಿದ್ದರೂ-ಅಥವಾ ಒಂದು ಹೆಚ್ಚು ಒಂದು ಕಡಮೆಯಾಗಿದ್ದರೂ-ಎರಡುಟಗರುಗಳಂತೆ ಯುದ್ಧಮಾಡುವುವು. ಹೀಗೆ ಯುದ್ಧಮಾಡುವಾಗ, ಅವುಗಳಲ್ಲಿ ಅಲ್ಪವೀರ್ಯವಾದುದು ಸೋಲುವುದು. ಆದಕಾರಣ, ಈಜನ್ಮದ ಕರ್ಮಕ್ಕೆ ಫಲಪ್ರಾಪ್ತಿಯಾಗದಿದ್ದಾಗ,ಜನ್ಮಾಂತರೀಯಕರ್ಮಶಕ್ತಿ ಹೆಚ್ಚಾಗಿತ್ತೆಂದೂ-ಅದನ್ನು ಗೆಲ್ಲುವುದಕ್ಕೆ ನಾವು ಈಗ ಮಾಡಿದ ಕರ್ಮವು ಸಾಲದಕಾರಣ ಇನ್ನೂ ಹೆಚ್ಚಾಗಿ ಮಾಡಬೇಕಾಗಿತ್ತೆಂದೂ ತಿಳಿಯಬೇಕು ‖ ೫ ‖

ಆದಕಾರಣ, ನಾವು ಈಗ ಮಾಡುವ ಕರ್ಮವು ಬೇಗನೆ ಜಯಿಸುವಂತೆ, ಮನುಷ್ಯನು ಜಾಗರೂಕನಾಗಿ, ಹೇಗಾದರೂಮಾಡಿ ಪ್ರಯತ್ನಪಡಬೇಕು ‖ ೬ ‖

ಹೀಗೆಯೇ ಇತರರ ಪ್ರಯತ್ನವೂ ನಮ್ಮ ಪ್ರಯತ್ನವೂ ಕೂಡ, ಎರಡುಟಗರುಗಳಂತೆ-ಸಮಾನಗಳಾಗಿದ್ದರೂ ಸಮಾನಗಳಲ್ಲದಿದ್ದರೂ-ಯುದ್ಧಮಾಡುವುವು; ಅದರಲ್ಲಿ ಯಾವುದು ಬಲಿಷ್ಠವೋ-ಅದು ಗೆಲ್ಲುವುದು ‖ ೭ ‖

ಹಿಂದೆ ಹೇಳಿದಂತೆ ಶಾಸ್ತ್ರನಿಯಮಾನುಸಾರವಾಗಿ ಮಾಡಿದ ಪೌರುಷದಿಂದಲೂ ಯಾವ ವಿಷಯದಲ್ಲಿ ಅನರ್ಥಪ್ರಾಪ್ತಿಯಾಗುವುದೋ, ಅಂಥ ಸಂದರ್ಭದಲ್ಲಿ ಅನರ್ಥವನ್ನುಂಟುಮಾಡುವ ತನ್ನ ಪ್ರಾಕ್ತನಕರ್ಮವು ಬಲಿಷ್ಠವಾಗಿತ್ತೆಂದು ತಿಳಿಯಬೇಕು ‖ ೮ ‖

ಹೀಗೆ ತಿಳಿದಮೇಲೆ ಉತ್ತಮವಾದ ಪ್ರಯತ್ನವನ್ನಾಶ್ರಯಿಸಿ, ಹಲ್ಲುಗಳಿಂದ ಹಲ್ಲುಗಳನ್ನು ಚೂರ್ಣಮಾಡುತ, (ಹಲ್ಲುಕಡಿಯುತ) ತನ್ನ ಶುಭವಾದ ಕರ್ಮದಿಂದ, ಅನರ್ಥವುಂಟುಮಾಡಲುದ್ಯುಕ್ತವಾಗಿರುವ ಅಶುಭವಾದ ಪ್ರಾಕ್ತನಕರ್ಮವನ್ನು ಗೆಲ್ಲಬೇಕು ‖ ೯ ‖

ಪ್ರಾಕ್ತನಃ ಪುರುಷಾರ್ಥೋಽಸೌ ಮಾಂ ನಿಯೋಜಯತೀತಿ ಧೀಃ ।
ಬಲಾದಧಸ್ಪದೀಕಾರ್ಯಾ ಪ್ರತ್ಯಕ್ಷಾದಧಿಕಾ ನ ಸಾ ॥ ೧೦ ॥
ತಾವತ್ತಾವತ್ ಪ್ರಯತ್ನೇನ ಯತಿತವ್ಯಂ [1]ಸುಪೌರುಷಮ್ ।
ಪ್ರಾಕ್ತನಂ ಪೌರುಷಂ ಯಾವತ್ ಅಶುಭಂ ಶಾಮ್ಯತಿ ಸ್ವಯಮ್ ॥ ೧೧ ॥
ದೋಷಃ ಶಾಮ್ಯತ್ಯಸನ್ದೇಹಂ ಪ್ರಾಕ್ತನೋದ್ಯತನೈರ್ಗುಣೈಃ ।
ದೃಷ್ಟಾನ್ತೋಽತ್ರ ಹ್ಯಸ್ತನಸ್ಯ ದೋಷಸ್ಯಾದ್ಯಗುಣೈಃ ಕ್ಷಯಃ ॥ ೧೨ ॥
ಅಸದ್ದೈವಮಧಃ ಕೃತ್ವಾ ನಿತ್ಯಮುದ್ರಿಕ್ತಯಾ ಧಿಯಾ ।
ಸಂಸಾರೋತ್ತರಣಂ ಭೂತ್ಯೈ ಯತೇತಾಧಾತುಮಾತ್ಮನಿ ॥ ೧೩ ॥
ನ ಗನ್ತವ್ಯಮನುದ್ಯೋಗೈಃ ಸಾಮ್ಯಂ ಪುರುಷಗರ್ದಭೈಃ ।
ಉದ್ಯೋಗಸ್ತು ಯಥಾಶಾಸ್ತ್ರಂ ಲೋಕದ್ವಿತಯಸಿದ್ಧಯೇ ॥ ೧೪ ॥
ಸಂಸಾರಕುಹರಾದಸ್ಮಾತ್ ನಿರ್ಗನ್ತವ್ಯಂ ಸ್ವಯಂ ಬಲಾತ್ ।

ಆದರೆ ಜನ್ಮಾಂತರೀಯಕರ್ಮವು ನಮ್ಮನ್ನು ಯಾವರೀತಿಯಾಗಿ ಪ್ರೇರಿಸುತ್ತದೆಯೋ, ಆ ರೀತಿಯೇ ನಾವು ನಡೆಯಬೇಕಾಗಿರುವುದರಿಂದ, ಮಾಡುವುದು ನಮ್ಮ ಯತ್ನದಲ್ಲಿಲ್ಲವೆಂದು ಶಂಕಿಸಕೂಡದು. ಜನ್ಮಾಂತರೀಯಕರ್ಮವು ನನ್ನನ್ನು ಪ್ರೇರಿಸುತ್ತದೆಯೆಂಬ ಬುದ್ಧಿಯನ್ನು ಬಲಾತ್ಕಾರದಿಂದ ಮೆಟ್ಟಬೇಕು. ಅದು ಪ್ರತ್ಯಕ್ಷವಾಗಿರುವ ಈಗಿನ ಕರ್ಮಕ್ಕಿಂತ ದೊಡ್ಡದಲ್ಲ ॥ ೧೦ ॥

ಜನ್ಮಾಂತರೀಯವಾದ ಅಶುಭಕರ್ಮವು ಎಲ್ಲಿಯವರೆಗೆ ತಾನಾಗಿ ಶಾಂತಿಹೊಂದುವುದೋ, ಅದುವರೆಗೂ ಚೆನ್ನಾಗಿ ಪೌರುಷವಿರುವಂತೆ ಪ್ರಯತ್ನಪುರಸ್ಸರವಾಗಿ ಕರ್ಮಮಾಡಬೇಕು ॥ ೧೧ ॥

ಪ್ರಾಕ್ತನಕರ್ಮದೋಷವು ನಾಶಹೊಂದುವುದರಲ್ಲಿ ನಂಬುಗೆಯೇನೆಂದು ಸಂದೇಹಪಡಕೂಡದು. ಈಗಿನ ಸತ್ಕರ್ಮಗಳ ಗುಣದಿಂದ, ಪ್ರಾಕ್ತನ ಕರ್ಮದೋಷವು ಸಂಶಯವಿಲ್ಲದೆ ನಾಶಹೊಂದುವುದು. ನಿನ್ನೆಯದಿನದ ದುರಾಹಾರದಿಂದ ಉಂಟಾದ ದೋಷವು, ಈ ದಿವಸ ಮಾಡಿದ ಔಷಧಾದಿಗಳ ಗುಣದಿಂದ ನಾಶಹೊಂದುವುದಿಲ್ಲವೆ! ಇದೇ ಈ ವಿಷಯದಲ್ಲಿ ದೃಷ್ಟಾಂತವು ॥ ೧೨ ॥

ಆದಕಾರಣ, ದುಷ್ಟವಾದ ಅದೃಷ್ಟವನ್ನು ತಿರಸ್ಕರಿಸಿ, ಪ್ರತಿದಿನವೂ ಮೇಲಾದ ಬುದ್ಧಿಯಿಂದ, ಶ್ರೇಯಸ್ಸುಂಟಾಗುವುದಕ್ಕೋಸ್ಕರ, ಸಂಸಾರಸಾಗರವನ್ನು ದಾಟಿಸತಕ್ಕ ಶಮದಮಾದಿಸಾಧನಗಳನ್ನು ತನ್ನಲ್ಲಿ ಸಂಪಾದಿಸುವುದಕ್ಕೆ ಪ್ರಯತ್ನಪಡಬೇಕು ॥ ೧೩ ॥

ವ್ಯವಸಾಯಶೂನ್ಯರಾದ ಮನುಷ್ಯಾಕಾರವಾದ ಕತ್ತೆಗಳೊಡನೆ ಎಂದಿಗೂ ಹೋಲಿಕೆಯನ್ನು ಹೊಂದಕೂಡದು. ಶಾಸ್ತ್ರನಿಯಮಾನುಸಾರವಾಗಿ ಮಾಡಿದ ವ್ಯವಸಾಯವು ಇಹಪರಗಳೆರಡನ್ನೂ ಸಾಧಿಸುವುದಕ್ಕೆ ಸಹಾಯವಾಗಿಯೇ ಆಗುವುದು ॥ ೧೪ ॥

ಸಿಂಹವು ತನಗೆ ಶತ್ರುಗಳಾದ ಮನುಷ್ಯರು ಒಡ್ಡಿರುವ ಪಂಜರದಿಂದ ಬಲಾತ್ಕರಿಸಿ

---

[1] ಕ್ರಿಯಾವಿಶೇಷಣಮ್.

ಪೌರುಷಂ ಯತ್ನಮಾಶ್ರಿತ್ಯ ಹರಿಣೇವಾರಿಪಞ್ಜರಾತ್ ॥ ೧೫ ॥
ಪ್ರತ್ಯಹಂ ಪ್ರತ್ಯವೇಕ್ಷೇತ ದೇಹಂ ನಶ್ವರಮಾತ್ಮನಃ ।
ಸನ್ತ್ಯಜೇತ್ ಪಶುಭಿಸ್ತುಲ್ಯಂ ಶ್ರಯೇತ್ ಸತ್ಪುರುಷೋಚಿತಮ್ ॥ ೧೬ ॥
ಕಿಂಚಿತ್ ಕಾನ್ತಾನ್ನಪಾನಾದಿ ಕಲಿಲಂ ಕೋಮಲಂ ಗೃಹೇ ।
ವ್ರಣೇ ಕೀಟಇವಾಸ್ವಾದ್ಯ ವಯಃ ಕಾರ್ಯಂ ನ ಭಸ್ಮಸಾತ್ ॥ ೧೭ ॥
ಶುಭೇನ ಪೌರುಷೇಣಾಶು ಶುಭಮಾಸಾದ್ಯತೇ ಫಲಮ್ ।
ಅಶುಭೇನಾಶುಭಂ ನಿತ್ಯಂ ದೈವಂ ನಾಮ ನ ಕಿಂಚನ ॥ ೧೮ ॥
ಪ್ರತ್ಯಕ್ಷಮಾನಮುತ್ಸೃಜ್ಯ ಯೋನುಮಾನಮುಪೈತ್ಯಸೌ ।
ಸ್ವಭುಜಾಭ್ಯಾಮಿಮೌ ಸರ್ಪೌ ಇತಿಪ್ರೇಕ್ಷ್ಯ ಪಲಾಯತೇ ॥ ೧೯ ॥
ದೈವಂ ಸಂಪ್ರೇರಯತಿ ಮಾಂ ಇತಿ ದಗ್ಧಧಿಯಾಂ ಮುಖಮ್ ।

ಹಾರಿಹೋಗುವಂತೆ, ಸಂಪೂರ್ಣವಾದ ಪುರುಷಯತ್ನವನ್ನಾಶ್ರಯಿಸಿ, ಬಲಾತ್ಕಾರದಿಂದ ತಾನಾಗಿ ಈ ಸಂಸಾರವೆಂಬ ಗುಹೆಯಿಂದ ಆಚೆಗೆ ಹೊರಟುಹೋಗಬೇಕು ॥ ೧೫ ॥

ಅಯ್ಯಾ! ರಾಮ! ನೀನು ಹಿಂದೆ, ಈ ದೇಹವು ಕೇವಲನಶ್ವರವೆಂದೂ ಇದಕ್ಕೋಸ್ಕರ ಯಾವ ಕೆಲಸವನ್ನೂ ಮಾಡಬೇಕಾದುದಿಲ್ಲವೆಂದೂ ಹೇಳಿದೆಯಲ್ಲವೆ! ಈ ದೇಹವು ನಶ್ವರವೆಂಬುದು ದಿಟವೇ ಅಹುದು! ಮನುಷ್ಯನಾದವನು ಪ್ರತಿದಿನವೂ ಕೇವಲ ನಶ್ವರವಾದ ತನ್ನ ದೇಹವು ಯಾವಾಗ ಹೋಗಿಬಿಡುತ್ತದೋ ಎಂದು ನೋಡುತಲೇ ಇರಬೇಕು. ಆದರೆ, ಇದು ನಶ್ವರವಾದಕಾರಣ, ಇದು ಇರುವಾಗಲೇ ಸಾಧ್ಯವಾದಷ್ಟುಬೇಗನೆ ಪರಲೋಕಸಾಧಕವಾದ ಧರ್ಮವನ್ನು ಮಾಡಬೇಕೇಹೊರತು, ಪಶುಗಳಿಗೆ ಸಮಾನವಾದ ಅನುದ್ಯೋಗವೃತ್ತಿಯನ್ನವಲಂಬಿಸಕೂಡದು; ಸತ್ಪುರುಷರಿಗೆ ತಕ್ಕ ಕರ್ಮತತ್ಪರತೆಯನ್ನಾಶ್ರಯಿಸಬೇಕು ॥ ೧೬ ॥

ವ್ರಣದಲ್ಲಿ ಬಿದ್ದಿರುವ ಹುಳುವು ಅಲ್ಲಿರುವ ಕೀವು ರಕ್ತ ಮುಂತಾದುವುಗಳನ್ನು ಆಸ್ವಾದಿಸುತ ಅದರಲ್ಲಿಯೇ ತೃಪ್ತಿಪಡುವಂತೆ, ಮನೆಯಲ್ಲಿ ಕೋಮಲವಾಗಿ ಕಾಣುವ ಹೆಂಡತಿ ಅನ್ನ ನೀರು ಮುಂತಾದ ತುಚ್ಛ ಪದಾರ್ಥವನ್ನಾಸ್ವಾದಿಸುತ, ಆಯುಸ್ಸನ್ನೆಲ್ಲ ಸುಟ್ಟು ಬೂದಿ ಮಾಡಬಾರದು ॥ ೧೭ ॥

ಮುಖ್ಯವಾಗಿ ನಾವು ಶುಭಕರ್ಮಮಾಡಿದರೆ ಶುಭವಾದ ಫಲವೂ, ಅಶುಭಕರ್ಮದಿಂದ ಅಶುಭಫಲವೂ ಆ ಕ್ಷಣವೇ ತಪ್ಪದೆ ಹೊಂದಲ್ಪಡುವುದು; ಇಷ್ಟೇ ಹೊರತು, ದೈವವೆಂಬುದು ಯಾವುದೂ ಇಲ್ಲವೇಇಲ್ಲ ॥ ೧೮ ॥

ಹೀಗೆ ಪ್ರತ್ಯಕ್ಷಪ್ರಮಾಣಭೂತವಾದ ಪುರುಷಪ್ರಯತ್ನವನ್ನು ಬಿಟ್ಟು ಯಾವನು (೧) ಅನುಮಾನಸಿದ್ಧವಾದ ದೈವವನ್ನಾಶ್ರಯಿಸುವನೋ, ಅವನು-ತನ್ನ ತೋಳುಗಳನ್ನು ನೋಡಿಕೊಂಡು ಸರ್ಪಗಳೆಂದು ತಿಳಿದು, ಅದರಿಂದ ಹೆದರಿಕೊಂಡು ಓಡುವನು ॥ ೧೯ ॥

ಆದಕಾರಣ, ಶ್ರೇಷ್ಠರಾದ ಮಹಾತ್ಮರು ತೋರಿಸಿರುವ ಮಾರ್ಗವನ್ನರಿಯದೆ,–

---

(೧) ಅನುಮಾನ = ಊಹಿಸುವಿಕೆ. ಇದರ ವಿಷಯವೆಲ್ಲ ಮುಂದೆ ವಿಶದವಾಗುವುದು.

ಅದೃಷ್ಟಶ್ರೇಷ್ಠದೃಷ್ಟೀನಾಂ ದೃಷ್ಟ್ವಾ ಲಕ್ಷ್ಮೀರ್ನಿವರ್ತತೇ ‖ ೨೦ ‖
ತಸ್ಮಾತ್ ಪುರುಷಯತ್ನೇನ ವಿವೇಕಂ ಪೂರ್ವಮಾಶ್ರಯೇತ್ ।
ಆತ್ಮಜ್ಞಾನಮಹಾರ್ಥಾಣಿ ಶಾಸ್ತ್ರಾಣಿ ಪ್ರವಿಚಾರಯೇತ್ ‖ ೨೧ ‖
ಚಿತ್ತೇ ಚಿನ್ತಯತಾಮರ್ಥಂ ಯಥಾಶಾಸ್ತ್ರಂ ನಿಜೇಹಿತೈಃ ।
ಅಸಂಸಾಧಯತಾಮೇವ ಮೂಢಾನಾಂ ಧಿಗ್ದುರೀಪ್ಸಿತಮ್ ‖ ೨೨ ‖
ಪೌರುಷಂ ಚ ನ ಮಾನನ್ತಂ ನ ಯತ್ನಮಭಿ ವಾಞ್ಛ್ಯತೇ ।
ನ ಯತ್ನೇನಾಪಿ ಮಹತಾ ಪ್ರಾಪ್ಯತೇ ರತ್ನಮಶ್ಮತಃ ‖ ೨೩ ‖
ಯಥಾ ಘಟಃ ಪರಿಮಿತೋ ಯಥಾ ಪರಿಮಿತಃ ಪಟಃ ‖
ನಿಯತಃ ಪರಿಮಾಣಸ್ಥಃ ಪುರುಷಾರ್ಥಸ್ತಥೈವ ಚ ‖ ೨೪ ‖
ಸಚ ಸಚ್ಛಾಸ್ತ್ರಸತ್ಸಙ್ಗಸದಾಚಾರೈರ್ನಿಜಂ ಫಲಮ್ ।
ದದಾತೀತಿ ಸ್ವಭಾವೋಽಯಂ ಅನ್ಯಥಾ ನಾರ್ಥಸಿದ್ಧಯೇ ‖ ೨೫ ‖

ದೈವವು ನನ್ನನ್ನು ಪ್ರೇರಿಸುತ್ತದೆಯೆಂದು ನಂಬಿಕೊಂಡು, ತಮ್ಮ ಬುದ್ಧಿಯನ್ನೆಲ್ಲ ಹಾಳುಮಾಡಿಕೊಂಡಿರುವವರ ಮುಖವನ್ನು ನೋಡಿದಮಾತ್ರದಿಂದಲೇ ಲಕ್ಷ್ಮಿಯು ಹಿಂದಿರುಗುವಳು ‖

ಆದಕಾರಣ, ಪುರುಷಪ್ರಯತ್ನದಿಂದ ಮೊದಲು (೧) ವಿವೇಕವನ್ನು ಸಂಪಾದಿಸಬೇಕು; ಬಳಿಕ ಆತ್ಮಜ್ಞಾನವೆಂಬ ಮಹಾಫಲವುಳ್ಳ ಶಾಸ್ತ್ರಗಳನ್ನು ಚೆನ್ನಾಗಿ ವಿಚಾರಮಾಡಬೇಕು ‖೨೧‖

ಮನಸ್ಸಿನಲ್ಲಿ ಮಾತ್ರ ನಾನಾವಿಧವಾದ ಕಾರ್ಯಗಳನ್ನು ಯೋಚಿಸುತ, ಶಾಸ್ತ್ರಾನುಸಾರಿಯಾದ ತಮ್ಮ ವ್ಯಾಪಾರದಿಂದ ಒಂದನ್ನೂ ಸಾಧಿಸದೆಯೇ ವ್ಯಸನಪಡುವ ಮೂಢರ, ಅಹಾಳು ಇಷ್ಟಾರ್ಥವನ್ನು ಸುಡಬೇಕು ‖೨೨‖

ಆದರೆ, ಈ ಪುರುಷಕಾರವೆಂಬುದು ಎಂದಿಗೂ ಕೊನೆಗಾಣುವುದಿಲ್ಲವೆಂದೂ, ಅದು ಅಗಾಧವಾದ ಪ್ರಯತ್ನವನ್ನು ಗುರಿಮಾಡಿಕೊಂಡು ಅಪೇಕ್ಷಿಸಲ್ಪಡತಕ್ಕುದೆಂದೂ ತಿಳಿಯಬಾರದು. ಆಯಾ ಫಲಕ್ಕೆ ತಕ್ಕಷ್ಟು ಪುರುಷಕಾರವು ನಿರ್ಣೀತವಾಗಿಯೇ ಇರುವುದು. ಎಷ್ಟು ಹೆಚ್ಚಾಗಿ ಪ್ರಯತ್ನಮಾಡಿದರೂ, ಅರೇಬಂಡೆಯಿಂದ ರತ್ನವು ಸಿಕ್ಕುವುದಿಲ್ಲ ‖೨೩‖

ಒಂದು ಗಡಿಗೆಯು ಇಷ್ಟೇ ನೀರು ಹಿಡಿಯುತ್ತದೆಂದು ಹೇಗೆ ಪರಿಮಾಣವುಳ್ಳುದಾಗಿರುವುದೋ, ಒಂದು ವಸ್ತ್ರವು ಇಷ್ಟೇ ಉದ್ದವಿರುವುದೆಂದು ಹೇಗೆ ಪರಮಾಣವುಳ್ಳುದಾಗಿರುವುದೋ, ಪುರುಷಪ್ರಯತ್ನವೂ ಕೂಡ ಹಾಗೆಯೇ—ಇಂಥಿಂಥ ಫಲಕ್ಕೆ ಇಷ್ಟಿಷ್ಟೇ ಆಗಬೇಕೆಂದೇ—ಪರಿಮಾಣವುಳ್ಳುದಾಗಿ ನಿಯತವಾಗಿರುವುದು ‖೨೪‖

ಹೀಗಿರುವ ಈ ಪುರುಷಕಾರವಾದರೋ, ಸಚ್ಛಾಸ್ತ್ರಪರಿಜ್ಞಾನದಿಂದಲೂ-ಸತ್ಪುರುಷಸಹವಾಸದಿಂದಲೂ—ಸತ್ಕರ್ಮಾಚರಣೆಯಿಂದಲೂ—ತನ್ನ ಫಲವನ್ನು ಕೊಡುವುದು; ಇದು ಸ್ವಭಾವಸಿದ್ಧವು. ಈ ಸಚ್ಛಾಸ್ತ್ರಾದಿಗಳಿಲ್ಲದಿದ್ದರೆ ಅದು ಪ್ರಯೋಜನಕಾರಿಯಾಗುವುದಿಲ್ಲ ‖೨೫‖

---

(೧) ಇದು ಮಾಡತಕ್ಕುದು ಇದು ಬಿಡತಕ್ಕುದು ಎಂಬ ತಿಳಿವಳಿಕೆ.

ಸ್ವರೂಪಂ ಪೌರುಷಸ್ಯೈತತ್ ಏವಂ ವ್ಯವಹರನ್ ನರಃ ।
ಯಾತಿ ನಿಷ್ಫಲಯತ್ನತ್ವಂ ನ ಕದಾಚನ ಕಶ್ಚನ ॥ ೨೬ ॥
ದೈನ್ಯದಾರಿದ್ರ್ಯದುಃಖಾರ್ತಾಃ ಅಪ್ಯನ್ಯೇ ಪುರುಷೋತ್ತಮಾಃ ।
ಪೌರುಷೇಣೈವ ಯತ್ನೇನ ಯಾತಾದೇವೇನ್ದ್ರತುಲ್ಯತಾಮ್ ॥ ೨೭ ॥
ಆಬಾಲ್ಯಾದಲಮಭ್ಯಸ್ತೈಃ ಶಾಸ್ತ್ರಸತ್ಸಙ್ಗಮಾದಿಭಿಃ ।
ಗುಣೈಃ ಪುರುಷಯತ್ನೇನ ಸ್ವಾರ್ಥಃ ಸಂಪ್ರಾಪ್ಯತೇ ಯತಃ[1] ॥ ೨೮ ॥
ಇತಿ ಪ್ರತ್ಯಕ್ಷತೋ ದೃಷ್ಟಂ ಅನುಭೂತಂ ಶ್ರುತಂ ಕೃತಮ್ ।
ದೈವಾತ್ತಮಿತಿ ಮನ್ಯನ್ತೇ ಯೇ ಹತಾಸ್ತೇ ಕುಬುದ್ಧಯಃ ॥ ೨೯ ॥
ಆಲಸ್ಯಂ ಯದಿನಭವೇಜ್ಜಗತ್ಯನರ್ಥಃಕೋನಸ್ಯಾದ್ಬಹುಧನಕೋಬಹುಶ್ರುತೋವಾ।
ಆಲಸ್ಯಾದಿಯಮವನಿಃ ಸಸಾಗರಾನ್ತಾ ಸಮ್ಪೂರ್ಣಾ ನರಪಶುಭಿಶ್ಚ ನಿರ್ಧನೈಶ್ಚ ॥
ಬಾಲ್ಯೇ ಗತೇಽವಿರತಕಲ್ಪಿತಕೇಳಿಲೋಲೇ ।
ದೋರ್ದಣ್ಡಮಣ್ಡಿತವಯಃಪ್ರಭೃತಿ ಪ್ರಯತ್ನಾತ್ ॥

ಇದೀಗ ಪೌರುಷದ ಸ್ವರೂಪವು; ಈರೀತಿಯಾಗಿ ಆಚರಿಸತಕ್ಕ ಯಾವ ಮನುಷ್ಯನೂ ಯಾವಾಗಲೂ ವಿಫಲಪ್ರಯತ್ನನಾಗುವುದಿಲ್ಲ ॥೨೬॥

ದೈನ್ಯದಾರಿದ್ರ್ಯದುಃಖಪೀಡಿತರಾದ ಇನ್ನೂ ಅನೇಕ ಪುರುಷಶ್ರೇಷ್ಠರೂ ಕೂಡ, ತಮ್ಮ ಪುರುಷಪ್ರಯತ್ನದಿಂದಲೇ ದೇವೇಂದ್ರನಿಗೆ ಸಮಾನವಾದ ಸ್ಥಿತಿಯನ್ನು ಪಡೆದಿರುವರು ॥೨೭॥

ಆದರೆ ಬಾಲ್ಯದಿಂದಲೂ ಪುರುಷಪ್ರಯತ್ನದಿಂದ ಶಾಸ್ತ್ರ ಸತ್ಸಹವಾಸಾದಿಗುಣಗಳನ್ನು ಚೆನ್ನಾಗಿ ಅಭ್ಯಾಸಮಾಡಿದರೇ ಪ್ರಯೋಜನಲಾಭವಾಗುವಕಾರಣ, ಬಾಲ್ಯದಿಂದಲೂ ಇವುಗಳನ್ನು ಅಭ್ಯಸಿಸಬೇಕು ॥೨೮॥

ಹೀಗೆ ಪ್ರತ್ಯಕ್ಷವಾಗಿ ಕಂಡಿರತಕ್ಕುದಾಗಿಯೂ, ನಮ್ಮ ಅನುಭವಕ್ಕೆ ಬಂದಿರುವುದಾಗಿಯೂ, ಪ್ರಾಜ್ಞರ ಮುಖದಿಂದ ಕೇಳಿರತಕ್ಕುದಾಗಿಯೂ, ಹಿರಿಯರು ಆಚರಿಸಿರತಕ್ಕುದಾಗಿಯೂ ಇರುವ-ಪ್ರಯತ್ನಫಲವನ್ನು, ಯಾವ ಮೂಢಾತ್ಮರು ದೈವಲಬ್ಧವೆಂದು ತಿಳಿಯುವರೋ, ಅವರು ಎಂದಿಗೂ ಹಾಳಾಗತಕ್ಕವರು ॥೨೯॥

ಈ ಜಗತ್ತಿನಲ್ಲಿ ಆಲಸ್ಯವೆಂಬ ಅನರ್ಥವೊಂದಿಲ್ಲದಿದ್ದರೆ, ಯಾವನುತಾನೆ ಬಹು ಧನವಂತನೂ ಬಹು ವಿದ್ಯಾವಂತನೂ ಆಗಲಾರನು? ಆದರೆ ಈ ಆಲಸ್ಯವೊಂದು ಜನರಲ್ಲಿ ನೆಲೆಸಿರುವುದರಿಂದ, ಚತುಸ್ಸಮುದ್ರಮಧ್ಯಗತವಾದ ಈ ಭೂಮಿಯೆಲ್ಲವೂ, ನರಪಶುಗಳಿಂದಲೂ ನಿರ್ಧನರಿಂದಲೂ ತುಂಬಿಹೋಗಿರುವುದು ॥೩೦॥

ಆದಕಾರಣ, ಸರ್ವದಾ ನಾನಾವಿಧವಾದ ಆಟಗಳನ್ನು ಕಲ್ಪಿಸಿಕೊಂಡು ಅದರಲ್ಲಿಯೇ ಆಸಕ್ತನಾಗಿರುವ ಬಾಲ್ಯವು ಕಳೆಯಲು, ಬಾಹುದಂಡಗಳಿಂದಲಂಕರಿಸಲ್ಪಟ್ಟ ವಯಸ್ಸು

---

1 ತತಃ ಆಬಾಲ್ಯಾದಭ್ಯಾಸಃ ಕಾರ್ಯಇತಿ ಭಾವಃ.

ಸತ್ಸಜ್ಗ ಮೈಃ ಪದಪದಾರ್ಥವಿಶುದ್ಧಬುದ್ಧಿಃ |
ಕುರ್ಯಾನ್ನರಃ ಸ್ವಗುಣದೋಷವಿಚಾರಣಾನಿ || ೩೧ ||

ಶ್ರೀವಾಲ್ಮೀಕಿರುವಾಚ.

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯನ್ತನಾಯ ವಿಧಯೇಸ್ತಮಿನೋ ಜಗಾಮ ||
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ದಿನಕರೇಣ ಸಹಾಜಗಾಮ ||೩೨||

ಇತಿ ಮುಮುಕ್ಷುವ್ಯವಹಾರಪ್ರಕರಣೇ ಪೌರುಷಸ್ಥಾಪನಂ ನಾಮ
ಪಞ್ಚಮಃ ಸರ್ಗಃ. ಪ್ರಥಮೋ ದಿವಸಃ.

(ಯೌವನ) ಮೊದಲುಗೊಂಡು, ಪ್ರಯತ್ನಪೂರ್ವಕವಾಗಿ, ಮನುಷ್ಯನು ಸತ್ಸಹವಾಸದಿಂದ ಪದಪದಾರ್ಥಜ್ಞಾನವನ್ನು ಹೊಂದಿ ನಿರ್ಮಲಚಿತ್ತನಾಗಿ, ತನ್ನ ಗುಣದೋಷಗಳ ವಿಚಾರವನ್ನು ಮಾಡುತಿರಬೇಕು ||೩೧||

ಹೀಗೆ ಶ್ರೀರಾಮನನ್ನು ಕುರಿತು ವಸಿಷ್ಠರು ಹೇಳಿದರೆಂದು ವಾಲ್ಮೀಕಿಮುನಿಯು ಭರದ್ವಾಜನನ್ನು ಕುರಿತು ಹೇಳಿದರು.

ಈರೀತಿಯಾಗಿ ವಾಲ್ಮೀಕಿಮುನಿಯು ಹೇಳಲಾಗಿ, ಬಳಿಕ ಆ ಹಗಲು ಕಳೆದು ಹೋಯಿತು; ಸಾಯಂಕಾಲಿಕವಾದ ಕರ್ಮಗಳು ನೆರವೇರುವುದಕ್ಕೋಸ್ಕರ ಸೂರ್ಯನು ಅಸ್ತಹೊಂದಿದನು; ಆ ಸಭೆಯಲ್ಲಿದ್ದವರೆಲ್ಲರೂ ಸ್ನಾನಾದಿ ಕರ್ಮಗಳನ್ನು ನೆರವೇರಿಸುವುದಕ್ಕೋಸ್ಕರ, ನಮಸ್ಕಾರಮಾಡಿ ಹೊರಟುಹೋದರು; ಆರಾತ್ರಿ ಕಳೆಯಲು, ಪುನಃ ಸೂರ್ಯಕಿರಣದೊಡನೆ ಬಂದು ಸೇರಿದರು (೧) ||೩೨||

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಪೌರುಷಸ್ಥಾಪನೆಯೆಂಬ
ಐದನೆಯ ಸರ್ಗವು.

ಇಲ್ಲಿಗೆ ಮೊದಲನೆಯದಿವಸದ ಕಥೆಯು ಮುಗಿದುದು.

---

(೧) ಸೂರ್ಯೋದಯವು ಆಯಿತು, ಪುನಃ ಸಭೆಯೂ ಸೇರಿತು; ಎಂದು ಅಭಿಪ್ರಾಯವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಷಷ್ಠಃಸರ್ಗಃ.

ಶ್ರೀವಸಿಷ್ಠ ಉವಾಚ.

ತಸ್ಮಾತ್ ಪ್ರಾಕ್ಪೌರುಷಾದ್ದೈವಂ ನಾನ್ಯತ್ ತತ್ ಪ್ರೋಜ್ಝ್ಯ ದೂರತಃ ।
ಸಾಧುಸಙ್ಗಮಸಚ್ಛಾಸ್ತ್ರೈಃ ಜೀವಮುತ್ತಾರಯೇದ್ಬಲಾತ್ ॥೧॥
ಯಥಾಯಥಾ ಪ್ರಯತ್ನಃ ಸ್ಯಾತ್ ಭವೇದಾಶು ಫಲಂ ತಥಾ ।
ಇತಿ ಪೌರುಷಮೇವಾಸ್ತಿ ದೈವಮಸ್ತು ತದೇವ ಚ ॥೨॥
ದುಃಖಾದ್ಯಥಾ ದುಃಖಕಾಲೇ ಹಾಕಷ್ಟಮಿತಿ ಕಥ್ಯತೇ ।
ಹಾಕಷ್ಟಶಬ್ದಪರ್ಯಾಯಃ ತಥಾ ಹಾದೈವಮಿತ್ಯಪಿ ॥೩॥
ಪ್ರಾಕ್ಸ್ವಕರ್ಮೇತರಾಕಾರಂ ದೈವಂ ನಾಮ ನ ವಿದ್ಯತೇ ।
ಬಾಲಃ ಪ್ರಬಲಪುಂಸೇವ ತಜ್ಜೇತುಮಿಹ ಶಕ್ಯತೇ ॥೪॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಆರನೆಯ ಸರ್ಗವು.

ಯತ್ರಾಸ್ತಿ ಪ್ರಬಲಂ ದೈವಂ ತತ್ರಾಪಿ ಪರಪೌರುಷಮ್ ।
ಪ್ರೋಚ್ಯತೇ ಬಲವದ್ದೈವಂ ಪ್ರಾಕ್ತನಂ ವಾ ಸ್ವಪೌರುಷಮ್ ॥

ಯಾವ ಸಂದರ್ಭದಲ್ಲಿ ನಮ್ಮ ದೈವವು ಬಲಿಷ್ಠವಾಗಿರುವುದೋ, ಅಲ್ಲಿಯೂ ಇತರರ ಪೌರುಷವು ಬಲಿಷ್ಠವಾಗಿರುವುದೆಂದೂ, ಅಥವಾ ಆ ದೈವವೆಂಬುದೂ ಪ್ರಾಕ್ತನವಾದ ತನ್ನ ಪೌರುಷವೇ ಎಂದೂ ಈ ಸರ್ಗದಲ್ಲಿ ಹೇಳಲ್ಪಡುವುದು.

ಪುನಃ ಶ್ರೀರಾಮನನ್ನು ಕುರಿತು ವಸಿಷ್ಠರು ಹೇಳಲುಪಕ್ರಮಿಸಿದರು.

ವತ್ಸ! ರಾಮ! ನಾನು ಹಿಂದೆ ಹೇಳಿದ ರೀತಿಯಾಗಿ, ಪೌರುಷವನ್ನು ಬಿಟ್ಟು ಬೇರೆಯಾದ ದೈವವೇ ಇಲ್ಲ; ಆದಕಾರಣ ಈ ದೈವವೆಂಬುದನ್ನು ದೂರವಾಗಿ ಬಿಟ್ಟುಬಿಟ್ಟು, ಸತ್ಸಹವಾಸಸಚ್ಛಾಸ್ತ್ರಗಳಿಂದ ಬಲಾತ್ಕಾರಪೂರ್ವಕವಾಗಿ ಜೀವನನ್ನು ಸಂಸಾರಸಾಗರದಿಂದ ದಾಟಿಸಬೇಕು ॥೧॥

ಮುಖ್ಯವಾಗಿ ನಮ್ಮ ಪ್ರಯತ್ನವು ಹೇಗೆಹೇಗೆ ಆಗುವುದೋ, ಅಷ್ಟುಬೇಗನೆ, ಫಲಪ್ರಾಪ್ತಿಯಾಗುವುದು; ಹೀಗಿರುವುದರಿಂದ ಎಲ್ಲೆಲ್ಲಿ ನೋಡಿದರೂ ಪೌರುಷವೊಂದೇ ಇರುವುದು. ಇದನ್ನೇ ದೈವವೆಂದು ಕರೆಯುತಕ್ಕ ಪಕ್ಷದಲ್ಲಿ, ಹಾಗೆಯೇ ಆಗಲಿ. ಅಂತು ಪದಾರ್ಥವೊಂದೇ ಆಯಿತಲ್ಲವೆ! ನಾಮಭೇದದಿಂದ ಬಾಧೆಯೇನು? ಹೇಗಾದರೂ—ಪ್ರಯತ್ನವನ್ನೇನೋ ಮಾಡಿಯೇ ತೀರಬೇಕಾಯಿತು ॥೨॥

ದುಃಖಬಂದಕಾಲದಲ್ಲಿ ದುಃಖದಿಂದ 'ಹಾ! ಕಷ್ಟ!' ಎಂದು ಹೇಗೆ ಹೇಳುವರೋ, ಹಾಗೆಯೇ 'ಹಾ! ಕಷ್ಟ!' ಎಂಬ ಶಬ್ದಕ್ಕೆ ಪರ್ಯಾಯಪದವಾಗಿ 'ಹಾ! ದೈವ!' ಎಂಬುದನ್ನೂ ಹೇಳುವರು. ಇಷ್ಟೇ ಹೊರತು, ದೈವವೆಂಬುದು ಬೇರೆಯಾದ ಪದಾರ್ಥವಲ್ಲ ॥೩॥

ಪೂರ್ವಜನ್ಮದಲ್ಲಿ ನಾವು ಮಾಡಿದ ಕರ್ಮ ಹೊರತು ಬೇರೆಯಾದ ದೈವವೆಂಬುದು ಇಲ್ಲವೇ ಇಲ್ಲ, ಬಲಿಷ್ಠನಾದವನು ಬಾಲಕನನ್ನು ಗೆಲ್ಲುವಂತೆ, ಈ ಪ್ರಾಕ್ತನ ಕರ್ಮವನ್ನು ಈಗಿನ ಕರ್ಮದಿಂದ ಜಯಿಸುವುದು ಸಾಧ್ಯವು ॥೪॥

ಹ್ಯಸ್ತನೋ ದುಷ್ಟ ಆಚಾರಃ ಅಚಾರೇಣಾದ್ಯ ಚಾರುಣಾ ।
ಯಥಾಶು ಶುಭತಾಮೇತಿ ಪ್ರಾಕ್ತನಂ ಕರ್ಮ ತತ್ ತಥಾ ॥೫॥
ತಜ್ಜಯಾಯ ಯತನ್ತೇ ಯೇ ನ ಲೋಭಲವಲಮ್ಪಟಾಃ ।
ತೇ ದೀನಾಃ ಪ್ರಾಕೃತಾಮೂಢಾಃ ಸ್ಥಿತಾ ದೈವಪರಾಯಣಾಃ ॥೬॥
ಪೌರುಷೇಣ ಕೃತಂ ಕರ್ಮ ದೈವಾದ್ಯದಭಿನಶ್ಯತಿ ।
ತತ್ರ ನಾಶಯಿತುರ್ಜ್ಞೇಯಂ ಪೌರುಷಂ ಬಲವತ್ತರಮ್ ॥೭॥
ಯದೇಕವೃನ್ತಫಲಯೋಃ ಅಥೈಕಂ ಶೂನ್ಯಕೋಟರಮ್ ।
ತತ್ರ ಪ್ರಯತ್ನಃ ಸ್ಫುರಿತಃ ತಥಾ [1]ತದ್ರಸಸಂವಿದಃ ॥೮॥
ಯತ್ ಪ್ರಯಾನ್ತಿ ಜಗದ್ಭಾವಾಃ ಸಂಸಿದ್ಧಾ ಅಪಿ ಸಂಕ್ಷಯಮ್ ।
ಕ್ಷಯಕಾರಕಯತ್ನಸ್ಯ ಹ್ಯತ್ರ ಜ್ಞೇಯಂ ಮಹದ್ಬಲಮ್ ॥೯॥
ದ್ವೌ ಹುಡಾವಿವ ಯುಧ್ಯೇತೇ ಪುರುಷಾರ್ಥೌ ಪರಸ್ಪರಮ್ ।
ಯ ಏವ ಬಲವಾಂಸ್ತತ್ರ ಸ ಏವ ಜಯತಿ ಕ್ಷಣಾತ್ ॥೧೦॥

ನಿನ್ನೆಯದಿವಸ ಯಾವುದಾದರೊಂದು ದುರಾಚಾರವು ನಡೆದಿದ್ದರೆ, ಅದು ಈ ದಿವಸದ ಸದಾಚಾರದಿಂದ ಬೇಗನೆ ಶುಭವಾಗುವುದಿಲ್ಲವೆ! ಹಾಗೆಯೇ ಹಿಂದಿನ ಕರ್ಮವೂ ಈಗಿನ ಕರ್ಮದಿಂದ ಶುಭವಾಗುವುದು ॥೫॥

ಯಾವ ಮನುಷ್ಯರು ಸ್ವಲ್ಪವಾದ ವಿಷಯಸುಖಲೋಭದಲ್ಲಿ ಸಿಕ್ಕಿಕೊಂಡು, ಆ ಪ್ರಾಕ್ತನ ಕರ್ಮವನ್ನು ಜಯಿಸುವುದಕ್ಕೆ ಪ್ರಯತ್ನಪಡುವುದಿಲ್ಲವೋ, ಅವರು ಕೇವಲ ದೀನಾತ್ಮರು; ಅವರು ಪಾಮರರು; ಮೂಢರಾದ ಅವರೇ ದೈವವನ್ನು ನಂಬಿ ಕುಳಿತಿರುವರು॥೬॥

ಕೇವಲ ಪೌರುಷದಿಂದ ಮಾಡಿದ ಕರ್ಮವೂ ಕೂಡ, ದೈವದಿಂದ ನಾಶಹೊಂದುವ ಸಂದರ್ಭದಲ್ಲಿ, ಆಗ ಆ ಕೆಲಸವನ್ನು ನಾಶಪಡಿಸಿದವನ ಪೌರುಷವು ಬಲವತ್ತರವಾಗಿತ್ತೆಂದು ತಿಳಿಯಬೇಕು ॥೭॥

ದೈವಕ್ಕೆ ಪ್ರಾಬಲ್ಯವನ್ನು ಹೇಳತಕ್ಕವರು, ಒಂದೇ ತೊಟ್ಟಿನಲ್ಲಿರುವ ಎರಡುಹಣ್ಣುಗಳಲ್ಲಿ—ಒಂದು ರಸವತ್ತಾಗಿಯೂ ಮತ್ತೊಂದು ತಿರುಳಿಲ್ಲದುದಾಗಿಯೂ ಆಗುವುದನ್ನು ದೃಷ್ಟಾಂತವಾಗಿ ಹೇಳಿ, ದೈವವೇ ಪ್ರಬಲವೆನ್ನುವರಲ್ಲವೆ! ಹೀಗೆ ಆ ಯೆರಡು ಹಣ್ಣುಗಳಲ್ಲಿ ಒಂದುಮಾತ್ರ ತಿರುಳಿಲ್ಲದಂತಾಗುವುದಕ್ಕೆ, ಅದರ ರಸವನ್ನು ಕುಡಿದ ಹುಳು ಗಾಳಿ ಮುಂತಾದುವುಗಳ ಪ್ರಯತ್ನವಧಿಕವಾಗಿರುವುದೇ ಕಾರಣವು ॥೮॥

ಜಗತ್ತಿನಲ್ಲೆಲ್ಲ ಪ್ರಸಿದ್ಧವಾಗಿ ಚೆನ್ನಾಗಿ ಸಿದ್ಧವಾಗಿದ್ದ ಪದಾರ್ಥಗಳೂ ಕೂಡ ನಾಶಹೊಂದುವುವಲ್ಲವೆ! ಆ ಸಂದರ್ಭದಲ್ಲಿ ನಾಶಮಾಡತಕ್ಕವನ ಪ್ರಯತ್ನವು ಬಹು ಬಲಿಷ್ಠವಾಗಿತ್ತೆಂದು ತಿಳಿಯಬೇಕು ॥೯॥

ಹಿಂದೆ ಹೇಳಿದಂತೆ ಎರಡು ಪ್ರಯತ್ನಗಳೂ ಎರಡು ಟಗರುಗಳಂತೆ ಪರಸ್ಪರವಾಗಿ ಯುದ್ಧಮಾಡುವುವು; ಅವುಗಳಲ್ಲಿ ಯಾವುದು ಬಲಿಷ್ಠವಾಗಿರುವುದೋ ಅದೇ ಬೇಗನೆ ಗೆಲ್ಲುವುದು ॥೧೦॥

---

[1] ತದ್ರಸಂ ಸಂವೇತ್ತಿ = ಉಪಭುಂಕ್ತೇ. ಕೀಟಾದಿರಿತ್ಯರ್ಥಃ.

ಭಿಕ್ಷುಕೋ ಮಙ್ಗಳೇಭೇನ ನೃಪೋ ಯತ್ ಕ್ರಿಯತೇ ಬಲಾತ್ ।
ತದಮಾತ್ಯೇಭಪೌರಾಣಾಂ ಪ್ರಯತ್ನಸ್ಯ ಬಲಂ ಮಹತ್ ॥೧೧॥
ಪೌರುಷೇಣಾನ್ನಮಾಕ್ರಮ್ಯ ಯಥಾ ದನ್ತೇನ ಚೂರ್ಣ್ಯತೇ ।
ಅನ್ಯಃ ಪೌರುಷಮಾಶ್ರಿತ್ಯ ತಥಾ ಶೂರೇಣ ಚೂರ್ಣ್ಯತೇ ॥೧೨॥
ಅನ್ನಭೂತಾಹಿ ಮಹತಾಂ ಲಘವೋ ಯತ್ನಶಾಲಿನಾಮ್ ।
ಯಥೇಷ್ಟಂ ವಿನಿಯೋಜ್ಯನ್ತೇ ತೇನ ಕರ್ಮಸು ಲೋಷ್ಟವತ್ ॥೧೩॥
ಶಕ್ತಸ್ಯ ಪೌರುಷಂ ದೃಶ್ಯಂ ಅದೃಶ್ಯಂ ವಾಪಿ ಯದ್ಭವೇತ್ ।
ತದ್ದೈವಮಿತ್ಯಶಕ್ತೇನ ಬುದ್ಧಮಾತ್ಮನ್ಯಬುದ್ಧಿನಾ ॥೧೪॥
ಭೂತಾನಾಂ ಬಲವದ್ಭೂತಂ ಯನ್ನ ದೈವಮಿತಿ ಸ್ಥಿತಮ್ ।

ಭಿಕ್ಷುಕನನ್ನು ಪಟ್ಟದಾನೆಯು ಬಲಾತ್ಕಾರದಿಂದ ದೊರೆಯಾಗಿ ಮಾಡುವುದಾವುದುಂಟೋ, ಅದು—ಮಂತ್ರಿ ಆನೆ ಪಟ್ಟಣಿಗರು—ಇವರು ಮಾಡಿದ ಪ್ರಯತ್ನದ ದೊಡ್ಡ ಫಲವು (೧) ॥೧೧॥

ಹಲ್ಲು ತನ್ನ ಪ್ರಯತ್ನದಿಂದ ಅನ್ನ (ಆಹಾರಪದಾರ್ಥ)ವನ್ನು ಆಕ್ರಮಿಸಿಕೊಂಡು ಹೇಗೆ ಚೂರ್ಣಮಾಡುವುದೋ, ಹಾಗೆ—ಶೂರನಾದವನು ಪೌರುಷವನ್ನಾಶ್ರಯಿಸಿ ಶೌರ್ಯವಿಲ್ಲದವನನ್ನು ಚೂರ್ಣಮಾಡುವನು ॥೧೨॥

ಪ್ರಯತ್ನಶೀಲರಾದ ಮಹಾತ್ಮರಿಗೆ, ಪ್ರಯತ್ನಹೀನರಾದ ಅಲ್ಪಪುರುಷರು ಅನ್ನಭೂತರಾಗುವರು; ಆದಕಾರಣ, ಆ ಪ್ರಯತ್ನಶೀಲರು ಇವರನ್ನು ಮಣ್ಣಿನ ಹೆಂಟೆಯಂತೆ, ತಮಗೆ ಬೇಕಾದ ಕೆಲಸಗಳಲ್ಲಿ ವಿನಿಯೋಗಿಸುವರು ॥೧೩॥

ಶಕ್ತನಾಗಿರತಕ್ಕವನು ಮಾಡಿದ ಪೌರುಷವು, ಕಣ್ಣಿಗೆ ಕಾಣುವುದಾಗಲಿ—ಅಥವಾ ಕಾಣದಿರುವುದಾಗಲಿ—ಯಾವುದಿರುತ್ತದೆಯೋ, ಅದನ್ನೇ—ಬುದ್ಧಿಹೀನನಾದ ಅಶಕ್ತನು ದೈವವೆಂದು ತನ್ನೊಳಗೆ ತಾನೇ ತಿಳಿದುಕೊಂಡಿರುವನು ॥೧೪॥

ಮತ್ತು ಶಕ್ತವಾದ ಪ್ರಾಣಿಗಳಲ್ಲಿಯೂ ಒಂದೊಂದು ಅತಿಬಲಿಷ್ಠವಾಗಿ, ಎಲ್ಲವನ್ನೂ ತನ್ನಧೀನದಲ್ಲಿಟ್ಟುಕೊಂಡಿರುವುದಾವುದುಂಟೋ, ಅದು-ಆ ಪ್ರಾಣಿಗಳ ಪರಸ್ಪರಪ್ರ

---

(೧) ಒಬ್ಬ ದೊರೆಯು ಸತ್ತಾಗ, ಅವನಿಗೆ ಮಕ್ಕಳಿಲ್ಲದೆ ರಾಜ್ಯವನಾಯಕವಾಗುವ ಸ್ಥಿತಿಯುಂಟಾಗಲು, ಮಂತ್ರಿಗಳೂ ಪಟ್ಟಣಿಗರೂ ಯೋಚಿಸಿ, ಪಟ್ಟದಾನೆಯ ಸೊಂಡಿಲಿನಲ್ಲಿ ಪುಷ್ಪಮಾಲಿಕೆಯನ್ನಿಟ್ಟು, ಅದು ಅದನ್ನು ಯಾರಿಗೆ ಹಾಕುವುದೋ—ಅವನೇ ದೊರೆಯಾಗತಕ್ಕವನೆಂದು ನಿಶ್ಚಯಿಸಿ, ಊರಿನಲ್ಲಿದ್ದವರನ್ನೆಲ್ಲ ಸಾಲಾಗಿ ನಿಲ್ಲಿಸಿದಾಗ, ಆ ಆನೆಯು ಒಬ್ಬ ಭಿಕ್ಷುಕನಿಗೆ ಆ ಮಾಲಿಕೆಯನ್ನು ಹಾಕಿಬಿಟ್ಟಕಾರಣ, ಅವನೇ ದೊರೆಯಾದನೆಂದು ಒಂದು ಕಥೆಯುಂಟು. ಇದರಂತೆ ಆ ಭಿಕ್ಷುಕನು ಯಾವ ಪ್ರಯತ್ನವನ್ನೂ ಮಾಡದಿದ್ದರೂ, ಅವನ ದೈವಬಲದಿಂದ ದೊರೆತನವುಂಟಾದಕಾರಣ, ದೈವವೇ ಬಲಿಷ್ಠವೆಂದು ಹೇಳಬೇಕಾಗುವುದು. ಆದರೆ ಅಮಾತ್ಯರೂ ಪೌರರೂ ಆರೀತಿ ನಿಷ್ಕರ್ಷೆಮಾಡದಿದ್ದರೂ, ಆ ಆನೆಯು ಆಕಸ್ಮಿಕವಾಗಿ ಹಾಕಿದ ಆ ಪುಷ್ಪಮಾಲಿಕೆಯನ್ನು ಅವನಿಗೆ ಹಾಕದಯೇ ಇದ್ದರೂ—ಅವನಿಗೆ ದೊರೆತನ ಬರುತಿರಲಿಲ್ಲವಾದಕಾರಣ, ಅವರುಗಳ ಪ್ರಯತ್ನವೇ ಹೆಚ್ಚಾಗಿತ್ತೆಂದು ಭಾವವು.

ತತ್ ತೇಷಾಮಪ್ಯಧಿಷ್ಠಾತೃ ಸತಾಮೇತತ್ ಸ್ಫುಟಂ ಮಿಥಃ ‖೧೫‖
ಶಾಸ್ತ್ರಾಮಾತ್ಯೇಭಪೌರಾಣಾಂ ಅವಿಕಲ್ಪಾ ಸ್ವಭಾವಧೀಃ ।
ಯಾ ಸಾ ಭಿಕ್ಷುಕರಾಜ್ಯಸ್ಯ [1]ಕರ್ತೃ[1] ಧರ್ತೃ ಪ್ರಜಾಸ್ಥಿತೇಃ ‖೧೬‖
ಭಿಕ್ಷುಕೋ ಮಙ್ಗಳೇಭೇನ ನೃಪೋ ಯತ್ ಕ್ರಿಯತೇ ಕ್ವಚಿತ್ ।
ಪ್ರಾಕ್ತನಂ ಪೌರುಷಂ ತತ್ರ ಬಲವದ್ವಾಪಿ ಕಾರಣಮ್ ‖೧೭‖
ಐಹಿಕಃ ಪ್ರಾಕ್ತನಂ ಹನ್ತಿ ಪ್ರಾಕ್ತನೋಽದ್ಯತನಂ ಬಲಾತ್ ।
ಸರ್ವದಾ ಪುರುಷಸ್ಪನ್ದಃ ತತ್ರಾನುದ್ವೇಗವಾನ್ ಜಯೀ ‖೧೮‖
ದ್ವಯೋರದ್ಯತನಸ್ಯೈವ ಪ್ರತ್ಯಕ್ಷಾದ್ಬಲಿತಾ ಭವೇತ್ ।
ದೈವಂ ಜೇತುಂ ಯತೋ ಯತ್ನೈಃ ಬಾಲೋ ಯೂನೇವ ಶಕ್ಯತೇ ‖೧೯‖
ಮೇಘೇನ ನೀಯತೇ ಯದ್ವತ್ ವತ್ಸರೋಪಾರ್ಜಿತಾ ಕೃಷಿಃ ।
ಮೇಘಸ್ಯ ಪುರುಷಾರ್ಥೋಽಸೌ ಜಯತ್ಯಧಿಕಯತ್ನವಾನ್ ‖೨೦‖

ಯತ್ನತಾರತಮ್ಯದಿಂದುಂಟಾದುದೆಂದು ಸ್ಪಷ್ಟವಾಗಿಯೇ ಇರುವುದಲ್ಲದೆ, ದೈವವೆಂದು ತಿಳಿಯಬಾರದು ॥ ೧೫ ॥

ಮತ್ತು, ಹಿಂದೆ ಹೇಳಿದ ಭಿಕ್ಷುಕರಾಜ್ಯಲಾಭದ ಸಂದರ್ಭದಲ್ಲಿ,—ಶಾಸ್ತ್ರ ಅಮಾತ್ಯರು ಗಜ ಪೌರರು-ಇವರೆಲ್ಲರಿಗೂ ಪರಸ್ಪರವಿಕಲ್ಪವಿಲ್ಲದ ಪ್ರೀತಿಪೂರ್ವಕವಾದ ಅಭಿಪ್ರಾಯವೇ ಭಿಕ್ಷುಕನಿಗೆ ರಾಜ್ಯವನ್ನು ಕೊಟ್ಟುದೂ—ಭೂಮಿಯನ್ನು ಪರಿಪಾಲಿಸಿದುದೂ ಆಯ್ತೆಂದು ತಿಳಿಯಬೇಕು. ಅದಲ್ಲದೆ ಆಗ ಯಾರೊಬ್ಬರ ಅಭಿಪ್ರಾಯ ಬದಲಾಗಿದ್ದರೂ ಆ ಕೆಲಸ ನಡೆಯುತ್ತಿರಲಿಲ್ಲ ॥ ೧೬ ॥

ಭಿಕ್ಷುಕನನ್ನು ಪಟ್ಟದಾನೆಯು ದೊರೆಯನ್ನಾಗಿಮಾಡುವ ಸಂದರ್ಭಗಳು ಸರ್ವತ್ರ ಸರ್ವದಾ ಸಾಮಾನ್ಯವಾಗಿ ನಡೆಯತಕ್ಕುದಲ್ಲ; ಎಲ್ಲಿಯೋ ಒಂದುಕಡೆ ಕದಾಚಿತ್ ನಡೆಯತಕ್ಕುದು. ಅಂಥ ಸಂದರ್ಭದಲ್ಲಿ ಒಂದುವೇಳೆ ಪ್ರಬಲವಾದ ಜನ್ಮಾಂತರೀಯಕರ್ಮವು ಕಾರಣವಾಗಿದ್ದರೂ ಇರಬಹುದು ॥ ೧೭ ॥

ಆದರೂ ಈ ಜನ್ಮದ ಪುರುಷಕಾರವು ಹಿಂದಿನ ಕರ್ಮವನ್ನೂ ಹಿಂದಿನ ಕರ್ಮವು ಈಗಿನ ಕರ್ಮವನ್ನೂ ಯಾವಾಗಲೂ ಗೆದ್ದೇಗೆಲ್ಲುವುವು. ಆದರೆ ಅವುಗಳಲ್ಲಿ ಯಾವುದು ಕಳವಳವಿಲ್ಲದೆ ಸ್ಥಿರವಾಗಿ ನಿಲ್ಲುವುದೋ, ಅದೇ ಗೆಲ್ಲುವುದು ॥ ೧೮ ॥

ಹೀಗಿದ್ದರೂ,—ಹಿಂದಿನ ಕರ್ಮ ಈಗಿನ ಕರ್ಮ-ಇವೆರಡರ ಮಧ್ಯದಲ್ಲಿ, ಈಗಿನ ಕರ್ಮವೇ ಪ್ರತ್ಯಕ್ಷವಾಗಿ ಬಲಿಷ್ಠವಾಗಿರುವುದು. ಅದೇಕೆಂದರೆ:—ಯೌವನಸ್ಥನು ಬಾಲಕನನ್ನು ಗೆಲ್ಲುವಂತೆ, ಹಿಂದಿನ ಕರ್ಮವನ್ನು ಈಗಿನ ಕರ್ಮವು ಜಯಿಸುವುದು ಸಾಧ್ಯವಾಗಿರುವುದು ॥ ೧೯ ॥

ಒಂದು ವರ್ಷವೆಲ್ಲ ಕಷ್ಟಪಟ್ಟು ಸಂಪಾದಿಸಿದ್ದ ಬೆಳೆಯು, ಅತಿವೃಷ್ಟಿಯಾಗಿ ಮೇಘದಿಂದ ಕೊಚ್ಚಿಹೋಗುವುದಲ್ಲವೆ! ಈ ವಿಷಯದಲ್ಲಿ ಮೇಘದ ಪುರುಷಕಾರವು ಅಧಿಕಯತ್ನವುಳ್ಳದಾಗಿ ಜಯಹೊಂದಿತೆಂದು ತಿಳಿಯಬೇಕು ॥ ೨೦ ॥

---

1 ಸಾಮಾನ್ಯೇ ನಪುಂಸಕಮ್.

ಕ್ರಮೇಣೋಪಾರ್ಜಿತೇಽಪ್ಯರ್ಥೇ ನಷ್ಟೇ ಕಾರ್ಯಾ ನ ಖೇದಿತಾ |
ನ ಬಲಂ ಯತ್ರ ಮೇ ಶಕ್ತಂ ತತ್ರ ಕಾ ಪರಿದೇವನಾ ||೨೧||
ಯನ್ನ ಶಕ್ನೋಮಿ ತಸ್ಯಾರ್ಥೇ ಯದಿ ದುಃಖಂ ಕರೋಮ್ಯಹಮ್ |
ತದಮಾರಿತಮೃತ್ಯೋರ್ಮೇ ಯುಕ್ತಂ ಪ್ರತ್ಯಹರೋದನಮ್ ||೨೨||
ದೇಶಕಾಲಕ್ರಿಯಾದ್ರವ್ಯವಶತೋ ವಿಸ್ಫುರನ್ತ್ಯಮೀ |
ಸರ್ವ ಏವ ಜಗದ್ಭಾವಾಃ ಜಯತ್ಯಧಿಕಯತ್ನವಾನ್ ||೨೩||
ತಸ್ಮಾತ್ ಪೌರುಷಮಾಶ್ರಿತ್ಯ ಸಚ್ಛಾಸ್ತ್ರೈಃ ಸತ್ಸಮಾಗಮೈಃ |
ಪ್ರಜ್ಞಾಮಮಲತಾಂ ನೀತ್ವಾ ಸಂಸಾರಜಲಧಿಂ ತರೇತ್ ||೨೪||
ಪ್ರಾಕ್ತನಶ್ಚೈಹಿಕಶ್ಚೇಮೌ ಪುರುಷಾರ್ಥೌ ಫಲದ್ರುಮೌ |
ಸಂಜಾತೌ ಪುರುಷಾರಣ್ಯೇ ಜಯತ್ಯಭ್ಯಧಿಕಸ್ತಯೋಃ ||೨೫||
ಕರ್ಮ ಯಃ ಪ್ರಾಕ್ತನಂ ತುಚ್ಛಂ ನ ನಿಹನ್ತಿ ಶುಭೇಹಿತೈಃ |
ಅಜ್ಞೋ ಜನ್ತುರನೀಶೋಽಸೌ ಆತ್ಮನಃ ಸುಖದುಃಖಯೋಃ ||೨೬||
ಈಶ್ವರಪ್ರೇರಿತೋ ಗಚ್ಛೇತ್ ಸ್ವರ್ಗಂ ನರಕಮೇವ ವಾ |
ಸ ಸದೈವ ಪರಾಧೀನಃ ಪಶುರೇವ ನ ಸಂಶಯಃ ||೨೭||

ಧರ್ಮಮಾರ್ಗದಿಂದ ಕ್ರಮವಾಗಿ ಸಂಪಾದಿಸಲ್ಪಟ್ಟ ದ್ರವ್ಯವು ನಾಶಹೊಂದಿದರೂ
ಕೂಡ, ಖೇದಪಡಬಾರದು ; ಯಾವ ವಿಷಯದಲ್ಲಿ ನಮ್ಮ ಬಲಕ್ಕೆ ಶಕ್ತಿ ಸಾಲದೋ, ಆ ವಿ
ಷಯದಲ್ಲಿ ವ್ಯಸನವೇನು ? ॥ ೨೧ ॥

ಯಾವುದನ್ನು ಮಾಡಲು ನಮಗೆ ಶಕ್ತಿಯಿಲ್ಲವೋ, ಆ ವಿಷಯದಲ್ಲಿ ನಾವು ದುಃಖ
ಪಡುವಪಕ್ಷದಲ್ಲಿ, ಮೃತ್ಯುವನ್ನು ಸಾಯಿಸದಿರುವುದರಿಂದ ನಾವು ಪ್ರತಿದಿನವೂ ಅಳಬೇಕಾ
ದುದೂ ಯುಕ್ತವಾಗುವುದು ॥೨೨॥

ಈ ಪ್ರಪಂಚದಲ್ಲಿರುವ ಸಮಸ್ತಪದಾರ್ಥಗಳೂ ಕೂಡ,-ದೇಶ ಕಾಲ ಕರ್ಮ ವಸ್ತು-
ಇವುಗಳಿಗನುಗುಣವಾಗಿ ವ್ಯವಸಾಯಮಾಡುವುವು ; ಅದರಲ್ಲಿ ಪ್ರಯತ್ನವಧಿಕವಾದುದ
ಗೆಲ್ಲುವುದು ॥೨೩॥

ಆದಕಾರಣ, ಪುರುಷಪ್ರಯತ್ನವನ್ನಾಶ್ರಯಿಸಿ, ಸಚ್ಛಾಸ್ತ್ರಗಳಿಂದಲೂ ಸತ್ಸಹವಾಸಗ
ಳಿಂದಲೂ ಪ್ರಜ್ಞೆಯನ್ನು ನಿರ್ಮಲಪಡಿಸಿಕೊಂಡು, ಸಂಸಾರವೆಂಬ ಸಮುದ್ರವನ್ನು ದಾಟ
ಬೇಕು ॥೨೪॥

ಪುರುಷನೆಂಬ ಅರಣ್ಯದಲ್ಲಿ, ಪ್ರಾಕ್ತನ ಕರ್ಮ ಐಹಿಕಕರ್ಮಗಳೆಂಬ ಈಯೆರಡು ಫ
ವತ್ತಾದ ವೃಕ್ಷಗಳು ಹುಟ್ಟಿರುವುವು ; ಅವುಗಳಲ್ಲಿ ಯಾವುದು ಎತ್ತರವಾಗಿ ಬೆಳೆಯುವುದೋ
ಅದೇ ಗೆಲ್ಲುವುದು ॥೨೫॥

ಯಾವನು ಪುರಾತನವಾದ ದುಷ್ಕರ್ಮವನ್ನು ತನ್ನ ಸತ್ಕರ್ಮಗಳಿಂದ ನಾಶಪಡಿಸುವು
ಲ್ಲವೋ, ಅಂಥ ಮೂಢನು – ತನ್ನ ಸುಖದುಃಖಗಳಲ್ಲಿಯೂ ತನಗೆ ಸ್ವಾತಂತ್ರ್ಯವಿಲ್ಲದೆ ಅಲ್ಪ
ಪ್ರಾಣಿಯೆನ್ನಿಸುವನು ॥೨೬॥

ಯಾವನು ಈಶ್ವರಪ್ರೇರಣಾನುಗುಣವಾಗಿ ಸ್ವರ್ಗವನ್ನೋ ನರಕವನ್ನೋ ಹೊಂದುವ
ನೋ, ಸರ್ವದಾ ಪರಾಧೀನನಾಗಿಯೇ ಬಾಳುವ ಅವನು ಪಶುವೇ ಆಹುದು; ಸಂಶಯವಿಲ್ಲ

ಯಸ್ತೂದಾರಚಮತ್ಕಾರಃ ಸದಾಚಾರವಿಹಾರವಾನ್ |
ಸ ನಿರ್ಯಾತಿ ಜಗನ್ಮೋಹಾತ್ ಮೃಗೇನ್ದ್ರಃ ಪಞ್ಜರಾದಿವ ||೨೮||
ಕಶ್ಚಿನ್ಮಾಂ ಪ್ರೇರಯತ್ಯೇವಂ ಇತ್ಯನರ್ಥಕುಕಲ್ಪನೇ |
ಯಃ ಸ್ಥಿತೋ ದೃಷ್ಟಮುತ್ಸೃಜ್ಯ ಸ ತ್ಯಾಜ್ಯೋ ದೂರತೋಧಮಃ ||೨೯||
ವ್ಯವಹಾರಸಹಸ್ರಾಣಿ ಯಾನ್ಯುಪಾಯಾನ್ತಿ ಯಾನ್ತಿ ಚ |
ಯಥಾಶಾಸ್ತ್ರಂ ವಿಹರ್ತವ್ಯಂ ತೇಷು ತ್ಯಕ್ತ್ವಾ ಸುಖಾಸುಖೇ ||೩೦||
ಯಥಾಶಾಸ್ತ್ರಮನುಚ್ಛಿನ್ನಾಂ ಮರ್ಯಾದಾಂ ಸ್ವಾಮನುಜ್ಝತಃ |
ಉಪತಿಷ್ಠನ್ತಿ ಸರ್ವಾಣಿ ರತ್ನಾನ್ಯಮ್ಬುನಿಧಾವಿವ ||೩೧||
ಸ್ವಾರ್ಥಪ್ರಾಪಕಕಾರ್ಯೈಕಪ್ರಯತ್ನಪರತಾ ಬುಧೈಃ |
ಪ್ರೋಕ್ತಾ ಪೌರುಷಶಬ್ದೇನ ಸಾ ಸಿದ್ಧ್ಯೈ ಶಾಸ್ತ್ರಯನ್ತ್ರಿತಾ ||೩೨||
ಕ್ರಿಯಯಾ ಸ್ಪನ್ದಧರ್ಮಿಣ್ಯಾ ಸ್ವಾರ್ಥಸಾಧಕತಾ [1]ಸ್ವಯಮ್ |
ಸಾಧುಸಙ್ಗಮಸಚ್ಛಾಸ್ತ್ರತೀಕ್ಷ್ಣಯೋನ್ನೀಯತೇ[2] ಧಿಯಾ ||೩೩||

ಉತ್ತಮವಾದ ಕಾರ್ಯಚಾತುರ್ಯವುಳ್ಳ ಯಾವ ಮನುಷ್ಯನಾದರೆ ಸದಾಚಾರಶೀಲನಾಗಿರುವನೋ, ಅವನು—ಸಿಂಹವು ಪಂಜರದಿಂದ ಹೊರಗೆ ಹಾರಿಹೋಗುವಂತೆ--ಜಗತ್ತೆಂಬ ಅಜ್ಞಾನಾವರಣದ ದೆಸೆಯಿಂದ ತಪ್ಪಿಸಿಕೊಂಡು ಹೋಗುವನು ॥ ೨೮॥

ಯಾವನು, ಪ್ರತ್ಯಕ್ಷದೃಷ್ಟವಾದ ಪುರುಷಕಾರವನ್ನು ಪರಿತ್ಯಜಿಸಿ, ಯಾವನೋ ಒಬ್ಬನು ನನ್ನನ್ನು ಪ್ರೇರಿಸುವನೆಂದು ಅನರ್ಥವನ್ನು ಕಲ್ಪಿಸಿಕೊಂಡು ಕುಳಿತಿರುವನೋ, ಆ ಅಧಮನನ್ನು ದೂರವಾಗಿ ಬಿಟ್ಟುಬಿಡಬೇಕು ॥೨೯॥

ಈ ಪ್ರಾಪಂಚಿಕವಾದ ಯಾವ ಸಾವಿರಾರು ವ್ಯವಹಾರಗಳು ಕೈಗೆ ಬರುತಲೂ ಹೋಗುತಲೂ ಇರುವುವೋ, ಅವುಗಳಲ್ಲಿ ಸುಖದುಃಖಸಂಬಂಧಗಳನ್ನು ಬಿಟ್ಟುಬಿಟ್ಟು, ಯಥಾಶಾಸ್ತ್ರನಿಯಮವಾಗಿ ಆಚರಣೆಯಿಟ್ಟುಕೊಂಡಿರಬೇಕು ॥ ೩೦॥

ಈ ರೀತಿಯಾಗಿ ಶಾಸ್ತ್ರನಿಯಮದಂತೆ ಅವಿಚ್ಛಿನ್ನವಾದ ತನ್ನ ಸದಾಚಾರವನ್ನು ಬಿಡದಿರತಕ್ಕವನಿಗೆ, ಸರ್ವರತ್ನಗಳೂ ಸಮುದ್ರದಲ್ಲಿರುವಂತೆ ಸರ್ವಶ್ರೇಷ್ಠವಸ್ತುಗಳೂ ತಾವಾಗಿ ಬಂದುಸೇರುವುವು ॥ ೩೧॥

ತನ್ನ ಉದ್ದಿಷ್ಟಫಲವನ್ನು ಕೈಗೂಡಿಸುವ ಪ್ರಯತ್ನದಲ್ಲಿ ನಿರತನಾಗಿರುವಿಕೆಯೇ ಪ್ರಾಜ್ಞರಿಂದ ಪೌರುಷವೆಂದು ಹೇಳಲ್ಪಡುವುದು; ಇದು ಶಾಸ್ತ್ರನಿಯಮಕ್ಕೊಳಪಟ್ಟಿದ್ದರೆ ಕಾರ್ಯಸಿದ್ಧಿಹೇತುವಾಗುವುದು ॥ ೩೨ ॥

ತನ್ನ ಅವಯವಚಲನರೂಪವಾದ ಕರ್ಮದಿಂದ, ಸತ್ಪುರುಷಸಮಾಗಮ ಸಚ್ಛಾಸ್ತ್ರಾಭ್ಯಾಸಗಳನ್ನು ಸಂಪಾದಿಸಿ, ಬಳಿಕ ಕುಶಲವಾದ ಜ್ಞಾನದಿಂದ ಆತ್ಮೋದ್ಧಾರಮಾಡಿಕೊಳ್ಳುವುದಾವುದುಂಟೋ, ಅದೇ ಸ್ವಾರ್ಥಸಾಧನೆಯೆನ್ನಿಸುವುದು ॥ ೩೩ ॥

---

1 ಸ್ವಯಮ್—ಆತ್ಮೇತ್ಯರ್ಥಃ.

2 ಉನ್ನೀಯತಇತಿ ಯತ್, ಸಾ ಸ್ವಾರ್ಥಸಾಧಕತೇತಿ ಅಧ್ಯಾಹೃತ್ಯ ಯೋಜನೀಯಮ್.

ಅನನ್ತಂ ಸಮತಾನನ್ದಂ ಪರಮಾರ್ಥಂ ವಿದುರ್ಬುಧಾಃ ।
ಸ ಯೇಭ್ಯಃ ಪ್ರಾಪ್ಯತೇ ನಿತ್ಯಂ ತೇ ಸೇವ್ಯಾಃ ಶಾಸ್ತ್ರಸಾಧವಃ ॥೨೪॥
ದೇವಲೋಕಾದಿಹಾಗತ್ಯ[1] ಲೋಕದ್ವಯಹಿತಂ ಭವೇತ್ ।
ಪ್ರಾಕ್ತನಂ ಪೌರುಷಂ ತದ್ವೈ ದೈವಶಬ್ದೇನ ಕಥ್ಯತೇ ।
ತದ್ಯುಕ್ತಮೇತದೇತಸ್ಮಿನ್ ನಾಸ್ತಿ[2] ನಾಸವದಾಮಹೇ ॥೨೫॥
ಮೂಢೈಃ ಪ್ರಕಲ್ಪಿತಂ ದೈವಂ ಮನ್ಯನ್ತೇ ಯೇ ಕ್ಷಯಂ ಗತಾಃ ।
ನಿತ್ಯಂ ಸ್ವಪೌರುಷಾದೇವ ಲೋಕದ್ವಯಹಿತಂ ಭವೇತ್ ॥೨೬॥
[3]ಹ್ಯಸ್ತನೀ ದುಷ್ಕ್ರಿಯಾಭ್ಯೇತಿ ಶೋಭಾಂ ಸತ್ಕ್ರಿಯಯಾ ಯಥಾ ।
ಅದ್ಯೈವಂ ಪ್ರಾಕ್ತನೀ ತಸ್ಮಾತ್ ಯತ್ನಾದ್ಯಃ ಕಾರ್ಯವಾನ್ ಭವೇತ್ ॥೨೭॥
ಕರಾಮಲಕವದ್ದೃಷ್ಟಂ ಪೌರುಷಾದೇವ ತತ್ಫಲಮ್ ।

ಆ ಸಚ್ಛಾಸ್ತ್ರಗಳೂ ಸಜ್ಜನರೂ ಯಾರೆಂದರೆ:—ಅಜ್ಞಾನಜನ್ಯವಾದ ಅಹಂಕಾರಮಮಕಾರಮೂಲಕವಾದ ವೈಷಮ್ಯವನ್ನು ಬಿಟ್ಟು-ಸರ್ವತ್ರ ಸಮತಾಜ್ಞಾನವನ್ನು ಸಂಪಾದಿಸಿ-ಆದರಿಂದ ಶಾಶ್ವತವಾದ ಆನಂದವನ್ನು ಪಡೆಯುವುದೇ ಪರಮಪ್ರಯೋಜನವೆಂದು ಶಾಸ್ತ್ರಜ್ಞರು ತಿಳಿದಿರುವರು. ಇಂಥ ಆನಂದವು ಯಾವ ಶಾಸ್ತ್ರಗಳ ದೆಸೆಯಿಂದಲೂ ಯಾವ ಜನರದೆಸೆಯಿಂದಲೂ ನಮಗೆ ಸಿಕ್ಕುವುವೋ, ಅವುಗಳೇ ಸಚ್ಛಾಸ್ತ್ರಗಳು; ಅವರೇ ಸಾಧುಗಳು. ಇಂಥ ಶಾಸ್ತ್ರಗಳನ್ನೂ ಸಾಧುಗಳನ್ನೂ ಸರ್ವದಾ ಸೇವಿಸಬೇಕು ॥ ೨೪ ॥

ದೇವಲೋಕದಲ್ಲಿ ಸುಖಾನುಭವಮಾಡಿ ಅಲ್ಲಿಂದ ಮತ್ತೆ ಭೂಲೋಕಕ್ಕೆ ಬಂದಿರತಕ್ಕವನಿಗೆ, ಭುಕ್ತಾವಶಿಷ್ಟವಾಗಿ ಲೋಕದ್ವಯಕ್ಕೂ ಹಿತವಾಗಿರುವ ಯಾವ ಪೂರ್ವಜನ್ಮಕರ್ಮವಿರುವುದೋ, ಅದನ್ನೇ ದೈವವೆಂದು ಹೇಳುವರು. ಇದೂ ಪೌರುಷವಲ್ಲದೆ ಬೇರೆಯಾಗಲಿಲ್ಲ. ಆದಕಾರಣ ಇದು ಯುಕ್ತವೇ ಆಹುದು; ಇದರಲ್ಲಿ ಸಂಶಯವಿಲ್ಲ; ಇದಕ್ಕೆ ಬಾಧಕವಾದ ಯಾವ ಮಾತನ್ನೂ ಹೇಳಲಾರೆವು ॥ ೨೫ ॥

ಆದಕಾರಣ, ಮೂಢರಿಂದ ಕಲ್ಪಿಸಲ್ಪಟ್ಟಿರುವ ದೈವವನ್ನು ಯಾರು ನಂಬುವರೋ, ಅವರು ನಾಶವನ್ನೇ ಹೊಂದುವರು; ಎಂದಿಗೂ ತಮ್ಮ ಪೌರುಷದಿಂದಲೇ ಇಹಪರಗಳಲ್ಲಿ ಹಿತವುಂಟಾಗುವುದು ॥೨೬॥

ನಿನ್ನೆಯ ದುರಾಚಾರವು ಈ ಹೊತ್ತಿನ ಸದಾಚಾರದಿಂದ ಹೇಗೆ ಶುಭವಾಗುವುದೋ, ಹಾಗೆ ಹಿಂದಣ ಕರ್ಮವು ಈಗಿನ ಕರ್ಮದಿಂದ ಶುಭವಾಗುವುದು. ಆದಕಾರಣ, ಯಾವನು ಪ್ರಯತ್ನಪೂರ್ವಕವಾಗಿ ಕರ್ಮನಿಷ್ಠನಾಗುವನೋ, ಅವನಿಗೆ ಆ ಕರ್ಮದ ಫಲವು—ಪೌರುಷದಿಂದಲೇ ಸಿದ್ಧಿಸುವ ಬಗೆಯು,—ಕರತಲಾಮಲಕವಾಗಿ ಕಾಣುತಿರುವುದು. ಹೀಗಿದ್ದರೂ

---

1 ಸ್ಥಿತಸ್ಯೇತಿ ಶೇಷಃ.

2 ಸನ್ದೇಹಇತಿ ಶೇಷಃ.

3 ದ್ವಾಭ್ಯಾಂ ಯುಗ್ಮಮ್.

ಮೂಢಃ ಪ್ರತ್ಯಕ್ಷಮುತ್ಸೃಜ್ಯ ದೈವಮೋಹೇ ನಿಮಜ್ಜತಿ ॥೩೮॥

ಸಕಲಕಾರಣಕಾರ್ಯವಿವರ್ಜಿತಂ ನಿಜವಿಕಲ್ಪಬಲಾದುಪಕಲ್ಪಿತಮ್ ।
ತದನಪೇಕ್ಷ್ಯ ಹಿ ದೈವಮಸನ್ಮಯಂ ಶ್ರಯ ಶುಭಾಶಯ ಪೌರುಷಮಾತ್ಮನಃ ॥೩೯॥

ಶಾಸ್ತ್ರೈಃ [1]ಸದಾಚರವಿಜೃಮ್ಭಿತದೇಶಧರ್ಮೈಃ
ಯತ್ ಕಲ್ಪಿತಂ ಫಲಮತೀವ ಚಿರಪ್ರರೂಢಮ್ ।
ತಸ್ಮಿನ್ ಹೃದಿ ಸ್ಫುರತಿ [2]ಚೋಪನಮೇತಿ ಚಿತ್ತಂ
ಅಙ್ಗಾವಲೀ ತದನು ಪೌರುಷಮೇತದಾಹುಃ ॥ ೪೦ ॥

ಬುದ್ಧ್ವೈವ ಪೌರುಷಫಲಂ ಪುರುಷತ್ವಮೇತತ್
ಆತ್ಮಪ್ರಯತ್ನಪರತೈವ ಸದೈವ ಕಾರ್ಯಾ ।
ನೇಯಾ ತತಃ ಸಫಲತಾಂ ಪರಮಾಮಥಾಸೌ
ಸಚ್ಛಾಸ್ತ್ರಸಾಧುಜನಪಣ್ಡಿತಸೇವನೇನ ॥ ೪೧ ॥

ದೈವಪೌರುಷವಿಚಾರಚಾರುಭಿಶ್ಚೇದಮಾಚರಿತಮಾತ್ಮಪೌರುಷಮ್ ।

ಮೂಢನಾದವನು ಪ್ರತ್ಯಕ್ಷವಾಗಿರುವ ಪುರುಷಕಾರವನ್ನು ಬಿಟ್ಟು, ದೈವವೆಂಬ ಮೋಹದಲ್ಲಿ ಮುಣುಗುವನು ॥೩೭-೩೮॥

ಎಲೈ ಮಂಗಳಹೃದಯನಾದ ರಾಮನೆ! ಆದುದರಿಂದ, ಸಮಸ್ತವಾದ ಕಾರಣಗಳಿಂದಲೂ ಪ್ರಯೋಜನದಿಂದಲೂ ವರ್ಜಿತವಾಗಿದ್ದರೂ—ನಿನ್ನ ಮನೋವಿಕಲ್ಪಬಲದಿಂದ ಕಲ್ಪಿಸಲ್ಪಟ್ಟಿರುವ ಅಸತ್ಯರೂಪವಾದ ದೈವವನ್ನುಪೇಕ್ಷಿಸಿ, ನಿನ್ನ ಪುರುಷಕಾರವನ್ನವಲಂಬಿಸು ॥೩೯॥

ಆಯಾ ದೇಶದಲ್ಲಿದ್ದ ಸತ್ಪುರುಷರು ಆಯಾ ದೇಶಗಳಿಗೆ ಅನುಕೂಲವಾಗಿರುವಂತೆ ಆಚರಣೆಗಳನ್ನು ಮಾಡಿರುವರು; ಇಂಥ ಸದಾಚಾರದಿಂದ ಆಯಾದೇಶಧರ್ಮಗಳು ಚೆನ್ನಾಗಿ ಹಬ್ಬಿರುವುವು; ಇಂಥ ದೇಶಧರ್ಮಗಳನ್ನೆಲ್ಲ ಉಪದೇಶಿಸುವ ಶಾಸ್ತ್ರಗಳು, ಚಿರಕಾಲದಿಂದ ಪ್ರಸಿದ್ಧವಾದ ಯಾವ ಉತ್ತಮ ಫಲವನ್ನು ತೋರಿಸಿರುವುವೋ, ಅದು—ಮನಸ್ಸಿನಲ್ಲಿ ಸ್ಫುರಿಸಿದರೆ, ಆಗ ಚಿತ್ತವು ಫಲಪ್ರಾಪ್ತಿಗಾಗಿ ಪ್ರಯತ್ನಪಡುವುದು; ಬಳಿಕ ಅವಯವಸಮುದಾಯವು ಕೆಲಸಮಾಡುವುದು. ಇದನ್ನೇ ಪೌರುಷವೆಂದು ಹೇಳುವರು ॥೪೦॥

ಆದಕಾರಣ ಮನುಷ್ಯನು ಈ ಪುರುಷಜನ್ಮಕ್ಕೆ ಪೌರುಷವೇ ಫಲವೆಂದು ತಿಳಿದು, ಸರ್ವದಾ ಪ್ರಯತ್ನಪರನಾಗಿಯೇ ಇರಬೇಕು. ಬಳಿಕ, ಸಚ್ಛಾಸ್ತ್ರಸೇವನೆಯಿಂದಲೂ ಸಾಧುಗಳಾದ ಪಂಡಿತರ ಸೇವನೆಯಿಂದಲೂ ಈ ಪ್ರಯತ್ನವನ್ನು ಸಫಲಗೊಳಿಸಬೇಕು ॥

‘ಹೀಗೆ ದೈವಪೌರುಷಗಳ ಸ್ವರೂಪವನ್ನು ವಿಚಾರಮಾಡಿ—ಅದರಿಂದಲೇ ಶ್ರೇಷ್ಠರಾದ ಮಹಾತ್ಮರನೇಕರು—ಈ ತಮ್ಮ ಪೌರುಷವನ್ನೇ ಆಚರಿಸಿರುವುದರಿಂದ, ಇದು ಸರ್ವೋ

---

1 ಆಚರಃ–ಆಚಾರಃ.

2 ಚೋಪನಮ್ = ಚುಪ—ಮನ್ದಾಯಾಂಗತೌ, ಲ್ಯುಟ್. ಚಲನಮಿತ್ಯರ್ಥಃ.

ನಿತ್ಯಮೇವ ಜಯತೀತಿ ಭಾವಿತೈಃ ಕಾರ್ಯ ಆರ್ಯಜನಸೇವಯೋದ್ಯಮಃ ॥ ೪೦ ॥

ಜನ್ಮಪ್ರಬನ್ಧಮಯಮಾಮಯಮೇಷ ಜೀವೋ
ಬುದ್ಧ್ವೈವಹಿಕಂ ಸಹಜಪೌರುಷಮೇವ ಸಿದ್ಧ್ಯೈ ।
ಶಾನ್ತಿಂ ನಯತ್ವವಿತಥೇನ ವರೌಷಧೇನ
ಮೃಷ್ಟೇನ ತುಷ್ಟವರಪಣ್ಡಿತಸೇವಿತೇನ ॥ ೪೧ ॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ದೈವನಿರಾಕರಣಂ
ನಾಮ ಷಷ್ಠಃ ಸರ್ಗಃ.

ತ್ಕೃಷ್ಟವಾಗಿದೆ;' ಎಂಬುದಾಗಿ ಸರ್ವದಾ ಭಾವಿಸಿಕೊಂಡು, ಮನುಷ್ಯರು ಮಹಾತ್ಮರ ಸೇವೆಯಿಂದ ಪ್ರಯತ್ನಮಾಡಬೇಕು ॥ ೪೦ ॥

ಈರೀತಿಯಾಗಿ ಈ ಜೀವನು, ಈ ಜನ್ಮದಲ್ಲಿ ಮಾಡುವ ಸತ್ಯವಾದ ಪೌರುಷವೇ ಸಿದ್ಧಿಹೇತುವೆಂದು ತಿಳಿದು, ತಪ್ಪದೆ ಫಲಕೊಡತಕ್ಕುದಾಗಿಯೂ-ಮಧುರತರವಾಗಿಯೂ-ಸಂತೋಷಯುಕ್ತರಾದ ಪಂಡಿತಶ್ರೇಷ್ಠರಿಂದ ಸೇವಿಸಲ್ಪಟ್ಟುದಾಗಿಯೂ ಇರುವ-ಈ ಪೌರುಷವೆಂಬ ದಿವ್ಯೌಷಧದಿಂದ, ಜನ್ಮಪರಂಪರಾರೂಪವಾದ ರೋಗವನ್ನು ಶಾಂತಿಗೊಳಿಸಬೇಕು ॥ ೪೧ ॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ದೈವನಿರಾಕರಣವೆಂಬ
ಆರನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಸಪ್ತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಪ್ರಾಪ್ಯ ವ್ಯಾಧಿವಿನಿರ್ಮುಕ್ತಂ ದೇಹಮಲ್ಪಾಧಿವೇದನಮ್ |
ತಥಾತ್ಮನಿ ಸಮಾದಧ್ಯಾತ್ ಯಥಾ ಭೂಯೋ ನ ಜಾಯತೇ ||೧||
ದೈವಂ ಪುರುಷಕಾರೇಣ ಯೋ [1] ನಿವರ್ತಿತುಮಿಚ್ಛತಿ |
ಇಹ ವಾಮುತ್ರ ಜಗತಿ ಸ ಸಮ್ಪೂರ್ಣಾಭಿವಾಞ್ಛಿತಃ ||೨||
ಯೇ ಸಮುದ್ಯೋಗಮುತ್ಸೃಜ್ಯ ಸ್ಥಿತಾದೈವಪರಾಯಣಾಃ |
ತೇ ಧರ್ಮಮರ್ಥಂ ಕಾಮಂ ಚ ನಾಶಯನ್ತ್ಯಾತ್ಮವಿದ್ವಿಷಃ || ೩ ||
ಸಂವಿತ್ಸ್ಪನ್ದೋ ಮನಸ್ಸ್ಪನ್ದಃ ಐನ್ದ್ರಿಯಸ್ಪನ್ದಏವ ಚ |
ಏತಾನಿ ಪುರುಷಾರ್ಥಸ್ಯ ರೂಪಾಣ್ಯೇಭ್ಯಃ ಫಲೋದಯಃ ||೪||

ಮುಮುಕ್ಷುವ್ಯವಹಾರ ಪ್ರಕರಣದಲ್ಲಿ ಏಳನೆಯ ಸರ್ಗವು.

——:o:——

ಪೌರುಷೈಕಪ್ರಧಾನತ್ವಂ ಉದಾಹರಣವಿಸ್ತರೈಃ |
ಪ್ರತ್ಯುದಾಹರಣೈಶ್ಚಾತ್ರ ಯುಕ್ತಿಭಿಶ್ಚ ಸಮರ್ಥ್ಯತೇ ||

ಉದಾಹರಣೆಗಳನ್ನು ವಿಶದಪಡಿಸುವುದರಿಂದಲೂ—ಪ್ರತಿಯಾದ ದೃಷ್ಟಾಂತಗಳನ್ನು ಕೊಡುವುದರಿಂದಲೂ—ಇನ್ನೂ ಅನೇಕ ಯುಕ್ತಿಗಳಿಂದಲೂ ಕೂಡ, ಪೌರುಷವೊಂದೇ ಪ್ರಧಾನವೆಂಬುವ ವಿಷಯವು ಈ ಸರ್ಗದಲ್ಲಿ ಸಾಧಿಸಲ್ಪಡುವುದು.

ಪುನಃ ಶ್ರೀರಾಮನನ್ನು ಕುರಿತು ವಸಿಷ್ಠಮುನಿಗಳು ಹೇಳಿದರು.

ಅಯ್ಯಾ! ರಾಮ! ಮನುಷ್ಯನಾಗಿ ಹುಟ್ಟಿದವನು, ವ್ಯಾಧಿರಹಿತವಾಗಿಯೂ ಕದಾಚಿತ್ ಸ್ವಲ್ಪವಾದ ಮನೋವ್ಯಥೆಯುಳ್ಳದಾಗಿಯೂ ಇರುವ ಈ ದೇಹವನ್ನು ಹೊಂದಿದ ಮೇಲೆ, ಮರಳಿ ಜನ್ಮವೆತ್ತದಂತೆ ಚಿತ್ತಸಮಾಧಾನವಾಗಲು ಪ್ರಯತ್ನಪಡಬೇಕು ||೧||

ಯಾವನು ತನ್ನ ಪ್ರಯತ್ನದಿಂದ ದೈವವನ್ನು ಹಿಮ್ಮೆಟ್ಟಲು ಇಚ್ಛಿಸುವನೋ, ಅವನು ಇಹಪರಲೋಕಗಳಲ್ಲಿ ಪರಿಪೂರ್ಣವಾದ ಇಷ್ಟಾರ್ಥವುಳ್ಳವನಾಗಿ ಬಾಳುವನು ||೨||

ಯಾರು ಉತ್ತಮವಾದ ಉದ್ಯೋಗವನ್ನು ಬಿಟ್ಟು ದೈವಾವಲಂಬಿಗಳಾಗಿರುವರೋ, ತಮಗೆ ತಾವೇ ಶತ್ರುಗಳಾದ ಅವರು—ಧರ್ಮ ಅರ್ಥ ಕಾಮ—ಇವೆಲ್ಲವನ್ನೂ ಹಾಳುಮಾಡಿಕೊಳ್ಳುವರು ||೩||

ಜ್ಞಾನವ್ಯಾಪಾರ—ಮನೋವ್ಯಾಪಾರ-ಇಂದ್ರಿಯವ್ಯಾಪಾರ-ಇವುಗಳು ಕ್ರಮವಾಗಿ ಪೌರುಷದ ರೂಪಗಳು ; ಇವುಗಳಿಂದಲೇ ಫಲಪ್ರಾಪ್ತಿಯಾಗುವುದು ||೪||

---

1 ನಿವರ್ತಿತುಮ್ = ನಿವರ್ತಯಿತುಮಿತ್ಯರ್ಥಃ.

ಯಥಾಸಂವೇದನಂ ಚೇತಃ ತಥಾ ತತ್ ಸ್ಪಂದಮೃಚ್ಛತಿ |
ತಥೈವ ಕಾಯಶ್ಚಲತಿ ತಥೈವ ಫಲಭೋಕ್ತೃತಾ ||೫||
ಆಬಾಲಮೇತತ್ ಸಂಸಿದ್ಧಂ ಯತ್ರಯತ್ರ ಯಥಾಯಥಾ |
ದೈವಂ ತು ನ ಕ್ವಚಿದ್ದೃಷ್ಟಂ ಅತೋ ಜಗತಿ ಪೌರುಷಮ್ ||೬||
ಪುರುಷಾರ್ಥೇನ ದೇವಾನಾಂ ಗುರುರೇವ ಬೃಹಸ್ಪತಿಃ |
ಶುಕ್ರೋ ದೈತ್ಯೇಂದ್ರಗುರುತಾಂ ಪುರುಷಾರ್ಥೇನ ಚಾಸ್ಥಿತಃ ||೭||
ದೈನ್ಯದಾರಿದ್ರ್ಯದುಃಖಾರ್ತಾಃ ಅಪಿ ಸಾಧೋ ನರೋತ್ತಮಾಃ |
ಪೌರುಷೇಣೈವ ಯತ್ನೇನ ಯಾತಾದೇವೇಂದ್ರತುಲ್ಯತಾಮ್ ||೮||
ಮಹಾಂತೋ ವಿಭವಾಸ್ವಾದ್ಯೈಃ ನಾನಾಶ್ಚರ್ಯಸಮಾಶ್ರಯಾಃ |
[1]ಪೌರುಷೇಣೈವ ದೋಷೇಣ ನರಕಾತಿಥಿತಾಂ ಗತಾಃ ||೯||
ಭಾವಾಭಾವಸಹಸ್ರೇಷು ದಶಾಸು ವಿವಿಧಾಸು ಚ |
ಸ್ವಪೌರುಷವಶಾದೇವ ನಿರ್ವೃತ್ತಾ ಭೂತಜಾತಯಃ ||೧೦||

ಅದು ಹೇಗೆಂದರೆ:—ನಮ್ಮ ಮನಸ್ಸು ಪ್ರಥಮತಃ ಯಾವವಿಧವಾದ ಜ್ಞಾನವುಳ್ಳುದಾಗುವುದೋ, ಆ ವಿಧವಾಗಿ ವ್ಯಾಪಾರಮಾಡುವುದು ; ಅದಕ್ಕನುಗುಣವಾಗಿಯೇ ನಮ್ಮ ದೇಹವೂ ಕೆಲಸಮಾಡುವುದು ; ಅದಕ್ಕೆ ತಕ್ಕ ಫಲವನ್ನು ನಾವು ಅನುಭವಿಸುವೆವು ||೫||

ಯಾವಯಾವ ಸಂದರ್ಭದಲ್ಲಿ ಹೇಗೆಹೇಗೆ ಪೌರುಷವನ್ನುಪಯೋಗಿಸುವೆವೋ—ಆಯಾ ಸಂದರ್ಭಗಳಲ್ಲಿ ಹಾಗೆಹಾಗೆ ಫಲಪ್ರಾಪ್ತಿಯಾಗುವುದೆಂಬ ಈ ವಿಷಯವು, ಬಾಲಕನ ವರೆಗೂ ಸ್ಪಷ್ಟವಾಗಿ ಸಿದ್ಧವಾಗಿರುವುದು ; ದೈವವಾದರೋ—ಎಲ್ಲಿಯೂ ಕಾಣುವುದಿಲ್ಲ. ಆದಕಾರಣ ಪೌರುಷವೇ ಜಗತ್ತಿನಲ್ಲಿರತಕ್ಕುದು ||೬||

ನಮ್ಮಂತೆಯೇ ಸಾಮಾನ್ಯನಾದ ಬ್ರಾಹ್ಮಣನಾಗಿದ್ದರೂ, ಬೃಹಸ್ಪತಿಯು – ತನ್ನ ಪುರುಷಕಾರದಿಂದಲೇ ದೇವತೆಗಳಿಗೆಲ್ಲ ಗುರುವಾಗಿರುವನು ; ಶುಕ್ರನೂಕೂಡ—ಹೀಗೆಯೇ ಪುರುಷಕಾರದಿಂದ ರಾಕ್ಷಸಶ್ರೇಷ್ಠರಿಗೆಲ್ಲ ಆಚಾರ್ಯಪದವಿಯನ್ನು ಹೊಂದಿರುವನು ||೭||

ಸಾಧುವಾದ ರಾಮನೆ! ದೈನ್ಯದಾರಿದ್ರ್ಯ ದುಃಖಗಳಿಂದ ಪೀಡಿತರಾಗಿದ್ದರೂ ಇನ್ನೂ ಅನೇಕ ಪುರುಷಶ್ರೇಷ್ಠರು ತಮ್ಮ ಪುರುಷಪ್ರಯತ್ನದಿಂದಲೇ ದೇವೇಂದ್ರನಿಗೆ ಸಮಾನವಾದ ಪದವಿಯನ್ನು ಹೊಂದಿರುವರು ||೮||

ಇನ್ನೂ ಅನೇಕರಾದ ನಹುಷ ಮೊದಲಾದ ದೊಡ್ಡವರು, ದಿವ್ಯವಾದ ಸಂಪತ್ತನ್ನನುಭವಿಸಿ, ಅನೇಕವಿಧವಾದ ಆಶ್ಚರ್ಯಗಳಿಗೆ ಆಶ್ರಯಭೂತರಾಗಿ, ಕೊನೆಗೆ ನರಕಭಾಜನರಾದುದೂ ಪೌರುಷದೋಷದಿಂದಲೇ ||೯||

ಇನ್ನೂ ಅನೇಕವಾದ ಪ್ರಾಣಿಸಮುದಾಯಗಳು, ಅನೇಕವೇಳೆ ಸಂಪತ್ತಿರುವಾಗಲೂ ಸಂಪತ್ತಿಲ್ಲದಾಗಲೂ ಇನೂ ನಾನಾವಿಧವಾದ ಅವಸ್ಥೆಗಳಲ್ಲಿಯೂ ಕೂಡ, ತಮ್ಮ ಪೌರುಷ ವಶದಿಂದಲೇ ಸಂಚರಿಸಿರುವುವು ||೧೦||

---

1 ಅನರ್ಥಸ್ಯ ಪ್ರಾಪ್ತಿಃ ಯಸ್ಮಾದಿತಿ ಬಹುವ್ರೀಹಿಃ.

ಶಾಸ್ತ್ರತೋ ಗುರುತಶ್ಚೈವ ಸ್ವತಶ್ಚೇತಿ ತ್ರಿಸಿದ್ಧಯಃ |
ಸರ್ವಸ್ಯ ಪುರುಷಾರ್ಥಸ್ಯ ನ ದೈವಸ್ಯ ಕದಾಚನ ||೧೧||
ಅಶುಭೇಷು ಸಮಾವಿಷ್ಟಂ ಶುಭೇಷ್ವೇವಾವತಾರಯೇತ್ |
ಪ್ರಯತ್ನಾಚ್ಚಿತ್ತಮಿತ್ಯೇಷಃ ಸರ್ವಶಾಸ್ತ್ರಾರ್ಥಸಙ್ಗ್ರಹಃ ||೧೨||
ಯಚ್ಛ್ರೇಯೋ ಯದತುಚ್ಛಂ ಚ ಯದಪಾಯವಿವರ್ಜಿತಮ್ |
ತತ್ತದಾಚರ ಯತ್ನೇನ ಪುತ್ರೇತಿ ಗುರವಃ ಸ್ಥಿತಾಃ ||೧೩||
ಯಥಾಯಥಾ ಪ್ರಯತ್ನೋ ಮೇ ಫಲಮಾಶು ತಥಾತಥಾ |
ಇತ್ಯಹಂ ಪೌರುಷಾದೇವ ಫಲಭಾಙ್ನತು ದೈವತಃ ||೧೪||
ಪೌರುಷಾದ್ದೃಶ್ಯತೇ ಸಿದ್ಧಿಃ ಪೌರುಷಾದ್ಧೀಮತಾಂ ಕ್ರಮಃ |
ದೈವಮಾಶ್ವಾಸನಾಮಾತ್ರಂ ದುಃಖೇ ಪೇಲವಬುದ್ಧಿಷು ||೧೫||
ಪ್ರತ್ಯಕ್ಷಪ್ರಮುಖೈರ್ನಿತ್ಯಂ ಪ್ರಮಾಣೈಃ ಪೌರುಷಕ್ರಮಃ |

ಪ್ರಪಂಚದಲ್ಲಿ ಸಕಲ ವಿಷಯದಲ್ಲಿಯೂ ಪ್ರಯೋಜನ ಸಿದ್ಧಿಯಾಗಬೇಕಾದರೆ-ಶಾಸ್ತ್ರ ಮೂಲಕವಾಗಿಯೂ ಗುರುಮೂಲಕವಾಗಿಯೂ ಆತ್ಮಮೂಲಕವಾಗಿಯೂ ಮೂರುವಿಧ ವಾಗಿ ಆಗುವುದು; ಇದು ಸರ್ವತ್ರ ಪುರುಷಕಾರದ ಸಿದ್ಧಿಯಾಗಿರುವುದಲ್ಲದೆ, ದೈವಿಕವಾಗಿ ಯಾವಾಗಲೂ ಇಲ್ಲ ||೧೧||

ಆದಕಾರಣ, ದುಷ್ಟವಿಷಯಗಳಲ್ಲಿ ಪ್ರವರ್ತಿಸಿರುವ ಮನಸ್ಸನ್ನು, ಪ್ರಯತ್ನದಿಂದ ಉತ್ತಮವಿಷಯಗಳಲ್ಲಿಯೇ ಸೇರಿಸಬೇಕು. ಇದೇ ಸಕಲಶಾಸ್ತ್ರಾರ್ಥಸಂಗ್ರಹವು ||೧೨||

ಯಾವುದು ಶ್ರೇಷ್ಠವಾದುದೋ, ಯಾವುದು ತುಚ್ಛವಲ್ಲದುದೋ, ಯಾವುದು ನಾಶ ರಹಿತವಾದುದೋ, ಅಂಥಂಥ ಕರ್ಮವನ್ನು, ಹೇ! ಪುತ್ರ! ನೀನು ಪ್ರಯತ್ನಪೂರ್ವಕವಾಗಿ ಆಚರಿಸು;-ಎಂದು ಗುರುಗಳು ಅಭಿಪ್ರಾಯಪಡುವರು ||೧೩||

ನನ್ನ ಪ್ರಯತ್ನವೆಷ್ಟೆಷ್ಟುಮಟ್ಟಿಗಾಗುತದೆಯೋ, ಅಷ್ಟಷ್ಟುಮಟ್ಟಿಗೆ ಶೀಘ್ರವಾಗಿ ಫಲಸಿದ್ಧಿಯಾಗುವುದು; ಈರೀತಿಯಾಗಿ ನಾನು ಫಲಹೊಂದಿದುದು ಪೌರುಷದಿಂದಲೇ ಅಲ್ಲದೆ ದೈವದಿಂದಲ್ಲ || ೧೪ ||

ಪೌರುಷದಿಂದಲೇ ಸಕಲಕಾರ್ಯಸಿದ್ಧಿಯೂ ಪ್ರತ್ಯಕ್ಷವಾಗಿರುವುದು; ಪೌರುಷದಿಂದ ಲೇ ಪ್ರಾಜ್ಞರ ಆಚರಣೆಯೆಲ್ಲವೂ ನಡೆಯುತಿರುವುದು. ದೈವವೋ?—ಎಂದರೆ; ಇದು ಮಂದಬುದ್ಧಿಗಳಿಗೆ ದುಃಖಕಾಲದಲ್ಲಿ ಸಮಾಧಾನೋಕ್ತಿಮಾತ್ರವಾದುದು (೧) || ೧೫ ||

ಈ ಲೋಕದಲ್ಲಿ, (೨) ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದಲೂ ಕೂಡ, ದೇ

---

(೧) ಯಾರಿಗಾದರೂ ದುಃಖವು ಪ್ರಾಪ್ತವಾದರೆ, ಆಗ ಅವರಿಗೆ ಸಮಾಧಾನವುಂಟುಮಾಡುವುದಕ್ಕೋಸ್ಕರ,—'ದೈವೇಚ್ಛೆಯನ್ನು ಮೀರುವುದಕ್ಕೆ ಯಾರಿಗೆ ಸಾಧ್ಯವು?' ಇತ್ಯಾದಿರೀತಿಯಾಗಿ ಹೇಳಿ, ಆ ಸಮಯದಲ್ಲಿ ದುಃಖಶಾಂತಿಯುಂಟುಮಾಡುವುದೆಂದು ಭಾವವು.

(೨) ಈ ವಿಷಯವು ಸ್ವಲ್ಪ ಗಹನವಾಗಿ ಕಂಡರೂ ಅತ್ಯಾವಶ್ಯಕವಾದಕಾರಣ ಚೆನ್ನಾಗಿ ಗಮನಿಸಿ ತಿಳಿದುಕೊಳ್ಳಬೇಕು. ಪ್ರಮಾಣವೆಂದರೆ ನಿಶ್ಚಯವನ್ನು ತಿಳಿಯುವುದಕ್ಕೆ ತಕ್ಕ ಸಾಧನವೆಂದರ್ಥವು. ಇದರ ಸಂಖ್ಯೆಯು ಒಂದೊಂದು ಶಾಸ್ತ್ರದಲ್ಲಿ ಒಂದೊಂದು ಬಗೆಯಾಗಿರುವುದು.

ಫಲಿತೋ ದೃಶ್ಯತೇ ಲೋಕೇ ದೇಶಾನ್ತರಗಮಾದಿಕಃ ॥೧೬॥

ಶಾಂತರಗಮನ ಮೊದಲಾದ ಪೌರುಷಾಚರಣೆಯೇ ಸಫಲವಾಗಿ ಕಾಣುವುದು ॥ ೧೬ ॥

ಚಾರ್ವಾಕಾದಿಗಳು ಪ್ರತ್ಯಕ್ಷವೊಂದೇ ಪ್ರಮಾಣವೆಂದು ಹೇಳುವರು ; ಇನ್ನು ಕೆಲವರು ಪ್ರತ್ಯಕ್ಷ-ಅನುಮಾನ-ಇವೆರಡು ಪ್ರಮಾಣಗಳನ್ನೊಪ್ಪುವರು ; ಯೋಗಶಾಸ್ತ್ರಕಾರರು ಪ್ರತ್ಯಕ್ಷ-ಅನುಮಾನ-ಶಬ್ದ ಇವು ಮೂರು ಪ್ರಮಾಣಗಳನ್ನಿಟ್ಟುಕೊಂಡಿರುವರು ; ತಾರ್ಕಿಕರು ಪ್ರತ್ಯಕ್ಷ-ಅನುಮಾನ-ಉಪಮಾನ-ಶಬ್ದ-ಎಂಬ ನಾಲ್ಕು ಪ್ರಮಾಣಗಳೆಂದು ಹೇಳುವರು ; ಹೀಗೆಯೇ ಮೀಮಾಂಸಕರೂ ವೇದಾಂತಿಗಳೂ ಇನ್ನೂ ಹೆಚ್ಚುಹೆಚ್ಚಾಗಿ ಹೇಳುವರು. ಅವುಗಳೆಲ್ಲವೂ ಇಲ್ಲಿ ಪ್ರಕೃತವಲ್ಲ. ಇಲ್ಲಿ ಪ್ರಕೃತವಾದುದು ಪ್ರತ್ಯಕ್ಷ ಅನುಮಾನ-ಉಪಮಾನ-ಶಬ್ದ-ಎಂಬ ಪ್ರಮಾಣಚತುಷ್ಟಯವು. ಇದರಲ್ಲಿ ಪ್ರತ್ಯಕ್ಷವೆಂದರೆ-ನಮ್ಮ ಇಂದ್ರಿಯಮೂಲಕವಾಗಿ ಪದಾರ್ಥವನ್ನು ತಿಳಿಯುವಿಕೆ. ಒಂದು ಗೋಡೆಯನ್ನು ನೋಡಿ ತಿಳಿಯಬಹುದು, ಒಂದು ಗಾನವನ್ನು ಕೇಳಿ ತಿಳಿಯಬಹುದು, ಒಂದು ರಸವನ್ನು ರುಚಿನೋಡಿ ತಿಳಿಯಬಹುದು, ಮತ್ತೊಂದನ್ನು ಮುಟ್ಟಿ ತಿಳಿಯಬಹುದು, ಇನ್ನೊಂದನ್ನು ವಾಸನೆಯಿಂದ ತಿಳಿಯಬಹುದು. ಇವುಗಳೆಲ್ಲವೂ ಪ್ರತ್ಯಕ್ಷಪ್ರಮಾಣವು. ಅನುಮಾನವೆಂದರೆ—ಒಂದು ಕಾರ್ಯದಿಂದ ಕಾರಣವನ್ನು ಊಹಿಸುವಿಕೆ. ಒಂದು ಪರ್ವತದಲ್ಲಿ ಹೊಗೆಯಾಡುವುದನ್ನು ನೋಡಿ, ದೂರದಲ್ಲಿಯೇ ಇದ್ದುಗೊಂಡು, ಅಲ್ಲಿ ಬೆಂಕಿಯಿದೆಯೆಂದು ನಾವು ನಿಶ್ಚಯಿಸುವೆವಲ್ಲವೆ ! ಅಲ್ಲಿ ಬೆಂಕಿಯಿರುವುದು ನಮಗೆ ಕಾಣದಿದ್ದರೂ, ಬೆಂಕಿಯಿಲ್ಲದೆ ಹೊಗೆಯಿರುವುದಿಲ್ಲವಾದಕಾರಣ, ಅಲ್ಲಿ ಬೆಂಕಿಯಿರುವುದೆಂದು ನಾವು ಊಹೆಯಿಂದ ನಿಶ್ಚಯಿಸುವೆವು. ಇದು ಅನುಮಾನಪ್ರಮಾಣವು. ಉಪಮಾನವೆಂದರೆ-ಒಂದು ಪದಾರ್ಥದ ಹೋಲಿಕೆಯಿಂದ ಇನ್ನೊಂದು ಪದಾರ್ಥದ ಸ್ವರೂಪವನ್ನು ನಿಷ್ಕರ್ಷಿಸುವುದು. ಒಬ್ಬ ಬಾಲಕನು ಹುಲಿಯನ್ನು ನೋಡದಿದ್ದಾಗ, ಅವನಿಗೆ ಹುಲಿಯ ಸ್ವರೂಪವನ್ನು ತಿಳಿಸುವುದಕ್ಕಾಗಿ, ಹುಲಿಯ ಚಿತ್ರವನ್ನು ತೋರಿಸಿ ಇದರಂತೆ ಹುಲಿಯಿದೆಯೆಂದೋ—ಅಥವಾ ಬೆಕ್ಕನ್ನು ತೋರಿಸಿ ಇದರಂತೆ ಹುಲಿಯಿದೆಯೆಂದೋ ಹೇಳುವೆವಲ್ಲವೆ ! ಆಗ ಆ ಬಾಲಕನು ಹುಲಿಯನ್ನು ಪ್ರತ್ಯಕ್ಷವಾಗಿ ನೋಡದಿದ್ದರೂ ಹುಲಿಯ ಆಕಾರವನ್ನು ತಿಳಿದುಕೊಳ್ಳುವನು. ಇದು ಉಪಮಾನಪ್ರಮಾಣವು. ಶಬ್ದವೆಂದರೆ—ಆಪ್ತನಾದವನು ಹೇಳುವ ಮಾತು. ಆಪ್ತನೆಂದರೆ ಯಥಾರ್ಥವಾದಿಯು. ಈಗ ನಾವು ಕಾಶಿಯನ್ನು ನೋಡದಿದ್ದರೂ, ಕಾಶಿಯನ್ನು ನೋಡಿಬಂದವರು ಅಲ್ಲಿಯ ವಿಷಯವನ್ನೆಲ್ಲ ಹೇಳುವುದರಿಂದ ಅದರ ಸ್ವರೂಪವನ್ನು ತಿಳಿಯುವೆವಷ್ಟೆ! ಹೀಗೆಯೇ ಯಥಾರ್ಥವಾದಿಗಳಾದ ಶಾಸ್ತ್ರಕಾರರು ಹೇಳಿರುವ ಮಾತುಗಳಿಂದಲೂ ವಿಷಯವನ್ನು ತಿಳಿದುಕೊಳ್ಳುವೆವು. ಇದು ಶಬ್ದಪ್ರಮಾಣವು. ಹೀಗೆ ಈ ನಾಲ್ಕು ಪ್ರಮಾಣಗಳಿಂದಲೂ ಪೌರುಷಫಲವು ನಮಗೆ ಸ್ಪಷ್ಟವಾಗಿರುವುದು. ಪೌರುಷಮಾಡಿ ಫಲಹೊಂದಿರುವವರನೇಕರು ನಮ್ಮ ಕಣ್ಣೆದುರಿಗಿರುವುದರಿಂದ ಪ್ರತ್ಯಕ್ಷವಾಯ್ತು ; ಕೆಲವು ಸಂದರ್ಭದಲ್ಲಿ ಅವರ ಪ್ರಯತ್ನವು ನಮಗೆ ಕಾಣದೆ—ಫಲಾನುಭವಮಾತ್ರ ಕಾಣುವುದರಿಂದ, ಅವರ ಪ್ರಯತ್ನವನ್ನು ನಾವು ಊಹೆಮಾಡಿಯೂ ತಿಳಿಯುವಕಾರಣ ಅನುಮಾನವಾಯ್ತು. ಹಿಂದೆ ಒಬ್ಬನು ಪ್ರಯತ್ನದಿಂದ ಮೇಲಾಗಿದ್ದುದನ್ನು ನಾವು ನೋಡಿಲ್ಲದಿದ್ದರೂ, ಈಗ ನಮ್ಮೆದುರಿಗೆ ಪ್ರಯತ್ನದಿಂದ ಮೇಲಾಗಿರುವವರನ್ನು ನೋಡಿ, ಇವರಂತೆಯೇ ಅವರಿದ್ದರೆಂದು ತಿಳಿಯುವುದರಿಂದ ಉಪಮಾನವಾಯ್ತು. ನಮ್ಮ ಹಿತಕ್ಕಾಗಿಯೇ ಏರ್ಪಟ್ಟಿರುವ ಆಪ್ತತಮವಾದ ಶಾಸ್ತ್ರವೆಲ್ಲವೂ 'ಕರ್ಮವನ್ನು ಮಾಡಬೇಕು' ಎಂದು ವಿಧಿರೂಪವಾಗಿರುವುದರಿಂದ ಶಬ್ದವಾಯ್ತು.

ಭೋಕ್ತಾ ತೃಪ್ಯತಿ ನಾಭೋಕ್ತಾ ಗನ್ತಾ ಗಚ್ಛತಿ ನಾಗತಿಃ ।
ವಕ್ತಾ ವಕ್ತಿ ನ ಚಾವಕ್ತಾ ಪೌರುಷಂ ಸಫಲಂ ನೃಣಾಮ್ ॥೧೭॥
ಪೌರುಷೇಣ ದುರನ್ತೇಭ್ಯಃ ಸಙ್ಕಟೇಭ್ಯಃ ಸುಬುದ್ಧಯಃ ।
ಸಮುತ್ತರನ್ತ್ಯಯತ್ನೇನ ನ ತು ಮೋಘತಯಾನಯಾ ॥೧೮॥
ಯೋಯೋ ಯಥಾ ಪ್ರಯತತೇ ಸಸ ತತ್ತತ್ಫಲೈಕಭಾಕ್ ।
ನ ತು ತೂಷ್ಣೀಂಸ್ಥಿತೇನೇಹ ಕೇನಚಿತ್ ಪ್ರಾಪ್ಯತೇ ಫಲಮ್ ॥೧೯॥
ಶುಭೇನ ಪುರುಷಾರ್ಥೇನ ಶುಭಮಾಸಾದ್ಯತೇ ಫಲಮ್ ।
ಅಶುಭೇನಾಶುಭಂ ರಾಮ ಯಥೇಚ್ಛಸಿ ತಥಾ ಕುರು ॥೨೦॥
ಪುರುಷಾರ್ಥಾತ್ ಫಲಪ್ರಾಪ್ತಿಃ ದೇಶಕಾಲವಶಾದಿಹ ।
ಪ್ರಾಪ್ತಾ ಚಿರೇಣ ಶೀಘ್ರಂ ವಾ ಯಾಸೌ ದೈವಮಿತಿ ಸ್ಮೃತಾ ॥೨೧॥
ನ ದೈವಂ ದೃಶ್ಯತೇ ದೃಷ್ಟ್ಯಾ ನ ಚ ಲೋಕಾನ್ತರೇ ಸ್ಥಿತಮ್ ।
ಉಕ್ತಂ ದೈವಾಭಿಧಾನೇನ ಸ್ವರ್ಲೋಕೇ ಕರ್ಮಣಃ ಫಲಮ್ ॥೨೨॥
ಪುರುಷೋ ಜಾಯತೇ ಲೋಕೇ ವರ್ಧತೇ ಜೀರ್ಯತೇ ಪುನಃ ।

ಊಟಮಾಡಿದವನು ತೃಪ್ತಿಹೊಂದುವನಲ್ಲದೆ ಊಟಮಾಡದಿದ್ದವನು ತೃಪ್ತಿಹೊಂದುವುದಿಲ್ಲ; ಹೆಜ್ಜೆಯಿಟ್ಟು ನಡೆದವನು ಮುಂದಕ್ಕೆ ಹೋಗುವನಲ್ಲದೆ ಸಂಚಾರವೇ ಇಲ್ಲದೆ ಸುಮ್ಮನಿದ್ದವನು ಹೋಗುವುದಿಲ್ಲ; ಬಾಯಿಬಿಟ್ಟು ಮಾತನಾಡಿದವನು ಹೇಳುವನಲ್ಲದೆ ಬಾಯಿಮುಚ್ಚಿಕೊಂಡಿದ್ದವನು ಹೇಳುವುದಿಲ್ಲ. ಹೀಗೆ ಭೋಜನಗಮನಾದಿಗಳಲ್ಲಿಯೂ ಕೂಡ ಮನುಷ್ಯರಿಗೆ ಪೌರುಷವೇ ಸಫಲವಾಗಿರುವುದು ॥ ೧೭ ॥

ಪೌರುಷದಿಂದಲೇ, ಬುದ್ಧಿವಂತರಾದವರು ದುರಂತವಾದ ಸಂಕಟಗಳ ದೆಸೆಯಿಂದ ಆಯಾಸವಿಲ್ಲದೆ ಪಾರಾಗುವರಲ್ಲದೆ, ಈ ಪ್ರಯತ್ನಶೂನ್ಯತೆಯಿಂದೆಂದಿಗೂ ಆಗುವುದಿಲ್ಲ॥೧೮

ಯಾವಯಾವನು ಹೇಗೆಹೇಗೆ ಪ್ರಯತ್ನಮಾಡುವನೋ, ಆವನವನು ಆಯಾಫಲವನ್ನು ಹೊಂದಿಯೇ ಹೊಂದುವನು; ಯಾವಕೆಲಸವೂ ಇಲ್ಲದೆ ಸುಮ್ಮನೆ ಕುಳಿತಿದ್ದರೋ, ಈ ಲೋಕದಲ್ಲಿ ಯಾವನಿಂದಲೂ ಯಾವ ಫಲವೂ ಹೊಂದಲ್ಪಡುವುದಿಲ್ಲ ॥ ೧೯ ॥

ಅಯ್ಯಾ! ರಾಮ! ಶುಭವಾದ ಕರ್ಮದಿಂದ ಶುಭಫಲವು ಹೊಂದಲ್ಪಡುವುದು ; ಅಶುಭಕರ್ಮದಿಂದ ಅಶುಭಫಲವು ಹೊಂದಲ್ಪಡುವುದು. ಈವಿಷಯದಲ್ಲಿ ನೀನು ಹೇಗೆ ಅಪೇಕ್ಷಿಸುವೆಯೋ, ಹಾಗೆ ಮಾಡು ॥ ೨೦ ॥

ಮನುಷ್ಯರು ಮಾಡಿದ ಪ್ರಯತ್ನಕ್ಕೆ ಫಲವಾಗಬೇಕಾದರೆ, ದೇಶಕಾಲಾನುಗುಣವಾಗಿ ಕೆಲವುವೇಳೆ ಬೇಗನೆಯೋ—ಅಥವಾ ಮತ್ತೊಂದುವೇಳೆ ತಡವಾಗಿಯೋ–ಆಗಬಹುದು ; ಹೀಗೆ ಯಾವ ಫಲಪ್ರಾಪ್ತಿಯಾಗುವುದೋ, ಅದನ್ನೇ ದೈವವೆಂದು ಹೇಳುವರು ॥ ೨೧ ॥

ದೈವವೆಂಬುದು ಈ ಲೋಕದಲ್ಲಿಯೂ ಕಣ್ಣಿಗೆ ಕಾಣುವುದಿಲ್ಲ; ಪರಲೋಕದಲ್ಲಿಯೂ ಇಲ್ಲ. ನಾವು ಈ ಲೋಕದಲ್ಲಿ ಮಾಡಿದ ಕರ್ಮಗಳ ಫಲವೇ ಸ್ವರ್ಗದಲ್ಲಿ ದೈವವೆಂದು ಹೇಳಲ್ಪಡುವುದು ॥ ೨೨ ॥

ಲೋಕದಲ್ಲಿ ಮನುಷ್ಯನು ಹುಟ್ಟುವನು ; ಬಳಿಕ ಬೆಳೆಯುವನು ; ಆಮೇಲೆ ಜೀರ್ಣ

ನ ತತ್ರ ದೃಶ್ಯತೇ ದೈವಂ ಜರಾಯೌವನಬಾಲ್ಯವತ್ ॥೨೩॥
ಅರ್ಥಪ್ರಾಪಕಕಾರ್ಯೈಕಪ್ರಯತ್ನಪರತಾ ಬುಧೈಃ ।
ಪ್ರೋಕ್ತಾ ಪೌರುಷಶಬ್ದೇನ ಸರ್ವಮಾಸಾದ್ಯತೇನಯಾ ॥೨೪॥
ದೇಶಾದ್ದೇಶಾನ್ತರಪ್ರಾಪ್ತಿಃ ಹಸ್ತಸ್ಯ ದ್ರವ್ಯಧಾರಣಮ್ ।
ವ್ಯಾಪಾರಶ್ಚ ತಥಾಙ್ಗಾನಾಂ ಪೌರುಷೇಣ ನ ದೈವತಃ ॥೨೫॥
ಅನರ್ಥಪ್ರಾಪ್ತಿಕಾರ್ಯೈಕಪ್ರಯತ್ನಪರತಾ ತು ಯಾ ।
ಪ್ರೋಕ್ತಾ ಪ್ರೋನ್ಮತ್ತಚೇಷ್ಟೇತಿ ನ ಕಿಂಚಿತ್ ಪ್ರಾಪ್ಯತೇನಯಾ ॥೨೬॥
ಕ್ರಿಯಾಯಾಃ ಸ್ಪನ್ದಧರ್ಮಿಣ್ಯಾಃ ಸ್ವಾರ್ಥಸಾಧಕತಾ ಸ್ವಯಮ್ ।
ಸಾಧುಸಙ್ಗಮಸಚ್ಛಾಸ್ತ್ರತೀಕ್ಷ್ಣಯೋನ್ನೀಯತೇ ಧಿಯಾ ॥೨೭॥
ಅನನ್ತಂ ಸಮತಾನನ್ದಂ ಪರಮಾರ್ಥಂ ಸ್ವಕಂ ವಿದುಃ ।
ಸ ಯೇಭ್ಯಃ ಪ್ರಾಪ್ಯತೇ ಯತ್ನಾತ್ ಸೇವ್ಯಾಸ್ತೇ ಶಾಸ್ತ್ರಸಾಧವಃ ॥೨೮॥
ಸಚ್ಛಾಸ್ತ್ರಾದಿಗುಣೋ ಮತ್ಯಾ ಸಚ್ಛಾಸ್ತ್ರಾದಿಗುಣಾನ್ಮತಿಃ ।

ನಾಗುವನು. ಆಕಾಲದಲ್ಲಿ ಅವನಿಗೆ—ಬಾಲ್ಯ ಯೌವನ ಜರೆ—ಇವುಗಳು ಕಾಣುವಂತೆ ದೈವವು ಕಾಣುವುದಿಲ್ಲ ॥ ೨೩ ॥

ನಮ್ಮ ಇಷ್ಟಾರ್ಥಪ್ರಾಪ್ತಿಗೆ ಸಾಧನವಾದ ಪ್ರಯತ್ನದಲ್ಲಿ ಮುಖ್ಯವಾಗಿ ಆಸಕ್ತಿಯಿಡುವುದನ್ನು ಪ್ರಾಜ್ಞರು ಪೌರುಷವೆಂದು ಹೇಳುವರು. ಇದರಿಂದ ಸಕಲವೂ ಹೊಂದಲ್ಪಡುವುದು ॥ ೨೪ ॥

ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವುದೂ, ಮತ್ತು ಇತರವಾದ ಅವಯವಗಳು ಕೆಲಸಮಾಡುವುದೂಕೂಡ, ಪೌರುಷದಿಂದಲ್ಲದೆ ದೈವದಿಂದಲ್ಲ ॥ ೨೫ ॥

ಆದರೆ ಅನರ್ಥಪ್ರಾಪ್ತಿಯುಂಟಾಗುವ ಕಾರ್ಯದಲ್ಲಿ ಪ್ರಯತ್ನಪರನಾಗುವುದಾವುದುಂಟೋ, ಅದು ಉನ್ಮತ್ತಚೇಷ್ಟೆಯೆಂದು ಹೇಳಲ್ಪಟ್ಟಿರುವುದು. ಇದರಿಂದ ಯಾವ ಫಲವೂ ಸಿಕ್ಕುವುದಿಲ್ಲ ॥ ೨೬ ॥

ನಮ್ಮ ಅವಯವಾದಿಗಳ ಚಲನೆಯೇ ಕ್ರಿಯೆಯೆನ್ನಿಸುವುದು; ಇದು, ಸಾಧುಸಂಗವು ಸಚ್ಛಾಸ್ತ್ರಾಭ್ಯಾಸಗಳ ದ್ವಾರಾ ಚುರುಕಾದ ಬುದ್ಧಿಯಿಂದ ಸ್ವಾರ್ಥಸಾಧನಹೇತುವಾಗುವುದು ॥ ೨೭ ॥

ಸ್ವಾರ್ಥವಾವುದೆಂದರೆ:—ಹಿಂದೆ ಹೇಳಿದಂತೆ ಸರ್ವತ್ರ ಸಮವಾದ ಬುದ್ಧಿಯಿಂದುಂಟಾದ ಶಾಶ್ವತವಾದ ಆನಂದವನ್ನೇ ಶ್ರೇಷ್ಠವಾದ ಸ್ವಾರ್ಥವೆಂದು ಹೇಳುವರು. ಅದು ಯಾರ ದೆಸೆಯಿಂದ ಸಿಕ್ಕುವುದೋ, ಅಂಥ ಸಚ್ಛಾಸ್ತ್ರಸತ್ಪುರುಷರುಗಳನ್ನು ಪ್ರಯತ್ನಪೂರ್ವಕವಾಗಿ ಸೇವಿಸಬೇಕು ॥ ೨೮ ॥

ಈ ಸಚ್ಛಾಸ್ತ್ರಸತ್ಪುರುಷಸಮಾಗಮಗಳ ಗುಣವು ತತ್ತ್ವಜ್ಞಾನದಿಂದಲೂ, ತತ್ತ್ವಜ್ಞಾನವು ಸಚ್ಛಾಸ್ತ್ರಾದಿ ಗುಣದಿಂದಲೂ, ಪರಸ್ಪರವಾಗಿ ಅಭ್ಯಾಸದಿಂದ ಚಂದ್ರಸಮುದ್ರ

ವಿವರ್ಧೇತೇ ಮಿಥೋಽಭ್ಯಾಸಾತ್ [1]ಸರೋಽಬ್ಜಾವಿವ ಕಾಲತಃ ||೨೯||
ಆಬಾಲ್ಯಾದಲಮಭ್ಯಸ್ತೈಃ ಶಾಸ್ತ್ರಸತ್ಸಙ್ಗಮಾದಿಭಿಃ |
ಗುಣೈಃ ಪುರುಷಯತ್ನೇನ ಸ್ವಾರ್ಥಃ ಸಮ್ಪ್ರಾಪ್ಯತೇ ಹಿತಃ ||೩೦||
ಪೌರುಷೇಣ ಜಿತಾ ದೈತ್ಯಾಃ ಸ್ಥಾಪಿತಾ ಭುವನಕ್ರಿಯಾಃ |
ರಚಿತಾನಿ ಜಗನ್ತೀಹ ವಿಷ್ಣುನಾ ನ ಚ ದೈವತಃ ||೩೧||
ಜಗತಿ [2]ಪುರುಷಕಾರಕಾರಣೇಽಸ್ಮಿನ್ ಕುರು ರಘುನಾಥ ಚಿರಂ ತಥಾ ಪ್ರಯತ್ನಮ್ |
ವ್ರಜಸಿ ತರುಸರೀಸೃಪಾಭಿಧಾನಾಂ ಸುಭಗ ಯಥಾ ನ ದಶಾಮಶಙ್ಕ್ಯ ಏವ ||೩೨||

ಇತಿ ಮುಮುಕ್ಷುವ್ಯವಹಾರ ಪ್ರಕರಣೇ ಪೌರುಷಪ್ರಾಧಾನ್ಯ
ಸಮರ್ಥನಂ ನಾಮ ಸಪ್ತಮಃ ಸರ್ಗಃ.

ಗಳಂತೆ ಕಾಲಾನುಗುಣವಾಗಿ ಹೆಚ್ಚುವುವು (೧) ॥ ೨೯ ॥

ಆದರೆ ಈ ಸಚ್ಛಾಸ್ತ್ರಾಭ್ಯಾಸಾದಿಗಳನ್ನು ಇಚ್ಛೆಬಂದಾಗ ಸಂಪಾದಿಸುವುದು ಸಾಧ್ಯವಲ್ಲ; ಇವುಗಳನ್ನು ಬಾಲ್ಯದಿಂದಲೂ ಚೆನ್ನಾಗಿ ಅಭ್ಯಾಸಮಾಡಬೇಕು. ಈರೀತಿಯಾಗಿ ಪುರುಷಪ್ರಯತ್ನಪೂರ್ವಕವಾಗಿ ಅಭ್ಯಸಿಸಲ್ಪಟ್ಟ ಶಾಸ್ತ್ರಸತ್ಸಹವಾಸಾದಿ ಗುಣಗಳಿಂದ, ಹಿತವಾದ ಸ್ವಾರ್ಥವು ಲಭ್ಯವಾಗುವುದು ॥ ೩೦ ॥

ಮಹಾವಿಷ್ಣುವು ದೈತ್ಯರನ್ನು ಗೆದ್ದುದುದೂ—ಪ್ರಪಂಚವ್ಯಾಪಾರಗಳನ್ನು ಯಥಾಕ್ರಮವಾಗಿ ಸ್ಥಾಪಿಸಿದುದೂ—ಜಗತ್ತುಗಳನ್ನು ರಚಿಸಿದುದೂಕೂಡ ಪೌರುಷದಿಂದಲೇ; ದೈವದಿಂದಲ್ಲ ॥ ೩೧ ॥

ಆದಕಾರಣ, ವಿವೇಕದಿಂದ ಮನೋಹರನಾದ ರಾಮನೆ! ಪೌರುಷವೇ ಪುರುಷಾರ್ಥಸಂಪಾದನೆಗೆ ಕಾರಣವಾಗಿರುವ ಈ ಪ್ರಪಂಚದಲ್ಲಿ, (೨) ತರುಸರೀಸೃಪಾದಿಗಳೆಂಬ ಹೆಸರುಳ್ಳ ಅವಸ್ಥೆಯನ್ನು ಹೊಂದದಿರುವಂತೆ, ನೀನು ಯಾವ ಶಂಕೆಯೂ ಇಲ್ಲದೆ—ಜಾಗ್ರತೆಯಾಗಿ ಪ್ರಯತ್ನಮಾಡಬೇಕು ॥ ೩೨ ॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಪೌರುಷಪ್ರಾಧಾನ್ಯಸಮರ್ಥನವೆಂಬ
ಏಳನೆಯ ಸರ್ಗವು.

---

1 ಸರಃಪದಂ ಸಾಗರಪರಮ್.

2 ಪೌರುಷಮೇವ ಕಾರಣಂ ಯಸ್ಮಿನ್.

(೧) ಚಂದ್ರೋದಯದಿಂದ ಸಮುದ್ರವು ಹೆಚ್ಚುವುದು; ಸಮುದ್ರದಿಂದ ಚಂದ್ರನು ಹುಟ್ಟುವನು. ಹೀಗೆ ಇವರಿಬ್ಬರೂ ಒಬ್ಬರಿಂದೊಬ್ಬರು ಹೆಚ್ಚಿದಂತಾಗುವುದು. ಹಾಗೆಯೇ, ಪ್ರಥಮತಃ ಮನಸ್ಸಿನಲ್ಲಿ ಸ್ವಲ್ಪ ಜ್ಞಾನವಂಕುರಿಸಿದ ಮೇಲೆಯೇ, ಗುರುಶಾಸ್ತ್ರಾದಿಗಳಲ್ಲಿ ಭಕ್ತಿ ಹುಟ್ಟುವುದು; ಗುರುಶಾಸ್ತ್ರಾದಿಗಳಿಂದಲೇ ತತ್ತ್ವಜ್ಞಾನವು ಸ್ಥಿರವಾಗುವುದು. ಹೀಗೆ ಇವೆರಡೂ ಒಂದರ ಅಭ್ಯಾಸದಿಂದ ಮತ್ತೊಂದು ಅಭಿವೃದ್ಧಿಹೊಂದುವುವೆಂದು ತಾತ್ಪರ್ಯವು.

(೨) ತರು = ಮರ; ಸರೀಸೃಪ = ಹರಿಯುತಕ್ಕ ಪ್ರಾಣಿಗಳು. (ಸರ್ಪಾದಿಗಳು) ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಕುಳಿತಿರತಕ್ಕವನು ಮನುಷ್ಯನಾಗಿದ್ದರೂ ಮರನೆಂಬುದಾಗಿಯೋ—ಅಥವಾ ಸ್ವಲ್ಪ ಚಲಿಸತಕ್ಕ ಸರೀಸೃಪನೆಂಬುದಾಗಿಯೋ—ಕರೆಯಲ್ಪಡುವನೆಂದು ಭಾವವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಅಷ್ಟಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ನಾಕೃತಿರ್ನ ಚ ಕರ್ಮಾಣಿ ನ ಸ್ಪಂದೋ ನ ಪರಾಕ್ರಮಃ |
ತನ್ಮಿಥ್ಯಾಜ್ಞಾನವದ್ರೂಢಂ ದೈವಂ ನಾಮ ಕಿಮುಚ್ಯತೇ ||೧||
ಸ್ವಕರ್ಮಫಲಸಂಪ್ರಾಪ್ತಾ ಇದಮಿತ್ಥಮಿತೀತಿ ಯಾಃ |
ಗಿರಸ್ತಾ ದೈವನಾಮ್ನ್ಯೈತಾಃ ಪ್ರಸಿದ್ಧಿಂ ಸಮುಪಾಗತಾಃ ||೨||
ತತ್ರೈವ ಮೂಢಮತಿಭಿಃ ದೈವಮಸ್ತೀತಿ ನಿಶ್ಚಯಃ |

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಎಂಟನೆಯ ಸರ್ಗವು.

ವರ್ಣಿತಂ ದೈವಮಿಥ್ಯಾತ್ವಂ ಉದಾಹರಣವಿಸ್ತರೈಃ |
ಉಪಜೀವ್ಯ ವಿರೋಧಾದಿಯುಕ್ತಿಭಿಶ್ಚ ಸಮರ್ಥ್ಯತೇ ||

ಹಿಂದೆ ವರ್ಣಿಸಲ್ಪಟ್ಟ ದೈವಮಿಥ್ಯಾತ್ವವು (ದೈವವಿಲ್ಲವೆಂಬುದು), ಉದಾಹರಣೆಗಳನ್ನು ವಿಶದಪಡಿಸುವುದರಿಂದ ಉಪಷ್ಟಂಭಮಾಡಿ, ವಿರೋಧ ಮೊದಲಾದ ಯುಕ್ತಿಗಳಿಂದ ಸಾಧಿಸಲ್ಪಡುವುದು.

ಪುನಃ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಿದರು.

ವತ್ಸ! ರಾಮ! ಇನ್ನೂ ಹೇಳುವೆನು-ಕೇಳು. ಈ ದೈವಕ್ಕೆ ನಿಯಮಿತವಾದ ಒಂದು ಆಕಾರವಿಲ್ಲ; ಮಾನಸಿಕವಾದ ಕರ್ಮವೂ ಯಾವುದೂ ಇಲ್ಲ; ಯಾವ ವಿಧವಾದ ಚಲನೆಯೂ ಇಲ್ಲ; ಶಾರೀರವಾದ ಕರ್ಮವೂ ಇಲ್ಲ. ಆದಕಾರಣ ಇದು ಶಶವಿಷಾಣ (ಮೊಲದ ಕೊಂಬು) ಮೊದಲಾದ ಅಸತ್ಯಪದಾರ್ಥಗಳಲ್ಲಿ ಉಂಟಾಗಿರುವ ಜ್ಞಾನದಂತೆ ರೂಢವಾಗಿಬಿಟ್ಟಿರುವುದು (೧). ಹೀಗಿದ್ದರೂ ನೀನು (೨) 'ಅತ್ರೈವ ದುರ್ವಿಲಾಸಾನಾಂ' ಇತ್ಯಾದಿ ರೀತಿಯಾಗಿ 'ದೈವ-ದೈವ' ಎಂದು ಏನು ಹೇಳುವೆ? ||೧||

ತಾವು ಮಾಡಿದ ಕರ್ಮವು ಫಲಿಸಿದಾಗ--ಇದು ಈರೀತಿಯಾಗಿ ನೆರವೇರಿತು—ಎಂದು ಹೇಳಬೇಕಾದ—ಮಾತುಗಳಾವುವುಂಟೋ, ಅವೇ ಈ ದೈವವೆಂಬ ಹೆಸರಿನಿಂದ ಪ್ರಸಿದ್ಧಿಪಡೆದಿರುವುವು ||೨||

ಹಗ್ಗದಲ್ಲಿ ಹಾವೆಂಬ ಜ್ಞಾನವನ್ನಿಡುವಂತೆ, ಇದರಲ್ಲಿಯೇ-ಮೂಢಬುದ್ಧಿಗಳು ಅಜ್ಞಾ

---

(೧) ಶಶವಿಷಾಣಾದಿಗಳಿಲ್ಲದಿದ್ದರೂ ಶಬ್ದಮಾತ್ರ ರೂಢವಾಗಿರುವಂತೆ, 'ದೈವ' ಎಂಬ ಶಬ್ದವೂ ರೂಢಿಯುಳ್ಳದಾಗಿರುವುದಲ್ಲದೆ, ಆ ಪದಾರ್ಥವಾವುದೂ ಇಲ್ಲವೆಂದು ಭಾವವು.

(೨) ವೈರಾಗ್ಯಪ್ರಕರಣ. ಸ. ೫. ಹೀಗೆಯೇ ವಸಿಷ್ಠರು ಶ್ರೀರಾಮನ ಮಾತಿಗೆಲ್ಲವೂ-ಪ್ರಾಯಶಃ ಪ್ರತಿಶ್ಲೋಕಕ್ಕೂ-ಸಮಾಧಾನಹೇಳಿರುವರು. ಅದೆಲ್ಲವನ್ನೂ ಪ್ರತ್ಯೇಕವಾಗಿ ಇಲ್ಲಿ ತೋರಿಸುವುದಕ್ಕವಕಾಶವಿಲ್ಲವಾದಕಾರಣ, ಆಸ್ತಿಕರು ಸಾವಧಾನವಾಗಿ ಪರಾಮರ್ಶಿಸಿದರೆ ಆಕ್ಷೇಪಸಮಾಧಾನಗಳು ಗೊತ್ತಾಗುವುವು.

ಆತ್ತೋ ದುರವಬೋಧೇನ ರಜ್ಜ್ವಾಮಿವ ಭುಜಙ್ಗಮಃ ||೩||
ಹ್ಯಸ್ತನೀ ದುಷ್ಕ್ರಿಯಾಭ್ಯೇತಿ ಶೋಭಾಂ ಸತ್ಕ್ರಿಯಯಾ ಯಥಾ |
ಅದ್ಯೈವಂ ಪ್ರಾಕ್ತನೀ ತಸ್ಮಾತ್ ಯತ್ನಾತ್ ಸತ್ಕಾರ್ಯವಾನ್ ಭವೇತ್ ||
ಮೂಢಾನುಮಾನಸಂಸಿದ್ಧಂ ದೈವಂ ಯಸ್ಯಾಸ್ತಿ ದುರ್ಮತೇಃ |
ದೈವಾದ್ದಾಹೋಸ್ತಿ ನೈವೇತಿ ಗನ್ತವ್ಯಂ ತೇನ ಪಾವಕೇ ||೫||
ದೈವಮೇವೇಹ ಚೇತ್ ಕರ್ತೃ ಪುಂಸಃ ಕಿಮಿವ ಚೇಷ್ಟಯಾ |
ಸ್ನಾನದಾನಾಸನೋಚ್ಚಾರಾನ್[1] ದೈವಮೇವ ಕರಿಷ್ಯತಿ ||೬||
ಕಿಂವಾ ಶಾಸ್ತ್ರೋಪದೇಶೇನ ಮೂಕೋಯಂ ಪುರುಷಃ ಕಿಲ |

ನದಿಂದ—ದೈವವುಂಟೆಂಬ ನಿಶ್ಚಯವನ್ನಿಟ್ಟುಕೊಂಡಿರುವರು ||೩||

ನಿನ್ನೆಯ ದುಷ್ಕರ್ಮವು ಈದಿನದ ಸತ್ಕರ್ಮದಿಂದ ಹೇಗೆ ಶುಭವಾಗುವುದೋ, ಹೀಗೆಯೇ ಜನ್ಮಾಂತರದುಷ್ಕರ್ಮವು ಈಗಿನ ಸತ್ಕರ್ಮದಿಂದ ಶುಭವಾಗುವುದು; ಆದಕಾರಣ, ಪ್ರಯತ್ನಪೂರ್ವಕವಾಗಿ ಸತ್ಕರ್ಮತತ್ಪರನಾಗಿರಬೇಕು ||೪||

ಕೇವಲಮೂಢರ ಊಹೆಯಿಂದ ಕಲ್ಪಿತವಾಗಿರುವ ದೈವವು—ಯಾವ ದುರ್ಬುದ್ಧಿಯಾದವನಿಗಿರುವುದೋ, ಅವನು—ದೈವಾನುಕೂಲ್ಯದಿಂದ ಸುಡುವುದೇ ಇಲ್ಲವೆಂದು ನಂಬಿ—ಅಗ್ನಿಯಲ್ಲಿ ಪ್ರವೇಶಿಸಬೇಕಲ್ಲವೆ! ||೫||

ಇದಿರಲಿ; ಈ ಲೋಕದಲ್ಲಿ ಸಮಸ್ತವನ್ನೂ ದೈವವೇ ಮಾಡತಕ್ಕುದಾಗಿದ್ದ ಪಕ್ಷದಲ್ಲಿ, ಮನುಷ್ಯರಿಗೆ ಯಾವ ವ್ಯಾಪಾರದಿಂದತಾನೆ ಏನು ಫಲವು? ಏತಕ್ಕೆಂದರೆ:—ಅವರಿಗೆ ಸ್ನಾನದಾನ ಆಸನ (ಕುಳಿತುಕೊಳ್ಳುವಿಕೆ) ಉಚ್ಚರಣೆ—ಇತ್ಯಾದಿಗಳನ್ನೆಲ್ಲ ದೈವವೇ ಮಾಡಿಬಿಡುವುದಲ್ಲವೆ! ||೬||

ಇದೂ ಇರಲಿ; ದೈವವೇ ಕರ್ತೃವಾಗಿದ್ದ ಪಕ್ಷದಲ್ಲಿ ಸಕಲವಾದ ಶಾಸ್ತ್ರೋಪದೇಶದಿಂದ ತಾನೆ ಫಲವೇನು? ಏಕೆಂದರೆ:—ಈ ಪುರುಷನು ಯಾವುದಕ್ಕೂ ಸ್ವತಂತ್ರನಲ್ಲದೆ ಕೇವಲ ಮೂಕನಾದನಲ್ಲವೆ! ಹಾಗಾದಬಳಿಕ ದೈವವೇ ಇವನಿಂದ ಸಕಲವನ್ನೂ ಮಾಡಿಸಬೇಕಾಯ್ತು. ಹೀಗಿರುವಾಗ, ಈ ಲೋಕದಲ್ಲಿ ಯಾರಿಗೆ ಏನುತಾನೆ ಉಪದೇಶಿಸಲ್ಪಡತಕ್ಕುದಿರುವುದು (೧) ||೭||

---

[1] ಉಚ್ಚಾರಃ = ಉಚ್ಚಾರಣಮಿತ್ಯರ್ಥಃ.

(೧) ಇಲ್ಲಿ ತಿಳಿಯಬೇಕಾದ ವಿಷಯವೇನೆಂದರೆ:—'ಶಾಸ್ತ್ರ' ಎಂಬ ಶಬ್ದಕ್ಕೆ ಶಾಸನಮಾಡತಕ್ಕುದೆಂದು ನಿರ್ವಚನಮಾಡಿರುವರು. ಶಾಸನವೆಂದರೆ ಆಜ್ಞೆಯೆಂದರ್ಥವು. ನಮ್ಮ ಶಾಸ್ತ್ರಗಳೆಲ್ಲವೂ 'ಇದನ್ನು ಮಾಡು-ಇದನ್ನು ಬಿಡು' ಎಂದು ಆಜ್ಞಾರೂಪವಾಗಿರುವುವು. ಮಾಡುವುದಕ್ಕೂ ಬಿಡುವುದಕ್ಕೂ ಯಾರಿಗೆ ಶಕ್ತಿಯಿದೆಯೋ, ಅಂಥವರನ್ನು ಕುರಿತು, 'ಮಾಡು—ಬಿಡು' ಎಂದು ಹೇಳಬೇಕಲ್ಲದೆ, ಯಾವುದಕ್ಕೂ ಸ್ವಾತಂತ್ರ್ಯವಿಲ್ಲದವನನ್ನು ಕುರಿತು ಹಾಗೆ ಹೇಳುವುದು ಸುತರಾಂ ಅಸಂಗತವಲ್ಲವೆ! ದೈವವೇ ಸಕಲಕ್ಕೂ ಕರ್ತೃವಾಗಿದ್ದು—ಪುರುಷನು ಅಸ್ವತಂತ್ರನಾಗಿದ್ದ ಮೇಲೆ, ವಿಧಿರೂಪವಾದ ಶಾಸ್ತ್ರಗಳಿಗೆಲ್ಲ ಫಲವಿಲ್ಲವೆಂದೂ ಇದನ್ನು ಮಾಡಿದವರೆಲ್ಲರೂ ಉನ್ಮತ್ತರೆಂದೂ ಹೇಳಬೇಕಾಗುವುದು; ಕೊನೆಗೆ ಭಗವದಾಜ್ಞಾರೂಪವಾದ ಅನಾದಿಯಾದ ವೇದವೂ ವ್ಯರ್ಥವಾಗುವುದು. ದೈವವೇ ಸ್ವತಂತ್ರವೆಂದೊಪ್ಪಿದರೆ, ಹೀಗೆ ಅನವಸ್ಥಾಪ್ರಸಕ್ತಿಯುಂಟಾಗುವುದೆಂದು ಭಾವವು.

ಸಞ್ಚಾರ್ಯತೇ ತು ದೈವೇನ ಕಿಂ ಕಸ್ಯೇಹೋಪದಿಶ್ಯತೇ ||೭||
ನ ಚ ನಿಷ್ಪನ್ದತಾ ಲೋಕೇ ದೃಷ್ಟೇಹ ಶವತಾಂ ವಿನಾ |
ಸ್ಪನ್ದಾಚ್ಚ ಫಲಸಮ್ಪ್ರಾಪ್ತಿಃ ತಸ್ಮಾದ್ದೈವಂ ನಿರರ್ಥಕಮ್ ||೮||
ನ ಚಾಮೂರ್ತೇನ ದೈವೇನ ಮೂರ್ತಸ್ಯ ಸಹಕರ್ತೃತಾ |
ಪುಂಸಃ ಸಂದೃಶ್ಯತೇ ಕಾಚಿತ್ ತಸ್ಮಾದ್ದೈವಂ ನಿರರ್ಥಕಮ್ ||೯||
ಮಿಥೋಽಙ್ಗಾನಿ ಸಮಾಸಾದ್ಯ ದ್ವಯೋರೇಕೈಕಕರ್ತೃತಾ |

ಮತ್ತು, ಈಲೋಕದಲ್ಲಿ ಶವಾವಸ್ಥೆಯನ್ನು ಬಿಟ್ಟು ಮತ್ತೆಲ್ಲಿಯೂ ನಿಷ್ಪಂದತೆಯು ಕಾಣುವುದಿಲ್ಲ; ಸ್ಪಂದದಿಂದಲೇ ಫಲಪ್ರಾಪ್ತಿಯು ಸ್ಪಷ್ಟವಾಗಿ ಕಾಣುವುದು. ಆದಕಾರಣ ದೈವವು ನಿಷ್ಪ್ರಯೋಜನವಾದುದು (೧) ॥ ೮ ॥

ಮತ್ತು, 'ಲೋಕದಲ್ಲಿ ಒಂದು ಕಾರ್ಯವು ಸಿದ್ಧಿಸಬೇಕಾದರೆ-ಅದಕ್ಕೆ ಅನೇಕ ಸಾಮಗ್ರಿಗಳು ಬೇಕಲ್ಲವೆ! ಒಂದು ಪಾಲಕಿಯನ್ನು ಹೊರಬೇಕಾದರೆ ನಾಲ್ಕು ಜನಗಳಾದರೂ ಬೇಕಲ್ಲವೆ! ಹೀಗೆ ಯಾವ ಕೆಲಸವು ಸಿದ್ಧಿಸಬೇಕಾದರೂ ಅದಕ್ಕೆ ಅನೇಕವಾದ ಸಹಾಯಸಂಪತ್ತಿರಬೇಕಾಗುವುದು. ಹಾಗೆಯೇ ನಮ್ಮ ಪ್ರಯತ್ನವು ಫಲಿಸಬೇಕಾದರೆ—ಅದಕ್ಕೆ ತಕ್ಕಂತೆ ಇತರವಾದ ಸಹಾಯಸಂಪತ್ತಿಯಿದ್ದೇ ತೀರಬೇಕು; ಪ್ರಕೃತದಲ್ಲಿ ಸಹಾಯಾಂತರವಾವುದೂ ಕಣ್ಣಿಗೆ ಕಾಣುವುದಿಲ್ಲವಾದಕಾರಣ, ಕಣ್ಣಿಗೆ ಕಾಣದಿರುವ ಸಹಾಯವಾವುದೋ ಒಂದಿರುವುದೆಂದು ಒಪ್ಪಿಯೇತೀರಬೇಕಾಗುವುದು. ಅಂಥ ಅಪ್ರತ್ಯಕ್ಷಸಹಾಯವಾವುದೆಂದರೆ—ದೈವವೇ—ಎಂದು ನಾವು ನಿರ್ಧರಿಸುವೆವು.' ಎಂಬುದಾಗಿ ಒಂದು ಶಂಕೆಯುಂಟಾಗಬಹುದಲ್ಲವೆ! ಇದಕ್ಕವಕಾಶವಿಲ್ಲ. ಪಾಲಕಿಯನ್ನು ಹೊರಬೇಕಾದರೆ ನಾಲ್ಕು ಜನರೂ ಸಮಾನರಾಗಿರಬೇಕಲ್ಲದೆ—ಒಬ್ಬನು ಕುಂಟನಾಗಿದ್ದರಾಗುವುದಿಲ್ಲ. ಪ್ರಕೃತದಲ್ಲಿಯೂ, ದೈವವು ಕಣ್ಣಿಗೆಕಾಣದ ಪದಾರ್ಥವಾಗಿಯೂ—ಪ್ರಯತ್ನವು ಪ್ರತ್ಯಕ್ಷವಾಗಿಯೂ ಇರುವುದರಿಂದ, ಇವೆರಡಕ್ಕೂ ಸಾಮ್ಯವಿಲ್ಲವಾದಕಾರಣ, ಆಕಾರವಿಲ್ಲದ ದೈವವು—ಶರೀರಿಯಾದ ಪುರುಷನಿಗೆ ಯಾವವಿಧವಾಗಿಯೂ ಸಹಕಾರಿಯಾಗಲಾರದು. ಆದಕಾರಣ ದೈವವು ನಿರರ್ಥಕವು ॥ ೯ ॥

ಸಾಮಾನ್ಯವಾಗಿ ಪ್ರಪಂಚದಲ್ಲಿ ಲೇಖನಮುಂತಾದ ಕರ್ಮಗಳು ನಡೆಯಬೇಕಾದರೆ, ಎಡ-ಬಲ-ಈಯೆರಡು ಅವಯವಗಳೂ ಇದ್ದರೂ, ಅಗರಲ್ಲಿ ಒಂದು ಮತ್ತೊಂದನ್ನು ತಿರಸ್ಕರಿಸಿ, ಲೇಖನಿ ಮುಂತಾದ ಸಾಧನಗಳನ್ನು ಸಂಪಾದಿಸಿಕೊಂಡು, ಒಂದೊಂದೇ ಕಾರ್ಯಸಾಧಕವಾಗುತ್ತದೆ; ಆದರೆ ವಾಯುಮುಂತಾದುವುಗಳಿಂದ ಹಸ್ತಾದ್ಯವಯವಗಳು ಕೆಟ್ಟುಹೋದಾಗಮಾತ್ರ, ದೈವವು ಯಾವಸಂದರ್ಭದಲ್ಲಿಯೂ ಕೆಲಸಮಾಡಿಲ್ಲವಲ್ಲವೆ! ದೈವವೇ

---

(೧) ಸ್ಪಂದ = ಚಲನೆ. ನಿಷ್ಪಂದ = ಚಲನೆಯಿಲ್ಲದುದು ನಿಷ್ಪಂದತೆ = ಚಲನೆಯಿಲ್ಲದಿರುವಿಕೆ. ವ್ಯಾಪಾರಶೂನ್ಯತ್ವವೆಂದು ಭಾವವು. ಶವದವಿಷಯದಿಂದ ತಿಳಿಯಬೇಕಾದುದೇನಂದರೆ:-ಶವವು ನಿಷ್ಪಂದವಾಗಿರುವುದರಿಂದ ಅದು ಯಾವ ಫಲವನ್ನೂ ಅನುಭವಿಸಲಾರದು. ಪುರುಷನು ನಿಷ್ಪಂದನಾಗಿದ್ದರೂ ಫಲಾನುಭವವಾಗತಕ್ಕಪಕ್ಷದಲ್ಲಿ, ನಿಷ್ಪಂದವಾಗಿರುವ ಶವಕ್ಕೂ ಫಲಾನುಭವವಾಗಬೇಕೆಂದೂ, ಆದಕಾರಣವೇ ನಿಷ್ಪಂದನಾಗಿರತಕ್ಕವನು ಶವದಂತೆ ಹೇಯನೆಂದೂ ಭಾವವು.

ಹಸ್ತಾದೀನಾಂ ಹತತ್ವೇ [1]ಹ ನ ದೈವೇನ ಕ್ವಚಿತ್ ಕೃತಮ್ ‖೧೦‖
ಮನೋಬುದ್ಧಿವದಪ್ಯೇತತ್ ದೈವಂ ನೇಹಾನುಭೂಯತೇ ।
ಆಗೋಪಾಲಂ ಕೃತಪ್ರಜ್ಞೈಃ ತೇನ ದೈವಮಸತ್ ಸದಾ ‖೧೧‖
ಪೃಥಕ್ ಚೇದ್ಬುದ್ಧಿರನ್ಯೋಽರ್ಥಃ ಸೈವ ಚೇತ್ ಕಾನ್ಯತಾ ತಯೋಃ ।
ಕಲ್ಪನಾಯಾಂ ಪ್ರಮಾಣಂ ಚೇತ್ ಪೌರುಷಂ ಕಿಂ ನ ಕಲ್ಪ್ಯತೇ ‖೧೨‖
ನಾಮೂರ್ತೇಸ್ತೇನ ಸಂಗೋಽಸ್ತಿ ನಭಸೇವ ವಪುಷ್ಮತಃ ।

ಸರ್ವಶಕ್ತವಾಗಿದ್ದರೆ, ಹಸ್ತಮೊದಲಾದುವುಗಳಿಲ್ಲದಿದ್ದರೂ—ಲೇಖನಮುಂತಾದ ಕಾರ್ಯಗಳು ನಡೆಯಬೇಕಾಗಿತ್ತು ॥ ೧೦ ॥

ಆದರೆ, ದೈವವು ನಿರಾಕಾರವಾದಕಾರಣ ಶರೀರಿಯಾದ ಪುರುಷನಿಗೆ ಸಹಕಾರಿಯಾಗಲಾರದೆಂದು ಹೇಳಿದ ವಿಷಯದಲ್ಲಿ, ಹೀಗೊಂದು ಆಕ್ಷೇಪಣೆ ತೋರಬಹುದಲ್ಲವೆ! ಪ್ರಪಂಚದಲ್ಲಿ ಯಾವಕೆಲಸ ನಡೆಯಬೇಕಾಗಿದ್ದರೂ ಮನಸ್ಸೂ ಬುದ್ಧಿಯೂ ಇರಬೇಕಾಗಿರುವುದರಿಂದ, ಆ ಮನೋಬುದ್ಧಿಗಳು ಕಣ್ಣಿಗೆ ಕಾಣದಿದ್ದರೂ ಅವು ಪುರುಷನಿಗೆ ಸಹಕಾರಿಗಳಾಗಿರುವುವೆಂದು ಒಪ್ಪುವಂತೆ, ಈ ದೈವವೂ ಇರುವುದೆಂದು ಒಪ್ಪಬೇಕಾಗುವುದು-ಎಂದು ಆಕ್ಷೇಪಣೆಮಾಡಬಹುದಲ್ಲವೆ! ಇದು ಸಮಂಜಸವಲ್ಲ; ಈಲೋಕದಲ್ಲಿ ಮನೋಬುದ್ಧಿಗಳಿರುವುದು ಸರ್ವರಿಗೂ ಅನುಭವಕ್ಕೆ ಬಂದಿರುವುದು; ಅವುಗಳಂತೆ ಇದು ಅನುಭವಕ್ಕೆ ಬರುವುದಿಲ್ಲ; ಈ ವಿಷಯವು ಸಾಮಾನ್ಯನಾದ ಒಬ್ಬ ಪಶುಪಾಲನನ್ನು ಮೊದಲುಮಾಡಿಕೊಂಡು ಸ್ವಲ್ಪ ವಿವೇಕವುಳ್ಳವರಿಂದೆಲ್ಲ ಅನುಭವಿಸಲ್ಪಡುತದೆ. ಅನುಭವವಿರುದ್ಧವಾದ ಮಾತು ಹಠವಾದವೇ ಹೊರತು ಯುಕ್ತಿವಾದವಲ್ಲ. ಆದಕಾರಣ, ದೈವವು ಎಂದಿಗೂ ಅಸತ್ಯವಾದುದು ॥

ಈಗ ಇನ್ನೊಂದುವಿಧವಾಗಿ ವಿಚಾರಮಾಡೋಣ:—ದೈವವುಂಟೆಂದು ಹೇಳುವುದಕ್ಕೆ ಪ್ರಮಾಣವೇನು? ಪುರುಷನಿಂದ ಕೆಲಸಮಾಡಿಸುವ ಪದಾರ್ಥವಾವುದೋ ಒಂದಿರಬೇಕೆಂದು ಜ್ಞಾನವುಂಟಷ್ಟೆ! ಈ ಜ್ಞಾನವೇ ದೈವಸಾಧನೆಗೆ ಪ್ರಮಾಣವೆ? ಅಥವಾ ಬೇರೆಯಾದ ಜ್ಞಾನವೆನ್ನುವಪಕ್ಷದಲ್ಲಿ, ದೈವವು ಕರ್ಮದಲ್ಲಿ ಅನುಪಯುಕ್ತವೆಂಬರ್ಥವನ್ನೊಪ್ಪಿಕೊಂಡಂತಾಗುವುದು; ಆ ಜ್ಞಾನವೇ (ಕರ್ಮಸಾಧನವೊಂದಿರಬೇಕೆಂಬ ತಿಳಿವಳಿಕೆ) ದೈವಸಾಧನವೆನ್ನುವಪಕ್ಷದಲ್ಲಿ, ಆ ದೈವ ಪೌರುಷಗಳಿಗೆ ಭೇದವೇನು? ಆದರೆ, ಜತೆಯಲ್ಲಿಯೇ ವ್ಯಾಸಂಗಮಾಡಿದರೂ, ಇಬ್ಬರಲ್ಲೊಬ್ಬನು ಪ್ರಾಜ್ಞನಾಗುವುದೂ—ಮತ್ತೊಬ್ಬನು ಮೂಢನಾಗುವುದೂ ಪ್ರತ್ಯಕ್ಷವಾಗಿರುವುದರಿಂದ, ಇದೇ ದೈವವುಂಟೆಂಬುದಕ್ಕೆ ಪ್ರಮಾಣವೆಂದು ಕಲ್ಪಿಸುವೆವೆನ್ನುವಪಕ್ಷದಲ್ಲಿ, ಪೂರ್ವೋಕ್ತರೀತಿಯಾಗಿ ಪೂರ್ವಜನ್ಮಪೌರುಷವನ್ನೇ ಏಕೆ ಕಲ್ಪಿಸಬಾರದು? (ದೈವಶಬ್ದವನ್ನುಪಯೋಗಿಸುವುದಕ್ಕಿಂತ ಪೂರ್ವಜನ್ಮಪೌರುಷವೆಂದು ಹೇಳುವುದೇ ಯುಕ್ತವು) ॥ ೧೨ ॥

ಇದೂಅಲ್ಲದೆ, ಈ ದೈವವು ಮತ್ತೊಂದರ ಜತೆಯಲ್ಲಿ ಸೇರಿ ಕೆಲಸಮಾಡುವುದೆಂದು ಹೇಳುವುದೂ ಯುಕ್ತವಲ್ಲ. ಈಗ ಗಾಳಿಯು—ಆಕಾರವುಳ್ಳ ಪದಾರ್ಥದೊಡನೆ ಸೇರಿಕೊಂಡಿರುವುದು ಹೇಗೆ ಅಸಂಭವವೋ, ಹಾಗೆ ರೂಪರಹಿತವಾದ ದೈವವು—ಮೂರ್ತಿಮ

---

1. ಹ ಶಬ್ದಃ ಕಿಲಾರ್ಥಕಃ

ಮೂರ್ತಂ ಚ ವಿದ್ಯತೇ ಲಗ್ನಂ ತಸ್ಮಾದ್ದೈವಂ ನ ವಿದ್ಯತೇ ||೧೩||
ವಿನಿಯೋಕ್ತ್ರಾಥ ಭೂತಾನಾಂ ಅಸ್ತ್ಯನ್ಯಚ್ಚೇಜ್ಜಗತ್ತ್ರಯೇ |
ಶೇರತೇ ಭೂತಬೃನ್ದಾನಿ ದೈವಂ ಸರ್ವಂ ಕರಿಷ್ಯತಿ ||೧೪||
ದೈವೇನ ತ್ವಭಿಯುಕ್ತೋಽಹಂ ತತ್ ಕರೋಮೀದೃಶಂ ಸ್ಥಿತಮ್ |
ಸಮಾಶ್ವಾಸನವಾಗೇಷಾ ನ ದೈವಂ ಪರಮಾರ್ಥತಃ ||೧೫||
ಮೂರ್ಖೈಃ ಪ್ರಕಲ್ಪಿತಂ ದೈವಂ ತತ್ಪರಾಸ್ತೇ ಕ್ಷಯಂ ಗತಾಃ |
ಪ್ರಾಜ್ಞಾಸ್ತು ಪೌರುಷಾರ್ಥೇನ [1]ಪದಮುತ್ತಮತಾಂ ಗತಾಃ ||೧೬||
ಯೇ ಶೂರಾ ಯೇ ಚ ವಿಕ್ರಾನ್ತಾಃ ಯೇ ಪ್ರಾಜ್ಞಾ ಯೇ ಚ ಪಣ್ಡಿತಾಃ |
ತೈಸ್ತೈಃ ಕಿಮಿವ ಲೋಕೇಽಸ್ಮಿನ್ ವದ ದೈವಂ ಪ್ರತೀಕ್ಷ್ಯತೇ ||೧೭||
ಕಾಲವಿದ್ಭಿರ್ವಿನಿರ್ಣೀತಾ ಯಸ್ಯಾತಿಚಿರಜೀವಿತಾ |
ಸ ಚೇಜ್ಜೀವತಿ ಸಂಛಿನ್ನಶಿರಾಸ್ತದ್ದೈವಮುತ್ತಮಮ್ ||೧೮||

ತ್ತಾದ ಮತ್ತೊಂದುಪದಾರ್ಥದೊಡನೆ ಸೇರುವುದೂ ಅಸಂಭವವು. ಒಂದಕ್ಕೊಂದು ಸೇರಿಕೊಂಡಿರುವ ಪದಾರ್ಥಗಳು ಯಾವುವುಂಟೋ, ಅವು ಆಕಾರವುಳ್ಳವುಗಳಾಗಿಯೇ ಕಾಣುತಿರುವುವು. ಆದಕಾರಣ ದೈವವೆಂಬ ಪದಾರ್ಥವೇ ಇಲ್ಲ ॥ ೧೩ ॥

ಆದರೂ, ಈಜಗತ್ತ್ರಯದಲ್ಲಿ ಪ್ರಾಣಿಗಳನ್ನು ಆಯಾ ಕರ್ಮಗಳಲ್ಲಿ ವಿನಿಯೋಗಿಸುವ ಬೇರೆಯೊಂದು ಪದಾರ್ಥವಿದ್ದಪಕ್ಷದಲ್ಲಿ, ದೈವನೇ ಸರ್ವವನ್ನೂ ಮಾಡತಕ್ಕದಾದುದರಿಂದ ಪ್ರಾಣಿಗಳು—ಅಂಗಚಲನೆಮಾಡುವ ಆಯಾಸವೂ ಅವಕ್ಕಿಲ್ಲದೆಯೇ ಫಲಸಿದ್ಧಿಯಾಗಿ—ಸುಮ್ಮನೆ ಸುಖವಾಗಿ ಮಲಗಿರಬೇಕಾಗಿದ್ದಿತು ॥ ೧೪ ॥

ಆದರೆ, ಪ್ರಪಂಚದಲ್ಲಿ 'ದೈವದಿಂದ ಪ್ರೇರಿತನಾಗಿ ನಾನು ಅಂಥ ಕೆಲಸವನ್ನು ಮಾಡುತ್ತೇನೆ,—ಈ ವಿಧವಾಗಿ ದೈವಸಂಕಲ್ಪದಿಂದ ಸಿದ್ಧವಾಯಿತು;' ಎಂಬ ವ್ಯವಹಾರವಿರುವುದರಿಂದ ಅದಕ್ಕೇನುಗತಿಯೆಂದರೆ, ಇದು ಹಿಂದೆ ಹೇಳಿದಂತೆ ಸಮಾಧಾನಾರ್ಥವಾದ ಮಾತು; ದೈವವೆಂಬುದು ವಾಸ್ತವ್ಯವಾಗಿಲ್ಲ ॥ ೧೫ ॥

ಹೀಗೆ ಈ ದೈವವು ಮೂಢರಿಂದ ಕಲ್ಪಿತವಾಗಿರುವುದು; ಇದನ್ನು ಯಾರು ನಂಬಿದರೋ,—ಅವರೆಲ್ಲರೂ ಕ್ಷಯವನ್ನೇ ಹೊಂದಿರುವರು. ಪ್ರಾಜ್ಞರಾದರೋ, ಪುರುಷಕಾರದಿಂದ ಪ್ರಾಶಸ್ತ್ಯರೂಪವಾದ ಪದವಿಯನ್ನು ಹೊಂದಿರುವರು ॥ ೧೬ ॥

ವತ್ಸ ! ರಾಮ ! ಯಾರು ಶೂರರೋ, ಯಾರು ಪರಾಕ್ರಮಿಗಳೋ, ಯಾರು ಜ್ಞಾನಿಗಳೋ, ಮತ್ತು ಯಾರು ಶಾಸ್ತ್ರಪಾರಂಗತರೋ; ಅಂಥಂಥವರು ಈಲೋಕದಲ್ಲಿ ದೈವವನ್ನು ನಿರೀಕ್ಷಿಸಿಕೊಂಡು ಕುಳಿತಿರುವರೇ?—ನೀನೇ ಹೇಳು ॥ ೧೭ ॥

ಇದಿರಲಿ; ದೈವದ ಫಲಗಳನ್ನು ಹೇಳುವುದರಿಂದಲ್ಲವೆ ಜೋಯಿಸರಿಗೆ ದೈವಜ್ಞರೆಂದು ಹೆಸರಾಯಿತು! ಇಂಥ ದೈವಜ್ಞರು ಯಾರಿಗೆ ಬಹುದೀರ್ಘಕಾಲ ಆಯುಸ್ಸನ್ನು ನಿರ್ಣಯಿಸಿರುವರೋ, ಅವನ ತಲೆಯನ್ನು ಕತ್ತರಿಸಿಬಿಟ್ಟರೆ, ಆಮೇಲೂ ಅವನು ಬದುಕಿದ್ದಪಕ್ಷದಲ್ಲಿ, ಆಗ ದೈವವು ಪ್ರಶಸ್ತವೆಂದು ನಂಬಬಹುದು ॥ ೧೮ ॥

---

[1] ಉತ್ತಮತಾಭಿನ್ನಂ ಪದಮ್.

ಕಾಲವಿದ್ಭಿರ್ವಿನಿರ್ಣೀತಂ ಪಾಣ್ಡಿತ್ಯಂ ಯಸ್ಯ ರಾಘವ ।
ಅನಧ್ಯಾಪಿತಏವಾಸೌ ತಜ್ಜ್ಞಶ್ಚೇದ್ದೈವಮುತ್ತಮಮ್ ॥೧೯॥
ವಿಶ್ವಾಮಿತ್ರೇಣ ಮುನಿನಾ ದೈವಮುತ್ಸೃಜ್ಯ ದೂರತಃ ।
ಪೌರುಷೇಣೈವ ಸಮ್ಪ್ರಾಪ್ತಂ ಬ್ರಾಹ್ಮಣ್ಯಂ ರಾಮ ನಾನ್ಯಥಾ ॥೨೦॥
ಅಸ್ಮಾಭಿರಪರೈರಾಮ ಪುರುಷೈರ್ಮುನಿತಾಂ ಗತೈಃ ।
ಪೌರುಷೇಣೈವ ಸಮ್ಪ್ರಾಪ್ತಾ ಚಿರಂ ಗಗನಗಾಮಿತಾ ॥೨೧॥
ಉತ್ಪಾದ್ಯ ದೇವಸಂಘಾತಂ ಚಕ್ರುಸ್ತ್ರಿಭುವನೋದರೇ ।
ಪೌರುಷೇಣೈವ ಯತ್ನೇನ ಸಾಮ್ರಾಜ್ಯಂ ದಾನವೇಶ್ವರಾಃ ॥೨೨॥
ಆಲೂನಶೀರ್ಣಮಾಭೋಗಿ ಜಗದಾಜಹ್ರುರೋಜಸಾ ।
ಪೌರುಷೇಣೈವ ಯತ್ನೇನ ದಾನವೇಭ್ಯಃ ಸುರೇಶ್ವರಾಃ ॥೨೩॥
ರಾಮ ಪೌರುಷಯುಕ್ತ್ಯಾ ಚ ಸಲಿಲಂ ಧಾರ್ಯತೇನಯಾ ।
ಚಿರಂ ಕರಣ್ಡಕೇ ಚಾರು ನ ದೈವಂ ತತ್ರ ಕಾರಣಮ್ ॥೨೪॥

ಅಯ್ಯಾ! ರಾಮ! ಹೀಗೆಯೇ ಈ ಕಾಲಜ್ಞರು (ಜೋಯಿಸರು) ಯಾರಿಗೆ ಪೂರ್ಣ ಪಾಂಡಿತ್ಯವನ್ನು ನಿಶ್ಚಯಿಸಿರುವರೋ, ಅವನಿಗೆ ಯಾರೂ ಓದುಕಲಿಸದೆಯೇ ಅವನು ಅಂಥ ಜ್ಞಾನವುಳ್ಳವನಾದಪಕ್ಷದಲ್ಲಿ, ಆಗ ದೈವವು ಮುಖ್ಯವಾಗಬಹುದು ॥ ೧೯ ॥

ಹೇರಾಮ! ಪುರುಷಕಾರದಿಂದಲೇ ಮುಂದಕ್ಕೆ ಬಂದವರನ್ನು ತೋರಿಸುವೆನು. ನಮಗೆಲ್ಲರಿಗೂ ಎದುರಾಗಿ ಕುಳಿತಿರುವ ಈ ವಿಶ್ವಾಮಿತ್ರಮುನಿಯು, ದೈವವನ್ನು ದೂರವಾಗಿ ಬಿಟ್ಟುಬಿಟ್ಟು ತನ್ನ ಪುರುಷಕಾರದಿಂದಲೇ ಬ್ರಾಹ್ಮಣ್ಯವನ್ನು ಸಂಪಾದಿಸಿದನಲ್ಲದೆ ಬೇರೆಯಾದ ಮಾರ್ಗವಲ್ಲ ॥ ೨೦ ॥

ಅಯ್ಯಾ! ರಾಮ! ನಾವುಗಳೂ—ನಮ್ಮಂತೆಯೇ ಮುನಿಗಳಾಗಿರುವ ಇತರ ಮನುಷ್ಯರೂಕೂಡ, ನಮ್ಮನಮ್ಮ ಪ್ರಯತ್ನದಿಂದಲೇ—ಸ್ವೇಚ್ಛೆಯಾಗಿ ಚಿರಕಾಲ ಆಕಾಶದಲ್ಲಿ ಸಂಚರಿಸುವ ಶಕ್ತಿಯನ್ನು ಪಡೆದಿರುವೆವು ॥ ೨೧ ॥

ಪ್ರಸಿದ್ಧರಾದ ರಾಕ್ಷಸಶ್ರೇಷ್ಠರು, ದೇವಸಮೂಹವನ್ನೆಲ್ಲ ಹಿಮ್ಮೆಟ್ಟಿ, ಮೂರುಲೋಕದ ಮಧ್ಯದಲ್ಲಿಯೂ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದುದೂಕೂಡ, ಪೌರುಷಯತ್ನದಿಂದಲೇಯೇ ॥ ೨೨ ॥

ಹೀಗೆ ದಾನವರ ಕೈಲಿ ಸಿಕ್ಕಿ - ಭಿನ್ನವಾಗಿ— ಜರ್ಜರವಾಗಿದ್ದ ವಿಶಾಲವಾದ ಜಗತ್ತನ್ನು, ಮತ್ತೆ ದೇವತೆಗಳು ದಾನವರ ಕೈತಪ್ಪಿಸಿ ತೆಗೆದುಕೊಂಡುದುದೂ ಪುರುಷಪ್ರಯತ್ನದಿಂದಲೇ ॥ ೨೩ ॥

ಅಯ್ಯಾ! ರಾಮ! ಈ ಬಿದಿರುಪೆಟ್ಟಿಗೆಯುಲ್ಲಿ ಬಹಳಕಾಲದಿಂದ ನೀರು ತುಂಬಿಕೊಂಡಿರುವುದೂಕೂಡ, ಇದರಮೇಲುಗಡೆಯುಲ್ಲಿ ಜೇನುಮೇಣಮುಂತಾದುವುಗಳನ್ನು ಬೊಳಿಯೋಣವೆಂಬ ಪುರುಷಪ್ರಯತ್ನವನ್ನುಪಯೋಗಿಸಿದುದರಿಂದಾಗಿರುವುದಲ್ಲದೆ, ಆವಿಷಯದಲ್ಲಿ ದೈವವು ಕಾರಣವಲ್ಲ (೧) ॥ ೨೪ ॥

---

(೧) ವಸಿಷ್ಠರು ಬಿದುರಿನಿಂದ ಹೆಣೆದ ಬಂದು ಬುಟ್ಟಿಯಲ್ಲಿ ನೀರುತುಂಬಿಟ್ಟುಕೊಂಡಿದ್ದರೆಂದೂ, ಅದನ್ನು ತೋರಿಸುತ ಈ ಮಾತನ್ನು ಹೇಳಿದರೆಂದೂ ಕಾಣುವುದು.

ಭರಣಾದಾನಸಂರಮ್ಭವಿಭ್ರಮಶ್ರಮಭೂಮಿಷು |
ಶಕ್ತತಾ ದೃಶ್ಯತೇ ರಾಮ ನದೈವಸ್ಯೌಷಧೇರಿವ ||೨೫||
ಸಕಲಕಾರಣಕಾರ್ಯವಿವರ್ಜಿತಂ ನಿಜವಿಕಲ್ಪವಶಾದುಪಕಲ್ಪಿತಮ್ |
ತ್ವಮನಪೇಕ್ಷ್ಯಹಿದೈವಮಸನ್ಮಯಂ ಶ್ರಯ ಶುಭಾಶಯ ಪೌರುಷಮುತ್ತಮಮ್ ||

ಇತಿ ಮುಮುಕ್ಷುವ್ಯವಹಾರಪ್ರಕರಣೇ ದೈವನಿರಾಕರಣಂ ನಾಮ
ಅಷ್ಟಮಃ ಸರ್ಗಃ.

ವತ್ಸ! ರಾಮ! ಯಾವುದಾದರೊಂದು ದಿವ್ಯವಾದ ಮೂಲಿಕೆಯನ್ನು ಸಂಪಾದಿಸಿದರೆ ಅದರ ಮಹಿಮೆಯಿಂದ, ತಮ್ಮವರನ್ನೆಲ್ಲ ಪೋಷಿಸುವುದಕ್ಕೂ—ಶತ್ರುರಾಜ್ಯಮುಂತಾದುವುಗಳನ್ನು ತೆಗೆದುಕೊಳ್ಳುವುದಕ್ಕೂ—ಇತರರಲ್ಲಿ ಬೇಕಾದಂತೆ ಕೋಪಾದಿಗಳನ್ನು ತೋರಿಸುವುದಕ್ಕೂ—ತಾನು ನಾನಾವಿಧವಾಗಿ ವಿಲಾಸಪಡುವುದಕ್ಕೂ—ಇನ್ನೂ ಅನೇಕವಿಧವಾದ ಶ್ರಮಸಾಧ್ಯವಾದ ಕಾರ್ಯಗಳನ್ನು ಮಾಡುವುದಕ್ಕೂಕೂಡ, ಶಕ್ತಿಯುಂಟಲ್ಲವೆ! ಇಂತಹ ಶಕ್ತಿಯೊಂದೂ ದೈವಕ್ಕೆ ಕಾಣುವುದಿಲ್ಲ ॥ ೨೫ ॥

ಆದಕಾರಣ, ಎಲೈ ಮಂಗಳಹೃದಯನಾದ ರಾಮನೆ! ಪೂರ್ವೋಕ್ತರೀತಿಯಾಗಿ, (೧) ಸಮಸ್ತವಾದ ಕಾರ್ಯಕಾರಣಗಳಿಂದಲೂ ಬಿಡಲ್ಪಟ್ಟುದಾಗಿಯೂ—ನಿನ್ನ ಮನೋವಿಕಲ್ಪಬಲದಿಂದ ಕಲ್ಪಿಸಲ್ಪಟ್ಟುದಾಗಿಯೂ ಕೇವಲ ಮಿಥ್ಯಾರೂಪವಾಗಿಯೂ ಇರುವ ಈ ದೈವವನ್ನು ನೀನು ಲಕ್ಷ್ಯಮಾಡದೆ, ಉತ್ತಮವಾದ ಪೌರುಷವನ್ನವಲಂಬಿಸು ॥ ೨೬ ॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ದೈವನಿರಾಕರಣವೆಂಬ
ಎಂಟನೆಯ ಸರ್ಗವು.

---

(೧) ಈ ದೈವವು ಇರುವುದಕ್ಕೆ ಪೂರ್ವಭಾವಿಯಾದ ಯಾವುದೊಂದು ಕಾರಣವೂ ಇಲ್ಲ;—ಇದಕ್ಕೆ ಸಾಧ್ಯವಾದ ಯಾವುದೊಂದು ಫಲವೂ ಇಲ್ಲ;—ಮನಸ್ಸಿನ ಭ್ರಾಂತಿಯಿಂದ ಇದು ಕಲ್ಪಿತವಾಗಿದೆ;—ಎಂದು ಭಾವವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ನವಮಃ ಸರ್ಗಃ.

ಶ್ರೀರಾಮ ಉವಾಚ.

ಭಗವನ್ ಸರ್ವಧರ್ಮಜ್ಞ ಪ್ರತಿಷ್ಠಾಮಲಮಾಗತಮ್ ।
ಯಲ್ಲೋಕೇ ತದ್ವದ ಬ್ರಹ್ಮನ್ ದೈವಂನಾಮ ಕಿಮುಚ್ಯತೇ ॥ ೧ ॥

ಶ್ರೀವಸಿಷ್ಠ ಉವಾಚ.

ಪೌರುಷಂ ಸರ್ವಕಾರ್ಯಾಣಾಂ ಕರ್ತೃ ರಾಘವ ನೇತರತ್ ।
ಫಲಭೋಕ್ತೃ ಚ ಸರ್ವತ್ರ ನ ದೈವಂ ತತ್ರ ಕಾರಣಮ್ ॥ ೨ ॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಒಂಭತ್ತನೆಯ ಸರ್ಗವು.

ದೈವಾಪಲಾಪಸಿದ್ಧ್ಯರ್ಥಂ ಮನೋಮಾತ್ರತ್ವಮುಚ್ಯತೇ ।
ಕರ್ಮಣಃ ಸಫಲಸ್ಯಾತ್ರ ಮನಸಶ್ಚ ಚಿದಾತ್ಮತಾ ॥

ದೈವವಿಲ್ಲವೆಂಬ ಮಾತು ಸಿದ್ಧಿಸುವುದಕ್ಕೋಸ್ಕರ, ಫಲೋನ್ಮುಖವಾದ ಕರ್ಮವು ಕೇವಲ ಮನೋರೂಪವೆಂಬುದೂ, ಮನಸ್ಸು ಜ್ಞಾನರೂಪವೆಂಬುದೂ ಕೂಡ ಈ ಸರ್ಗದಲ್ಲಿ ಹೇಳಲ್ಪಡುವುವು.

ಇದುವರೆಗೆ ವಸಿಷ್ಠರು ಹೇಳಿದುದರಲ್ಲಿ. ಪೌರುಷವೇ ಮುಖ್ಯವೆಂಬುದನ್ನು ಸಾಧಿಸುವುದಕ್ಕೋಸ್ಕರ, ಕೆಲವುಕಡೆ ದೈವವೆಂಬ ಪದಾರ್ಥವೇ ಸುಳ್ಳೆಂಬುದಾಗಿಯೂ—ಕೆಲವು ಕಡೆ ಜನ್ಮಾಂತರೀಯಪೌರುಷಕ್ಕೇ ದೈವವೆಂಬ ಸಂಜ್ಞೆಯೆಂಬುದಾಗಿಯೂ ಹೇಳಿದಂತಾಗುವುದು. ಇದರಲ್ಲಿ, ದೈವವೆಂಬ ಪದಾರ್ಥವೇ ಇಲ್ಲವೆಂಬ ಪಕ್ಷವನ್ನಿಟ್ಟುಕೊಂಡರೆ, ಲೋಕದಲ್ಲಿಯೂ ಶಾಸ್ತ್ರದಲ್ಲಿಯೂ ದೃಢತರವಾಗಿ ದೈವವುಂಟೆಂಬುದಾಗಿರುವ ಪ್ರತೀತಿಯು ಅಸಂಗತವಾಗಬಹುದು; ಜನ್ಮಾಂತರಕರ್ಮವೇ ದೈವವೆಂಬ ಎರಡನೆಯ ಪಕ್ಷವನ್ನಿಟ್ಟುಕೊಂಡರೆ, ದೈವವೇ ಇಲ್ಲವೆಂದು ಮೊದಲು ಮಾಡಿದ ಪ್ರತಿಜ್ಞೆಗೆ ಭಂಗವುಂಟಾಗಬಹುದು. ಇತ್ಯಾದಿ ವಿಷಯಗಳನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡವನಾಗಿ, ಶ್ರೀರಾಮನು ವಸಿಷ್ಠರನ್ನು ಕುರಿತು ಪ್ರಶ್ನೆಮಾಡಿದನು.

ಸಕಲಧರ್ಮಗಳನ್ನೂ ಬಲ್ಲವರಾದ-ಬ್ರಾಹ್ಮಣೋತ್ತಮರಾದ—ಪೂಜ್ಯರೆ! ದೈವವೆಂದು ಈ ಲೋಕದಲ್ಲಿ ಅತ್ಯಂತವಾಗಿ ಪ್ರಸಿದ್ಧಿಹೊಂದಿರುವುದಲ್ಲವೆ! ಅದಾವ ಪದಾರ್ಥವನ್ನು ದೈವವೆಂದು ಹೇಳುವರು?—ಅಪ್ಪಣೆಯಾಗಬೇಕು ॥೧॥

ಹೀಗೆ ರಾಮನು ಪ್ರಶ್ನೆಮಾಡಿದುದನ್ನು ಕೇಳಿ, ಅವನ ಅಭಿಪ್ರಾಯವನ್ನು ತಿಳಿದುಕೊಂಡವರಾಗಿ, ಶ್ರೀವಸಿಷ್ಠಮುನಿಗಳು ಉತ್ತರಹೇಳಿದರು.

ಅಯ್ಯಾ! ರಾಘವ! ಸಮಸ್ತಕಾರ್ಯಗಳನ್ನೂ ಮಾಡತಕ್ಕುದು ಪೌರುಷವೇ; ಮತ್ತೊಂದಲ್ಲ. ಸರ್ವವಿಷಯದಲ್ಲಿಯೂ ಫಲಾನುಭವಮಾಡತಕ್ಕುದೂ ಪೌರುಷವೇ; ಆ ವಿಷಯದಲ್ಲಿ ದೈವವು ಕಾರಣವಲ್ಲ ॥೨॥

ದೈವಂ ನ ಕಿಂಚಿತ್ ಕುರುತೇ ನಭುಙ್ಕ್ತೇ ನ ಚ ವಿದ್ಯತೇ ।
ನ ದೃಶ್ಯತೇ ನಾದ್ರಿಯತೇ ಕೇವಲಂ ಕಲ್ಪನೇದೃಶೀ ॥ ೩ ॥
ಸಿದ್ಧಸ್ಯ ಪೌರುಷೇಣೇಹ ಫಲಸ್ಯ ಫಲಶಾಲಿನಾ ।
ಶುಭಾಶುಭಾರ್ಥಸಂಪತ್ತಿಃ ದೈವಶಬ್ದೇನ ಕಥ್ಯತೇ ॥೪॥
ಪೌರುಷೋಪನತಾ ನಿತ್ಯಂ ಇಷ್ಟಾನಿಷ್ಟಸ್ಯ ವಸ್ತುನಃ ।
ಪ್ರಾಪ್ತಿರಿಷ್ಟಾಪ್ಯನಿಷ್ಟಾ ವಾ ದೈವಶಬ್ದೇನ ಕಥ್ಯತೇ ॥೫॥
ಭಾವೀತ್ವವಶ್ಯಮೇವಾರ್ಥಃ ಪುರುಷಾರ್ಥೈಕಸಾಧನಃ ।
ಯಃ ಸೋಽಸ್ಮಿನ್ ಲೋಕಸಙ್ಘಾತೇ ದೈವಶಬ್ದೇನ ಕಥ್ಯತೇ ॥೬॥
ನನು ರಾಘವ ಲೋಕಸ್ಯ ಕಸ್ಯಚಿತ್ ಕಿಂಚಿದೇವ ಹಿ ।
ದೈವಮಾಕಾಶರೂಪಂ ಹಿ ಕರೋತಿ ನ ಕರೋತಿ ಚ ॥೭॥
ಪುರುಷಾರ್ಥಸ್ಯ ಸಿದ್ಧಸ್ಯ ಶುಭಾಶುಭಫಲೋದಯೇ ।
ಇದಮಿತ್ಥಂ ಸ್ಥಿತಮಿತಿ ಯೋಕ್ತಿಸ್ತದ್ದೈವಮುಚ್ಯತೇ ॥೮॥
ಇತ್ಥಂ ಮಮಾಭವದ್ಬುದ್ಧಿಃ ಇತ್ಥಂ ಮೇ ನಿಶ್ಚಯೋ ಹ್ಯಭೂತ್ ।
ಇತಿ ಕರ್ಮಫಲಪ್ರಾಪ್ತೌ ಯೋಕ್ತಿಸ್ತದ್ದೈವಮುಚ್ಯತೇ ॥೯॥
ಇಷ್ಟಾನಿಷ್ಟಫಲಪ್ರಾಪ್ತೌ ಇದಮಿತ್ಯಸ್ಯ ವಾಚಕಮ್ ।

ದೈವವು ಯಾವುದನ್ನೂ ಮಾಡುವುದಿಲ್ಲ; ಯಾವುದನ್ನೂ ಅನುಭವಿಸುವುದಿಲ್ಲ; ಅದು ಇಲ್ಲವೂ ಇಲ್ಲ; ಅದು ಕಾಣಿಸುವುದೂ ಇಲ್ಲ; ಅದನ್ನು ವಿವೇಕಿಗಳಾದವರು ಆದರಿಸುವುದೂ ಇಲ್ಲ. ಇದು ಈ ವಿಧವಾದ ಕಲ್ಪನಾಮಾತ್ರವಾಗಿರುವುದು ॥೩॥

ಫಲಶಾಲಿಯಾದ ಪೌರುಷದಿಂದ ಸಿದ್ಧವಾದ ಫಲದ ಶುಭಾಶುಭಪ್ರಾಪ್ತಿಯನ್ನೇ ದೈವವೆಂಬ ಶಬ್ದದಿಂದ ಕರೆಯುವರು ॥೪॥

ಪೌರುಷದಿಂದ ಇಷ್ಟಾನಿಷ್ಟವಿಷಯಗಳು ಪ್ರಾಪ್ತವಾಗುವುವು ; ಅವುಗಳ ಪ್ರಾಪ್ತಿಯು, ಇಷ್ಟವಾಗಿರಲಿ---ಅಥವಾ ಅನಿಷ್ಟವಾಗಿರಲಿ— ದೈವಶಬ್ದದಿಂದ ಹೇಳಲ್ಪಡುವುದು ॥

ಪುರುಷಪ್ರಯತ್ನವೊಂದೇ ಮುಖ್ಯಸಾಧನವಾಗುಳ್ಳ ಯಾವ ವಿಷಯವು ಅವಶ್ಯವಾಗಿ ಆಗಿಯೇತೀರಬೇಕಾದುದೋ, ಅದನ್ನೇ ಈ ಪ್ರಪಂಚಸಮುದಾಯದಲ್ಲಿ ದೈವಶಬ್ದದಿಂದ ಕರೆಯುವರು ॥೬॥

ಅಯ್ಯಾ ರಾಘವ! ಆಕಾಶದಂತೆ ಅಭಾವಪದಾರ್ಥವಾದ ಈ ದೈವವು,—ಯಾವ ಮನುಷ್ಯನಿಗೂ ಯಾವುದೊಂದನ್ನೂ—ಮಾಡುವುದೂ ಇಲ್ಲ; ಬಿಡುವುದೂ ಇಲ್ಲ ॥೭॥

ಪುರುಷಪ್ರಯತ್ನವು ಸಿದ್ಧಿಸಿ—ಅದರ ಶುಭಾಶುಭಫಲಗಳುಂಟಾಗಲಾಗಿ,—ಇದು ಈರೀತಿಯಾಗಿತ್ತೆಂಬ ಮಾತಾವುದುಂಟೋ—ಅದೇ ದೈವವೆಂದು ಹೇಳಲ್ಪಡುವುದು ॥೮॥

ಪುರುಷನು ಮಾಡಿದ ಕರ್ಮದ ಫಲವು ಪ್ರಾಪ್ತವಾಗಲು,—ನನಗೆ ಈರೀತಿಯಾಗಿ ಬುದ್ಧಿಯುಂಟಾಯಿತು, ನನಗೆ ಈರೀತಿಯಾಗಿ ನಿಶ್ಚಯವುಂಟಾಯಿತು,—ಎಂಬ ಮಾತಾವುದುಂಟೋ, ಅದು ದೈವವೆಂದು ಹೇಳಲ್ಪಡುವುದು ॥೯॥

ಇಷ್ಟಾನಿಷ್ಟಫಲಗಳು ಲಭಿಸಿದಾಗ, – ಇದು ಹೀಗಾಯಿತು-- ಎಂಬುದಾಗಿ ಹೇಳುವ

ಆಶ್ವಾಸನಾಮಾತ್ರವಚೋ ದೈವಮಿತ್ಯೇವ ಕಥ್ಯತೇ ॥೧೦॥

ಶ್ರೀರಾಮ ಉವಾಚ.

ಭಗವನ್ ಸರ್ವಧರ್ಮಜ್ಞ ಯತ್ ಪ್ರಾಕ್ ಕರ್ಮೋಪಸಞ್ಚಿತಮ್ ।
ತದ್ದೈವಂ ದೈವಮಿತ್ಯುಕ್ತಂ ಅಪಮೃಷ್ಟಂ ಕಥಂ ತ್ವಯಾ ॥೧೧॥

ಶ್ರೀವಸಿಷ್ಠ ಉವಾಚ,

ಸಾಧು ರಾಘವ ಜಾನಾಸಿ ಶೃಣು ವಕ್ಷ್ಯಾಮಿ ತೇಖಿಲಮ್ ।
ದೈವಂ ನಾಸ್ತೀತಿ ತೇ ಯೇನ ಸ್ಥಿರಾಬುದ್ಧಿರ್ಭವಿಷ್ಯತಿ ॥೧೨॥
ಯಾ ಮನೋವಾಸನಾ ಪೂರ್ವಂ ಬಭೂವ ಕಿಲ ಭೂರಿಶಃ ।
ಸೈವೇಯಂ ಕರ್ಮಭಾವೇನ ನೃಣಾಂ ಪರಿಣತಿಂ ಗತಾ ॥೧೩॥
ಜನ್ತುರ್ಯದ್ವಾಸನೋ ರಾಮ ತತ್ಕರ್ತಾ ಭವತಿ ಕ್ಷಣಾತ್ ।
ಅನ್ಯಕರ್ಮಾನ್ಯಭಾವಶ್ಚೇತ್ಯೇತನ್ನೈವೋಪಪದ್ಯತೇ ॥೧೪॥
ಗ್ರಾಮಗೋ ಗ್ರಾಮಮಾಪ್ನೋತಿ ಪತ್ತನಾರ್ಥೀ ಚ ಪತ್ತನಮ್ ।
ಯೋಯೋ ಯದ್ವಾಸನಸ್ತತ್ರ ಸಸ ಪ್ರಯತತೇ ಸದಾ ॥೧೫॥

ಕೇವಲಸಮಾಧಾನೋಕ್ತಿಯೇ ದೈವವೆಂದು ಹೇಳಲ್ಪಡುವುದು ॥೧೦॥

ಇದನ್ನು ಕೇಳಿ ಶ್ರೀರಾಮನು,—ತಾನು ಹೇಳಿದ ಎರಡುಪಕ್ಷಗಳಿಗೂ ಪ್ರತ್ಯೇಕವಾದ ಉತ್ತರವನ್ನೀಯದೆ ಎರಡನ್ನೂ ಒಟ್ಟುಗೂಡಿಸಿ ಹೇಳುವುದಕ್ಕೆ ಸರಿಯಾದ ಅಭಿಪ್ರಾಯ ವನ್ನರಿಯದವನಾಗಿ, ಪುನಃ ಕೇಳಿದನು.

ಸಕಲ ಧರ್ಮರಹಸ್ಯಗಳನ್ನೂ ತಿಳಿದಿರುವ ಎಲೆ ಪೂಜ್ಯರೆ! ಹಿಂದೆ ಸಂಚಿತವಾದ ಕರ್ಮ ವಾವುದುಂಟೋ, ಅದನ್ನೇ ದೈವ–ದೈವ–ಎಂದು ತಾವು ಅಪ್ಪಣೆಕೊಟ್ಟಿರುವಿರಿ; ಆದಕಾ ರಣ, ದೈವವೆಂಬ ಪದಾರ್ಥವೇ ಇಲ್ಲವೆಂದು ತಾವು ಅದನ್ನು ಅಪಲಪಿಸುವುದು ಹೇಗೆ? ॥೧೧॥

ಬಳಿಕ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಮತ್ತೆ ಹೇಳಿದರು.

ಅಯ್ಯಾ ರಾಘವ! ಸಾಧು!! ನೀನು ಚೆನ್ನಾಗಿ ತಿಳಿದುಕೊಳ್ಳುತಿರುವೆ. ಆದಕಾ ರಣ ಚೆನ್ನಾಗಿ ಕೇಳು; ನಾನು ನಿನಗೆಲ್ಲವನ್ನೂ ಹೇಳುವೆನು. ಇದನ್ನು ಕೇಳಿದರೆ, ದೈವ ವಿಲ್ಲವೆಂದು ನಿನಗೆ ಸ್ಥಿರವಾದ ಬುದ್ಧಿಯುಂಟಾಗುವುದು ॥೧೨॥

ಮನುಷ್ಯರಿಗೆ ಮೊದಲು ಯಾವ ಮನೋವಾಸನೆಯು ನಾನಾವಿಧವಾಗಿದ್ದಿತೋ, ಅದೇ ಈಗ ಕರ್ಮರೂಪವಾಗಿ ಪರಿಣಮಿಸಿರುವುದು ॥೧೩॥

ಹೇರಾಮ! ಈರೀತಿಯಾಗಿ ಪ್ರಾಣಿಯು ಯಾವವಿಧವಾದ ವಾಸನೆಯುಳ್ಳದಾಗು ವುದೋ, ಆ ವಿಧವಾದ ಕರ್ಮವನ್ನು ಒಂದು ಕ್ಷಣದೊಳಗಾಗಿ ಮಾಡುವುದು. ಬೇರೆಯಾದ ಕರ್ಮವುಳ್ಳವನು—ಅದಕ್ಕೆ ವಿರುದ್ಧವಾದ ಮತ್ತೊಂದುಭಾವವುಳ್ಳವನಾಗಿರುತ್ತಾನೆಂಬುದು ಎಂದಿಗೂ ಸಿದ್ಧಿಸುವುದಿಲ್ಲ ॥೧೪॥

ಹಳ್ಳಿಗೆ ಹೊರಟವನು ಹಳ್ಳಿಯನ್ನೇ ಹೊಂದುವನು; ಪಟ್ಟಣಕ್ಕೆ ಹೋಗಬೇಕೆಂದ ಪೇಕ್ಷಿಸತಕ್ಕವನು ಪಟ್ಟಣವನ್ನೇ ಹೊಂದುವನು. ಹೀಗೆ ಯಾವಯಾವನು ಯಾವವಿಧ ವಾದ ವಾಸನೆಯುಳ್ಳವನಾಗುವನೋ, ಅವನವನು ಆಯಾ ವಿಷಯದಲ್ಲಿ ಸರ್ವದಾ ಪ್ರಯ ತ್ನಪಡುವನು ॥೧೫॥

ಯದೇವ ತೀವ್ರಸಂವೇಗಾತ್ ದೃಢಂ ಕರ್ಮ ಕೃತಂ ಪುರಾ ।
ತದೇವ ದೈವಶಬ್ದೇನ ಪರ್ಯಾಯೇಣೇಹ ಕಥ್ಯತೇ ॥೧೬॥
ಏವಂ ಕರ್ಮಸ್ಥಕರ್ಮಾಣಿ ಕರ್ಮ ಪ್ರೌಢಾ ಸ್ವವಾಸನಾ ।
ವಾಸನಾ ಮನಸೋ ನಾನ್ಯಾ ಮನೋ ಹಿ ಪುರುಷಃ ಸ್ಮೃತಃ ॥೧೭॥
ಯದ್ದೈವಂ ತಾನಿ ಕರ್ಮಾಣಿ ಕರ್ಮ ಸಾಧೋ ಮನೋ ಹಿ ತತ್ ।
ಮನೋ ಹಿ ಪುರುಷಸ್ತಸ್ಮಾತ್ ದೈವಂ ನಾಸ್ತೀತಿ ನಿಶ್ಚಯಃ ॥೧೮॥
ಏಷಏವ ಮನೋಜನ್ತುಃ ಯದ್ಯತ್ ಪ್ರಯತತೇ ಹಿತಮ್ ।
ಕೃತಂ ತತ್ತದವಾಪ್ನೋತಿ ಸ್ವತಏವ ಹಿ ದೈವತಃ ॥೧೯॥
ಮನಶ್ಚಿತ್ತಂ ವಾಸನಾ ಚ ಕರ್ಮ ದೈವಂ ಚ ನಿಶ್ಚಯಃ ।
ರಾಮ ದುರ್ನಿಶ್ಚಯಸ್ಯೈತಾಃ ಸಂಜ್ಞಾಃ ಸದ್ಭಿರುದಾಹೃತಾಃ ॥೨೦॥
ಏವಂನಾಮಾ ಹಿ ಪುರುಷೋ ದೃಢಭಾವನಯಾ ಯಥಾ ।

ಹಿಂದೆ ಅತ್ಯುತ್ಕಟವಾದ ಫಲಾಭಿಸಂಧಿಯಿಂದ ಯಾವ ಕರ್ಮವು ಮಾಡಲ್ಪಟ್ಟಿರುವುದೋ, ಅದೇ—ಪರ್ಯಾಯಪದವಾದ ದೈವಶಬ್ದದಿಂದ ಹೇಳಲ್ಪಡುವುದು ॥೧೬॥

ಕರ್ಮತರ ಕರ್ಮಗಳು ಹೀಗೆ ನಡೆಯುವುವು; ಆ ಕರ್ಮವೆಂಬುದು—ಚೆನ್ನಾಗಿ ಅಭಿವೃದ್ಧಿಹೊಂದಿರುವ ವಾಸನೆಯೇ ಆಗಿರುವುದು; ವಾಸನೆಯೆಂಬುದು—ಮನಸ್ಸಿಗಿಂತ ಬೇರೆಯಾಗಿಲ್ಲ; ಮನಸ್ಸೋ ಎಂದರೆ—ಪುರುಷನೇ ಮನಸ್ಸೆಂದು ಜ್ಞಾನಿಗಳು ಹೇಳಿರುವರು ॥

ಸಾಧುವಾದ ರಾಮನೆ! ಹೀಗೆ, ದೈವವೆಂಬುದಾವುದೋ—ಅದು ಕರ್ಮವೇ ಆಗಿರುವುದು; ಕರ್ಮವೆಂಬುದಾವುದೋ—ಅದು ಮನಸ್ಸೇ ಆಗಿರುವುದು; ಮನಸ್ಸೆಂಬುದು ಪುರುಷನೇ ಆಗಿರುವುದು. ಆದಕಾರಣ ದೈವವಿಲ್ಲವೆಂದು ನಿಶ್ಚಯವು ॥೧೮॥

ಹೀಗೆ ಮನೋರೂಪನಾಗಿರುವ ಈ ಮನುಷ್ಯನು, ತನಗೆ ಹಿತವಾದ ಯಾವಯಾವುದನ್ನುದ್ದೇಶಿಸಿ, ಪ್ರಯತ್ನಪಡುವನೋ, ಅದದನ್ನು ಕೆಲಸಮಾಡಿ ತನ್ನಿಂದಲೇ ಪಡೆಯುವನು; ಅಥವಾ ಅದನ್ನೇ ದೈವವೆನ್ನುವ ಪಕ್ಷದಲ್ಲಿ—ದೈವದಿಂದ ಪಡೆಯುವನೆಂದು ಹೇಳಿಕೊಳ್ಳಬಹುದು ॥೧೯॥

ಅಯ್ಯಾ ರಾಮ! ಹೀಗೆ ಈ ದೈವವು ಸುತರಾಂ ಅಭಾವಪದಾರ್ಥವೆಂದೇ ನಿಶ್ಚಯವು. ಆದರೆ ಪ್ರಪಂಚದಲ್ಲಿ ಅಭಾವಪದಾರ್ಥವಾದ ಶಶವಿಷಾಣಾದಿಗಳುಂಟೆಂಬುದಾಗಿ ಎಂದಿಗೂ ವ್ಯವಹಾರವೇ ಇಲ್ಲದಿರುವಾಗ—ಈ ದೈವವೂ ಹಾಗೆಯೇ ಅಭಾವವಾಗಿದ್ದಪಕ್ಷದಲ್ಲಿ ಅದು ಮಾತ್ರ ಇರುವುದೆಂಬ ವ್ಯವಹಾರವು ಪ್ರಪಂಚದಲ್ಲಿ ಪ್ರಸಿದ್ಧವಾಗದಿರಬೇಕಾಗಿತ್ತೆಂದು ಒಂದು ಆಕ್ಷೇಪಣೆ ತೋರಬಹುದಲ್ಲವೆ! ಹೀಗೆ ಶಂಕಿಸಬಾರದು: ಮನಸ್ಸಿನ ಸ್ವರೂಪವನ್ನು ಸರಿಯಾಗಿ ನಿಶ್ಚಯಿಸುವುದು ಸುತರಾಂ ಅಸಾಧ್ಯವು; ಆದಕಾರಣ, ಆದಕ್ಕೇ—ಮನಸ್ಸು ಚಿತ್ತ ವಾಸನೆ ಕರ್ಮ ದೈವ—ಎಂಬ ಈ ಸಂಜ್ಞೆಗಳನ್ನು ಜ್ಞಾನಿಗಳು ಹೇಳಿರುವರು. ಇದು ನಿಶ್ಚಯವು ॥೨೦॥

ಅಯ್ಯಾ ರಾಮ! ಈವಿಧವಾದ ನಾಮಧೇಯವುಳ್ಳ ಪುರುಷನು, ದೃಢವಾದ ಮನೋ

ನಿತ್ಯಂ ಪ್ರಯತತೇ ರಾಮ ಫಲಮಾಪ್ನೋತ್ಯಲಂ ತಥಾ ॥೨೧॥
ಏವಂ ಪುರುಷಕಾರೇಣ ಸರ್ವಮೇವ ರಘೂದ್ವಹ ।
ಪ್ರಾಪ್ಯತೇ ನೇತರೇಣೇಹ ತಸ್ಮಾತ್ ಸ ಶುಭದೋಽಸ್ತು ತೇ ॥೨೨॥

ಶ್ರೀರಾಮಉವಾಚ.

ಪ್ರಾಕ್ತನಂ ವಾಸನಾಜಾಲಂ ನಿಯೋಜಯತಿ ಮಾಂ ಯಥಾ ।
ಮುನೇ ತಥೈವ ತಿಷ್ಠಾಮಿ ಕೃಪಣಃ ಕಿಂ ಕರೋಮ್ಯಹಮ್ ॥೨೩॥

ಶ್ರೀವಸಿಷ್ಠಉವಾಚ.

ಅತಏವ ಹಿ ರಾಮ ತ್ವಂ ಶ್ರೇಯಃ ಪ್ರಾಪ್ನೋಷಿ ಶಾಶ್ವತಮ್ ।
ಸ್ವಪ್ರಯತ್ನೋಪನೀತೇನ ಪೌರುಷೇಣೈವ ನಾನ್ಯಥಾ ॥೨೪॥
ದ್ವಿವಿಧೋ ವಾಸನಾವ್ಯೂಹಃ ಶುಭಶ್ಚೈವಾಶುಭಶ್ಚ ತೇ ।
ಪ್ರಾಕ್ತನೋ ವಿದ್ಯತೇ ರಾಮ ದ್ವಯೋರೇಕತರೋಽಥವಾ ॥೨೫॥

ನಿಶ್ಚಯದಿಂದ ಹೇಗೆ ಪ್ರಯತ್ನಪಡುವನೋ, ಅರೀತಿಯಾಗಿ ಫಲವನ್ನು ಹೊಂದಿಯೇಹೊಂದುವನು ॥೨೧॥

ಅಯ್ಯಾ ರಘುಕುಲಶ್ರೇಷ್ಠನೆ ! ಹೀಗೆ ಈ ಪ್ರಪಂಚದಲ್ಲಿ ಸಮಸ್ತವೂ ಪುರುಷಕಾರದಿಂದಲೇ ಹೊಂದಲ್ಪಡುವುದಲ್ಲದೆ ಮತ್ತೊಂದರಿಂದಲ್ಲ. ಆದಕಾರಣ, ಅಂತಹ ಪುರುಷಕಾರವು ನಿನಗೆ ಶುಭಪ್ರದವಾಗಲಿ ॥೨೨॥

ಹೀಗೆ ವಸಿಷ್ಠರು ಹೇಳಲಾಗಿ, ಶ್ರೀರಾಮನು—ಆದರೂ ಜನ್ಮಾಂತರವಾಸನಾವಶನಾಗಿರುವುದರಿಂದ ಜೀವನಿಗೆ ಸ್ವಾತಂತ್ರ್ಯವೆಂಬುದು ಸಿದ್ಧಿಸುವುದಿಲ್ಲವೆಂದು ಶಂಕಿಸಿದವನಾಗಿ, ಮತ್ತೆ ವಸಿಷ್ಠರನ್ನು ಕುರಿತು ಹೇಳಿದನು.

ಸ್ವಾಮಿ! ವಸಿಷ್ಠಮುನೀಶ್ವರರೆ! ಪೂರ್ವಜನ್ಮದ ವಾಸನಾಸಮೂಹವು ನನ್ನನ್ನು ಹೇಗೆ ಪ್ರೇರಿಸುತದೆಯೋ, ನಾನು ಹಾಗೆಯೇ ಇರುವೆನು; ಅಷ್ಟೇಹೊರತು, ದೀನನಾಗಿ ಪರಾಧೀನನಾಗಿರುವ ನಾನು ಏನನ್ನುತಾನೆ ಮಾಡಬಲ್ಲೆನು ? ॥೨೩॥

ಹೀಗೆ ಮತ್ತೆ ಶಂಕಿಸುತಿರುವ ಶ್ರೀರಾಮನನ್ನು ಕುರಿತು ವಸಿಷ್ಠಮಹರ್ಷಿಗಳು ಪುನಃ ಹೇಳಿದರು.

ಅಯ್ಯಾ ! ರಾಮ ! ಹಾಗೆ ತಿಳಿಯಬಾರದು; ಪೂರ್ವಜನ್ಮವಾಸನೆಯು ಬಂದುವೇಳೆ ಪ್ರಬಲವಾಗಿದ್ದು ಈಗಿನ ಫಲಾನುಭವವು ಅದಕ್ಕಧೀನವಾಗಿಬಿಟ್ಟರೂ, ಮುಂದೆ ಫಲಾನುಭವಮಾಡುವುದಕ್ಕಾಗಿ ನಮ್ಮ ಪ್ರಯತ್ನವಾವಶ್ಯಕವೇ ಆಗಿರುವುದು. ಆದುದರಿಂದಲೇ ನೀನು ಸ್ವಪ್ರಯತ್ನಪೂರ್ವಕವಾದ ಪೌರುಷದಿಂದಲೇ ಶಾಶ್ವತವಾದ ಶ್ರೇಯಸ್ಸನ್ನು ಪಡೆಯುವೆಯಲ್ಲದೆ, ಇತರವಿಧವಾಗಿ ಪಡೆಯಲಾರೆ ॥೨೪॥

ಅಯ್ಯಾ! ರಾಮ! ಪ್ರಪಂಚದಲ್ಲಿ ಈ ವಾಸನಾಸಮೂಹವು, ಶುಭವೆಂದೂ ಅಶುಭವೆಂದೂ ಎರಡುವಿಧವಾಗಿರುವುದು. ನಿನಗೆ ಇವೆರಡೂ ಇರುವುವೆ? ಅಥವಾ ಇವೆರಡಲ್ಲಿ ಯಾವುದಾದರೊಂದಿರುವುದೆ? ॥೨೫॥

ವಾಸನೌಘೇನ ಶುದ್ಧೇನ ತತ್ರ ಚೇದದ್ಯ ನೀಯಸೇ ।
ತತ್ ಕ್ರಮೇಣೈವ ಶುದ್ಧೇನ ಪದಂ ಪ್ರಾಪ್ಸ್ಯಸಿ ಶಾಶ್ವತಮ್ ॥೨೬॥
ಅಥ ಚೇದಶುಭೋ ಭಾವಃ ತ್ವಾಂ ಯೋಜಯತಿ ಸಙ್ಕಟೇ ।
ಪ್ರಾಕ್ತನಸ್ತದಸೌ ಯತ್ನಾತ್ ಜೇತವ್ಯೋ ಭವತಾ ಬಲಾತ್ ॥೨೭॥
ಪ್ರಾಜ್ಞಶ್ಚೇತನಮಾತ್ರಸ್ತ್ವಂ ನ ದೇಹಸ್ತ್ವಂ ಜಡಾತ್ಮಕಃ ।
ಅನ್ಯೇನ ಚೇತಸಾ ತತ್ ತೇ ಚೇತ್ಯತ್ವಂ ಕ್ವೇವ ವಿದ್ಯತೇ ॥೨೮॥
ಅನ್ಯಸ್ತ್ವಂ ಚೇತಯತಿ ಚೇತ್ ತಂ ಚೇತಯತಿ ಕೋಪರಃ ।
ಕಇಮಂ ಚೇತಯೇತ್ ತಸ್ಮಾತ್ ಅನವಸ್ಥಾ ನ ವಾಸ್ತವೀ ॥೨೯॥
ಶುಭಾಶುಭಾಭ್ಯಾಂ ಮಾರ್ಗಾಭ್ಯಾಂ ವಹನ್ತೀ ವಾಸನಾಸರಿತ್ ।
ಪೌರುಷೇಣ ಪ್ರಯತ್ನೇನ ಯೋಜನೀಯಾ ಶುಭೇ ಪಥಿ ॥೩೦॥
ಅಶುಭೇಷು ಸಮಾವಿಷ್ಟಂ ಶುಭೇಷ್ವೇವಾವತಾರಯ ।
ಸ್ವಂ ಮನಃ ಪುರುಷಾರ್ಥೇನ ಬಲೇನ ಬಲಿನಾಂ ವರ ॥೩೧॥

ಆವೆರಡರಲ್ಲಿ ಶುಭವಾದ ವಾಸನೆಯು ನಿನ್ನನ್ನು ಈಗ ವಶಪಡಿಸಿಕೊಂಡಿರುವಪಕ್ಷದಲ್ಲಿ, ಆಗ ಶುಭವಾದ ವಾಸನೆಯಿಂದಲೇ ಕ್ರಮವಾಗಿ ಶಾಶ್ವತವಾದ ಸದ್ಗತಿಯನ್ನು ಪಡೆಯುವೆ ॥

ಹಾಗಲ್ಲದೆ ಅಶುಭವಾದ ವಾಸನೆಯು ನಿನ್ನನ್ನು ಸಂಕಟದಲ್ಲಿ ಸೇರಿಸುತ್ತಿದ್ದಪಕ್ಷದಲ್ಲಿ, ಅದನ್ನು ನೀನು ನಿನ್ನ ಪ್ರಯತ್ನದಿಂದ ಬಲಾತ್ಕಾರವಾಗಿ ಗೆದ್ದುಬಿಡಬೇಕು ॥೨೭॥

ಇದೂ ಅಲ್ಲದೆ ಯಾವುದೋ ಒಂದು ನಿನ್ನನ್ನು ಪ್ರೇರಿಸುತ್ತದೆಯೆಂಬ ಅಭಿಪ್ರಾಯವೇ ಸಾಧುವಾದುದಲ್ಲ. ನೀನು ಸರ್ವಜ್ಞನಾದ ಚೈತನ್ಯಸ್ವರೂಪನಾದವನು; ನೀನು ಜಡವಾದ ದೇಹಸ್ವರೂಪನಾದವನಲ್ಲ. ಹೀಗಿರುವಾಗ, ಮತ್ತೊಂದು ಚೇತನವು ನಿನ್ನನ್ನು ಪ್ರೇರಿಸುವುದೆಂಬುದೆಲ್ಲಿರುವುದು? ॥೨೮॥

ಇದೂ ಇರಲಿ; ನೀನು ಹೇಳುವುದನ್ನೇ ಒಪ್ಪಿಕೊಂಡು ವಿಚಾರಮಾಡೋಣ. ಮತ್ತೊಬ್ಬನು ನಿನ್ನನ್ನು ಪ್ರೇರಿಸುತಾನೆಯಾದರೆ, ಅವನನ್ನು ಪ್ರೇರಿಸುವ ಮತ್ತೊಬ್ಬನಾರು? ಆಮೇಲೆ ಅಲ್ಲಿಂದ ಮುಂದಕ್ಕೆ ಅವನನ್ನು ಪ್ರೇರಿಸತಕ್ಕವನಾರು? ಹೀಗೆಯೇ ಮುಂದುಮುಂದಕ್ಕೆ ಹೋದರೆ, ಒಬ್ಬನಿಗೆ ಮತ್ತೊಬ್ಬನು ಪ್ರೇರಕನಾಗಿ ಇದ್ದೇ ತೀರಬೇಕಾಗಿರುವಾಗ, ಪರ್ಯವಸಾನವೇ ಇಲ್ಲದಂತಾಗುವುದು; ಹೀಗೆ ನೀನು ಹೇಳುವ ಅಭಿಪ್ರಾಯದಲ್ಲಿ ಅವ್ಯವಸ್ಥಾಪ್ರಸಕ್ತಿಯುಂಟಾಗುವುದು. ಇಂತಹ ಅವ್ಯವಸ್ಥೆಯೆಂದಿಗೂ ವಾಸ್ತವ್ಯವಾದುದಲ್ಲ ॥

ಹೀಗೆ ಪುರುಷನು ಸ್ವತಂತ್ರನಾಗಿರುವುದರಿಂದ ಮಾಡಬೇಕಾದುದೇನೆಂದರೆ:—ಮನುಷ್ಯರಿಗೆ ಪ್ರಾಕ್ತನಕರ್ಮವಾಸನೆಯೆಂಬ ನದಿಯು, ಶುಭಮಾರ್ಗದಲ್ಲಿಯೂ ಅಥವಾ ಅಶುಭಮಾರ್ಗದಲ್ಲಿಯೂ ಪ್ರವಹಿಸುತ್ತಿರುತ್ತದೆ. ಆದರೆ ಪುರುಷನು ತನ್ನ ಪ್ರಯತ್ನದಿಂದ ಅದು ಶುಭಮಾರ್ಗದಲ್ಲಿಯೇ ಪ್ರವಹಿಸುವಂತೆ ಮಾಡಬೇಕು ॥೩೦॥

ಬಲಿಷ್ಠರಲ್ಲೆಲ್ಲ ಶ್ರೇಷ್ಠನಾದ ರಾಮನೆ! ನಿನ್ನ ಮನಸ್ಸು ಅಶುಭಮಾರ್ಗದಲ್ಲಿ ಸಿಕ್ಕಿಕೊಂಡಿದ್ದರೆ, ಅದನ್ನು ಪ್ರಬಲವಾದ ನಿನ್ನ ಪುರುಷಕಾರದಿಂದ ಶುಭಮಾರ್ಗದಲ್ಲಿಯೇ ತಂದುಬಿಡು ॥೩೧॥

ಅಶುಭಾಚ್ಚಾಲಿತಂ ಯಾತಿ ಶುಭಂ ತಸ್ಮಾದಪೀತರತ್ |
ಜನ್ತೋಶ್ಚಿತ್ತಂ ತು ಶಿಶುವತ್ ತಸ್ಮಾತ್ ತಚ್ಚಾಲಯೇದ್ಬಲಾತ್ ||೩೨||
ಸಮತಾಸಾನ್ತ್ವನೇನಾಶು ನ ದ್ರಾಗಿತಿ ಶನೈಶ್ಶನೈಃ |
ಪೌರುಷೇಣೈವ ಯತ್ನೇನ ಪಾಲಯೇಚ್ಚಿತ್ತಬಾಲಕಮ್ ||೩೩||
ವಾಸನೌಘಸ್ತ್ವಯಾ ಪೂರ್ವಂ ಅಭ್ಯಾಸೇನ ಘನೀಕೃತಃ |
ಶುಭೋವಾಪ್ಯಶುಭೋವಾಪಿ ಶುಭಮದ್ಯ ಘನೀಕುರು ||೩೪||
ಪ್ರಾಗಭ್ಯಾಸವಶಾದ್ಯಾತಾ ಯದಾ ತೇ ವಾಸನೋದಯಮ್ |
ತದಾಭ್ಯಾಸಸ್ಯ ಸಾಫಲ್ಯಂ ವಿದ್ಧಿ ತ್ವಮರಿಮರ್ದನ ||೩೫||
ಇದಾನೀಮಪಿ ತೇ ಯಾತಿ ಘನತಾಂ ವಾಸನಾನಘ |
ಅಭ್ಯಾಸವಶತಸ್ತಸ್ಮಾತ್ ಶುಭಾಭ್ಯಾಸಮುಪಾಹರ ||೩೬||
ಪೂರ್ವಂ ಚೇದ್ಘನತಾಂ ಯಾತಾ ನಾಭ್ಯಾಸಾತ್ ತವ ವಾಸನಾ |
ವರ್ಧಿಷ್ಯತೇ ತು ನೇದಾನೀಂ ಅಪಿ ತಾತ ಸುಖೀಭವ ||೩೭||
ಸನ್ದಿಗ್ಧಾಯಾಮಪಿ ಭೃಶಂ ಶುಭಾಮೇವ ಸಮಾಹರ |
ಅಸ್ಯಾಂ ತು ವಾಸನಾವೃದ್ಧೌ ಶುಭಾದ್ದೋಷೋ ನ ಕಶ್ಚನ ||೩೮||

ಬಾಲಕನು ಒಂದಾಟವಾಡುತಿರುವಾಗ ಅದನ್ನು ತಪ್ಪಿಸಿದರೆ ಅವನು ಮತ್ತೊಂದಾಟಕ್ಕೆ ಹೋಗುವಂತೆ, ಪ್ರಾಣಿಗಳ ಚಿತ್ತವೂ ಕೂಡ, ಅಶುಭಮಾರ್ಗವನ್ನು ತಪ್ಪಿಸಿದರೆ ಶುಭಮಾರ್ಗವನ್ನೂ ಶುಭಮಾರ್ಗವನ್ನು ತಪ್ಪಿಸಿದರೆ ಅಶುಭಮಾರ್ಗವನ್ನೂ ಹೊಂದುತದೆ. ಆದಕಾರಣ, ಅಶುಭಮಾರ್ಗದಲ್ಲಿ ವ್ಯಾಪೃತವಾದ ಆ ಮನಸ್ಸನ್ನು ಬಲಾತ್ಕಾರಪೂರ್ವಕವಾಗಿ ತಪ್ಪಿಸಬೇಕು ||೩೨||

ಹೀಗೆ ಚಿತ್ತವೆಂಬ ಬಾಲಕನನ್ನು, ಸರ್ವತ್ರ ಸಮದರ್ಶನವೆಂಬ ಸಾಂತ್ವವಚನದಿಂದ ಶೀಘ್ರವಾಗಿ ಸಮಾಧಾನಪಡಿಸಿ, ನಮ್ಮ ಪುರುಷಪ್ರಯತ್ನದಿಂದಲೇ ಮೆಲ್ಲಮೆಲ್ಲಗೆ ಕಾಪಾಡುತ ವಶಪಡಿಸಿಕೊಳ್ಳಬೇಕು; ತಟ್ಟನೆ ವಶಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡಬಾರದು; ಹಾಗೆ ಮಾಡಿದರೆ ವಿರಸವಾಗಿ ಕೆಡುಕುಂಟಾಗಬಹುದು ||೩೩||

ನೀನು ಹಿಂದೆ ಶುಭವಾದುದಾಗಲಿ ಅಥವಾ ಅಶುಭವಾದುದಾಗಲಿ ವಾಸನಾಸಮೂಹವನ್ನು ದೃಢಪಡಿಸಿಕೊಂಡಿರಬಹುದು. ಅದು ಹೇಗಿದ್ದರೂ, ಈಗ ಅಭ್ಯಾಸವಿಶೇಷದಿಂದ ಶುಭವಾದ ವಾಸನೆಯನ್ನೇ ದೃಢಪಡಿಸಿಕೊ ||೩೪||

ಎಲೈ ಶತ್ರುಸಂಹಾರಕನಾದ ಶ್ರೀರಾಮನೇ! ಅಭ್ಯಾಸವೆಂಬುದೆಂದಿಗೂ ವಿಫಲವಾಗುವುದಿಲ್ಲ. ಅಭ್ಯಾಸಾತಿಶಯವಾದಹಾಗೆಲ್ಲ ಯಾವಾಗ ನಿನಗೆ ಆಯಾವಾಸನೆಯು ದಾರ್ಢ್ಯವನ್ನು ಹೊಂದುತ್ತದೆಯೋ, ಆಗ ನಿನ್ನ ಅಭ್ಯಾಸವು ಸಫಲವಾಯ್ತೆಂದು ತಿಳಿ ||೩೫||

ಪಾಪರಹಿತನಾದ ಎಲೈ ರಾಮನೆ! ಈಗಲೂ ಕೂಡ ನಿನ್ನ ಅಭ್ಯಾಸವಶದಿಂದ ವಾಸನೆಯು ದೃಢಪಡುವುದರಲ್ಲಿ ಸಂಶಯವಿಲ್ಲ; ಆದಕಾರಣ ಶುಭವಾದ ಅಭ್ಯಾಸವನ್ನು ಮಾಡುವವನಾಗು ||೩೬||

ಅಯ್ಯಾ! ರಾಮ! ನಿನಗೆ ವಾಸನೆಯು ಹಿಂದೆ ಅಭ್ಯಾಸದಿಂದ ದೃಢವಾಗದಿದ್ದಪಕ್ಷದಲ್ಲಿ, ಅದು ಈಗಲೂ ಬೆಳೆಯುವುದಿಲ್ಲ. ಯಾವಾಗ ವಾಸನೆಯು ಇಲ್ಲದಂತಾಯ್ತೋ, ಆಗಲೇ ಮೋಕ್ಷಸಿದ್ಧಿಯಾಯ್ತು; ಆದಕಾರಣ ಹೀಗೂ ನೀನು ಸುಖಭಾಗಿಯಾಗು ||೩೭||

ಅಥವಾ ಶುಭವಾಸನೆಯಿದೆಯೋ ಅಶುಭವಾಸನೆಯೇ ಇದೆಯೋ ಎಂಬ ಸಂದೇಹವುಂಟಾಗಿದ್ದಪಕ್ಷದಲ್ಲಿಯೂ ಕೂಡ, ನೀನು ಶುಭವಾದ ವಾಸನೆಯನ್ನೇ ಸಂಪಾದಿಸು. ಹೀಗೆ ವಾಸನೆಯನ್ನು ವೃದ್ಧಿಪಡಿಸುವ ಭಾಗದಲ್ಲಿ ಶುಭಮಾರ್ಗದಿಂದ ಯಾವ ದೋಷವೂ ಉಂಟಾಗುವುದಿಲ್ಲ ||೩೮||

ಯದ್ಯದಭ್ಯಸ್ಯತೇ ಲೋಕೇ ತನ್ಮಯೇನೈವ ಭೂಯತೇ ।
ಇತ್ಯಾಕುಮಾರಂ ಪ್ರಾಜ್ಞೇಷು ದೃಷ್ಟಂ ಸನ್ದೇಹವರ್ಜಿತಮ್ ॥೩೯॥
ಶುಭವಾಸನಯಾ ಯುಕ್ತಃ ತದತ್ರ ಭವ ಭೂತಯೇ ।
ಪರಂ ಪೌರುಷಮಾಶ್ರಿತ್ಯ ವಿಜಿತ್ಯೇನ್ದ್ರಿಯಪಞ್ಚಕಮ್ ॥೪೦॥
ಅವ್ಯುತ್ಪನ್ನಮನಾ ಯಾವತ್ ಭವಾನಜ್ಞಾತತತ್ಪದಃ ।
ಗುರುಶಾಸ್ತ್ರಪ್ರಮಾಣೈಸ್ತು ನಿರ್ಣೀತಂ ತಾವದಾಚರ ॥೪೧॥
ತತಃ ಪಕ್ವಕಷಾಯೇಣ ನೂನಂ ವಿಜ್ಞಾತವಸ್ತುನಾ ।
ಶುಭೋಽಪ್ಯಸೌ ತ್ವಯಾ ತ್ಯಾಜ್ಯೋ ವಾಸನೌಘೋ ನಿರಾಧಿನಾ ॥೪೨॥

ಯದತಿಸುಭಗಮಾರ್ಯಸೇವಿತಂ ತತ್ ಶುಭಮನುಸೃತ್ಯ ಮನೋಜ್ಞಭಾವ ಬುದ್ಧ್ಯಾ ।
ಅಧಿಗಮಯ ಪದಂ ಸದಾ ವಿಶೋಕಂ ತದನು ತದಪ್ಯವಮುಚ್ಯ ಸಾಧು ತಿಷ್ಠ ॥೪೩॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ಕರ್ಮವಿಚಾರೋ ನಾಮ
ನವಮಃ ಸರ್ಗಃ,

ಲೋಕದಲ್ಲಿ ಪುರುಷನು ಯಾವುದನ್ನು ಅಭ್ಯಸಿಸುವನೋ, ಆರೀತಿಯಾಗಿಯೇ ಅವನು ಆಗಿಬಿಡುತಾನೆ. ಇದು ಒಬ್ಬ ಬಾಲಕ ಮೊದಲುಗೊಂಡು ಬುದ್ಧಿಯುಳ್ಳವರೆಲ್ಲರಿಗೂ ನಿಸ್ಸಂದೇಹವಾಗಿ ಗೊತ್ತೇಯಿದೆ ॥೩೯॥

ಆದಕಾರಣ ಈಗ ನೀನು ಉತ್ತಮವಾದ ಶ್ರೇಯಸ್ಸನ್ನು ಪಡೆಯುವುದಕ್ಕೋಸ್ಕರ, ಹೆಚ್ಚಾದ ಪುರುಷಕಾರವನ್ನವಲಂಬಿಸಿ, ಇಂದ್ರಿಯಪಂಚಕವನ್ನು ಜಯಿಸಿ, ಶುಭವಾದ ವಾಸನೆಯೊಡಗೂಡಿದವನಾಗು ॥೪೦॥

ಎಲ್ಲಿಯವರೆಗೆ ನಿನ್ನ ಮನಸ್ಸು ಸಂಪೂರ್ಣವಿವೇಕವುಳ್ಳದಾಗದೆ ನೀನು ತತ್ತ್ವಜ್ಞಾನ ಪಡೆಯುವುದಿಲ್ಲವೋ, ಅಲ್ಲಿಯವರೆಗೆ—ಗುರುಗಳೂ ಶಾಸ್ತ್ರಗಳೂ ಶ್ರುತಿಯುಕ್ತಿ ಮೊದಲಾದ ಪ್ರಮಾಣಗಳೂ ನಿರ್ಣಯಿಸಿರುವಂತೆ ಆಚರಿಸುತಿರು ॥೪೧॥

ಬಳಿಕ ಕರ್ಮವಾಸನೆಯೆಂಬ ಕೊಳೆಯು ಚೆನ್ನಾಗಿ ಪರಿಪಕ್ವವಾದಮೇಲೆ, ನೀನು ಸ್ಪಷ್ಟವಾಗಿ ತತ್ತ್ವಜ್ಞಾನವುಂಟಾದವನಾಗಿ, ಮನೋವ್ಯಥೆಗಳನ್ನೆಲ್ಲ ಕಳೆದುಕೊಂಡು, ಈ ಶುಭವಾಸನೆಯನ್ನು ಕೂಡ ಬಿಡಬೇಕು ॥೪೨॥

ಮುಖ್ಯವೇನೆಂದರೆ:— ಈ ಲೋಕದಲ್ಲಿ ಯಾವುದು ಅತಿಮನೋಹರವೆನ್ನಿಸಿ ದೊಡ್ಡವರಿಂದ ಸೇವಿಸಲ್ಪಟ್ಟಿರತಕ್ಕುದೋ, ಅಂಥ ಶುಭವಾದ ಮಾರ್ಗವನ್ನನುಸರಿಸಿ, ಉತ್ತಮವಾದ ಶುಭವಾಸನಾಸಮುದಾಯದ ಜ್ಞಾನದಿಂದ—ಸರ್ವದಾ ದುಃಖಶೂನ್ಯವಾದ ಸ್ಥಾನವನ್ನು (ತತ್ತ್ವಜ್ಞಾನ) ಹೊಂದು; ಬಳಿಕ ಆ ಶುಭವಾಸನಾನುಸರಣೆಯನ್ನೂ ಬಿಟ್ಟುಬಿಟ್ಟು, ಕೇವಲನಾಗಿರು ॥೪೩॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಕರ್ಮವಿಚಾರವೆಂಬ
ಒಂಭತ್ತನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ದಶಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಯಥಾಸ್ಥಿತಂ ಬ್ರಹ್ಮತತ್ತ್ವಂ ಸತ್ತಾ ನಿಯತಿರುಚ್ಯತೇ ।
ಸಾ ವಿನೇತುರ್ವಿನೇತೃತ್ವಂ ಸಾ ವಿನೇಯವಿನೇಯತಾ ॥೧॥
ಅತಃ ಪೌರುಷಮಾಶ್ರಿತ್ಯ ಶ್ರೇಯಸೇ ನಿತ್ಯಬಾನ್ಧವಮ್ ।
ಏಕಾಗ್ರಂ ಕುರು ತಚ್ಚಿತ್ತಂ ಶೃಣು ಚೋಕ್ತಮಿದಂ ಮಮ ॥೨॥
ಅಪಾನ್ತರನಿಪಾತೀನಿ ಸ್ವಾರೂಢಾನಿ ಮನೋರಥಮ್ ।

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹತ್ತನೆಯ ಸರ್ಗವು.

ಧಾತುಃ ಸ್ವಸ್ಯ ಚ ಜನ್ಮಾತ್ರ ಸಮಸ್ತಜನಮುಕ್ತಯೇ ।
ಸ್ವೋಪದೇಶಇತಿ ಪ್ರೋಕ್ತೋ ಜ್ಞಾನಾವತರಣಕ್ರಮಃ ॥

ಬ್ರಹ್ಮನೂ ವಸಿಷ್ಠಮುನಿಗಳೂ ಹುಟ್ಟಿದ ಬಗೆಯೂ, ಸಮಸ್ತ ಜನರಿಗೂ ಮುಕ್ತಿಯಾಗುವುದಕ್ಕೋಸ್ಕರ ತನಗೆ ಉಪದೇಶವಾದುದೂ, ಇತ್ಯಾದಿಯಾಗಿ ಜ್ಞಾನಮಾರ್ಗಾವತರಣಕ್ರಮವು ಈ ಸರ್ಗದಲ್ಲಿ ಹೇಳಲ್ಪಟ್ಟಿರುವುದು.

ಇದುವರೆಗೆ ಹೇಳಲ್ಪಟ್ಟಿರುವ ಮಾತಿನಿಂದ, ದೈವವೆಂಬುದು ಪ್ರಾಕ್ತನ ಪೌರುಷವೇ ಅಲ್ಲದೆ ಬೇರೆಯಾದ ಪದಾರ್ಥವಲ್ಲವೆಂದು ಸಿದ್ಧವಾಯಿತಷ್ಟೆ? ಇದು ಹೀಗಿದ್ದರೂ, ಹಿಂದೆ ವೈರಾಗ್ಯಪ್ರಕರಣದಲ್ಲಿ ವರ್ಣಿಸಲ್ಪಟ್ಟಿರುವ ನಿಯತಿಯೆಂಬುದಕ್ಕೆ ಸರ್ವರೂ ಅಧೀನರಾಗಿಯೇ ತೀರಬೇಕಾಗಿರುವುದರಿಂದ, ಅದು ಸರ್ವರಿಗೂ ನಿಯಾಮಕವಾಗಿರುವುದೆಂದು ಶಂಕೆಯುಂಟಾಗಬಹುದು. ಇದನ್ನು ಪರಿಹರಿಸುವುದಕ್ಕೋಸ್ಕರ, ವಸಿಷ್ಠಮುನಿಗಳು ಹೇಳಲುಪಕ್ರಮಿಸಿದರು.

ಅಯ್ಯಾ! ರಾಮ! ಮತ್ತೂಕೇಳು. ಆ ಪರಬ್ರಹ್ಮಪದಾರ್ಥವು ಸಚ್ಚಿದಾನಂದಸ್ವರೂಪವಾಗಿ ಸರ್ವರಿಗೂ ಅನುಕೂಲವಾಗಿ ಹೇಗಿರುವುದೋ, ಅದರ ಸ್ಥಿತಿಯೇ 'ನಿಯತಿ' ಎಂದು ಹೇಳಲ್ಪಡುವುದು. ಈ ಪರಬ್ರಹ್ಮಸದ್ಭಾವವೇ, ನಿಯಮಿಸತಕ್ಕವನ ನಿಯಮನಶಕ್ತಿಯಾಗಿಯೂ— ನಿಯಮಿಸಲ್ಪಡತಕ್ಕವನ (೧) ನಿಯಮ್ಯತೆಯಾಗಿಯೂ ಇರುವುದು ॥೧॥

ಹೀಗೆ ಸರ್ವಾನುಕೂಲವಾದ ಸರ್ವಶಕ್ತವಾದ ಪರಬ್ರಹ್ಮಪದಾರ್ಥವಿರುವಕಾರಣ, ನೀನು ಶ್ರೇಯಸ್ಸು ಪಡೆಯುವುದಕ್ಕೋಸ್ಕರ, ನಿತ್ಯಬಂಧುವಾದ ಪುರುಷಕಾರವನ್ನವಲಂಬಿಸಿ, ನಿನ್ನ ಆ ಮನಸ್ಸನ್ನು ಏಕಾಗ್ರವನ್ನಾಗಿ ಮಾಡಿಕೋ; ಮತ್ತು ನನ್ನ ಈ ಮಾತನ್ನೂ ಕೇಳುವವನಾಗು ॥೨॥

ಮನುಷ್ಯರಿಗೆ ಇಂದ್ರಿಯಗಳು ಮನೋರಥವನ್ನು ಚೆನ್ನಾಗಿ ಹತ್ತಿಕೊಂಡು, ಮಧ್ಯ

(೧) ನಿಯಮ್ಯತೆ=ನಿಯಮಿಸಲ್ಪಡತಕ್ಕವನಭಾವ.

ಪೌರುಷೇಣೇನ್ದ್ರಿಯಾಣ್ಯಾಶು ಸಂಯಮ್ಯ ಸಮತಾಂ ನಯ ||೩||
ಇಹಾಮುತ್ರ ಚ ಸಿದ್ಧ್ಯರ್ಥಂ ಪುರುಷಾರ್ಥಫಲಪ್ರದಾಮ್ |
ಮೋಕ್ಷೋಪಾಯಮಯೀಂ ವಕ್ಷ್ಯೇ ಸಂಹಿತಾಂ ಸಾರನಿರ್ಮಿತಾಮ್ ||೪||
[1]ಅಪುನರ್ಗ್ರಹಣಾಯಾನ್ತಃ ತ್ಯಕ್ತ್ವಾ ಸಂಸಾರವಾಸನಾಮ್ |
ಸಮ್ಪೂರ್ಣೌ ಶಮಸನ್ತೋಷೌ ಆದಾಯೋದಾರಯಾ ಧಿಯಾ ||೫||
ಸಪೂರ್ವಾಪರವಾಕ್ಯಾರ್ಥವಿಚಾರವಿಷಯಾಹತಮ್ |
ಮನಃ ಸಮರಸಂ ಕೃತ್ವಾ ಸಾನುಸನ್ಧಾನಮಾತ್ಮನಿ ||೬||
ಸುಖದುಃಖಕ್ಷಯಕರಂ ಮಹಾನನ್ದೈಕಕಾರಣಮ್ ||
ಮೋಕ್ಷೋಪಾಯಮಿಮಂ ರಾಮ ವಕ್ಷ್ಯಮಾಣಂ ಮಯಾ ಶೃಣು ||೭||
ಇಮಾಂ ಮೋಕ್ಷಕಥಾಂ ಶ್ರುತ್ವಾ ಸಹ ಸರ್ವೈರ್ವಿವೇಕಿಭಿಃ |
ಪದಂ ಯಾಸ್ಯಸಿ ನಿರ್ದುಃಖಂ ನಾಶೋ ಯತ್ರ ನ ವಿದ್ಯತೇ ||೮||
ಇದಮುಕ್ತಂ ಪುರಾಕಲ್ಪೇ ಬ್ರಹ್ಮಣಾ ಪರಮೇಷ್ಠಿನಾ |
ಸರ್ವದುಃಖಕ್ಷಯಕರಂ ಪರಮಾಶ್ವಾಸನಂ ಧಿಯಃ ||೯||

ಮಧ್ಯದಲ್ಲಿ ಬಿದ್ದುಬಿಡುವುವು; ಇಂಥ ಇಂದ್ರಿಯಗಳನ್ನು, ಪೌರುಷದಿಂದ ಬೇಗನೆ ನಿಗ್ರಹಿಸಿ, ಮನಸ್ಸನ್ನು ಸರ್ವತ್ರ ಸಮವಾಗಿರುವಂತೆ ಮಾಡು ||೩||

ಈಗ ನಿನಗೆ ಮುಂದೆ ಮಾಡಬೇಕಾದುದನ್ನುಪದೇಶಿಸುವೆನು. ಇಹಪರಗಳಲ್ಲಿ ಸಿದ್ಧಿಯುಂಟಾಗುವುದಕ್ಕೋಸ್ಕರ, ಪರಮಪುರುಷಾರ್ಥರೂಪವಾದ ಫಲವನ್ನು ಕೊಡತಕ್ಕದಾಗಿಯೂ—ಮೋಕ್ಷೋಪಾಯಗಳ ಉಪದೇಶದಿಂದ ವ್ಯಾಪ್ತವಾಗಿಯೂ—ಶ್ರೇಷ್ಠವಾದ ವಿಷಯಗಳಿಂದ ನಿರ್ಮಿಸಲ್ಪಟ್ಟುದಾಗಿಯೂ ಇರುವ ಒಂದು ಇತಿಹಾಸವನ್ನು ಹೇಳುವೆನು ||೪||

ಅಯ್ಯಾ! ರಾಮ ! ಈ ಸಂಸಾರವಾಸನೆಯನ್ನು ಪುನಃ ಸ್ವೀಕರಿಸದಂತೆ ನಿಶ್ಶೇಷವಾಗಿ ಬಿಟ್ಟುಬಿಟ್ಟು, ಉದಾರವಾದ ಬುದ್ಧಿಯಿಂದ ಸಂಪೂರ್ಣವಾದ ಶಾಂತಿ ಸಂತೋಷಗಳನ್ನು ಸ್ವೀಕರಿಸಿ, ಮನಸ್ಸನ್ನು—ಪೂರ್ವೋತ್ತರ ವಾಕ್ಯಾರ್ಥಗಳ ವಿಚಾರದೊಡಗೂಡಿದುದಾಗಿಯೂ—ವಿಷಯಗಳಿಂದ ಕೆಡಿಸಲ್ಪಡದಿರತಕ್ಕುದಾಗಿಯೂ-ಗುರುಶಾಸ್ತ್ರಗಳಿಂದುಪದೇಶಿಸಲ್ಪಟ್ಟುದಕ್ಕೂ ತನ್ನನುಭವಕ್ಕೂ ಸಾಮರಸ್ಯವನ್ನು (ಹೋಲಿಕೆ) ಪಡೆದಿರತಕ್ಕುದಾಗಿಯೂ— ಆತ್ಮಾನುಸಂಧಾನಸಹಿತವಾಗಿಯೂ ಇರುವಂತೆ ಮಾಡಿಕೊಂಡು, ಸುಖದುಃಖಗಳನ್ನು ನಾಶಪಡಿಸತಕ್ಕುದಾಗಿಯೂ— ಪರಮಾನಂದಕ್ಕೆ ಮುಖ್ಯಕಾರಣವಾಗಿಯೂ ಇರುವಂತೆ ನನ್ನಿಂದ ಹೇಳಲ್ಪಡುವ ಈ ಮೋಕ್ಷೋಪಾಯವನ್ನು ಕೇಳು ||೫—೭||

ನಾನು ಹೇಳುವ ಈ ಮೋಕ್ಷೋಪಾಯಕಥೆಯನ್ನು, ಸಮಸ್ತರಾದ ವಿವೇಕಿಗಳೊಡನೆ ಕೇಳಿ, ದುಃಖರಹಿತವಾದ ಶಾಶ್ವತವಾದ ಪದವಿಯನ್ನು ಪಡೆಯುವೆ ||೮||

ಸಮಸ್ತ ದುಃಖಗಳನ್ನು ನಾಶಪಡಿಸತಕ್ಕುದಾಗಿಯೂ ಮನಸ್ಸಿಗೆ ಅತ್ಯಂತವಾಗಿ ಸಮಾಧಾನವುಂಟುಮಾಡತಕ್ಕುದಾಗಿಯೂ ಇರುವ ಈ ವಿಷಯವನ್ನು, ಸರ್ವೋತ್ತಮವಾದ ಸ್ಥಾನದಲ್ಲಿರುವ ಆ ಚತುರ್ಮುಖಬ್ರಹ್ಮನು ಹಿಂದೆ ಸೃಷ್ಟ್ಯಾದಿಯಲ್ಲಿ ಹೇಳಿರುವನು ||

---

1 ತ್ರಿಭಿರ್ವಿಶೇಷಕಮ್.

ಶ್ರೀರಾಮ ಉವಾಚ.

ಕೇನೋಕ್ತಂ ಕಾರಣೇನೇದಂ ಬ್ರಹ್ಮರ್ಷೇ ಪೂರ್ವಂ ಸ್ವಯಮ್ಭುವಾ ।
ಕಥಂ ಚ ಭವತಾ ಪ್ರಾಪ್ತಂ ಏತತ್ ಕಥಯ ಮೇ ಪ್ರಭೋ ॥೧೦॥

ಶ್ರೀವಸಿಷ್ಠ ಉವಾಚ.

ಅಸ್ತ್ಯನನ್ತವಿಲಾಸಾತ್ಮಾ ಸರ್ವಗಃ ಸರ್ವಸಂಶ್ರಯಃ ।
ಚಿದಾಕಾಶೋಽವಿನಾಶಾತ್ಮಾ ಪ್ರದೀಪಃ ಸರ್ವಜನ್ತುಷು ॥೧೧॥
ಸ್ಪನ್ದಾಸ್ಪನ್ದಸಮಾಕಾರಾತ್ ತತೋ ವಿಷ್ಣುರಜಾಯತ ।
ಸ್ಪನ್ದಮಾನರಸಾಪೂರಾತ್ ತರಙ್ಗಃ ಸಾಗರಾದಿವ ॥೧೨॥
ಸುಮೇರುಕರ್ಣಿಕಾತ್ ತಸ್ಯ ದಿಗ್ದಳಾದ್ಧೃದಯಾಮ್ಬುಜಾತ್ ।
ತಾರಕಾಕೇಸರವತಃ ಪರಮೇಷ್ಠೀ ವ್ಯಜಾಯತ ॥೧೩॥
ವೇದವೇದಾರ್ಥವಿದ್ದೇವಮುನಿಮಣ್ಡಲಮಣ್ಡಿತಃ ।
ಸೋಽಸೃಜತ್ ಸಕಲಂ ಸರ್ಗಂ ವಿಕಲ್ಪೌಘಂ ಯಥಾ ಮನಃ ॥೧೪॥

ವಸಿಷ್ಠರ ಅಭಿಪ್ರಾಯವನ್ನು ತಿಳಿಯುವುದಕ್ಕೋಸ್ಕರ ಶ್ರೀರಾಮನು ಹೇಳಿದನು.

ಎಲೈ ಸರ್ವಶಕ್ತರಾದ ಬ್ರಹ್ಮರ್ಷಿಗಳೆ! ಪೂರ್ವದಲ್ಲಿ ಚತುರ್ಮುಖಬ್ರಹ್ಮನು ಈ ಕಥೆಯನ್ನು ಯಾವಕಾರಣದಿಂದ ಹೇಳಿದನು? ತಾವು ಇದನ್ನು ಸಂಪಾದಿಸಿದುದು ಹೇಗೆ? ಇದನ್ನು ನನಗೆ ಅಪ್ಪಣೆಕೊಡಿರಿ ॥೧೦॥

ವಸಿಷ್ಠಮಹರ್ಷಿಗಳು ಹೇಳಿದರು.

ಅಪರಿಮಿತವಿಲಾಸಸ್ವರೂಪನಾಗಿಯೂ—ಸಮಸ್ತ ಪದಾರ್ಥಗಳನ್ನೂ ವ್ಯಾಪಿಸಿಕೊಂಡಿರತಕ್ಕವನಾಗಿಯೂ—ಸಮಸ್ತಕ್ಕೂ ಆಧಾರಭೂತನಾಗಿಯೂ—ನಾಶಹೊಂದದ ಸ್ವರೂಪವುಳ್ಳವನಾಗಿಯೂ—ಸರ್ವಪ್ರಾಣಿಗಳಲ್ಲಿಯೂ ದೀಪದಂತೆ ಪ್ರಕಾಶಮಾನನಾಗಿಯೂ ಇರುವ—ಜ್ಞಾನಾಕಾಶಸ್ವರೂಪನಾದ ಪರಮಾತ್ಮನಿರುವನಲ್ಲವೆ! ॥೧೧॥

ಇವನು ಎಂದಿಗೂ ನಿರ್ವಿಕಾರನಾಗಿರುವನು. ಮಾಯೆಯು ಒಂದಾವೃತ್ತಿ ಚಲನೆಹೊಂದುತಲೂ, ಮತ್ತೊಂದಾವೃತ್ತಿ ಚಲನೆಹೊಂದದೆಯೂ ಇರುವಳು. ಹೀಗೆ ಮಾಯೆಯು ಚಲಿಸಿದರೂ ಚಲಿಸದಿದ್ದರೂ ಆ ಪರಮಾತ್ಮನು ಏಕರೂಪನಾಗಿರುವನು. ಒಂದು ಸಮುದ್ರದಲ್ಲಿ ನೀರು ಉಕ್ಕಿದರೂ ಉಕ್ಕದಿದ್ದರೂ, ಆ ಸಮುದ್ರವು ತನ್ನ ಸ್ವರೂಪವನ್ನು ವ್ಯತ್ಯಾಸಪಡಿಸದಿರುವುದಲ್ಲವೆ! ಇಂತಹ ಸಮುದ್ರದ ದೆಸೆಯಿಂದ ಅಲೆಯು ಹುಟ್ಟುವಂತೆ, ಆ ಪರಮಾತ್ಮನದೆಸೆಯಿಂದ ವಿಷ್ಣುವು ಹುಟ್ಟಿದನು ॥೧೨॥

ಆ ವಿಷ್ಣುವಿನ ಹೃದಯವು ಒಂದು ಕಮಲವಾಗಿರುವುದು; ಇದಕ್ಕೆ ಸುಮೇರುಪರ್ವತವೇ ಮಧ್ಯದ ದಿಂಡಾಗಿರುವುದು; ದಿಕ್ಕುಗಳೇ ಎಲೆಗಳಾಗಿರುವುವು; ನಕ್ಷತ್ರಗಳೇ ಕೇಸರಗಳಾಗಿರುವುವು. ಇಂಥ ಹೃದಯಕಮಲದ ದೆಸೆಯಿಂದ ಚತುರ್ಮುಖಬ್ರಹ್ಮನು ಹುಟ್ಟಿದನು ॥೧೩॥

ಸಕಲ ವೇದಗಳನ್ನೂ ವೇದಾರ್ಥಗಳನ್ನೂ ತಿಳಿದಿರುವವನಾಗಿಯೂ—ದೇವರ್ಷಿಸಮೂಹದಿಂದಲಂಕೃತನಾಗಿಯೂ ಇರುವ ಆ ಚತುರ್ಮುಖಬ್ರಹ್ಮನು, ಮನಸ್ಸು ನಾನಾವಿಧ ವಿಕಲ್ಪಸಮುದಾಯಗಳನ್ನು ಹುಟ್ಟಿಸುವಂತೆ, ಸಮಸ್ತವಾದ ಪ್ರಪಂಚವನ್ನೂ ಸೃಷ್ಟಿಮಾಡಿದನು ॥೧೪॥

ಜಮ್ಬೂದ್ವೀಪಸ್ಯ ಕೋಣೇಽಸ್ಮಿನ್ ವರ್ಷೇ ಭಾರತನಾಮನಿ ।
ಸಸರ್ಜ ಜನಸರ್ಗೌಘಂ ಹ್ಯಾಧಿವ್ಯಾಧಿಪರಿಪ್ಲುತಮ್ ॥೧೫॥
[1]ಭಾವಾಭಾವವಿಷಣ್ಣಾಙ್ಗಂ ಉತ್ಪಾತಧ್ವಂಸತತ್ಪರಮ್ ।
ಸರ್ಗೇಽಸ್ಮಿನ್ ಭೂತಜಾತೀನಾಂ ನಾನಾವ್ಯಸನಸಙ್ಕುಲಮ್ ॥೧೬॥
ಜನಸ್ಯೈತಸ್ಯ ದುಃಖಂ ತತ್ ದೃಷ್ಟ್ವಾ ಸಕಲಲೋಕಕೃತ್ ।
ಜಗಾಮ ಕರುಣಾಮೀಶಃ ಪುತ್ರದುಃಖಾತ್ ಪಿತಾ ಯಥಾ ॥೧೭॥
ಕಿಮೇತೇಷಾಂ ಹತಾಶಾನಾಂ ದುಃಖಸ್ಯಾನ್ತೋ[2] ಹತಾಯುಷಾಮ್ ।
ಸ್ಯಾದಿತಿ ಕ್ಷಣಮೇಕಾಗ್ರಂ ಚಿನ್ತಯಾಮಾಸ ಭೂತಯೇ ॥೧೮॥
ಇತಿ ಸಞ್ಚಿನ್ತ್ಯ ಭಗವಾನ್ ಸಸರ್ಜ ಸ್ವಯಮೀಶ್ವರಃ ।
ತಪೋ ಧರ್ಮಂ ಚ ದಾನಂ ಚ ಸತ್ಯಂ ತೀರ್ಥಾನಿ ಚೈವ ಹಿ ॥೧೯॥
ಏತತ್ ಸೃಷ್ಟ್ವಾ ಪುನರ್ದೇವಃ ಚಿನ್ತಯಾಮಾಸ ಭೂತಕೃತ್ ।
ಪುಂಸಾಂ ನಾನೇನ ಸರ್ಗಸ್ಯ ದುಃಖಸ್ಯಾನ್ತ ಇತಿ ಸ್ವಯಮ್ ॥೨೦॥
ನಿರ್ವಾಣಂ ನಾಮ ಪರಮಂ ಸುಖಂ ಯೇನ ಪುನರ್ಜನಃ ।

ಮತ್ತು ಆ ಚತುರ್ಮುಖನು, ಅಖಂಡವಾದ ಈ ಭೂಮಂಡಲದಲ್ಲೊಂದುಭಾಗವಾದ ಜಂಬೂದ್ವೀಪಕ್ಕೆ ಒಂದು ಮೂಲೆಯಾಗಿರುವ ಈ ಭರತವರ್ಷದಲ್ಲಿ, ನಾನಾವಿಧವಾದ ಆಧಿ ವ್ಯಾಧಿಗಳಿಂದ ವ್ಯಾಪ್ತವಾದ ಮನುಷ್ಯಸಮೂಹವನ್ನು ಸೃಷ್ಟಿಮಾಡಿದನು ॥೧೫॥

ಹೀಗೆ ಲೋಕಕರ್ತನಾದ ಲೋಕೇಶನಾದ ಚತುರ್ಮುಖನು, ತಾನು ಸೃಷ್ಟಿಸಿದ ಭೂತ ಸಮೂಹಗಳ ಸೃಷ್ಟಿಯಲ್ಲಿ, ಈ ಜನರಿಗೆ ಲಾಭಾಲಾಭಗಳಿಂದ ವ್ಯಥೆಪಡುವ ಮನಸ್ಸುಳ್ಳದಾಗಿಯೂ—ಜನನ ಮರಣ ಪ್ರವಾಹದಲ್ಲಿ ಆಸಕ್ತವಾಗಿಯೂ—ಇನ್ನೂ ನಾನಾವಿಧವಾದ ವ್ಯಸನಗಳಿಂದ ವ್ಯಾಕುಲವಾಗಿಯೂ ಇರುವ ಆ ದುಃಖವನ್ನು ಕಂಡು, ಮಕ್ಕಳ ದುಃಖವನ್ನು ನೋಡಿ ತಂದೆಯು ಕರುಣೆಪಡುವಂತೆ, ಕರುಣೆಯನ್ನು ಹೊಂದಿದನು ॥೧೬—೧೭॥

ಹೀಗೆ ಕರುಣಾವಿಷ್ಟನಾದ ಆ ಚತುರ್ಮುಖನು—ಅಲ್ಪಾಯುಷ್ಕರಾಗಿ ದುರಾಶಾಗ್ರಸ್ತರಾಗಿರುವ ಈ ಪ್ರಾಣಿಗಳಿಗೆ ದುಃಖನಾಶಕನಾದವನಾರಿರಬಹುದು—ಎಂದು ಅವರ ಶ್ರೇಯಸ್ಸಿಗೋಸ್ಕರವಾಗಿ ಒಂದು ಕ್ಷಣಕಾಲ ಏಕಾಗ್ರಚಿತ್ತನಾಗಿ ಪರ್ಯಾಲೋಚಿಸಿದನು ॥೧೮॥

ಈರೀತಿಯಾಗಿ ಸರ್ವಲೋಕೇಶ್ವರನಾದ ಚತುರ್ಮುಖನು ತಾನೇ ಆಲೋಚಿಸಿಕೊಂಡು, ತಪಸ್ಸು ಧರ್ಮ ದಾನ ಸತ್ಯ ತೀರ್ಥ—ಇವುಗಳನ್ನು ಸೃಷ್ಟಿಮಾಡಿದನು ॥೧೯॥

ಸರ್ವಭೂತಕರ್ತನಾದ ಆ ಚತುರ್ಮುಖನು, ಇವುಗಳನ್ನೆಲ್ಲ ಸೃಷ್ಟಿಮಾಡಿ—ಈ ಸೃಷ್ಟಿ ಸಂಬಂಧಿಗಳಾದ ಪುರುಷರಿಗೆ ಇದರಿಂದ ದುಃಖನಾಶವಾಗುವುದಿಲ್ಲವೆಂದೂ ಪುನಃ ತಾನೇ ಯೋಚಿಸಿದನು ॥೨೦॥

ಮತ್ತೆ ಆ ಚತುರ್ಮುಖನು ಯೋಚಿಸಿದನೇನೆಂದರೆ:—ಈ ಪ್ರಪಂಚದಲ್ಲಿ ಮೋಕ್ಷವೆಂಬುದೇ ಸರ್ವೋತ್ತಮವಾದ ಸುಖವು; ಇದು ಉಂಟಾದರೆ, ಪ್ರಾಣಿಯು ಮತ್ತೆ ಹುಟ್ಟ

---

1 ದ್ವಾಭ್ಯಾಂ ಯುಗ್ಮಂ.

2 ಅನ್ತಯತೀತಿ ಅನ್ತಃ, ಅನ್ತಹೇತುರಿತ್ಯರ್ಥಃ.

ನ ಜಾಯತೇ ನ ಮ್ರಿಯತೇ ತಜ್ಜ್ಞಾನಾದೇವ ಲಭ್ಯತೇ ||೨೧||
ಸಂಸಾರೋತ್ತರಣೇ ಜನ್ತೋಃ ಉಪಾಯೋ ಜ್ಞಾನಮೇವ ಹಿ |
ತಪೋ ದಾನಂ ತಥಾ ತೀರ್ಥಂ ಅನುಪಾಯಾಃ ಪ್ರಕೀರ್ತಿತಾಃ ||೨೨||
ತತ್ ತಾವದ್ದುಃಖಮೋಕ್ಷಾರ್ಥಂ ಜನಸ್ಯಾಸ್ಯ ಹತಾತ್ಮನಃ |
ಪ್ರತ್ಯಗ್ರಂ ತರಣೋಪಾಯಂ ಆಶು ಪ್ರಕಟಯಾಮ್ಯಹಮ್ ||೨೩||
ಇತಿ ಸಞ್ಚಿನ್ತ್ಯ ಭಗವಾನ್ ಬ್ರಹ್ಮಾ ಕಮಲಸಂಸ್ಥಿತಃ |
ಮನಸಾ ಪರಿಸಙ್ಕಲ್ಪ್ಯ ಮಾಮುತ್ಪಾದಿತವಾನಿಮಮ್ ||೨೪||
ಕುತೋಽಪ್ಯುತ್ಪನ್ನ ಏವಾಶು ತತೋಽಹಂ ಸಮುಪಸ್ಥಿತಃ |
ಪಿತುಸ್ತಸ್ಯ ಪುನಃ ಶೀಘ್ರಂ ಊರ್ಮಿರೂರ್ಮೇರಿವಾನಘ ||೨೫||
ಕಮಣ್ಡಲುಧರೋ ನಾಥಃ ಸಕಮಣ್ಡಲುನಾ ಮಯಾ |
ಸಾಕ್ಷಮಾಲಃ ಸಾಕ್ಷಮಾಲಂ ಸ ಪ್ರಣಮ್ಯಾಭಿವಾದಿತಃ ||೨೬||
ಏಹಿ ಪುತ್ರೇತಿ ಮಾಮುಕ್ತ್ವಾ ಸ ಸ್ವಾಬ್ಜಸ್ಯೋತ್ತರೇ ದಳೇ |
ಶುಕ್ಲಾಭ್ರ ಇವ ಶೀತಾಂಶುಂ ಯೋಜಯಾಮಾಸ ಪಾಣಿನಾ ||೨೭||
ಮೃಗಕೃತ್ತಿಪರೀಧಾನೋ ಮೃಗಕೃತ್ತಿನಿಜಾಮ್ಬರಮ್ |

ವುದೂ ಇಲ್ಲ, ಸಾಯುವುದೂ ಇಲ್ಲ; ಈ ಪರಮಸುಖವು ಜ್ಞಾನದಿಂದಲೇ ಲಭ್ಯವಾಗಿರುವುದು ||೨೧||

ಈ ಜೀವನಿಗೆ ಜ್ಞಾನವೇ ಸಂಸಾರವನ್ನು ದಾಟುವುದರಲ್ಲಿ ಸರಿಯಾದ ಉಪಾಯವು; ತಪಸ್ಸು ದಾನ ತೀರ್ಥ ಇತ್ಯಾದಿಗಳೆಲ್ಲವೂ ಸರಿಯಾದ ಉಪಾಯಗಳಲ್ಲವೆಂದು ದೊಡ್ಡವರು ಹೇಳುವರು ||೨೨||

ಆದಕಾರಣ, ಆತ್ಮಜ್ಞಾನವಿಲ್ಲದೆ ಕೆಟ್ಟುಹೋಗಿರುವ ಈ ಜನರಿಗೆ ದುಃಖವಿಮೋಚನೆಯಾಗುವುದಕ್ಕೋಸ್ಕರ, ಹೊಸದಾದೊಂದುಪಾಯವನ್ನು ನಾನು ಬೇಗನೆ ಪ್ರಕಾಶಪಡಿಸುವೆನು ||೨೩||

ಹೀಗೆ ಕಮಲಾಸನನಾದ ಪೂಜ್ಯನಾದ ಆ ಚತುರ್ಮುಖನು ಪರ್ಯಾಲೋಚಿಸಿ, ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡು, ಈ ನನ್ನನ್ನು ಸೃಷ್ಟಿ ಮಾಡಿದನು ||೨೪||

ಎಲೈ ದೋಷರಹಿತನಾದ ರಾಮನೆ! ಬಳಿಕ ಯಾವುದೋ ಒಂದು ಅನಿರ್ವಚನೀಯವಾದ ಕಾರಣದಿಂದ ಉತ್ಪನ್ನನಾದ ನಾನು, ಅಲೆಯು ಅಲೆಯನ್ನು ಸೇರುವಂತೆ, ಆಕ್ಷಣವೇ ಆ ನಮ್ಮ ತಂದೆಯಾದ ಚತುರ್ಮುಖನನ್ನು ಸೇರಿದೆನು ||೨೫||

ಕಮಂಡಲುಜಪಸರಗಳೊಡನೆ ಕೂಡಿರುವ ಆ ಲೋಕನಾಥನಾದ ಚತುರ್ಮುಖನನ್ನು, ಕಮಂಡಲುಜಪಸರಗಳೊಡಗೂಡಿದ ನಾನು ನಮಸ್ಕರಿಸಿದೆನು ||೨೬||

ಬಳಿಕ ಆ ಚತುರ್ಮುಖನು—ವತ್ಸ! ಹೀಗೆ ಬಾ—ಎಂದು ಹೇಳಿ, ಬಿಳಿಮೋಡದಲ್ಲಿ ಚಂದ್ರನನ್ನು ಕೂರಿಸುವಂತೆ—ತನ್ನ ಆಸನವಾದ ಕಮಲದ ಉತ್ತರದಳದಲ್ಲಿ ತನ್ನ ಕೈಯಿಂದ ನನ್ನನ್ನು ಕೂರಿಸಿದನು ||೨೭||

ಬಳಿಕ ಕೃಷ್ಣಾಜಿನಧಾರಿಯಾಗಿರುವ ತಂದೆಯಾದ ಆ ಚತುರ್ಮುಖನು, ಕಲಹಂಸವು

ಮಾಮುವಾಚ ಪಿತಾ ಬ್ರಹ್ಮಾ ಸುಹಂಸಃ ಸಾರಸಂ ಯಥಾ ||೨೮||
ಮುಹೂರ್ತಮಾತ್ರಂ ತೇ ಪುತ್ರ ಚೇತೋ ವಾನರಚಞ್ಚಲಮ್ |
ಅಜ್ಞಾನಮಭ್ಯಾವಿಶತು ಶಶಃ ಶಶಧರಂ ಯಥಾ ||೨೯||
ಇತಿ ತೇನಾಶು ಶಪ್ತಃ ಸನ್ ವಿಚಾರಸಮನನ್ತರಮ್ |
ಅಹಂ ವಿಸ್ಮೃತವಾನ್ ಸರ್ವಂ ಸ್ವರೂಪಮಮಲಂ ಕಿಲ ||೩೦||
ಅಥಾಹಂ ದೀನತಾಂ ಯಾತಃ ಸ್ಥಿತೋಽಸಮ್ಬುದ್ಧಯಾ ಧಿಯಾ |
ದುಃಖಶೋಕಾಭಿಸನ್ತಪ್ತೋ ಜಾತೋ ಜನಇವಾಧನಃ ||೩೧||
ಕಷ್ಟಂ ಸಂಸಾರನಾಮಾಯಂ ದೋಷಃ ಕಥಮಿಹಾಗತಃ |
ಇತಿ ಚಿನ್ತಿತವಾನನ್ತಃ ತೂಷ್ಣೀಮೇವ ವ್ಯವಸ್ಥಿತಃ ||೩೨||
ಅಥಾಭ್ಯಧಾತ್ ಸ ಮಾಂ ತಾತಃ ಪುತ್ರ ಕಿಂ ದುಃಖವಾನಸಿ |
ದುಃಖೋಪಘಾತಂ ಮಾಂ ಪೃಚ್ಛ ಸುಖೀ ನಿತ್ಯಂ ಭವಿಷ್ಯಸಿ ||೩೩||
ತತಃ ಪೃಷ್ಟಃ ಸ ಭಗವಾನ್ ಮಯಾ ಸಕಲಲೋಕಕೃತ್ |
ಹೇಮಪದ್ಮದಳಸ್ಥೇನ ಸಂಸಾರವ್ಯಾಧಿಭೇಷಜಮ್ ||೩೪||
[1]ಕಥಂ ನಾಥ ಮಹಾದುಃಖಮಯಃ ಸಂಸಾರಆಗತಃ |

ಸಾರಸಪಕ್ಷಿಯೊಡನೆ ಮಾತನಾಡುವಂತೆ, ಕೃಷ್ಣಾಜಿನಧರನಾದ ನನ್ನನ್ನು ಕುರಿತು ಹೀಗೆ ಹೇಳಿದನು ||೨೮||

ಅವನು ಹೇಳಿದುದೇನೆಂದರೆ:—ಹೇ ಪುತ್ರ! ಶಶಧರನಾದ ಚಂದ್ರನನ್ನು ಶಶವು (ಮೊಲ) ಪ್ರವೇಶಿಸುವಂತೆ, ಕಪಿಯಂತೆ ಚಂಚಲವಾದ ನಿನ್ನ ಮನಸ್ಸನ್ನು ಒಂದು ಮುಹೂರ್ತಮಾತ್ರ ಅಜ್ಞಾನವು ವ್ಯಾಪಿಸಿಕೊಂಡಿರಲಿ ||೨೯||

ಹೀಗೆ ಅವನಿಂದ ಬೇಗನೆ ಶಪಿಸಲ್ಪಟ್ಟ ನಾನು, ಸ್ವಲ್ಪ ವಿಚಾರಮಾಡಿದ ಬಳಿಕ, ಆ ನಿರ್ಮಲವಾದ ಸ್ವರೂಪವನ್ನೆಲ್ಲ ಮರೆತುಬಿಟ್ಟೆನು ||೩೦||

ಬಳಿಕ ನಾನು ಕೇವಲದೈನ್ಯವನ್ನು ಹೊಂದಿ, ಜ್ಞಾನರಹಿತವಾದ ಬುದ್ಧಿಯಿಂದ, ನಿರ್ಧನನಾದ ಮನುಷ್ಯನಂತೆ, ದುಃಖ ಶೋಕಗಳಿಂದ ಪರಿತಪ್ತನಾಗಿದ್ದೆನು ||೩೧||

ಹಾ! ಕಷ್ಟ! ಸಂಸಾರನಾಮಕವಾದ ಈ ದೋಷವು ಇಲ್ಲಿ ಹೇಗೆ ಬಂದಿತು?— ಎಂದು ಮನಸ್ಸಿನಲ್ಲಿಯೇ ಯೋಚಿಸಿದವನಾಗಿ, ನಾನು ಸುಮ್ಮನೆಯೇ ಇದ್ದೆನು ||೩೨||

ಬಳಿಕ ಆ ತಂದೆಯು ನನ್ನನ್ನು ಕುರಿತು ‘ ಪುತ್ರ! ನೀನೇಕೆ ದುಃಖಪಡುತ್ತಿರುವೆ? ನಿನ್ನ ದುಃಖವು ನಾಶಹೊಂದತಕ್ಕ ಉಪಾಯವನ್ನು ನನ್ನನ್ನು ಕೇಳುವವನಾಗು; ಹಾಗಾದರೆ ನೀನು ನಿತ್ಯವೂ ಸುಖಿಯಾಗಿರುವೆ ’ ಎಂದು ಹೇಳಿದನು ||೩೩||

ಬಳಿಕ ಸಕಲ ಲೋಕಕರ್ತನಾದ ಪೂಜ್ಯನಾದ ಆ ಚತುರ್ಮುಖನು, ಅವನ ಆಸನವಾದ ಸುವರ್ಣಕಮಲದ ದಳದಲ್ಲಿ ಕುಳಿತಿರುವ ನನ್ನಿಂದ, ಸಂಸಾರವೆಂಬ ರೋಗಕ್ಕೆ ಔಷಧವೇನೆಂದು ಕೇಳಲ್ಪಟ್ಟನು ||೩೪||

ಹೇ ಸ್ವಾಮಿನ್! ಈ ಜೀವನಿಗೆ ಮಹಾದುಃಖಪರಿಪೂರ್ಣವಾಗಿರುವ ಈ ಸಂಸಾರವು ಹೇಗೆ ಬಂದಿತು? ಇದು ಕ್ಷಯಿಸುವ ಬಗೆ ಹೇಗೆ?— ಎಂದು ನನ್ನಿಂದ ಪ್ರಶ್ನೆಮಾಡ

---

1 ಪಿತುಃ = ಪಿತರಮಿತ್ಯರ್ಥಃ.

ಕಥಂ ಚ ಕ್ಷೀಯತೇ ಜನ್ತೋಃ ಇತಿ ಪೃಷ್ಟೇನ ತೇನ ಮೇ ‖೩೫‖
ತಜ್ಜ್ಞಾನಂ ಸುಬಹು ಪ್ರೋಕ್ತಂ ಯಜ್ಜ್ಞಾತ್ವಾ ಪಾವನಂ ಪರಮ್ ।
ಅಹಂ ಪಿತುರಭಿಪ್ರಾಯಃ ಕಿಲಾಧಿಕ ಇವ ಸ್ಥಿತಃ ‖೩೬‖
ತತೋ ವಿದಿತವೇದ್ಯಂ ಮಾಂ ನಿಜಾಂ ಪ್ರಕೃತಿಮಾಸ್ಥಿತಮ್ ।
ಸಉವಾಚ ಜಗತ್ಕರ್ತಾ ವಕ್ತಾ ಸಕಲಕಾರಣಮ್ ‖೩೭‖
ಶಾಪೇನಾಜ್ಞಪದಂ ನೀತ್ವಾ ಪ್ರಚ್ಛಕಸ್ತ್ವಂ ಮಯಾ ಕೃತಃ ।
ಪುತ್ರಾಸ್ಯ ಜ್ಞಾನಸಾರಸ್ಯ ಸಮಸ್ತಜನಸಿದ್ಧಯೇ ‖೩೮‖
ಇದಾನೀಂ ಶಾನ್ತಶಾಪಸ್ತ್ವಂ ಪರಂ ಬೋಧಮುಪಾಗತಃ ।
ಸಂಸ್ಥಿತೋಽಹಮಿವೈಕಾತ್ಮಾ ಕನಕಂ ಕನಕಾದಿವತ್ ‖೩೯‖
ಗಚ್ಛೇದಾನೀಂ ಮಹೀಪೃಷ್ಠೇ ಜಮ್ಬೂದ್ವೀಪಾನ್ತರಸ್ಥಿತಮ್ ।
ಸಾಧೋ ಭರತವರ್ಷಂ ತ್ವಂ ಲೋಕಾನುಗ್ರಹಹೇತುನಾ ‖೪೦‖
ತತ್ರ ಕ್ರಿಯಾಕಾಣ್ಡಪರಾಃ ತ್ವಯಾ ಪುತ್ರ ಮಹಾಧಿಯಾ ।
ಉಪದೇಶ್ಯಾಃ ಕ್ರಿಯಾಕಾಣ್ಡಕ್ರಮೇಣ ಕ್ರಮಶಾಲಿನಾ ‖೪೧‖
ವಿರಕ್ತಚಿತ್ತಾಶ್ಚ ತಥಾ ಮಹಾಪ್ರಾಜ್ಞಾವಿಚಾರಿಣಃ ।

ಲ್ಪಟ್ಟ ಆ ಚತುರ್ಮುಖನು, ಅತ್ಯಧಿಕವಾದ ಆ ಜ್ಞಾನಮಾರ್ಗವನ್ನೆಲ್ಲ ನನಗೆ ಹೇಳಿದನು. ಅತ್ಯಂತ ಪವಿತ್ರವಾದ ಸರ್ವೋತ್ಕೃಷ್ಟವಾದ ಆ ಮಾರ್ಗವನ್ನು ತಿಳಿದವನಾಗಿ ನಾನು, ನನ್ನ ತಂದೆಯು ಉದಾರವಾದ ಅಭಿಪ್ರಾಯದಂತೆ ನಿರ್ಮಲನಾಗಿದ್ದೆನು ‖೩೫—೩೬‖

ಬಳಿಕ ತಿಳಿಯತಕ್ಕ ತತ್ವವನ್ನು ತಿಳಿದು ಪುನಃ ಪೂರ್ವಾವಸ್ಥೆಯನ್ನು ಹೊಂದಿರುವ ನನ್ನನ್ನು ಕುರಿತು, ಸಮಸ್ತಕ್ಕೂ ತಕ್ಕ ಕಾರಣವನ್ನುಪದೇಶಿಸತಕ್ಕವನಾದ ಸಕಲ ಲೋಕ ಕರ್ತನಾದ ಆ ಚತುರ್ಮುಖನು ಹೀಗೆ ಹೇಳಿದನು ‖೩೭‖

ಅವನು ಹೇಳಿದುದೇನೆಂದರೆ:—ಹೇ ಪುತ್ರ! ಸಮಸ್ತರಿಗೂ ಸಿದ್ಧಿಯುಂಟಾಗುವುದ ಕ್ಕಾಗಿ, ನಾನು ನಿನ್ನನ್ನು ಶಾಪದಿಂದ ಅಜ್ಞಾನಿಯನ್ನಾಗಿ ಮಾಡಿ, ಈ ಜ್ಞಾನಸಾರಕ್ಕೆ ನೀನು ಪ್ರಚ್ಛಕ (ಕೇಳತಕ್ಕವನು) ನಾಗುವಂತೆ ಮಾಡಿದೆನು ‖೩೮‖

ಈಗ ನೀನು ವಿಮುಕ್ತಶಾಪನಾಗಿ ಸರ್ವೋತ್ತಮವಾದ ಜ್ಞಾನವನ್ನು ಪಡೆದಿರುವೆ; ಸುವರ್ಣವು ಕೊಳೆಕೂತು ಸುವರ್ಣವಲ್ಲವೆಂದು ತೋರುತಿದ್ದು, ತೊಳೆದಮೇಲೆ ಕೊಳೆ ಹೋಗಿ ಪುನಃ ಪೂರ್ವದಂತೆ ಸುವರ್ಣವೇ ಆಗುವಂತೆ, ನೀನು ಶಾಪದಿಂದ ಅಜ್ಞಾನಿಯಾ ಗಿದ್ದು, ಈಗ ಶಾಪ ಕಳೆಯಲಾಗಿ—ನನ್ನಂತೆಯೇ ಕೇವಲನಾದ ಆತ್ಮಸ್ವರೂಪನಾಗಿರುವೆ‖

ಎಲೈ ಸೌಮ್ಯನಾದ ಪುತ್ರನೆ! ಈಗ ನೀನು ಲೋಕಾನುಗ್ರಹಾರ್ಥವಾಗಿ, ಜಂಬೂ ದ್ವೀಪದ ಮಧ್ಯದಲ್ಲಿರುವ ಭರತವರ್ಷಕ್ಕೆ ಹೋಗು ‖೪೦‖

ಅಲ್ಲಿ ಮಹಾಬುದ್ಧಿಶಾಲಿಯಾಗಿ ಕ್ರಮವಾಗಿ ಆಚರಣೆಮಾಡುತಿರುವ ನೀನು, ಕರ್ಮ ಕಾಂಡದಲ್ಲಿ ಆಸಕ್ತರಾಗಿರುವವರಿಗೆ ಕರ್ಮಕಾಂಡರೀತಿಯಿಂದ ಉಪದೇಶಿಸಬೇಕು ‖೪೧‖

ಮತ್ತು, ಎಲೈ ಸಾಧುವೆ! ವಿರಕ್ತವಾದ ಮನಸ್ಸುಳ್ಳವರಾಗಿ—ಮಹಾಪ್ರಾಜ್ಞರಾಗಿ-

ಉಪದೇಶ್ಯಾಸ್ತ್ವಯಾ ಸಾಧೋ ಜ್ಞಾನೇನಾನನ್ದದಾಯಿನಾ ॥೪೨॥
ಇತಿ ತೇನ ನಿಯುಕ್ತೋಽಹಂ ಪಿತ್ರಾ ಕಮಲಯೋನಿನಾ ।
ಇಹ ರಾಘವ ತಿಷ್ಠಾಮಿ ಯಾವದ್ಭೂತಪರಮ್ಪರಾ ॥೪೩॥

ಕರ್ತವ್ಯಮಸ್ತಿ ನ ಮಮೇಹ ಹಿ ಕಿಂಚಿದೇವ
ಸ್ಥಾತವ್ಯಮಿತ್ಯತಿಮನಾ ಭುವಿ ಸಂಸ್ಥಿತೋಽಸ್ಮಿ ।
ಸಂಶಾನ್ತಯಾ ಸತತಮುಸ್ತಧಿಯೇಹ ವೃತ್ತ್ಯಾ
ಕಾರ್ಯಂ ಕರೋಮಿ ನ ಚ ಕಿಂಚಿದಹಂ ಕರೋಮಿ ॥೪೪॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ಜ್ಞಾನಾವತರಣಂ
ನಾಮ ದಶಮಃ ಸರ್ಗಃ.

ವಿಚಾರಶೀಲರಾದವರನ್ನು, ಆನಂದಕಾರಿಯಾದ ಜ್ಞಾನಮಾರ್ಗದಿಂದುಪದೇಶಿಸಬೇಕು ॥೪೨

ಅಯ್ಯಾ ರಾಮ! ಈರೀತಿಯಾಗಿ ಕಮಲಸಂಭವನಾದ ಆ ತಂದೆಯಿಂದ ಆಜ್ಞಾಪಿಸಲ್ಪಟ್ಟ ನಾನು, ಈ ಪ್ರಾಣಿಸಮುದಾಯವಿರುವವರೆಗೂ ಈ ಲೋಕದಲ್ಲಿರುವೆನು ॥೪೩॥

ಆದರೆ, ನನಗೆ ಈ ಲೋಕದಲ್ಲಿ ಮಾಡಬೇಕಾದ ಕೆಲಸವೊಂದೂ ಇಲ್ಲ; ಆದರೂ ಇರಬೇಕಾಗಿದೆಯೆಂದು ನಿರ್ಮನಸ್ಕನಾಗಿ ಈ ಭೂಲೋಕದಲ್ಲಿರುವೆನು. ಇಲ್ಲಿದ್ದಮೇಲೆ ಇಲ್ಲಿ ಮಾಡಬೇಕಾದ ಕರ್ಮವನ್ನು ಮಾಡಿಯೇ ತೀರಬೇಕಾಗಿರುವುದರಿಂದ, ಸರ್ವದಾ ಸುಪ್ತವಾಗಿರುವಂತೆ ಮಮತಾಶೂನ್ಯವಾದ ಮನಸ್ಸುಳ್ಳದಾಗಿ ಶಾಂತವಾಗಿರುವ ನಡತೆಯಿಂದ ಮಾಡಬೇಕಾದ ಕರ್ಮವನ್ನು ಮಾಡುತಿರುವೆನು. ಇಷ್ಟಾದರೂ ಆ ಕರ್ಮದ ಫಲದಲ್ಲಿ ಆಸಕ್ತಿಯಿಲ್ಲದಕಾರಣ, ನಾನು ಯಾವುದನ್ನೂ ಮಾಡದಿರುವಂತೆಯೇ ಇರುವೆನು ॥೪೪॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಜ್ಞಾನಾವತರಣವೆಂಬ
ಹತ್ತನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಏಕಾದಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏತತ್ ತೇ ಕಥಿತಂ ಸರ್ವಂ ಜ್ಞಾನಾವತರಣಂ ಭುವಿ |
ಮಯಾ ಸ್ವವಿಹಿತಂ ಚೈವ ಕಮಲೋದ್ಭವಚೇಷ್ಟಿತಮ್ ||೧||
ತದಿದಂ ಪರಮಂ ಜ್ಞಾನಂ ಶ್ರೋತುಮದ್ಯ ತವಾನಘ |
ಭೃಶಮುತ್ಕಣ್ಠಿತಂ ಚೇತೋ ಮಹತಃ ಸುಕೃತೋದಯಾತ್ ||೨||

ಶ್ರೀರಾಮ ಉವಾಚ.

ಕಥಂ ಬ್ರಹ್ಮನ್ ಭಗವತೋ ಲೋಕೇ ಜ್ಞಾನಾವತಾರಣೇ |
ಸರ್ಗಾದನನ್ತರಂ ಬುದ್ಧಿಃ ಪ್ರವೃತ್ತಾ ಪರಮೇಷ್ಠಿನಃ ||೩||

ಶ್ರೀವಸಿಷ್ಠ ಉವಾಚ.

ಪರಮೇ ಬ್ರಹ್ಮಣಿ ಬ್ರಹ್ಮಾ ಸ್ವಭಾವವಶತಃ ಸ್ವಯಮ್ |

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹನ್ನೊಂದನೆಯ ಸರ್ಗವು.

ಜ್ಞಾನಾವತಾರವಿಸ್ತಾರೋ ರಾಮವೈರಾಗ್ಯಸಂಸ್ತವಃ |
ವಕ್ತೃಪ್ರಷ್ಟೃಕಲಕ್ಷ್ಮಾದಿ ಪ್ರಾಧಾನ್ಯೇನಾತ್ರ ವರ್ಣ್ಯತೇ ||

ಜ್ಞಾನಮಾರ್ಗವು ಭೂಮಿಯಲ್ಲವತರಿಸಿದ ವಿಸ್ತಾರವೂ, ಶ್ರೀರಾಮನ ವೈರಾಗ್ಯ ಪ್ರಶಂಸೆಯೂ, ವಕ್ತೃಶ್ರೋತೃಗಳ ಲಕ್ಷಣ ಮುಂತಾದುವೂ ಕೂಡ ಮುಖ್ಯವಾಗಿ ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಮತ್ತೆ ವಿಸ್ತಾರವಾಗಿ ಜ್ಞಾನಾವತರಣರೀತಿಯನ್ನು ವರ್ಣಿಸಲುಪಕ್ರಮಿಸಿ ಶ್ರೀವಸಿಷ್ಠಮುನಿಯು ಹೇಳಿದರು.

ಅಯ್ಯಾ! ರಾಮ! ಭೂಮಿಯಲ್ಲಿ ಜ್ಞಾನಮಾರ್ಗವವತರಿಸಿದ ಬಗೆಯನ್ನೂ, ನನ್ನ ವ್ಯಾಪಾರವನ್ನೂ, ಚತುರ್ಮುಖನ ವ್ಯಾಪಾರವನ್ನೂ, ಇದೆಲ್ಲವನ್ನೂ ನಾನು ನಿನಗೆ ಹೇಳಿರುವೆನು ||೧||

ದೋಷರಹಿತನಾದ ರಾಮನೆ! ಈ ವಿಧವಾದ ಶ್ರೇಷ್ಠವಾದ ಜ್ಞಾನಮಾರ್ಗವನ್ನು ಕೇಳಲು, ಅತ್ಯಂತವಾದ ಪುಣ್ಯೋದಯದಿಂದಲೇ ನಿನ್ನ ಮನಸ್ಸು ಈಗ ಇಷ್ಟು ಹೆಚ್ಚಾಗಿ ಉತ್ಕಂಠೆಪಡುತ್ತಿರುವುದು ||೨||

ಹೀಗೆ ವಸಿಷ್ಠರು ಹೇಳಲು, ಆ ಪುಣ್ಯೋದಯವಾವುದೆಂಬುದನ್ನು ತಿಳಿಯಲಪೇಕ್ಷಿಸಿ ಶ್ರೀರಾಮನು ಹೇಳಿದನು.

ಎಲೈ ಬ್ರಾಹ್ಮಣೋತ್ತಮರೆ! ಸೃಷ್ಟಿಯಾದೊಡನೆಯೇ, ಈ ಲೋಕದಲ್ಲಿ ಜ್ಞಾನಮಾರ್ಗವನ್ನು ಪ್ರಚಾರಪಡಿಸಬೇಕೆಂಬ ಬುದ್ಧಿಯು ಆ ಚತುರ್ಮುಖನಿಗೆ ಹೇಗೆ ಉಂಟಾಯ್ತು?||

ಶ್ರೀ ವಸಿಷ್ಠಮುನಿಗಳು ಹೇಳಿದರು.

ಜಾತಃ ಸ್ಪನ್ದಮಯೋ ನಿತ್ಯಂ ಊರ್ಮಿರಮ್ಬುನಿಧಾವಿವ ||೪||
ದೃಷ್ಟ್ವೈವಮಾತುರಂ ಸರ್ಗಂ ಸರ್ಗಸ್ಯ ಸಕಲಾಂ ಗತಿಮ್ |
ಭೂತಭವ್ಯಭವಿಷ್ಯತ್ಸ್ಥಾಂ ದದರ್ಶ ಪರಮೇಶ್ವರಃ ||೫||
ಸ ಕ್ರಿಯಾಕ್ರಮಕಾಲಸ್ಯ ಕೃತಾದೇಃ ಕ್ಷಯಆಗತೇ |
ಮೋಹಮಾಲೋಚ್ಯ ಲೋಕಾನಾಂ ಕಾರುಣ್ಯಮಗಮತ್ ಪ್ರಭುಃ ||೬||
ತತೋ ಮಾಮೀಶ್ವರಃ ಸೃಷ್ಟ್ವಾ ಜ್ಞಾನೇನಾಯೋಜ್ಯ ಚಾಸಕೃತ್ |
ವಿಸಸರ್ಜ ಮಹೀಪೀಠಂ ಲೋಕಸ್ಯಾಜ್ಞಾನಶಾನ್ತಯೇ ||೭||
ಯಥಾಽಹಂ ಪ್ರಹಿತಸ್ತೇನ ತಥಾನ್ಯೇ ಚ ಮಹರ್ಷಯಃ |
ಸನತ್ಕುಮಾರಪ್ರಮುಖಾಃ ನಾರದಾದ್ಯಾಶ್ಚ ಭೂರಿಶಃ ||೮||
ಕ್ರಿಯಾಕ್ರಮೇಣ ಪುಣ್ಯೇನ ತಥಾ ಜ್ಞಾನಕ್ರಮೇಣ ಚ |
ಮನೋ ಮೋಹಾಮಯೋನ್ನದ್ಧಂ ಉದ್ಧರ್ತುಂ ಲೋಕಮೀರಿತಾಃ ||೯||
ಮಹರ್ಷಿಭಿಸ್ತತಸ್ತೈಸ್ತೈಃ ಕ್ಷೀಣೇ ಕೃತಯುಗೇ ಪುರಾ |
ಕ್ರಮಾತ್ ಕ್ರಿಯಾಕ್ರಮೇ ಶುದ್ಧೇ ಪೃಥಿವ್ಯಾಂ ತನುತಾಂ ಗತೇ ||೧೦||
ಕ್ರಿಯಾಕ್ರಮವಿಧಾನಾರ್ಥಂ ಮರ್ಯಾದಾನಿಯಮಾಯ ಚ ||

ಅಯ್ಯಾ! ರಾಮ! ಆ ಸಾಕ್ಷಾತ್ಪರಬ್ರಹ್ಮನಲ್ಲಿ, ಈ ಚತುರ್ಮುಖನು, ತನ್ನ ಪ್ರಾಕ್ತನ ಜ್ಞಾನಾದಿ ಸ್ವಭಾವವಶದಿಂದ, ನಿತ್ಯವಾಗಿ ಕ್ರಿಯಾಶಕ್ತಿಪ್ರಚುರನಾಗಿ— ಸಮುದ್ರದಲ್ಲಿ ಅಲೆಯು ಹುಟ್ಟುವಂತೆ—ಹುಟ್ಟಿದನು ||೪||

ಈ ಚತುರ್ಮುಖನು, ಈ ಸಮಸ್ತಪ್ರಪಂಚವನ್ನೂ ಸೃಷ್ಟಿಸಿ, ಇದು ಈರೀತಿಯಾಗಿ ವ್ಯಥೆಪಡುತಿರುವುದನ್ನು ಕಂಡು, ಇದಕ್ಕೆ ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ಆಗುವ ಗತಿಯನ್ನೂಕೂಡ ತಿಳಿದವನಾದನು ||೫||

ಸರ್ವಶಕ್ತನಾದ ಆ ಚತುರ್ಮುಖನು, ಕರ್ಮಾಚರಣೆಗೆ ಅನುಕೂಲವಾದ ಕೃತಯುಗಾದಿ ಕಾಲಕ್ಕೆ ಕ್ಷಯವು ಸಮೀಪಿಸಿದಾಗ– ಈ ಭೂತಗಳೆಲ್ಲವೂ ಮೋಹಪಡುತಿರುವುದನ್ನು ಕಂಡು ಕೃಪಾವಿಷ್ಟನಾದನು ||೬||

ಬಳಿಕ ಆ ಚತುರ್ಮುಖನು ನನ್ನನ್ನು ಸೃಜಿಸಿ, ಮತ್ತೆಮತ್ತೆ ನನಗೆ ಜ್ಞಾನವನ್ನುಪದೇಶಿಸಿ, ಜನರ ಅಜ್ಞಾನಶಾಂತಿಗೋಸ್ಕರ ನನ್ನನ್ನು ಭೂಮಿಗೆ ಕಳುಹಿಸಿದನು ||೭||

ಆ ಚತುರ್ಮುಖನು ನನ್ನನ್ನು ಹೇಗೆ ಕಳುಹಿಸಿದನೋ, ಹಾಗೆಯೇ—ಇನ್ನೂ ಇತರರಾದ ಸನತ್ಕುಮಾರ ಮೊದಲಾದವರನ್ನೂ ನಾರದ ಮೊದಲಾದ ಮಹರ್ಷಿಗಳನ್ನೂ ಕೂಡ, ಮೋಹವೆಂಬ ರೋಗದಿಂದ ವ್ಯಾಪ್ತನಾದ ಜನರ ಮನಸ್ಸನ್ನು ಪುಣ್ಯವಾದ ಕರ್ಮಮಾರ್ಗದಿಂದಲೂ ಜ್ಞಾನಮಾರ್ಗದಿಂದಲೂ ಉದ್ಧಾರಮಾಡುವುದಕ್ಕೆ ಅನೇಕವಾಗಿ ಕಳುಹಿಸಿದನು॥

ಬಳಿಕ ಮೊದಲು ಕೃತಯುಗವು ಕ್ಷಯಿಸಲಾಗಿ, ಶುದ್ಧವಾದ ಕರ್ಮಮಾರ್ಗಪ್ರಕ್ರಿಯೆಯು ಭೂಮಿಯಲ್ಲಿ ಕ್ರಮೇಣ ಕಡಮೆಯಾಗಲು, ಈ ಕರ್ಮಮಾರ್ಗವನ್ನು ಕ್ರಮಪಡಿ

ಪೃಥಗ್ದೇಶವಿಭಾಗೇನ ಭೂಪಾಲಾಃ ಪರಿಕಲ್ಪಿತಾಃ ||೧೧||
ಬಹೂನಿ ಸ್ಮೃತಿಶಾಸ್ತ್ರಾಣಿ ಯಜ್ಞಶಾಸ್ತ್ರಾಣಿ ಚಾವನೌ |
ಧರ್ಮಕಾಮಾರ್ಥಸಿದ್ಧ್ಯರ್ಥಂ ಕಲ್ಪಿತಾನ್ಯುಚಿತಾನ್ಯಥ ||೧೨||
ಕಾಲಚಕ್ರೇ ವಹತ್ಯಸ್ಮಿನ್ ತತೋ ವಿಗಳಿತೇ ಕ್ರಮೇ |
ಪ್ರತ್ಯಹಂ ಭೋಜನಪರೇ ಜನೇ ಶಾಲ್ಯರ್ಜನೋನ್ಮುಖೇ ||೧೩||
ದ್ವನ್ದ್ವಾನಿ ಸಮ್ಪ್ರವೃತ್ತಾನಿ ವಿಷಯಾರ್ಥಂ ಮಹೀಭುಜಾಮ್ |
ದಣ್ಡ್ಯತಾಂ ಸಮ್ಪ್ರಯಾತಾನಿ ಭೂತಾನಿ ಭುವಿ ಭೂರಿಶಃ ||೧೪||
ತತೋ ಯುದ್ಧಂ ವಿನಾ ಭೂಪಾಃ ಮಹೀಂ ಪಾಲಯಿತುಂ ಕ್ಷಮಾಃ |
[1]ನಸಮರ್ಥಾಸ್ತದಾಯಾತಾಃ ಪ್ರಜಾಭಿಃ ಸಹ [2]ದೈನ್ಯತಾಮ್ ||೧೫||
ತೇಷಾಂ ದೈನ್ಯಾಪನೋದಾರ್ಥಂ ಸಮ್ಯಗ್ದೃಷ್ಟಿಕ್ರಮಾಯ ಚ |
ತತೋಸ್ಮದಾದಿಭಿಃ ಪ್ರೋಕ್ತಾಃ ಮಹತ್ಯೋ ಜ್ಞಾನದೃಷ್ಟಯಃ ||೧೬||
ಅಧ್ಯಾತ್ಮವಿದ್ಯಾ ತೇನೇಯಂ ಪೂರ್ವರಾಜಸು ವರ್ಣಿತಾ |
ತದನು ಪ್ರಸೃತಾ ಲೋಕೇ ರಾಜವಿದ್ಯೇತ್ಯುದಾಹೃತಾ ||೧೭||

ಸುವುದಕ್ಕೂ ಲೋಕಮರ್ಯಾದೆಯನ್ನೇರ್ಪಡಿಸುವುದಕ್ಕೂ ಕೂಡ, ಆಯಾ ಮಹರ್ಷಿಗಳು ಆಯಾದೇಶವಿಭಾಗಾನುಗುಣವಾಗಿ ರಾಜರುಗಳನ್ನು ಏರ್ಪಡಿಸಿದರು ||೧೦-೧೧||

ಬಳಿಕ, ಜನರಿಗೆ ಧರ್ಮಕಾಮ ಅರ್ಥಗಳು ಸಿದ್ಧಿಸುವುದಕ್ಕೋಸ್ಕರ, ಯೋಗ್ಯಗಳಾದ ಅನೇಕವಾದ ಸ್ಮೃತಿಶಾಸ್ತ್ರಗಳನ್ನೂ ಯಜ್ಞವಿಧಿಯನ್ನು ತೋರಿಸುವ ಶಾಸ್ತ್ರಗಳನ್ನೂ ಭೂಮಿಯಲ್ಲಿ ಕಲ್ಪಿಸಿದರು ||೧೨||

ಆಮೇಲೆ ಈ ಕಾಲಚಕ್ರವು ಪ್ರವಹಿಸುತ್ತಿರಲು, ಆ ಮಹರ್ಷಿಗಳು ಏರ್ಪಡಿಸಿದ್ದ ಕ್ರಮವೆಲ್ಲ ಸಡಿಲವಾಗಲು, ಸಮಸ್ತಜನರೂ ಕೂಡ ಪ್ರತಿದಿನವೂ ಕೇವಲ ಭೋಜನಮಾತ್ರಾಸಕ್ತರಾಗಿ ಆಹಾರಸಾಮಗ್ರಿಯನ್ನೊದಗಿಸಿಕೊಳ್ಳುವುದರಲ್ಲೇ ತತ್ಪರರಾಗಲು, ದೊರೆಗಳಿಗೆ ದೇಶಸಂಪಾದನಾರ್ಥವಾಗಿ ಪರಸ್ಪರ ಯುದ್ಧವುಂಟಾಯ್ತು; ಭೂಮಿಯಲ್ಲಿ ಅನೇಕ ಪ್ರಾಣಿಗಳು ಅಪರಾಧಮಾಡುತ ಶಿಕ್ಷಣೀಯರುಗಳಾದುವು ||೧೩-೧೪||

ಬಳಿಕ ಆ ದೊರೆಗಳು, ಪೂರ್ವದಲ್ಲಿ ಯುದ್ಧವಿಲ್ಲದೆಯೇ ಭೂಮಿಯನ್ನು ಪಾಲಿಸುವುದಕ್ಕೆ ಶಕ್ತರಾಗಿದ್ದರೂ ಆಗ ಹಾಗೆ ಮಾಡಲಸಮರ್ಥರಾಗಿ, ಪ್ರಜೆಗಳೊಡನೆ ದೈನ್ಯಹೊಂದಿದರು ||೧೫||

ಬಳಿಕ, ಅವರ ದೈನ್ಯವು ತೊಲಗುವುದಕ್ಕೂ, ಉತ್ತಮವಾದ ತತ್ವಜ್ಞಾನವು ಪ್ರಪಂಚದಲ್ಲಿ ಪ್ರಸರಿಸುವುದಕ್ಕೂ ಕೂಡ, ನಾನೇ ಮೊದಲಾದ ಋಷಿಗಳಿಂದ ಉತ್ತಮವಾದ ಜ್ಞಾನಮಾರ್ಗಗಳು ಹೇಳಲ್ಪಟ್ಟುವು ||೧೬||

ಈ ಕಾರಣದಿಂದ ಈ ಜ್ಞಾನವಿದ್ಯೆಯು ಪೂರ್ವದಲ್ಲಿ ರಾಜರಿಗೆ ಹೇಳಲ್ಪಟ್ಟಿತು; ಬಳಿಕ ಲೋಕದಲ್ಲಿ ಪ್ರಸರಿಸಿತು. ಇದರಿಂದಲೇ ಇದು ರಾಜವಿದ್ಯೆಯೆಂದು ಹೇಳಲ್ಪಟ್ಟಿರುವುದು||

---

1 ನಶಬ್ದೇನಸಹ ಸಮಾಸಃ.

2 ದೀನಾಏವ ದೈನ್ಯಾಃ, ತೇಷಾಂಭಾವಃ ದೈನ್ಯತಾ.

ರಾಜವಿದ್ಯಾ ರಾಜಗುಹ್ಯಂ ಅಧ್ಯಾತ್ಮಜ್ಞಾನಮುತ್ತಮಮ್ |
ಜ್ಞಾತ್ವಾ ರಾಘವ ರಾಜಾನಃ ಪರಾಂ ನಿರ್ದುಃಖತಾಂ ಗತಾಃ ||೧೮||
ಅಥ ರಾಜಸ್ವತೀತೇಷು ಬಹುಷ್ವಮಲಕೀರ್ತಿಷು |
ಅಸ್ಮಾದ್ದಶರಥಾದ್ರಾಮ ಜಾತೋಽದ್ಯ ತ್ವಮಿಹಾವನೌ ||೧೯||
ತವ ಚಾತಿಪ್ರಸನ್ನೇಽಸ್ಮಿನ್ ಜಾತಂ ಮನಸಿ ಪಾವನಮ್ |
ನಿರ್ನಿಮಿತ್ತಮಿದಂ ಚಾರು ವೈರಾಗ್ಯಮರಿಮರ್ದನ ||೨೦||
ಸರ್ವಸ್ಯೈವ ಹಿ ಸರ್ವಸ್ಯ ಸಾಧೋರಪಿ ವಿವೇಕಿನಃ |
ನಿಮಿತ್ತಪೂರ್ವಂ ವೈರಾಗ್ಯಂ ಜಾಯತೇ ರಾಮ ರಾಜಸಮ್ ||೨೧||
ಇದಂ ತ್ವಪೂರ್ವಮುತ್ಪನ್ನಂ ಚಮತ್ಕಾರಕರಂ ಸತಾಮ್ |
ತವಾನಿಮಿತ್ತಂ ವೈರಾಗ್ಯಂ ಸಾತ್ವಿಕಂ ಸ್ವವಿವೇಕಜಮ್ ||೨೨||
ಬೀಭತ್ಸಂ ವಿಷಯಂ ದೃಷ್ಟ್ವಾ ಕೋನಾಮ ನ ವಿರಜ್ಯತೇ |
ಸತಾಮುತ್ತಮವೈರಾಗ್ಯಂ ವಿವೇಕಾದೇವ ಜಾಯತೇ ||೨೩||
ತೇ ಮಹಾನ್ತೋ ಮಹಾಪ್ರಾಜ್ಞಾಃ ನಿಮಿತ್ತೇನ ವಿನೈವ ಹಿ |
ವೈರಾಗ್ಯಂ ಜಾಯತೇ ಯೇಷಾಂ ತೇಷಾಂ ಹ್ಯಮಲಮಾನಸಮ್ ||೨೪||

ಅಯ್ಯಾ ! ರಾಘವ ! ಇದು ರಾಜವಿದ್ಯೆಯು ; ಇದು ರಾಜರಿಗೆಲ್ಲ ರಹಸ್ಯವಾದುದು. ಇಂತಹ ಉತ್ತಮವಾದ ಅಧ್ಯಾತ್ಮವಿದ್ಯೆಯನ್ನು ತಿಳಿದು, ರಾಜರುಗಳು ಉತ್ತಮವಾದ ಆನಂದವನ್ನು ಪಡೆದರು ||೧೮||

ಅಯ್ಯಾ ! ರಾಮ ! ಬಳಿಕ ನಿರ್ಮಲವಾದ ಕೀರ್ತಿಯುಳ್ಳ ಅನೇಕ ದೊರೆಗಳು ಕಳೆದುಹೋಗಲು, ಈ ದಶರಥನಿಂದ ನೀನು ಈ ಭೂಮಿಯಲ್ಲಿ ಹುಟ್ಟಿರುವೆ ||೧೯||

ಎಲೈ ಶತ್ರುಸಂಹಾರಕನೆ ! ನಿನಗಾದರೆ, ಅತಿ ನಿರ್ಮಲವಾದ ಈ ಮನಸ್ಸಿನಲ್ಲಿ, ಅತಿಪರಿಶುದ್ಧವಾದ ಮನೋಹರವಾದ ಈ ವೈರಾಗ್ಯವು ನಿರ್ನಿಮಿತ್ತವಾಗಿ ಹುಟ್ಟಿರುವುದು ||೨೦||

ಅಯ್ಯಾ ! ರಾಮ ! ಎಷ್ಟು ಸಾಧುವಾಗಿದ್ದರೂ ಎಷ್ಟು ವಿವೇಕಿಯಾಗಿದ್ದರೂ ಸಮಸ್ತಜನಕ್ಕೂ, ಸಮಸ್ತ ವಿಷಯದಲ್ಲಿಯೂ ಯಾವುದಾದರೊಂದು ಕಾರಣವಿದ್ದೇ ವೈರಾಗ್ಯವುಂಟಾಗುವುದು. ಇಂತಹ ವೈರಾಗ್ಯವು ರಾಜಸ ವೈರಾಗ್ಯವು ||೨೧||

ನಿನಗಾದರೋ, ಈ ವೈರಾಗ್ಯವು ಅಪೂರ್ವವಾಗಿ ಹುಟ್ಟಿರುವುದು ; ಇದು ಸತ್ಪುರುಷರಿಗೆಲ್ಲ ಆಶ್ಚರ್ಯಕರವಾಗಿರುವುದು ; ಇದು ಯಾವಕಾರಣವೂ ಇಲ್ಲದೆ ನಿನ್ನ ವಿವೇಕದಿಂದಲೇ ಹುಟ್ಟಿರುವುದರಿಂದ ಸಾತ್ವಿಕವೈರಾಗ್ಯವೆನ್ನಿಸುವುದು ||೨೨||

ಯಾವುದಾದರೊಂದು ಜುಗುಪ್ಸಾವಹವಾದ ವಿಷಯವನ್ನು ಕಂಡು ಯಾರುತಾನೆ ವಿರಕ್ತನಾಗುವುದಿಲ್ಲ? ಆದರೆ, ಸತ್ಪುರುಷರಿಗೆ ಉತ್ತಮವಾದ ಸಾತ್ವಿಕ ವೈರಾಗ್ಯವು ವಿವೇಕದಿಂದಲೇ ಹುಟ್ಟುವುದು ||೨೩||

ಯಾರಿಗೆ ಯಾವ ನಿಮಿತ್ತವೂ ಇಲ್ಲದೆ ನಿರ್ಮಲಮನಸ್ಕವಾದ ಸಾತ್ವಿಕ ವೈರಾಗ್ಯವು ಹುಟ್ಟುವುದೋ, ಅವರೇ ಮಹಾತ್ಮರು; ಅವರೇ ಮಹಾಪ್ರಾಜ್ಞರು ||೨೪||

ಸ್ವವಿವೇಕಚಮತ್ಕಾರಪರಾಮರ್ಶವಿರಕ್ತಯಾ |
ರಾಜತೇ ಹಿ ಧಿಯಾ ಜನ್ತುಃ ಯುವೇವ ವರಮಾಲಯಾ ||೧೫||
ಪರಾಮೃಶ್ಯ ವಿವೇಕೇನ ಸಂಸಾರರಚನಾಮಿಮಾಮ್ |
ವೈರಾಗ್ಯಂ ಯೇಽಧಿಗಚ್ಛನ್ತಿ ತಏವ ಪುರುಷೋತ್ತಮಾಃ ||೧೬||
ಸ್ವವಿವೇಕವಶಾದೇವ ವಿಚಾರ್ಯೇದಂ ಪುನಃಪುನಃ |
ಇನ್ದ್ರಜಾಲಂ ಪರಿತ್ಯಾಜ್ಯಂ ಸಬಾಹ್ಯಾಭ್ಯನ್ತರಂ ಬಲಾತ್ ||೧೭||
ಶ್ಮಶಾನಮಾಪದಂ ದೈನ್ಯಂ ದೃಷ್ಟ್ವಾ ಕೋ ನ ವಿರಜ್ಯತೇ |
ತದ್ವೈರಾಗ್ಯಂ ಪರಂ ಶ್ರೇಯಃ ಸ್ವತೋ ಯದಭಿಜಾಯತೇ ||೧೮||
ಅಕೃತ್ರಿಮವಿರಾಗತ್ವಂ ಮಹತ್ ತ್ವಮುಲಮಾಗತಃ |
ಯೋಗ್ಯೋಽಸಿ ಜ್ಞಾನಸಾರಸ್ಯ ಬೀಜಸ್ಯೇವ ಮೃದು ಸ್ಥಲಮ್ ||೧೯||
ಪ್ರಸಾದಾತ್ ಪರಮೇಶಸ್ಯ ನಾಥಸ್ಯ ಪರಮಾತ್ಮನಃ |
ತ್ವಾದೃಶಸ್ಯ ಶುಭಾ ಬುದ್ಧಿಃ ವಿವೇಕಮನುಧಾವತಿ ||೨೦||
ಕ್ರಿಯಾಕ್ರಮೇಣ ಮಹತಾ ತಪಸಾ ನಿಯಮೇನ ಚ |

ತನ್ನ ವಿವೇಕವಿಲಾಸದ ಪರಾಮರ್ಶದಿಂದ ವಿರಕ್ತವಾದ ಬುದ್ಧಿಯಿಂದ ಪ್ರಾಣಿಯು, ಸೊಗಸಾದ ಪುಷ್ಪಮಾಲಿಕೆಯಿಂದ ಯೌವನಸ್ಥನು ಪ್ರಕಾಶಿಸುವಂತೆ—ಚೆನ್ನಾಗಿ ಪ್ರಕಾಶಿಸುವನು ||೧೫||

ಯಾರು, ವಿವೇಕದಿಂದ ಈ ಸಂಸಾರಚೇಷ್ಟೆಯನ್ನೆಲ್ಲ ಚೆನ್ನಾಗಿ ಪರಿಶೀಲಿಸಿ ವೈರಾಗ್ಯ ಹೊಂದುತ್ತಾರೋ, ಅವರೇ ಮನುಷ್ಯರಲ್ಲಿ ಶ್ರೇಷ್ಠರೆನ್ನಿಸುವರು ||೧೬||

ಮನುಷ್ಯನಾದವನು, ತನ್ನ ವಿವೇಕದಿಂದ ಮತ್ತೆಮತ್ತೆ ಚೆನ್ನಾಗಿ ಪರಿಶೀಲಿಸಿ, ದೇಹೇಂದ್ರಿಯಾದಿಗಳೆಂಬ ಬಾಹ್ಯಪದಾರ್ಥಗಳೊಡನೆಯೂ—ಮನೋಬುದ್ಧ್ಯಾದಿಗಳೆಂಬ ಆಂತರಪದಾರ್ಥಗಳೊಡನೆಯೂ—ಈ ಸಂಸಾರವೆಂಬ ಇಂದ್ರಜಾಲವನ್ನು ಬಲಾತ್ಕಾರದಿಂದ ಬಿಟ್ಟುಬಿಡಬೇಕು ||೧೭||

ಶ್ಮಶಾನದಲ್ಲಿ ಶವಗಳು ಬಿದ್ದು ಹೊರಳುತಿರುವುದನ್ನೂ—ಆಪತ್ಕಾಲದ ದುರವಸ್ಥೆಯನ್ನೂ—ದಾರಿದ್ರ್ಯ ದುಃಖವನ್ನೂ ನೋಡಿ, ಯಾವನುತಾನೆ ವಿರಕ್ತರಾಗುವುದಿಲ್ಲ? ಆದರೆ, ಈಶ್ಮಶಾನಾದಿಕಾರಣಗಳೊಂದೂ ಇಲ್ಲದೆ ಯಾವುದು ಹುಟ್ಟುವುದೋ, ಅದೇ ಉತ್ತಮವಾದ ವೈರಾಗ್ಯವು ||೧೮||

ಅಯ್ಯಾ! ರಾಮ! ಬಲುದೊಡ್ಡದಾದ ಅಕೃತ್ರಿಮ ವೈರಾಗ್ಯವನ್ನು ಹೊಂದಿರುವುದರಿಂದ, ಬೀಜಕ್ಕೆ ಮೃದುವಾದ ಭೂಮಿಯಂತೆ—ನೀನು ಉತ್ತಮವಾದ ಜ್ಞಾನಕ್ಕೆ ಅರ್ಹನಾಗಿರುವೆ ||೧೯||

ಸರ್ವಲೋಕೇಶ್ವರನಾದ ಸರ್ವಶಕ್ತನಾದ ಆ ಪರಮಾತ್ಮನ ಅನುಗ್ರಹದಿಂದಲೇ, ನಿನ್ನಂಥವನ ಬುದ್ಧಿಯು ಸಮೀಚೀನವಾಗಿ ವಿವೇಕವನ್ನನುಸರಿಸುವುದು ||೨೦||

ಅಧಿಕವಾದ ಸತ್ಕರ್ಮಾಚರಣೆಯಿಂದಲೂ ತಪಸ್ಸಿನಿಂದಲೂ ನಿಯಮಗಳಿಂದಲೂ ದಾನ

ದಾನೇನ ತೀರ್ಥಯಾತ್ರಾಭಿಃ ಚಿರಕಾಲಂ ವಿವೇಕತಃ ||೨೧||
ದುಷ್ಕೃತೇ ಕ್ಷಯಮಾಪನ್ನೇ ಪರಮಾರ್ಥವಿಚಾರಣೇ |
ಕಾಕತಾಳೀಯಯೋಗೇನ ಬುದ್ಧಿರ್ಜಂತೋಃ ಪ್ರವರ್ತತೇ ||೨೨||
ಕ್ರಿಯಾಪರಾಸ್ತಾವದಲಂ ಚಕ್ರಾವರ್ತಿಭಿರಾತತಾಃ |
ಭ್ರಮಂತೀಹ ಜನಾಯಾವತ್ ನ ಪಶ್ಯಂತಿ ಪರಂ ಪದಮ್ ||೨೩||
ಯಥಾಭೂತಮಿದಂ ದೃಷ್ಟ್ವಾ ಸಂಸಾರಂ ತನ್ಮಯೀಂ ಧಿಯಮ್ |
ಪರಿತ್ಯಜ್ಯ ಪರಂ ಯಾಂತಿ ನಿರಾಲಾನಾಗಜಾಇವ ||೨೪||
ವಿಷಮೋಯಮನಂತೇಹ ರಾಮ ಸಂಸಾರಸಂಸೃತಿಃ |
ದೇಹಯುಕ್ತೋ ಮಹಾಜಂತುಃ ವಿನಾ ಜ್ಞಾನಂ ನ ಪಶ್ಯತಿ ||೨೫||
ಜ್ಞಾನಯುಕ್ತಿಪ್ಲವೇನೈವ ಸಂಸಾರಾಬ್ಧಿಂ ಸುದುಸ್ತರಮ್ |
ಮಹಾಧಿಯಃ ಸಮುತ್ತೀರ್ಣಾಃ ನಿಮೇಷೇಣ ರಘೂದ್ವಹ ||೨೬||
ತಾಮಿಮಾಂ ಜ್ಞಾನಯುಕ್ತಿಂ ತ್ವಂ ಸಂಸಾರಾಮ್ಭೋಧಿತಾರಿಣೀಮ್ |

ದಿಂದಲೂ ತೀರ್ಥಯಾತ್ರೆಯಿಂದಲೂ ಮತ್ತು ಚಿರತರಾಭ್ಯಸ್ತವಾದ ವಿವೇಕದಿಂದಲೂ ಕೂಡ ದುಷ್ಕರ್ಮವು ಕ್ಷಯಹೊಂದಲಾಗಿ, (೧) ಕಾಕತಾಳೀಯನ್ಯಾಯದಿಂದ ಪ್ರಾಣಿಗೆ ತತ್ವವಿಚಾರದಲ್ಲಿ ಬುದ್ಧಿಯು ಪ್ರವರ್ತಿಸುವುದು || ೨೧— ೨೨||

ಜನರು ಎಲ್ಲಿಯವರೆಗೆ ಆ ಪರಮಪದವನ್ನು ಕಾಣುವುದಿಲ್ಲವೋ, ಅಲ್ಲಿಯವರೆಗೆ ಚಕ್ರದಂತೆ ಸುತ್ತುತಿರುವ ರಾಗದ್ವೇಷಾದಿಗಳಿಂದ ವ್ಯಾಪ್ತರಾಗಿ, ಅತ್ಯಂತ ಕರ್ಮಾಸಕ್ತರಾಗಿ ಈ ಲೋಕದಲ್ಲಿ ಭ್ರಮಿಸುತಿರುವರು || ೨೩||

ಈ ಪ್ರಪಂಚವನ್ನು ಯಥಾವಸ್ಥಿತವಾಗಿ ಯಾವಾಗ ನೋಡುವರೋ, ಆಗ ಸಂಸಾರವನ್ನೂ ತನ್ಮಯವಾದ ಬುದ್ಧಿಯನ್ನೂ ಕೂಡ ಪರಿತ್ಯಜಿಸಿ,—ಬಂಧಸ್ತಂಭವಿಲ್ಲದ ಆನೆಯಂತೆ—ಉತ್ಕೃಷ್ಟವಾದ ಪದವಿಯನ್ನು ಹೊಂದುವರು ||೨೪||

ಅಯ್ಯಾ! ರಾಮ ! ಈ ಪ್ರಪಂಚದಲ್ಲಿ ಈ ಸಂಸಾರಪರಿಭ್ರಮಣವು ಅತಿ ಕ್ರೂರವಾದುದು ; ಇದು ಎಂದಿಗೂ ನಾಶವಿಲ್ಲದುದು. ಎಂತಹ ದೊಡ್ಡ ಪ್ರಾಣಿಯಾದರೂ ದೇಹಾದಿಗಳಲ್ಲಿ ಆತ್ಮಜ್ಞಾನವಿಟ್ಟುಕೊಂಡಿರುವುದರಿಂದ, ಜ್ಞಾನ ಹೊರತು ಅದಕ್ಕೆ ಆತ್ಮಸಾಕ್ಷಾತ್ಕಾರವಾಗುವುದಿಲ್ಲ ||೨೫||

ರಘೂದ್ವಹನೆ ! ಅತ್ಯಂತ ದುಸ್ತರವಾದ ಈ ಸಂಸಾರವೆಂಬ ಸಮುದ್ರವನ್ನು, ಜ್ಞಾನಿಗಳಾದವರು ಜ್ಞಾನಯೋಗವೆಂಬ ತೆಪ್ಪದಿಂದಲೇ ಒಂದು ಕ್ಷಣದೊಳಗಾಗಿ ದಾಟಿರುವರು||೨೬

ಹೀಗೆ ಸಂಸಾರಸಮುದ್ರವನ್ನು ದಾಟಿಸತಕ್ಕುದಾಗಿರುವ-ನನ್ನಿಂದ ಹೇಳಲ್ಪಡುವ-

---

(೧) ಒಂದು ಕಾಗೆಯು ಅಕಸ್ಮಿಕವಾಗಿ ತಾಳೆಯಗಿಡದ ಕೆಳಗೆ ಬಂದರೆ, ಆ ಹೊತ್ತಿಗೆ ಸರಿಯಾಗಿ ಆ ತಾಳೆಯಗಿಡದ ಹಣ್ಣು ಕಳಿತಿದ್ದು ಕೆಳಕ್ಕೆ ಬಿದ್ದರೆ, ಆ ಕಾಗೆಯು ಆ ಹಣ್ಣನ್ನು ತಿನ್ನುವುದಲ್ಲವೆ ! ಕಾಗೆಯು ಹಣ್ಣಿಗೋಸ್ಕರ ಬರಲೂ ಇಲ್ಲ; ಹಣ್ಣೂ ಕೂಡ ಕಾಗೆಗೋಸ್ಕರವಾಗಿ ಬೀಳಲಿಲ್ಲ. ಇವೆರಡಕ್ಕೂ ಅಲ್ಲಿ ನಡೆದ ಸಂಬಂಧವು ಆಕಸ್ಮಿಕವಾಗಿರುವುದು. ಇದಕ್ಕೇ ಕಾಕತಾಳನ್ಯಾಯವೆಂದು ಹೆಸರು.

ಶೃಣುಷ್ವಾವಹಿತೋ ಬುದ್ಧ್ಯಾ ನಿತ್ಯಾವಹಿತಯಾ ತಯಾ ||೩೭||
ಯಸ್ಮಾದನನ್ತಸಂರಮ್ಭಾಃ ಜಾಗತ್ಯೋ ದುಃಖಭೀತಯಃ |
ಚಿರಾಯಾನ್ತರ್ದಹನ್ತ್ಯೇತಾಃ ವಿನಾ ಯುಕ್ತಿಮನಿನ್ದಿತಾಮ್ ||೩೮||
ಶೀತವಾತಾತಪಾದೀನಿ ದ್ವನ್ದ್ವದುಃಖಾನಿ ರಾಘವ |
ಜ್ಞಾನಯುಕ್ತಿಂ ವಿನಾ ಕೇನ ಸಹ್ಯತಾಂ ಯಾನ್ತಿ ಸಾಧುಷು ||೩೯||
ಆಪತನ್ತಿ ಪ್ರತಿಪದಂ ಯಥಾಕಾಲಂ ದಹನ್ತಿ ಚ |
ದುಃಖಚಿನ್ತಾ ನರಂ ಮೂಢಂ ತೃಣಮಗ್ನಿಶಿಖಾ ಇವ ||೪೦||
ಪ್ರಾಜ್ಞಂ ವಿಜ್ಞಾತವಿಜ್ಞೇಯಂ ಸಮ್ಯಗ್ದರ್ಶನಮಾಧಯಃ |
ನ ದಹನ್ತಿ ವನಂ ವರ್ಷಾಸಿಕ್ತಮಗ್ನಿಶಿಖಾ ಇವ ||೪೧||
ಆಧಿವ್ಯಾಧಿಸಟಾವರ್ತೇ ಸಂಸಾರಮರುಮಾರುತೇ |
ಕ್ಷುಭಿತೇಽಪಿ ನ ತತ್ತ್ವಜ್ಞೋ ಭಜ್ಯತೇ ಕಲ್ಪವೃಕ್ಷವತ್ ||೪೨||
ತತ್ತ್ವಂ ಜ್ಞಾತುಮತೋ ಯತ್ನಾತ್ ಧೀಮಾನೇವ ಹಿ ಧೀಮತಾ |
ಪ್ರಾಮಾಣಿಕಃ ಪ್ರಬುದ್ಧಾತ್ಮಾ ಪ್ರಷ್ಟವ್ಯಃ ಪ್ರಣಯಾನ್ವಿತಮ್ ||೪೩||

ಈಜ್ಞಾನಯೋಗವನ್ನು, ನೀನು ಏಕಾಗ್ರಮನಸ್ಕನಾಗಿ, ಸರ್ವದಾ ವಿವೇಕ ವೈರಾಗ್ಯಾದಿಯುಕ್ತವಾದ ಆ ಪ್ರಸಿದ್ಧವಾದ ಬುದ್ಧಿಯಿಂದಕೇಳುವವನಾಗು ||೩೭||

ಏತಕ್ಕೆಂದರೆ:—ಉತ್ತಮವಾದ ಜ್ಞಾನಯೋಗವಿಲ್ಲದಿದ್ದರೆ, ಅಪರಿಮಿತವಾದ ವಿಕ್ಷೇಪವುಳ್ಳ ಈ ಪ್ರಾಪಂಚಿಕ ದುಃಖಭಯಗಳು ಎಂದೆಂದಿಗೂ ಒಳಗೇ ಸುಡುತಿರುತ್ತವೆ ||೩೮||

ಅಯ್ಯಾ! ರಾಘವ! ಚಳಿ ಗಾಳಿ ಬಿಸಿಲು ಮುಂತಾದ ದ್ವಂದ್ವ ದುಃಖಗಳು, ಜ್ಞಾನಯೋಗವಿಲ್ಲದಿದ್ದರೆ, ಸಾಧುಗಳವಿಷಯದಲ್ಲಿ ಮತ್ತಾವ ಕಾರಣದಿಂದ ಸಹ್ಯವಾಗುವವು||೩೯

ಅಗ್ನಿಜ್ವಾಲೆಗಳು ಹುಲ್ಲನ್ನು ವ್ಯಾಪಿಸಿ ಸುಡುವಂತೆ, ದುಃಖಚಿಂತೆಗಳು ಮೂಢನಾದ ಮನುಷ್ಯನನ್ನು ಪ್ರತಿಕ್ಷಣವೂ ಸೇರುವುವು ; ಆಯಾ ಕಾಲಾನುಗುಣವಾಗಿ ಸುಟ್ಟು ಬಿಡುವುವು ||೪೦ ||

ಆದರೆ, ಮಳೆಯಿಂದ ಸುತ್ತಲೂ ಚೆನ್ನಾಗಿ ನೆನೆಯಿಸಲ್ಪಟ್ಟ ವನವನ್ನು ಅಗ್ನಿಯು ಸುಡದಿರುವಂತೆ, ಅಧ್ಯಾತ್ಮಶಾಸ್ತ್ರವನ್ನು ತಿಳಿದು ತತ್ತ್ವಸಾಕ್ಷಾತ್ಕಾರಪಡೆದಿರುವ ಜ್ಞಾನಿಯನ್ನು ಈ ಮನೋವ್ಯಥೆಗಳೆಂದಿಗೂ ಸುಡುವುದಿಲ್ಲ ||೪೧||

ಆಧಿವ್ಯಾಧಿಗಳೆಂಬ ದೊಡ್ಡ ಸುಂಟರಗಾಳಿಯುಳ್ಳ ಸಂಸಾರವೆಂಬ ಮರುಭೂಮಿಯ ವಾತವು ಎಷ್ಟು ಹೆಚ್ಚಾಗಿ ಬೀಸಿದರೂ ಕೂಡ, ಎಂತಹ ಗಾಳಿಗೂ ಕಲ್ಪವೃಕ್ಷವು ಮುರಿಯದಿರುವಂತೆ, ತತ್ವಜ್ಞಾನಿಯು ಭಂಗಹೊಂದುವುದಿಲ್ಲ ||೪೨||

ಆದಕಾರಣ, ಬುದ್ಧಿವಂತನಾದವನು ತತ್ವಜ್ಞಾನಕ್ಕೋಸ್ಕರ, ವೇದಾದಿಪ್ರಮಾಣಜ್ಞನಾಗಿಯೂ ಆತ್ಮಜ್ಞಾನವುಳ್ಳವನಾಗಿಯೂ ಇರುವ ಪ್ರಾಜ್ಞನನ್ನೇ ಪ್ರೀತಿಯೊಡನೆ ಪ್ರಶ್ನೆಮಾಡಬೇಕು ||೪೩||

ಪ್ರಾಮಾಣಿಕಸ್ಯ ಪೃಷ್ಟಸ್ಯ ವಕ್ತುರುತ್ತಮಚೇತಸಃ ।
ಯತ್ನೇನ ವಚನಂ ಗ್ರಾಹ್ಯಂ ಅಂಶುಕೇನೇವ ಕುಙ್ಕುಮಮ್ ॥೪೪॥
ಅತತ್ತ್ವಜ್ಞಮನಾದೇಯವಚನಂ ವಾಗ್ವಿದಾಂ ವರ ।
ಯಃ ಪೃಚ್ಛತಿ ನರಂ ತಸ್ಮಾತ್ ನಾಸ್ತಿ ಮೂಢತರೋಽಪರಃ ॥೪೫॥
ಪ್ರಾಮಾಣಿಕಸ್ಯ ತಜ್ಜ್ಞಸ್ಯ ವಕ್ತುಃ ಪೃಷ್ಟಸ್ಯ ಯತ್ನತಃ ।
ನಾನುತಿಷ್ಠತಿ ಯೋ ವಾಕ್ಯಂ ನಾಸ್ತಿ ತಸ್ಮಾನ್ನರಾಧಮಃ ॥೪೬॥
ಅಜ್ಞಾತಾತಜ್ಜ್ಞತೇ ಪೂರ್ವಂ ವಕ್ತುರ್ನಿರ್ಣೀಯ ಕಾರ್ಯತಃ ।
ಯಃ ಕರೋತಿ ನರಃ ಪ್ರಶ್ನಂ ಪ್ರಚ್ಛಕಃ ಸ ಮಹಾಮತಿಃ ॥೪೭॥
ಅನಿರ್ಣೀಯ ಪ್ರವಕ್ತಾರಂ ಬಾಲಃ ಪ್ರಶ್ನಂ ಕರೋತಿ ಯಃ ।
ಅಧಮಃ ಪ್ರಚ್ಛಕಃ ಸ ಸ್ಯಾತ್ ನ ಮಹಾರ್ಥಸ್ಯ ಭಾಜನಮ್ ॥೪೮॥
ಪೂರ್ವಾಪರಸಮಾಧಾನಕ್ಷಮಬುದ್ಧಾವನಿನ್ದಿತೇ ।
ಪೃಷ್ಟಂ ಪ್ರಾಜ್ಞೇನ ವಕ್ತವ್ಯಂ ನಾಧಮೇ ಪಶುಧರ್ಮಿಣಿ ॥೪೯॥
ಪ್ರಾಮಾಣಿಕಾರ್ಥಯೋಗ್ಯತ್ವಂ ಪ್ರಚ್ಛಕಸ್ಯಾವಿಚಾರ್ಯ ಚ ।

ಹೀಗೆ ಉತ್ತಮಚಿತ್ತನಾದ ಪ್ರಾಮಾಣಿಕನನ್ನು ಪ್ರಶ್ನೆಮಾಡಿ, ಅವನಿಂದ ಹೇಳಲ್ಪಡುವ ಮಾತನ್ನು—ವಸ್ತ್ರವು ಕುಂಕುಮವರ್ಣವನ್ನು ಹಿಡಿದುಕೊಳ್ಳುವಂತೆ (ಅಂದರೆ ಎಂದಿಗೂ ಕೆಡದಂತೆ)--ಪ್ರಯತ್ನಪೂರ್ವಕವಾಗಿ ಸ್ವೀಕರಿಸಬೇಕು ॥೪೪॥

ಮಾತಿನ ಸ್ವರೂಪವನ್ನು ಬಲ್ಲವರಲ್ಲೆಲ್ಲ ಉತ್ತಮನಾದ ರಾಮನೆ! ತತ್ತ್ವಜ್ಞಾನರಹಿತನಾಗಿಯೂ ಅತಏವ ಸ್ವೀಕಾರಕ್ಕನರ್ಹವಾದ ಮಾತುಳ್ಳವನಾಗಿಯೂ ಇರುವ ಮನುಷ್ಯನನ್ನು ಯಾವನು ಪ್ರಶ್ನೆಮಾಡುವನೋ, ಅವನಿಗಿಂತ ಮೂಢತಮನಾದ ಮತ್ತೊಬ್ಬನಿಲ್ಲ॥

ಪ್ರಾಮಾಣಿಕನಾದ ತತ್ವಜ್ಞನನ್ನು ಕೇಳಿ—ಅವನು ಪ್ರಯತ್ನಪೂರ್ವಕವಾಗಿ ಹೇಳಿದ ಮಾತನ್ನು ಯಾವನು ನಡೆಯಿಸುವುದಿಲ್ಲವೋ, ಅವನಿಗಿಂತ ಅಧಮನಾದ ಮತ್ತೊಬ್ಬನರನಿಲ್ಲ ॥೪೬॥

ವಕ್ತೃವು ಅಜ್ಞಾನಿಯೆಂಬುದನ್ನೂ ತತ್ವಜ್ಞಾನಿಯೆಂಬುದನ್ನೂ ಪ್ರಥಮದಲ್ಲಿ ಅವನ ಆಚರಣೆಯಿಂದ ನಿರ್ಣಯಿಸಿಕೊಂಡು, ಬಳಿಕ ಯಾವನು ಪ್ರಶ್ನೆ ಮಾಡುವನೋ, ಅವನು ಮಹಾಪ್ರಾಜ್ಞನಾದ ಪ್ರಚ್ಛಕ (ಪ್ರಶ್ನೆಮಾಡತಕ್ಕವನು) ನೆನ್ನಿಸುವನು ॥೪೭॥

ಯಾವ ಮೂಢನು ಉಪದೇಶಕನ ಯೋಗ್ಯತೆಯನ್ನು ಸರಿಯಾಗಿ ನಿರ್ಣಯಿಸಿಕೊಳ್ಳದೆ ಪ್ರಶ್ನೆಮಾಡುತ್ತಾನೋ, ಅವನು ಅಧಮನಾದ ಪ್ರಚ್ಛಕನು; ಅವನೆಂದಿಗೂ ಪರಮಪುರುಷಾರ್ಥಕ್ಕೆ ಪಾತ್ರನಾಗುವುದಿಲ್ಲ॥೪೮॥

ಇದಲ್ಲದೆ, ಪೂರ್ವೋತ್ತರಗಳನ್ನು ಚೆನ್ನಾಗಿ ತಿಳಿದುಕೊಳ್ಳಲು ಸಮರ್ಥವಾದ ಬುದ್ಧಿಯುಳ್ಳವನಿಗೇ, ಪ್ರಾಜ್ಞನು ಪ್ರಶ್ನೆಮಾಡಲ್ಪಟ್ಟ ವಿಷಯವನ್ನು ಹೇಳಬೇಕಲ್ಲದೆ, ಪಶುಸಮಾನನಾದ ಅಧಮನಿಗೆಂದಿಗೂ ಹೇಳಬಾರದು ॥೪೯॥

ಪ್ರಚ್ಛಕನು ಪ್ರಾಮಾಣಿಕವಾದ ವಿಷಯಕ್ಕೆ ಯೋಗ್ಯನಾಗಿರುವನೆಂಬುದನ್ನು

ಯೋ ವಕ್ತಿ ತಮಿಹ ಪ್ರಾಜ್ಞಾಃ ಪ್ರಾಹುರ್ಮೂಢತರಂ ನರಮ್ ‖೫೦‖
ತ್ವಮತೀವ ಗುಣಶ್ಲಾಘೀ ಪ್ರಷ್ಟಕೋ ರಘುನನ್ದನ |
ಅಹಂ ಚ ವಕ್ತುಂ ಜಾನಾಮಿ ಸಮೋ ಯೋಗೋಯಮಾವಯೋಃ‖೫೧‖
ಯದಹಂ ವಚ್ಮಿ ತದ್ಯತ್ನಾತ್ ತ್ವಯಾ ಶಬ್ದಾರ್ಥಕೋವಿದ |
ಏತದ್ವಾಸ್ತ್ವಿತಿ ನಿರ್ಣೀಯ ಹೃದಿ ಕಾರ್ಯಮಖಣ್ಡಿತಮ್ ‖೫೨‖
ಮಹಾನಸಿ ವಿರಕ್ತೋಸಿ ತತ್ತ್ವಜ್ಞೋಸಿ ಜನಸ್ಥಿತೌ |
ತ್ವಯಿ ಚೋಕ್ತಂ ಲಗತ್ಯನ್ತಃ ಕುಙ್ಕುಮಾಮ್ಬು ಯಥಾಂಶುಕೇ ‖೫೩‖
ಉಕ್ತಾವಧಾನಪರಮಾ ಪರಮಾರ್ಥವಿವೇಚಿನೀ |
ವಿಶತ್ಯರ್ಥಂ ತವ ಪ್ರಜ್ಞಾ ಜಲಮಧ್ಯಮಿವಾರ್ಕಭಾಃ ‖೫೪‖
ಯದ್ಯದ್ವಚ್ಮಿ ತದಾದೇಯಂ ಹೃದಿ ಕಾರ್ಯಂ ಪ್ರಯತ್ನತಃ |
ನೋ ಚೇತ್ ಪ್ರಷ್ಟವ್ಯಏವಾಹಂ ನ ತ್ವಯೇಹ ನಿರರ್ಥಕಮ್ ‖೫೫‖
ಮನೋ ಹಿ ಚಪಲಂ ರಾಮ ಸಂಸಾರವನಮರ್ಕಟಮ್ |
ಸಂಶೋಧ್ಯ ಹೃದಿ ಯತ್ನೇನ ಶ್ರೋತವ್ಯಾ ಪರಮಾರ್ಥಗೀಃ ‖೫೬‖

ಚೆನ್ನಾಗಿ ವಿಚಾರಮಾಡದೆ ಯಾವನುಪದೇಶಿಸುವನೋ, ಅವನನ್ನು ಈ ಲೋಕದಲ್ಲಿ ಪ್ರಾಜ್ಞರು ಮೂಢತಮನಾದ ಮನುಷ್ಯನೆಂದು ಹೇಳುವರು ॥೫೦॥

ಅಯ್ಯಾ! ರಾಮ! ನೀನು ಅತ್ಯಂತವಾಗಿ ಗುಣಶ್ಲಾಘನೆಮಾಡತಕ್ಕ ಪ್ರಚ ಕನಾಗಿರುವೆ; ನಾನೂಕೂಡ ನೀನು ಕೇಳಿದುದನ್ನೆಲ್ಲ ಹೇಳಲು ಬಲ್ಲವನಾಗಿರುವೆನು. ಆದಕಾರಣ ಈ ನಮ್ಮಿಬ್ಬರ ಸಮಾವೇಶವು ಅನುರೂಪವಾಗಿರುವುದು ॥೫೧॥

ಶಬ್ದಾರ್ಥಜ್ಞಾನಕುಶಲನಾದ ರಾಮನೆ! ಈಗ ನಾನೇನುಹೇಳುವೆನೋ, ಆದನ್ನು-ಇದೇ ತತ್ವವೆಂದು ನಿರ್ಣಯಿಸಿಕೊಂಡು— ಸ್ವಲ್ಪವೂ ಬಿಡದಂತೆ ನೀನು ಮನಸ್ಸಿನಲ್ಲಿಡಬೇಕು ॥೫೨॥

ವತ್ಸ! ನೀನು ಮಹಾತ್ಮನಾಗಿರುವೆ; ವಿರಕ್ತನಾಗಿರುವೆ; ಪ್ರಪಂಚವ್ಯಾಪಾರದಲ್ಲಿ ತತ್ವಜ್ಞನಾಗಿರುವೆ. ಆದಕಾರಣ, ನಿನ್ನಲ್ಲಿ ಹೇಳಿದುದೆಲ್ಲ – ವಸ್ತ್ರದಲ್ಲಿ ಕುಂಕುಮದ ನೀರಿನಂತೆ—ಚೆನ್ನಾಗಿ ಅಂಟಿಕೊಳ್ಳುವುದು ॥೫೩॥

ಹೇಳಿದುದನ್ನು ಗ್ರಹಿಸುವುದರಲ್ಲಿ ಆಸಕ್ತವಾಗಿಯೂ ತತ್ವಾರ್ಥವಿವೇಚನೆಮಾಡತಕ್ಕುದಾಗಿಯೂ ಇರುವ ನಿನ್ನ ಬುದ್ಧಿಯು –ಸೂರ್ಯಕಾಂತಿಯು ನೀರಿನ ಮಧ್ಯವನ್ನು ಪ್ರವೇಶಿಸುವಂತೆ—ವಿಷಯವನ್ನು ಚೆನ್ನಾಗಿ ಪ್ರವೇಶಿಸುವುದು ॥೫೪॥

ನಾನು ಯಾವಯಾವುದನ್ನು ಹೇಳುವೆನೋ, ಅದೆಲ್ಲವನ್ನೂ ತಿಳಿದುಕೊಳ್ಳಬೇಕು; ಮತ್ತು ಪ್ರಯತ್ನಪೂರ್ವಕವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಹಾಗಿಲ್ಲದ ಪಕ್ಷದಲ್ಲಿ, ನೀನು ನನ್ನನ್ನು ವ್ಯರ್ಥವಾಗಿ ಪ್ರಶ್ನೆಮಾಡಕೂಡದು ॥೫೫॥

ಅಯ್ಯಾ! ರಾಮ! ಮನುಷ್ಯರಿಗೆ ಸ್ವಭಾವವಾಗಿ ಮನಸ್ಸು ಬಹುಚಂಚಲವಾದುದು; ಇದು ಸಂಸಾರವೆಂಬ ವನದಲ್ಲಿ ಕಪಿಯಾಗಿ ನಾನಾವಿಧವಾಗಿ ಚೇಷ್ಟೆಮಾಡುತಿರುವುದು. ಆದಕಾರಣ, ಚೆನ್ನಾಗಿ ಹೃದಯದಲ್ಲಿ ಶುದ್ಧಿಯುಂಟುಮಾಡಿಕೊಂಡು, ಈ ತತ್ವವಚನವನ್ನು ಕೇಳಬೇಕು ॥೫೬॥

ಅವಿವೇಕಿನಮಜ್ಞಾನಂ ಅಸಜ್ಜನರತಿಂ ಜನಮ್ ।
ಚಿರಂ ದೂರತರೇ ಕೃತ್ವಾ ಪೂಜನೀಯಾಹಿ ಸಾಧವಃ ॥೫೭॥
ನಿತ್ಯಂ ಸಜ್ಜನಸಮ್ಪರ್ಕಾತ್ ವಿವೇಕಉಪಜಾಯತೇ ।
ವಿವೇಕಪಾದಪಸ್ಯೈವ ಭೋಗಮೋಕ್ಷೌ ಫಲೇ ಸ್ಮೃತೇ ॥೫೮॥
ಮೋಕ್ಷದ್ವಾರೇ ದ್ವಾರಪಾಲಾಃ ಚತ್ವಾರಃ ಪರಿಕೀರ್ತಿತಾಃ ।
ಶಮೋ ವಿಚಾರಃ ಸನ್ತೋಷಃ ಚತುರ್ಥಃ ಸಾಧುಸಙ್ಗಮಃ ॥೫೯॥
ಏತೇ ಸೇವ್ಯಾಃ ಪ್ರಯತ್ನೇನ ಚತ್ವಾರೋ ದ್ವೌ ತ್ರಯೋಽಥವಾ ।
ದ್ವಾರಮುದ್ಘಾಟಯನ್ತ್ಯೇತೇ ಮೋಕ್ಷರಾಜಗೃಹೇ ತಥಾ ॥೬೦॥
ಏಕಂ ವಾ ಸರ್ವಯತ್ನೇನ ಪ್ರಾಣಾಂಸ್ತ್ಯಕ್ತ್ವಾ ಸಮಾಶ್ರಯೇತ್ ।
ಏಕಸ್ಮಿನ್ ವಶಗೇ ಯಾನ್ತಿ ಚತ್ವಾರೋಽಪಿ ವಶಂ ಯತಃ ॥೬೧॥
ಸವಿವೇಕೋ ಹಿ ಶಾಸ್ತ್ರಸ್ಯ ಜ್ಞಾನಸ್ಯ ತಪಸಃ ಶ್ರುತೇಃ ।
ಭಾಜನಂ ಭೂಷಣಾಕಾರೋ ಭಾಸ್ಕರಸ್ತೇಜಸಾಮಿವ ॥೬೨॥
ಘನತಾಮುಪಯಾತಂ ಹಿ ಪ್ರಜ್ಞಾಮಾನ್ದ್ಯಮಚೇತಸಾಮ್ ।
ಯಾತಿ ಸ್ಥಾವರತಾಮಮ್ಬು ಜಾಡ್ಯಾತ್ ಪಾಷಾಣತಾಮಿವ ॥೬೩॥

ಇದೆಲ್ಲಕ್ಕೂ ಮೊದಲುಪದೇಶಿಸುವ ವಿಷಯವೇನೆಂದರೆ:—ಸ್ವಯಂ ವಿವೇಕವಿಲ್ಲದೆಯೂ ಶಾಸ್ತ್ರಜ್ಞಾನವಿಲ್ಲದೆಯೂ ನೀಚಜನರಲ್ಲಿ ಆಸಕ್ತಿಯುಳ್ಳವನಾಗಿಯೂ ಇರುವ ಮನುಷ್ಯನನ್ನು ಎಂದೆಂದಿಗೂ ದೂರವಾಗಿ ಬಿಟ್ಟುಬಿಟ್ಟು, ಸತ್ಪುರುಷರನ್ನು ಪೂಜಿಸಬೇಕು ॥೫೭

ನಿತ್ಯವಾಗಿ ಈ ಸಜ್ಜನರ ಸಹವಾಸದಿಂದ ವಿವೇಕವೃದ್ಧಿಸುವುದು. ವಿವೇಕವೆಂಬ ವೃಕ್ಷಕ್ಕೇ ಭೋಗಮೋಕ್ಷಗಳೆರಡೂ ಫಲಗಳೆಂದು ಹೇಳಲ್ಪಟ್ಟಿರುವುವು ॥೫೮॥

ಮೋಕ್ಷವೆಂಬ ಅರಮನೆಯ ಬಾಗಿಲಿನಲ್ಲಿ ನಾಲ್ಕುಮಂದಿ ದ್ವಾರಪಾಲಕರಿರುವರೆಂದು ಪ್ರಾಜ್ಞರು ಹೇಳುವರು. ಅವರಾರೆಂದರೆ:—ಶಮ, ವಿಚಾರ, ಸಂತೋಷ, ನಾಲ್ಕನೆಯವನೇ ಸಾಧುಸಂಗಮ ॥೫೯॥

ಇವರನ್ನು ನಾಲ್ಕುಮಂದಿಯನ್ನೂ ಪ್ರಯತ್ನಪೂರ್ವಕವಾಗಿ ಸೇವಿಸಬೇಕು; ಅಥವಾ ಮೂರುಮಂದಿಯನ್ನಾಗಲಿ—ಕೊನೆಗೆ ಇಬ್ಬರನ್ನಾಗಲಿ ಸೇವಿಸಬೇಕು. ಹಾಗೆ ಮಾಡಿದ ಪಕ್ಷದಲ್ಲಿ, ಇವರು ಮೋಕ್ಷವೆಂಬ ರಾಜಗೃಹದಲ್ಲಿ ಬಾಗಿಲನ್ನು ತೆರೆಯುವರು ॥೬೦॥

ಅದೊಂದೂ ಸಾಧ್ಯವಾಗದಪಕ್ಷದಲ್ಲಿ, ಪ್ರಾಣವನ್ನಾದರೂ ಬಿಟ್ಟು ಸರ್ವ ಪ್ರಯತ್ನದಿಂದಲೂ ಒಬ್ಬನನ್ನಾದರೂ ಚೆನ್ನಾಗಿ ಆಶ್ರಯಿಸಬೇಕು. ಅವರಲ್ಲೊಬ್ಬನು ಸ್ವಾಧೀನನಾಗಿಬಿಟ್ಟರೆ, ಆ ನಾಲ್ಕುಮಂದಿಯೂ ಸ್ವಾಧೀನರಾದಂತೆಯೇ ಆಗುವರು ॥

ಯಾವನು ವಿವೇಕಸಹಿತನಾಗಿರುವನೋ, ಅವನೇ ಅಲಂಕಾರಕಾರಿಯಾದ ಆಕಾರವುಳ್ಳವನು; ಇವನು,—ತೇಜಸ್ಸುಗಳಿಗೆಲ್ಲ ಸೂರ್ಯನಂತೆ—ಶಾಸ್ತ್ರಜ್ಞಾನಕ್ಕೂ ತಪಸ್ಸಿಗೂ ಉಪದೇಶಶ್ರವಣಕ್ಕೂ ಕೂಡ ಪಾತ್ರನಾದವನು ॥೬೨॥

ಬುದ್ಧಿಹೀನರಾದವರಿಗೆ ಮೂರ್ಖತನವು ಅತಿ ನಿಬಿಡವಾಗಿ, ಅತಿ ಶೈತ್ಯದಿಂದ ನೀರು ಕಲ್ಲಾಗುವಂತೆ, ಸ್ಥಿರವಾಗಿಬಿಡುವುದು ॥೬೩॥

ತ್ವಂ ತು ರಾಘವ ಸೌಜನ್ಯಗುಣಶಾಸ್ತ್ರಾರ್ಥದೃಷ್ಟಿಭಿಃ ।
ವಿಕಾಸಿತಾನ್ತಃಕರಣಃ ಸ್ಥಿತಃ ಪದ್ಮ ಇವೋದಯೇ ॥೬೪॥
ಇಮಾಂ ಜ್ಞಾನಗಿರಂ ಶ್ರೋತುಂ ಅವಬೋದ್ಧುಂ ಚ ಸನ್ಮತೇ ।
ಅರ್ಹಸ್ಯುದ್ಧತಕರ್ಣಸ್ತ್ವಂ ಜನ್ತುರ್ವೀಣಾಸ್ವನಂ ಯಥಾ ॥೬೫॥
ವೈರಾಗ್ಯಾಭ್ಯಾಸಯೋಗೇನ ಪರಮಂ ಸೌಜನ್ಯಸಮ್ಪದಾಮ್ ।
ಅರ್ಜನಾಂ ಕುರು ತಾಂ ರಾಮ ಯತ್ರ ನಾಶೋ ನ ವಿದ್ಯತೇ ॥೬೬॥
ಶಾಸ್ತ್ರಸಜ್ಜನಸಮ್ಪರ್ಕಪೂರ್ವಕೈಃ ಸ ತಪೋದಮೈಃ ।
ಆದೌ ಸಂಸಾರಮುಕ್ತ್ಯರ್ಥಂ ಪ್ರಜ್ಞಾಮೇವಾಭಿವರ್ಧಯೇತ್ ॥೬೭॥
ಏತದೇವಾಸ್ಯ ಮೌರ್ಖ್ಯಸ್ಯ ಪರಮಂ ವಿದ್ಧಿ ನಾಶನಮ್ ।
ಯದಿದಂ ಪ್ರೇಕ್ಷ್ಯತೇ ಶಾಸ್ತ್ರಂ ಕಿಂಚಿತ್ಸಂಸ್ಕೃತಯಾ ಧಿಯಾ ॥೬೮॥
ಸಂಸಾರವಿಷವೃಕ್ಷೋಽಯಂ ಏಕಮಾಸ್ಪದಮಾಪದಾಮ್ ।
ಅಜ್ಞಂ ಸಮ್ಮೋಹಯೇನ್ನಿತ್ಯಂ ಮೌರ್ಖ್ಯಂ ಯತ್ನೇನ ನಾಶಯೇತ್ ॥೬೯॥
ದುರಾಶಾಸರ್ಪಗತ್ಯೇನ ಮೌರ್ಖ್ಯೇಣ ಹೃದಿ ವಲ್ಗತಾ ।
ಚೇತಃ ಸಙ್ಕೋಚಮಾಯಾತಿ ಚರ್ಮಾಗ್ನಾವಿವ ಯೋಜಿತಮ್ ॥೭೦॥

ಅಯ್ಯಾ! ರಾಘವ! ನೀನಾದರೋ, ಸೌಜನ್ಯ ಸದ್ಗುಣಸಂಪತ್ತಿ ಶಾಸ್ತ್ರಾರ್ಥ ಜ್ಞಾನಗಳಿಂದ-ಉದಯಕಾಲದಲ್ಲಿನ ಕಮಲದಂತೆ-ವಿಕಾಸಿತವಾದ ಮನಸ್ಸುಳ್ಳವನಾಗಿರುವೆ॥

ಆದಕಾರಣ, ಎಲೈ ಸದ್ಬುದ್ಧಿಯಾದ ರಾಮನೆ! ಸಾಮಾನ್ಯನಾದ ಪ್ರಾಣಿಯು ವೀಣೆಯ ಧ್ವನಿಯನ್ನು ಕೇಳುವಂತೆ—ನೀನು ಚೆನ್ನಾಗಿ ಕಿವಿಗೊಟ್ಟುಕೊಂಡು ಈ ಜ್ಞಾನೋಪದೇಶವನ್ನು ಕೇಳಬೇಕು; ಮತ್ತು ಇದರ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು ॥೬೫॥

ಅಯ್ಯಾ! ರಾಮ! ನೀನು ವೈರಾಗ್ಯಾಭ್ಯಾಸದೊಡನೆ ಆ ಸರ್ವೋತ್ಕೃಷ್ಟವಾದ ಸೌಜನ್ಯಸಂಪತ್ತನ್ನೂ ಸಂಪಾದಿಸು. ಈ ಸೌಜನ್ಯಸಂಪತ್ತಿಯೆಂದಿಗೂ ನಾಶಹೊಂದದಂತಿರಬೇಕು ॥೬೬॥

ಮನುಷ್ಯನಾದವನು, ಶಾಸ್ತ್ರಸತ್ಸಹವಾಸಪೂರ್ವಕವಾದ ತಪಸ್ಸಿನಿಂದಲೂ ಇಂದ್ರಿಯನಿಗ್ರಹದಿಂದಲೂ, ಮೊದಲು ಸಂಸಾರಮೋಕ್ಷಕ್ಕೋಸ್ಕರ, ಪ್ರಜ್ಞೆಯನ್ನೇ ಅಭಿವೃದ್ಧಿಪಡಿಸಿಕೊಳ್ಳಬೇಕು ॥೬೭॥

ಸ್ವಲ್ಪಮಟ್ಟಿಗೆ ಸಂಸ್ಕಾರವುಳ್ಳ ಬುದ್ಧಿಯಿಂದ ಈ ಶಾಸ್ತ್ರವನ್ನು (ವಾಸಿಷ್ಠರಾಮಾಯಣವನ್ನು) ನೋಡುವುದಾವುದುಂಟೋ, ಇದೇ ಈ ಮೌರ್ಖ್ಯಕ್ಕೆ ಉತ್ಕೃಷ್ಟವಾದ ನಾಶಹೇತುವೆಂದು ತಿಳಿ ॥೬೮॥

ಸಂಸಾರವೆಂಬ ಈ ವಿಷವೃಕ್ಷವು, ಆಪತ್ತುಗಳಿಗೆಲ್ಲ ಮುಖ್ಯಾಶ್ರಯವಾಗಿರುವುದು; ಇದು ಅಜ್ಞಾನಿಯಾದವನನ್ನು ನಿತ್ಯವೂ ಮೋಹಕ್ಕೊಳಪಡಿಸುವುದು. ಆದಕಾರಣ, ಪ್ರಯತ್ನಪೂರ್ವಕವಾಗಿ ಮೂರ್ಖತನವನ್ನು ನಾಶಗೊಳಿಸಬೇಕು ॥೬೯॥

ದುರಾಶೆಯೆಂಬ ಸರ್ಪದ ಗತಿಯನ್ನು ವಹಿಸಿಕೊಂಡು ಹೃದಯದಲ್ಲಿ ಕುಣಿಯುತಿರುವ ಈ ಮೂರ್ಖತನದಿಂದ—ಬೆಂಕಿಯಲ್ಲಿರಿಸಲ್ಪಟ್ಟ ಚರ್ಮದಂತೆ—ಮನಸ್ಸು ಸಂಕೋಚಹೊಂದುವುದು ॥೭೦॥

ಪ್ರಾಜ್ಞೇ ಯಥಾರ್ಥಭೂತೇಯಂ ವಸ್ತುದೃಷ್ಟಿಃ ಪ್ರಸೀದತಿ |
ದೃಗಿವೇನ್ದೌ ನಿರಭ್ರೇ ಸಕಲಾಮಲಮಣ್ಡಲೇ ||೨೦||
ಪೂರ್ವಾಪರವಿಚಾರಾರ್ಥಚಾರುಚಾತುರ್ಯಶಾಲಿನೀ |
ಸವಿಕಾಸಾ ಮತಿರ್ಯಸ್ಯ ಸ ಪುಮಾನಿಹ ಕಥ್ಯತೇ ||೨೧||
ವಿಕಸಿತೇನ ಸಿತೇನ ತಮೋಮುಚಾ ವರವಿಚಾರಣಶೀತಲರೋಚಿಷಾ |
ಗುಣವತಾ ಹೃದಯೇನ ವಿರಾಜಸೇ ತ್ವಮಮಲೇನ ನಭಃ ಶಶಿನಾ ಯಥಾ ||೨೨||

ಇತಿ ಮುಮುಕ್ಷುವ್ಯವಹಾರಪ್ರಕರಣೇ ವಕ್ತೃಪ್ರಚ್ಛಕಲಕ್ಷಣಂ
ನಾಮ ಏಕಾದಶಃ ಸರ್ಗಃ.

ಪ್ರಾಜ್ಞನಲ್ಲಾದರೋ, ಮೇಘನಿರ್ಮುಕ್ತನಾಗಿ ಸಂಪೂರ್ಣನಾಗಿ ನಿರ್ಮಲಮಂಡಲನಾಗಿರುವ ಚಂದ್ರನಲ್ಲಿ ನೇತ್ರವು ಸಂತೋಷಪಡೆಯುವಂತೆ, ಯಥಾರ್ಥವಾದ ಈ ಸೂಕ್ಷ್ಮದೃಷ್ಟಿಯು ನಿರ್ಮಲವಾಗಿ ಕಾಣುವುದು ॥೨೦॥

ಯಾವನ ಬುದ್ಧಿಯು, ಪೂರ್ವೋತ್ತರವಿಚಾರದಿಂದಲೂ ಅರ್ಥಜ್ಞಾನದಿಂದಲೂ ಸುಂದರವಾದ ಚಾತುರ್ಯದಿಂದ ಪ್ರಕಾಶಿಸುತ ವಿಕಾಸವುಳ್ಳದಾಗಿರುವುದೋ, ಅವನೇ ಪುರುಷನೆಂದು ಈ ಲೋಕದಲ್ಲಿ ಹೇಳಲ್ಪಡುವನು ॥೨೧॥

ಅಯ್ಯಾ! ರಾಮ! ಈರೀತಿಯಾಗಿ ವಿಕಾಸಪಡೆದಿರುವುದಾಗಿಯೂ ಸತ್ವಗುಣಯುಕ್ತವಾಗಿಯೂ ಅಜ್ಞಾನವನ್ನು ಬಿಟ್ಟಿರುವುದಾಗಿಯೂ ಉತ್ತಮವಾದ ವಿಚಾರದಿಂದ ತಣ್ಣಗಿರುವ ಪ್ರಕಾಶವುಳ್ಳದಾಗಿಯೂ ಶಾಂತಿ ಮೊದಲಾದ ಸದ್ಗುಣಯುಕ್ತವಾಗಿಯೂ ಇರುವ ಮನಸ್ಸಿನಿಂದ, ನಿರ್ಮಲನಾದ ಚಂದ್ರನಿಂದ ಅಂತರಿಕ್ಷದಂತೆ, ನೀನು ಚೆನ್ನಾಗಿ ಪ್ರಕಾಶಿಸುತ್ತಿರುವೆ ॥೨೨॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ವಕ್ತೃಪ್ರಚ್ಛಕಲಕ್ಷಣವೆಂಬ
ಹನ್ನೊಂದನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ದ್ವಾದಶಃಸರ್ಗಃ.

ಶ್ರೀ ವಸಿಷ್ಠ ಉವಾಚ.

ಪರಿಪೂರ್ಣಮನಾಮಾನ್ಯಃ ಪ್ರಷ್ಟುಂ ಜಾನಾಸಿ ರಾಘವ ।
ವೇತ್ಸಿ ಚೋಕ್ತಂ ಚ ತೇನಾಹಂ ಪ್ರವೃತ್ತೋ ವಕ್ತುಮಾದರಾತ್ ॥೧॥
ರಜಸ್ತಮೋಭ್ಯಾಂ ರಹಿತಾಂ ಶುದ್ಧಸತ್ವಾನುಪಾತಿನೀಮ್ ।
ಮತಿಮಾತ್ಮನಿ ಸಂಸ್ಥಾಪ್ಯ ಜ್ಞಾನಂ ಶ್ರೋತುಂ ಸ್ಥಿರೋ ಭವ ॥೨॥
ವಿದ್ಯತೇ ತ್ವಯಿ ಸರ್ವೈವ ಪ್ರಚ್ಛಕಸ್ಯ ಗುಣಾವಳಿಃ ।
ವಕ್ತುರ್ಗುಣಾಳಿಶ್ಚ ಮಯಿ ರತ್ನಶ್ರೀರ್ಜಲಧೌ ಯಥಾ ॥೩॥
ಆಪ್ತವಾನಸಿ ವೈರಾಗ್ಯಂ ವಿವೇಕಾಸಜ್ಗಜಂ ಸುತ ।
ಚನ್ದ್ರಕಾನ್ತಇವಾರ್ದ್ರತ್ವಂ ಲಗ್ನಚನ್ದ್ರಕರೋತ್ಕರಃ ॥೪॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹನ್ನೆರಡನೆಯ ಸರ್ಗವು.

ಅನರ್ಥತಾ ಭವಗತೇಃ ಜ್ಞಾನಮಾಹಾತ್ಮ್ಯಮುತ್ತಮಮ್ ।
ರಾಮೇ ಚ ಪ್ರಚ್ಛಕಗುಣಸಮೃದ್ಧಿರಿಹ ವರ್ಣ್ಯತೇ ॥

ಸಂಸಾರಮಾರ್ಗದ ವಿಪತ್ಸ್ವರೂಪವೂ, ಉತ್ತಮವಾದ ಜ್ಞಾನಮಹಿಮೆಯೂ, ಶ್ರೀ ರಾಮನಲ್ಲಿ ಶ್ರೋತೃಗುಣಸಂಪತ್ತಿಯೂ ಕೂಡ ಈ ಸರ್ಗದಲ್ಲಿ ಹೇಳಲ್ಪಡುವುವು

ಮತ್ತೆ ಶ್ರೀ ವಸಿಷ್ಠಮುನಿಗಳು ರಾಮನನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಹೇಳಲುಪಕ್ರಮಿಸಿದರು.

ಅಯ್ಯಾ ! ರಾಮ ! ಸಮಸ್ತ ಸದ್ಗುಣ ಸಂಪೂರ್ಣವಾದ ಮನಸ್ಸುಳ್ಳವನಾಗಿಯೂ ಸರ್ವರಿಗೂ ಮಾನ್ಯನಾಗಿಯೂ ಇರುವ ನೀನು, ಪ್ರಶ್ನೆಮಾಡುವ ರೀತಿಯನ್ನು ಚೆನ್ನಾಗಿ ತಿಳಿದಿರುವೆ; ಮತ್ತು ಹೇಳಿದುದನ್ನೂ ಚೆನ್ನಾಗಿ ತಿಳಿದುಕೊಳ್ಳುವೆ. ಆದಕಾರಣ ನಾನು ಆದರದಿಂದ ಹೇಳಲುಪಕ್ರಮಿಸಿರುವೆನು ॥೧॥

ರಜೋಗುಣ ತಮೋಗುಣಗಳಿಂದ ರಹಿತವಾಗಿಯೂ ಶುದ್ಧವಾದ ಸತ್ವಗುಣವನ್ನನುಸರಿಸತಕ್ಕುದಾಗಿಯೂ ಇರುವ ಬುದ್ಧಿಯನ್ನು ತನ್ನ ವಶದಲ್ಲಿಟ್ಟುಕೊಂಡು, ನಾನು ಹೇಳುವ ಈ ಜ್ಞಾನೋಪದೇಶವನ್ನು ಕೇಳುವುದಕ್ಕೆ ಸ್ಥಿರನಾಗಿರು ॥೨॥

ಸಮುದ್ರದಲ್ಲಿ ರತ್ನಸಂಪತ್ತು ನೆಲೆಸಿರುವಂತೆ, ಶ್ರೋತೃವಿನ ಗುಣಸಮೂಹವೆಲ್ಲವೂ ನಿನ್ನಲ್ಲಿರುವುದು ; ಉಪದೇಶಕನ ಗುಣಸಮೂಹವು ನನ್ನಲ್ಲಿಯೂ ಇರುವುದು ॥೩॥

ಹೇ ಬಾಲ! ಚಂದ್ರಕಿರಣಸಂಪರ್ಕವುಳ್ಳುದಾಗಿ ಚಂದ್ರಕಾಂತಶಿಲೆಯು ಶೈತ್ಯವನ್ನು ಪಡೆಯುವಂತೆ, ನೀನು ವಿವೇಕಸಂಪರ್ಕದಿಂದುಂಟಾದ ಉತ್ತಮವಾದ ವೈರಾಗ್ಯವನ್ನು ಪಡೆದಿರುವೆ ॥೪॥

ಚಿರಮಾಶೈಶವಾದೇವ ತವಾಭ್ಯಾಸೋಽಸ್ತಿ ಸದ್ಗುಣೈಃ |
ಶುದ್ಧೈಃ ಶುದ್ಧಸ್ಯ ದೀರ್ಘೈಶ್ಚ ಪದ್ಮಸ್ಯೇವಾತಿಸನ್ತತೈಃ ||೫||
ಅತಃ ಶೃಣು ಕಥಾಂ ವಕ್ಷ್ಯೇ ತ್ವಮೇವಾಸ್ಯ ಹಿ ಭಾಜನಮ್ |
ನ ಹಿ ಚನ್ದ್ರಂ ವಿನಾ ಶುದ್ಧಾ ಸವಿಕಾಸಾ ಕುಮುದ್ವತೀ ||೬||
ಯೇ ಕೇಚನ ಸಮಾರಮ್ಭಾಃ ಯಾಶ್ಚ ಕಾಶ್ಚನ ದೃಷ್ಟಯಃ |
ತೇ ಚ ತಾಶ್ಚ ಪದೇ ದೃಷ್ಟೇ ನಿಶ್ಶೇಷಂ ಯಾನ್ತಿ ವೈ ಶಮಮ್ ||೭||
ಯದಿ ವಿಜ್ಞಾನವಿಶ್ರಾನ್ತಿಃ ನ ಭವೇದ್ಭವ್ಯಚೇತಸಃ |
ತದಸ್ಯಾಂ ಸಂಸೃತೌ ಸಾಧುಃ ಚಿತ್ತಮೌಢ್ಯಂ ಸಹೇತ ಕಃ ||೮||
ಪರಂ ಪ್ರಾಪ್ಯ ವಿಲೀಯನ್ತೇ ಸರ್ವ್ವಾಮನನವೃತ್ತಯಃ |
ಕಲ್ಪಾನ್ತಾರ್ಕಗಣಾಸಙ್ಗಾತ್ ಕುಲಶೈಲಶಿಲಾಇವ ||೯||
ದುಸ್ಸಹಾ ರಾಮ ಸಂಸಾರವಿಷಾವೇಶವಿಷೂಚಿಕಾ |
ಯೋಗಗಾರುಡಮನ್ತ್ರೇಣ ಪಾವನೇನ ಪ್ರಶಾಮ್ಯತಿ ||೧೦||

ಕಮಲಪುಷ್ಪಕ್ಕೆ—ಶುಭ್ರವಾದ ದೀರ್ಘವಾದ ಕಮಲತಂತುಗಳೊಡನೆ ಸಂಪರ್ಕವಿರುವಂತೆ, ನಿರ್ಮಲನಾಗಿರುವ ನಿನಗೆ—ನಿರ್ಮಲವಾಗಿ ಸರ್ವಲೋಕವಿಖ್ಯಾತವಾಗಿ ನಿರಂತರವಾಗಿರುವ ಸದ್ಗುಣಗಳೊಡನೆ ಬಾಲ್ಯದಿಂದಲೂ ಪರಿಚಯುವಿದ್ದೇ ಇರುವುದು ||೫||

ಆದಕಾರಣ ನೀನು ಕೇಳುವವನಾಗು; ನಾನು ನಿನಗೆ ಮೋಕ್ಷೋಪಾಯಕಥೆಯನ್ನು ಹೇಳುವೆನು. ನೀನೇ ಇದಕ್ಕೆ ಸರಿಯಾದ ಪಾತ್ರನು. ಉತ್ತಮವಾದ ಕುಮುದಲತೆಯು ಚಂದ್ರನಿಲ್ಲದೆ ವಿಕಾಸವುಳ್ಳುದಾಗುವುದಿಲ್ಲವಲ್ಲವೆ! ||೬||

ಈ ಮೋಕ್ಷೋಪಾಯವನ್ನು ಎಲ್ಲಿಯುವರೆಗೆ ಕೇಳಬೇಕೆಂದರೆ:—ಆ ಪರಮಪದಜ್ಞಾನವಾಗುವವರೆಗೆ ಕೇಳಬೇಕು. ಆ ಜ್ಞಾನವುಂಟಾದುದಕ್ಕೆ ಲಕ್ಷಣವೇನೆಂದರೆ:—ಈ ಪ್ರಾಪಂಚಿಕವಾದ ಯಾವ ನಾನಾವಿಧ ವ್ಯವಹಾರಗಳಿರುವುವೋ, ಮತ್ತು ಅನೇಕವಾದ ಯಾವ ಜ್ಞಾನಭೇದಗಳಿರುವುವೋ, ಅವೆಲ್ಲವೂ ಕೂಡ—ಆ ಪರಮಪದಜ್ಞಾನವಾಗಲು—ನಿಶ್ಶೇಷವಾಗಿ ಶಾಂತಿಹೊಂದುವುವು ||೭||

ಉತ್ತಮವಾದ ಮನಸ್ಸಿಗೆ ಜ್ಞಾನದಿಂದ ವಿಶ್ರಾಂತಿಯುಂಟಾಗದಿದ್ದಪಕ್ಷದಲ್ಲಿ, ಆಗ ಈ ಸಂಸಾರದಲ್ಲಿ ಮನಸ್ಸಿನ ಮೌಢ್ಯವನ್ನು ಸಾಧುವಾದ ಯಾವನು ಸಹಿಸಬಲ್ಲನು? ||೮||

ಪ್ರಳಯಕಾಲದಲ್ಲಿ ಸಾವಿರಾರು ಸೂರ್ಯಮಂಡಲಗಳುದಯಿಸಲಾಗಿ, ಅವುಗಳ ಸಂಪರ್ಕದಿಂದ ಕುಲಪರ್ವತಗಳ ಕಲ್ಲುಗಳೆಲ್ಲವೂ ಲಯಹೊಂದುವಂತೆ, ಪರಮಪದವನ್ನು ಹೊಂದಿದಮೇಲೆ ಸಮಸ್ತವಾದ ಮಾನಸವೃತ್ತಿಗಳೂ ಲಯಹೊಂದುವುವು ||೯||

ಅಯ್ಯಾ! ರಾಮ! ವಿಷದ ಆಕ್ರಮಣದಿಂದುಂಟಾಗಿ ಬಹುದುಸ್ಸಹವಾಗಿರುವ ಸಂಸಾರವೆಂಬ ವಿಷೂಚಿಕೆಯು (ವಾಂತಿಭೇದಿ ರೋಗ), ಅತಿ ಪವಿತ್ರವಾದ ಯೋಗವೆಂಬ ಗಾರುಡಮಂತ್ರದಿಂದ ಶಾಂತಿಹೊಂದುವುದು ||೧೦||

ಸ ಚ ಯೋಗಃ ಸಜ್ಜನೇನ ಸಹ ಶಾಸ್ತ್ರವಿಚಾರಣಾತ್ ।
ಪರಮಾರ್ಥಜ್ಞಾನಮನ್ತ್ರೇ ನೂನಂ ಲಭ್ಯತಏವ ಚ ॥೧೧॥

ಗದ್ಯಮ್ ॥ ಅವಶ್ಯಮಿಹ ಹಿ ವಿಚಾರೇ ಕೃತೇ ಸಕಲದುಃಖಪರಿಕ್ಷಯೋ ಭವತೀತಿ ಮನ್ತವ್ಯಮ್। ನಾತೋ ವಿಚಾರದೃಷ್ಟಯೋಽವಹೇಲಯಾ ದ್ರಷ್ಟವ್ಯಾಃ॥೧೨॥

ವಿಚಾರವತಾ ಪುರುಷೇಣ ಸಕಲಮಿದಮಾಧಿಸಞ್ಜಾರಂ ಸರ್ಪೇಣ ತ್ವಚಮಿವ ಪರಿಸಕ್ತ್ಯಾಂ ಸನ್ತ್ಯಜ್ಯ, ವಿಗತಜ್ವರೇಣ ಶೀತಲಾನ್ತಃಕರಣೇನ ವಿನೋದಾದಿನ್ದ್ರಜಾಲಮಿವ ಜಗದಖಿಲಮಾಲೋಕ್ಯತೇ ಸಮ್ಯಗ್ದರ್ಶನವತಾ । ಅಸಮ್ಯಗ್ದರ್ಶನವತೋ ಹಿ ಪರಂ ದುಃಖಮಿದಮ್ ॥೧೩॥

ವಿಷಮೋ ಹ್ಯತಿತರಾಂ ಸಂಸಾರರಾಗೋ,—ಭೋಗೀವ ದಶತಿ; ಅಸಿರಿವ ಛಿನತ್ತಿ; ಕುನ್ತಇವ ವೇಧಯತಿ; ರಜ್ಜುರಿವಾವೇಷ್ಟಯತಿ; ಪಾವಕಇವ ದಹತಿ; ರಾತ್ರಿರಿವಾನ್ಧಯತಿ; ಅಶಙ್ಕಿತಪರಿಪತಿತಪುರುಷಾನ್ ಪಾಷಾಣಇವ ವಿವಶೀಕರೋತಿ; ಹರತಿ ಪ್ರಜ್ಞಾಮ್; ನಾಶಯತಿ ಸ್ಥಿತಿಮ್; ಪಾತಯತಿ ಮೋಹಾನ್ಧಕೂಪೇ; ತೃಷ್ಣಾಜರ್ಜರೀಕರೋತಿ. ನ ತದಸ್ತಿ ಕಿಂಚಿದ್ದುಃಖಂ, ಸಂಸಾರೀ ಯನ್ನ ಪ್ರಾಪ್ನೋತಿ ॥೧೪॥

ಹೀಗೆ ಪರಮಾರ್ಥಜ್ಞಾನಕ್ಕೆ ಮಂತ್ರವಾದ ಆ ಯೋಗವು, ಸತ್ಪುರುಷರೊಡನೆ ಶಾಸ್ತ್ರವಿಚಾರ ಮಾಡೋಣದರಿಂದ ನಿಶ್ಚಯವಾಗಿ ಲಭಿಸಿಯೇ ಲಭಿಸುತ್ತದೆ ॥೧೧॥

ಈ ಲೋಕದಲ್ಲಿ, ವಿಚಾರಮಾಡುವುದರಿಂದ ಅವಶ್ಯವಾಗಿ ಸಮಸ್ತ ದುಃಖ ನಾಶವಾಗುವುದು. ಆದಕಾರಣ, ವಿಚಾರವೇ ನೇತ್ರವಾಗಿರುವ ಮಹಾತ್ಮರನ್ನು ತಿರಸ್ಕಾರಬುದ್ಧಿಯಿಂದ ಕಾಣಬಾರದು ॥೧೨॥

ವಿಚಾರಶೀಲನಾಗಿ ಉತ್ತಮಜ್ಞಾನವನ್ನು ಪಡೆದವನು – ಸರ್ಪವು ಕಳೆತಿರುವ ಪೊರೆಯನ್ನು ಬಿಡುವಂತೆ – ಈ ಸಮಸ್ತ ವ್ಯಥಾಸಮುದಾಯವನ್ನೂ ಪರಿತ್ಯಜಿಸಿ, ಸಂತಾಪರಹಿತನಾಗಿ, ಶೀತಲಹೃದಯನಾಗಿ, ಈ ಸಮಸ್ತ ಜಗತ್ತನ್ನೂ ಇಂದ್ರಜಾಲದಂತೆ ವಿನೋದದಿಂದ ನೋಡುತಿರುವನು. ಸರಿಯಾದ ಜ್ಞಾನವಿಲ್ಲದವನಿಗಾದರೆ—ಇದು ಕೇವಲ ದುಃಖವಾಗುವುದು ॥೧೩॥

ಅತಿವಿಷಮವಾದ ಈ ಸಂಸಾರಾಸಕ್ತಿಯು—ಹಾವಿನಂತೆ ಕಚ್ಚುತ್ತದೆ; ಕತ್ತಿಯಂತೆ ಕತ್ತರಿಸುತ್ತದೆ; ಕುಂತಾಯುಧದಂತೆ ಚುಚ್ಚುತ್ತದೆ; ಹಗ್ಗದಂತೆ ಸುತ್ತಿಕೊಳ್ಳುತ್ತದೆ; ಬೆಂಕಿಯಂತೆ ಸುಡುತ್ತದೆ; ರಾತ್ರಿಯಂತೆ ಕುರುಡುಮಾಡುತ್ತದೆ; ಶಂಕೆಯಿಲ್ಲದೆ ಬಿದ್ದ ಮನುಷ್ಯರನ್ನು ಕಲ್ಲಿನಂತೆ ಮೂರ್ಛೆಗೊಳಿಸುತ್ತದೆ; ಬುದ್ಧಿಯನ್ನು ಅಪಹರಿಸುತ್ತದೆ; ಲೋಕಮರ್ಯಾದೆಯನ್ನು ಕೆಡಿಸುತ್ತದೆ; ಅಜ್ಞಾನವೆಂಬ ಹಾಳುಭಾವಿಯಲ್ಲಿ ಕೆಡವುತ್ತದೆ; ತೃಷ್ಣೆಯಿಂದ ಶಿಥಿಲರನ್ನಾಗಿ ಮಾಡುತ್ತದೆ. ಹೆಚ್ಚೇನು? ಈ ಸಂಸಾರಕ್ಕೆ ಸಿಕ್ಕಿಕೊಂಡವನು ಹೊಂದದಿರುವ ದುಃಖವೊಂದೂ ಇಲ್ಲ ॥೧೪॥

ದುರನ್ತೇಯಂ ವಿಷಯವಿಷೂಚಿಕಾ ಯದಿ ನ ಚಿಕಿತ್ಸ್ಯತೇ, ತನ್ನಿತರಾಂ ನರಕನಗರನಿಕರಫಲಾನುಬಂಧಿನೀ ತತ್ತತ್ ಕರೋತಿ ||೧೫|| ಯತ್ರ— ಶಿಲಾಶಿತಾ ಅಸಿಶಾತಃ ಪಾತಃ ಉಪಲತಾಡನಂ ಅಗ್ನಿದಾಹಃ ಹಿಮಾವಸೇಕಃ ಅಙ್ಗಾವಕರ್ತನಂ ಚನ್ದನಚರ್ಚಾ ತರುವನಾನಿ ಘುಣವೃತ್ತಾನ್ತಃ ಪರಿವೇಷಃ ಅಙ್ಗಪರಿಮಾರ್ಜನಂ ಅನವರತಾನಲವಿಚಲಿತಸಮರನಾರಾಚನಿಪಾತೋ ನಿದಾಘವಿನೋದನಂ ಧಾರಾಗೃಹಸೀಕರವರ್ಷಣಂ ಶಿರಚ್ಛೇದಃ ಸುಖನಿದ್ರಾಮೂಕೀಕರಣಂ ಆನನಮುದ್ರಾ ಬಾನ್ಧರ್ಯಂ ಮಹಾನುಪಚಯಃ ||೧೬||

ತದೇವಂವಿಧಕಷ್ಟಚೇಷ್ಟಾಸಹಸ್ರದಾರುಣೇ ಸಂಸಾರಚಲಯನ್ತ್ರೇಽಸ್ಮಿನ್ ರಾಘವ ನಾವಹೇಲನಾ ಕರ್ತವ್ಯಾ | ಅವಶ್ಯಮೇವಂ ವಿಚಾರಣೀಯಂ, ಏವಂ ಚಾವಬೋದ್ಧವ್ಯಮ್; ಯಥಾ ಕಿಲ ಶಾಸ್ತ್ರವಿಚಾರಾಚ್ಛ್ರೇಯೋ ಭವತೀತಿ||೧೭

ಪರಿಣಾಮದಲ್ಲಿ ಕ್ರೂರವಾದ ಈ ವಿಷಯವೆಂಬ ವಿಷೂಚಿಕೆಯು ಚಿಕಿತ್ಸೆಮಾಡಲ್ಪಡದಿದ್ದಪಕ್ಷದಲ್ಲಿ, ಇದು ನರಕಗೃಹ ಸಮೂಹವೆಂಬ ಫಲವನ್ನು ಕೊಡತಕ್ಕದಾಗಿ, ಅಂಥಂಥ ದುಷ್ಫಲವನ್ನುಂಟುಮಾಡುತ್ತದೆ; ಅದಾವುದೆಂದರೆ—ಕಲ್ಲುತಿಂದು ಜೀವಿಸುವಿಕೆ, ಕತ್ತಿಯಿಂದ ಕತ್ತರಿಸುವಿಕೆ, ಪರ್ವತದ ತುದಿಯಿಂದ ಕೆಳಕ್ಕೆ ಕೆಡಹುವುದು, ಬಂಡೆಗಳಿಂದ ಹೊಡೆಯುವುದು, ಬೆಂಕಿಯಿಂದ ಸುಡುವುದು, ಮಂಜನ್ನು ಸರ್ವದಾ ಮೇಲೆ ಸುರಿಯುತ್ತಿರುವುದು, ಕೊಡಲಿ ಮುಂತಾದವುಗಳಿಂದ ಅವಯವಗಳನ್ನು ಕತ್ತರಿಸುವುದು, ಗಂಧದ ಕೊರಡನ್ನು ತೇಯುವಂತೆ ದೇಹವನ್ನು ಕಲ್ಲಿನಮೇಲೆ ತೇಯುವುದು, ಕತ್ತಿಗಳಿಂದ ಮರಗಳನ್ನು ಮಾಡಿ ಆ ತೋಪಿನ ಮಧ್ಯದಲ್ಲಿ ಓಡಿಸುವುದು, ಕುಟ್ಟೆಹುಳುವು ಮರವನ್ನು ಒಳಗೇ ಕೊರೆದು ನಿಸ್ಸಾರಮಾಡುವಂತೆ ಯಂತ್ರಾದಿಗಳಿಂದ ದೇಹವನ್ನು ಅವುಕಿ ನಿಸ್ಸಾರಮಾಡುವುದು, ಕಬ್ಬಿಣದ ಕಡಗ ಸರಪಳಿ ಮುಂತಾದುವುಗಳನ್ನು ಕೆಂಪಗೆ ಕಾಯಿಸಿ ಅವುಗಳಿಂದ ದೇಹವನ್ನು ಸುತ್ತಲೂ ಕಟ್ಟುವುದು, ಮುಳ್ಳಿನ ಪೊರಕೆಯಿಂದ ದೇಹವನ್ನು ಗುಡಿಸುವುದು, ಅಗ್ನಿಜ್ವಾಲೆಯು ಪ್ರಸರಿಸುತ್ತಿರುವ ಯುದ್ಧಬಾಣಗಳನ್ನು ನಿರಂತರವಾಗಿ ಮೇಲೆ ಬಿಡುವುದು, ನೀರುನೆರಳಿಲ್ಲದೆ ಬಿಸಿಲುಕಾಲವನ್ನು ಕಳೆಯುವುದು, ಹಿಮಗಾಲದಲ್ಲಿ ಜಲಧಾರೆಗಳನ್ನು ವರ್ಷಿಸುವುದು, ಪದೇಪದೇ ಕತ್ತುಕತ್ತರಿಸುತ್ತಿರುವುದು, ಇಷ್ಟಾದರೂ ಒಂದು ಕ್ಷಣವೂ ಸುಖನಿದ್ರೆಯಿಲ್ಲದಂತೆ ಮಾಡುವುದು, ಮೂಗುಬಾಯಿಗಳನ್ನು ಅವುಕಿಬಿಟ್ಟು ಉಸಿರಾಡದಂತೆ ಮಾಡುವುದು, ಅವಯವಗಳನ್ನೆಲ್ಲ ಹೆಚ್ಚುಕಡಿಮೆ ಮಾಡಿಬಿಟ್ಟು ಯಾವ ಕೆಲಸವನ್ನೂ ನಡೆಯಿಸುವುದಕ್ಕಾಗದಂತೆ ಮಾಡುವುದು, ಬೆಟ್ಟದಂತೆ ತಟ್ಟನೆ ಹೆಚ್ಚಾಗಿ ಬೆಳೆಯುವುದು. ಇವುಗಳನ್ನೆಲ್ಲ ಈ ವಿಷಯವೆಂಬ ವಿಷೂಚಿಕಾರೋಗವುಂಟುಮಾಡುತ್ತದೆ ||೧೫-೧೬||

ಅಯ್ಯಾ! ರಾಘವ! ಆದಕಾರಣ, ಈ ರೀತಿಯಿಂದ ಅತಿ ಕಷ್ಟವಾದ ಅನೇಕ ವ್ಯಾಪಾರಗಳಿಂದ ಬಹು ಕ್ರೂರವಾಗಿ ಸರ್ವದಾ ಸಂಚಲಿಸುತ್ತಿರುವ ಈ ಸಂಸಾರವೆಂಬ ಚಕ್ರದ ವಿಷಯದಲ್ಲಿ, ಎಂದಿಗೂ ಅಜಾಗರೂಕನಾಗಿರಬಾರದು. ಯಾವರೀತಿಯಾದರೆ ಶಾಸ್ತ್ರವಿಚಾರದಿಂದ ಶ್ರೇಯಸ್ಸುಂಟಾಗುವುದೋ,—ಆ ರೀತಿಯಾಗಿ ಅವಶ್ಯವಾಗಿ ವಿಚಾರಮಾಡತಕ್ಕುದು; ಆ ರೀತಿಯಾಗಿ ಜ್ಞಾನವನ್ನು ಸಂಪಾದಿಸತಕ್ಕುದು ||೧೭||

ಅನ್ಯಚ್ಚ ರಘುಕುಲೇನ್ದೋ:—ಯದಿ ಚೈತೇ ಮಹಾಮುನಯೋ ಮಹರ್ಷಯಶ್ಚ ವಿಪ್ರಾಶ್ಚ ರಾಜಾನಶ್ಚ ಜ್ಞಾನಕವಚೇನಾವಗುಣ್ಠಿತಶರೀರಾಃ; ತೇ ಕಥಮದುಃಖಕ್ಷಮಾಅಪಿ ದುಃಖಕರೀಂ ತಾಂತಾಂ ವೃತ್ತಿಪೂರ್ವಿಕಾಂ ಸಂಸಾರಕದರ್ಥನಾಮನುಭವನ್ತಃ, ಸತತಮೇವ ಮುದಿತಮನಸಸ್ತಿಷ್ಠನ್ತಿ ॥೧೮॥ ಇಹ ಹಿ :—

(ಪದ್ಯಂ)

ವಿಕೌತುಕಾವಿಗತವಿಕಲ್ಪವಿಪ್ಲವಾಃ ಯಥಾ ಸ್ಥಿತಾಹರಿಹರಪದ್ಮಜಾದಯಃ ।
ನರೋತ್ತಮಾಃ ಸಮಧಿಗತಾತ್ಮದೀಪಕಾಃ ತಥಾ ಸ್ಥಿತಾಜಗತಿ ವಿಶುದ್ಧಬುದ್ಧಯಃ ॥

ಪರಿಕ್ಷೀಣೇ ಮೋಹೇ ವಿಗಳತಿ ಘನೇಽಜ್ಞಾನಜಲದೇ
ಪರಿಜ್ಞಾತೇ ತತ್ತ್ವೇ ಸಮಧಿಗತಆತ್ಮನ್ಯತಿತತೇ ।
ವಿಚಾರಾರ್ಯೈಃ ಸಾರ್ಧಂ ಚಲಿತವಪುಷೋ ವೈ ಸದೃಶತೋ
ಧಿಯಾ ದೃಷ್ಟೇ ತತ್ತ್ವೇ ರಮಣಮಟನಂ ಜಾಗತಮಿದಮ್ ॥೨೦॥

ಅನ್ಯಚ್ಚ ರಾಘವ :—

ರಘುಕುಲಕ್ಕೆ ಚಂದ್ರಪ್ರಾಯನಾದ ಶ್ರೀರಾಮನೆ! ಇಲ್ಲಿ ಇನ್ನೂ ಒಂದು ವಿಚಾರವಿರುವುದು:—ಧ್ಯಾನಾಸಕ್ತರಾದ ಈ ಮಹಾಮುನಿಗಳೂ, ಮಂತ್ರಜಪಾಸಕ್ತರಾದ ಈ ಮಹರ್ಷಿಗಳೂ, ಈ ಬ್ರಾಹ್ಮಣರೂ ಈ ಕ್ಷತ್ರಿಯರೂ ಕೂಡ ಜ್ಞಾನವೆಂಬ ಕವಚದಿಂದ ಆಚ್ಛಾದಿತವಾದ ಶರೀರವುಳ್ಳವರಾಗಿರುವುದರಿಂದ, ಅವರೆಲ್ಲರೂ ದುಃಖಕ್ಕೆ ಅನರ್ಹರಾಗಿದ್ದರೂ—ದುಃಖಕರವಾದ ವೃತ್ತಿಪೂರ್ವಕವಾದ ಆಯಾ ಸಂಸಾರಯಾತನೆಗಳನ್ನು ಅನುಭವಿಸುತ್ತಿರುವುದು ಹೇಗೆಂದು ನೀನು ಯೋಚಿಸಿದ ಪಕ್ಷದಲ್ಲಿ,—ಅವರೆಲ್ಲರೂ ಹಾಗೆ ದುಃಖಾನುಭವವುಳ್ಳವರಾಗಿದ್ದರೆ ಹೀಗೆ ಸರ್ವದಾ ಪ್ರಮುದಿತಹೃದಯರಾಗಿರುವಬಗೆ ಹೇಗೆ? ॥೧೮॥

ಆದಕಾರಣ, ಹರಿಹರಬ್ರಹ್ಮಾದಿಗಳು-ಯಾವವಿಧವಾದ ಕುತೂಹಲವೂ ಇಲ್ಲದೆ ನಾನಾವಿಧ ವಿಕಲ್ಪಗಳಿಂದ ಚಾಂಚಲ್ಯಪಡದೆ— ಯಾವರೀತಿಯಾಗಿರುತ್ತಾರೋ, ಆತ್ಮಜ್ಞಾನವೆಂಬ ದೀಪವನ್ನು ಹೊಂದಿ ಶುದ್ಧವಾದ ಬುದ್ಧಿಯುಳ್ಳ ಪುರುಷಶ್ರೇಷ್ಠರೂ ಹಾಗೆಯೇ ಈ ಲೋಕದಲ್ಲಿರುವರು ॥೧೯॥

ಆದರೆ, ಬ್ರಹ್ಮಾದಿಗಳಂತೆ ಇವರು ಪೂರ್ಣಕಾಮರಾಗಿದ್ದಪಕ್ಷದಲ್ಲಿ—ಇವರಿಗೆ ಈ ಸಂಸಾರದಲ್ಲಿ ಒದ್ದಾಟವೇಕೆ?—ಎಂದು ಒಂದು ಆಕ್ಷೇಪಣೆತೋರಬಹುದಲ್ಲವೆ! ಹೀಗೆ ಶಂಕಿಸಬಾರದು. ಪ್ರಪಂಚದಲ್ಲಿ ಪುರುಷನು ಈ ದೇಹೇಂದ್ರಿಯಾದಿಗಳಲ್ಲಿ ಆತ್ಮಜ್ಞಾನವನ್ನಿಟ್ಟುಕೊಂಡಿರುವನು; ಇದು, ಪೂಜ್ಯರಾದ ಆಚಾರ್ಯಾದಿಗಳೊಡನೆ ವಿಚಾರಮಾಡುವುದರಿಂದ ಬಿಟ್ಟುಹೋಗುವುದು. ಇಂಥವನು ವೇದಾಂತಕ್ಕೆ ಅಧಿಕಾರಿಯಾಗುವನು. ಬಳಿಕ ವೇದಾಂತವಾಕ್ಯಶ್ರವಣದಿಂದ ತತ್ವವು ಗೊತ್ತಾಗುವುದು; ಆಮೇಲೆ ಮನನದಿಂದ ಸರ್ವವ್ಯಾಪಿಯಾದ ಆತ್ಮನನ್ನು ತಿಳಿಯುವನು. ಬಳಿಕ ನಿದಿಧ್ಯಾಸನಧಿಂದ ವ್ಯತ್ಯಸ್ತಜ್ಞಾನವು ಕಳೆದಿರುವ ಬುದ್ಧಿಯಿಂದ ಬ್ರಹ್ಮಸಾಕ್ಷಾತ್ಕಾರವಾಗಲು, ಮೋಹವು ಕ್ಷಯಹೊಂದಲು, ಆ ಮೋಹದಿಂದ ವ್ಯಾಪ್ತವಾದ ಭ್ರಾಂತಿಯೆಂಬ ಮೇಘವು ಹೊರಟುಹೋಗಲು, ಈ ಪ್ರಪಂಚವ್ಯಾಪಾರವು ಕ್ರೀಡೆಯಾಗಿರುವುದೇಹೊರತು - ಪೀಡಾಕರವಾಗಿರುವುದಿಲ್ಲ ॥೨೦॥

ಪ್ರಸನ್ನೇ ಚಿತ್ತೇ ಹೃದಿ ಶಮಭವೇ ವಲ್ಗತಿ ಪರೇ
ಶಮಾಭೋಗೀಭೂತಾಸ್ವಖಿಲಕಲನಾದೃಷ್ಟಿಷು ಪುರಃ ।
ಸಮಂ ಯಾತಿ ಸ್ವಾಂತಃಕರಣಘಟನಾಸ್ವಾದಿತರಸಂ
ಧಿಯಾ ದೃಷ್ಟೇ ತತ್ತ್ವೇ ರಮಣಮಟನಂ ಜಾಗತಮಿದಮ್ ॥೨೧॥

ಅನ್ಯಚ್ಚ :—

ರಥಃ ಸ್ಥಾಣುರ್ದೇಹಸ್ತುರಗರಚನಾ ಚೇನ್ದ್ರಿಯಗತಿಃ
ಪರಿಸ್ಪನ್ದೋ ವಾತೋ ವಹನಕಲಿತಾನನ್ದವಿಷಯಃ ।
ಪರೋಽಣುರ್ವಾ ದೇಹೀ ಜಗತಿ ವಿಹರಾಮೀತ್ಯನಘಯಾ
ಧಿಯಾ ದೃಷ್ಟೇ ತತ್ತ್ವೇ ರಮಣಮಟನಂ ಜಾಗತಮಿದಮ್ ॥೨೨॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ತತ್ತ್ವಮಾಹಾತ್ಮ್ಯವರ್ಣನಂ ನಾಮ
ದ್ವಾದಶಃ ಸರ್ಗಃ.

ಅಯ್ಯಾ! ರಾಮ! ಮತ್ತು ಹೇಳುವೆನು:—ಪೂರ್ವೋಕ್ತರೀತಿಯಾಗಿ ಆತ್ಮಸಾಕ್ಷಾತ್ಕಾರವಾಗಲು, ಕೇವಲ ಚೈತನ್ಯಸ್ವರೂಪವಾದ ಆ ಬ್ರಹ್ಮಪದಾರ್ಥವು ನಿರ್ಮಲವಾಗಲು, ಮನಸ್ಸಿನಲ್ಲಿ ಉತ್ತಮವಾದ ಶಾಂತಿಯಾವಿರ್ಭವಿಸಿ ನರ್ತನಮಾಡುತಿರಲು, ಸಮಸ್ತವಾದ ಚಿತ್ತವೃತ್ತಿಗಳೂ ಶಾಂತಿರಸದ ಆಸ್ವಾದನರೂಪವಾಗುತಿರಲು, ಪುರುಷನ ಅಂತಃಕರಣವು ಬ್ರಹ್ಮರಸಾಸ್ವಾದನೆಮಾಡುತ ಸರ್ವತ್ರ ಸಮಸ್ವಭಾವವನ್ನು ಹೊಂದುವುದು; ಆದಕಾರಣ ಈ ಪ್ರಾಪಂಚಿಕವ್ಯವಹಾರವು ಕ್ರೀಡೆಯಾಗಿಯೇ ಇರುವುದು ॥೨೧॥ ಮತ್ತು:—

ಮೋಟುಮರದಂತೆ ನಿಶ್ಚಲವಾದ ಈ ದೇಹವೇ ರಥವು; ಇಂದ್ರಿಯವ್ಯಾಪಾರವೇ ಇದಕ್ಕೆ ಅಶ್ವವ್ಯಾಪಾರವು; ಸುತ್ತಲೂ ಸಂಚಲಿಸುತ್ತಿರುವ ಪ್ರಾಣಪ್ರಧಾನವಾದ ಮನಸ್ಸೇ ಸಾರಥಿರೂಪವಾಗಿ ಈ ರಥವನ್ನು ಅಲ್ಲಲ್ಲಿ ಒಯ್ಯುತ್ತ ಆನಂದರೂಪವಾದ ದೇಶಗಳನ್ನು ಹೊಂದಿಸುವುದು. ಆತ್ಮನು ಸಮಾಧಿಕಾಲದಲ್ಲಿ ಪರಮಾತ್ಮನಾಗಿಯೂ, ವ್ಯವಹಾರದಶೆಯಲ್ಲಿ ದೇಶಾದಿ ಪರಿಚ್ಛೇದದಿಂದ ಅಣುವಾಗಿಯೂ ಇರುವನು. ಇಂತಹ ದೇಹಿಯಾದ ನಾನು ಈ ಜಗತ್ತಿನಲ್ಲಿ ವಿಹರಿಸುತ್ತೇನೆಂಬ ನಿರ್ಮಲವಾದ ಬುದ್ಧಿಯಿಂದ ತತ್ತ್ವವನ್ನು ತಿಳಿಯಲಾಗಿ, ಈ ಪ್ರಾಪಂಚಿಕವ್ಯಾಪಾರವು ಕೇವಲಕ್ರೀಡೆಯಾಗಿಯೇ ಇರುವುದು ॥೨೨

ಇದು ಮುಮುಕ್ಷುವ್ಯವಹಾರ ಪ್ರಕರಣದಲ್ಲಿ ತತ್ವಮಾಹಾತ್ಮ್ಯ ವರ್ಣನವೆಂಬ
ಹನ್ನೆರಡನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ತ್ರಯೋದಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏತಾಂ ದೃಷ್ಟಿಮವಷ್ಟಭ್ಯ ದೃಷ್ಟಾತ್ಮಾನಃ ಸುಬುದ್ಧಯಃ ।
ವಿಚರನ್ತೀಹ ಸಂಸಾರೇ ಮಹಾನ್ತೋಭ್ಯುದಿತಾ ಇವ ॥೧॥
ನ ಶೋಚನ್ತಿ ನ ವಾಞ್ಛನ್ತಿ ನ ಯಾಚನ್ತೇ ಶುಭಾಶುಭಮ್ ।
ಸರ್ವಮೇವ ಚ ಕುರ್ವನ್ತಿ ನ ಕುರ್ವನ್ತೀಹ ಕಿಂಚನ ॥೨॥
ಸ್ವಚ್ಛಮೇವಾವತಿಷ್ಠನ್ತೇ ಸ್ವಚ್ಛಂ ಕುರ್ವನ್ತಿ ಯಾನ್ತಿ ಹಿ ।
ಹೇಯೋಪಾದೇಯತಾಪಕ್ಷರಹಿತಾಃ ಸ್ವಾತ್ಮನಿ ಸ್ಥಿತಾಃ ॥೩॥
ಆಯಾನ್ತಿ ಚ ನ ಚಾಯಾನ್ತಿ ಪ್ರಯಾನ್ತಿ ಚ ನ ಯಾನ್ತಿ ಚ ।
ಕುರ್ವನ್ತ್ಯಪಿ ನ ಕುರ್ವನ್ತಿ ನ ವದನ್ತಿ ವದನ್ತಿ ಚ ॥೪॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹದಿಮೂರನೆಯಸರ್ಗವು.

ವರ್ಣಿತಾ ಇಹ ಬಾಹುಳ್ಯಾತ್ ವೈರಾಗ್ಯಾದಿಗುಣೋದಯಾಃ ।
ಜೀವನ್ಮುಕ್ತಿಫಲೋನ್ನದ್ಧಾಃ ವಿಶೇಷೇಣ ಶಮಃ ಪುನಃ ॥

ಈ ಸರ್ಗದಲ್ಲಿ, ಜೀವನ್ಮುಕ್ತಿಯೆಂಬ ಫಲದೊಡನೆ ಕೂಡಿರುವ ವೈರಾಗ್ಯಾದಿ ಗುಣಸಂಪತ್ತಿಯು ಬಹುಳವಾಗಿಯೂ—ಶಾಂತಿಯು ವಿಶೇಷವಾಗಿಯೂ ವರ್ಣಿಸಲ್ಪಡುವುವು.

ಮತ್ತೆ ಶ್ರೀ ವಸಿಷ್ಠಮುನಿಗಳು ಹೇಳಿದರು.

ಅಯ್ಯಾ! ರಾಮ! ಪೂರ್ವೋಕ್ತರೀತಿಯಾದ ಜ್ಞಾನವನ್ನಾಶ್ರಯಿಸಿ ಆತ್ಮಸಾಕ್ಷಾತ್ಕಾರ ಪಡೆದಿರುವ ಉತ್ತಮಮತಿಗಳಾದ ಮಹಾತ್ಮರು, ಸಾಮ್ರಾಜ್ಯಪದವಿಯನ್ನು ಪಡೆದಿರುವರಂತೆ—ಈ ಸಂಸಾರದಲ್ಲಿ ಸಂಚಾರಮಾಡಿಕೊಂಡಿರುವರು ॥೧॥

ಇಂತಹ ಮಹನೀಯರು—ದುಃಖಕಾಲದಲ್ಲಿ ಅಳುವುದಿಲ್ಲ; ಶುಭವನ್ನು ಹೊಂದಬೇಕೆಂದೂ ಅಶುಭವನ್ನು ಬಿಡಬೇಕೆಂದೂ ಅಪೇಕ್ಷಿಸುವುದಿಲ್ಲ, ಆದಕಾರಣವೇ ಇದಕ್ಕೆ ಬೇಕಾದ ಸಾಧನಸಂಪತ್ತನ್ನೂ ಯಾಚಿಸುವುದಿಲ್ಲ; ಈ ಪ್ರಪಂಚದಲ್ಲಿ ಮಾಡಬೇಕಾದ ಕರ್ಮವೆಲ್ಲವನ್ನೂ ಮಾಡುತ್ತಲೇ ಇರುತ್ತಾರೆ; ಆದರೆ ಫಲಾಭಿಸಂಧಿಯಿಲ್ಲದಕಾರಣ, ಯಾವುದನ್ನೂ ಮಾಡದಂತೆಯೇ ಇರುತ್ತಾರೆ ॥೨॥

ಮತ್ತು, ಈ ಆತ್ಮಜ್ಞಾನಾವಲಂಬಿಗಳಾದವರು—ಇದು ಬಿಡತಕ್ಕುದೆಂದೂ ಇದು ಸ್ವೀಕರಿಸತಕ್ಕುದೆಂದೂ ಭೇದವಿಲ್ಲದವರಾಗಿ, ನಿರ್ಲೇಪರಾಗಿಯೇ ಇರುತ್ತಾರೆ; ನಿರ್ಮಲವಾದ ಶಾಸ್ತ್ರೀಯವಾದ ಕರ್ಮವನ್ನೇ ಆಚರಿಸುತ್ತಾರೆ; ನಿರ್ಮಲವಾದ ಲೋಕಮಾರ್ಗವನ್ನೇ ಹೊಂದಿರುತ್ತಾರೆ ॥೩॥

ಇನ್ನೂ ಈ ಆತ್ಮಜ್ಞಾನಿಗಳು—ಬರುವಂತೆಯೂ ಹೋಗುವಂತೆಯೂ ಕೆಲಸಮಾಡುವಂತೆಯೂ ಮಾತಾಡುವಂತೆಯೂ ಕಾಣುವರು; ಆದರೆ,—ಅವರು ಬರುವುದೂ ಇಲ್ಲ, ಹೋಗುವುದೂ ಇಲ್ಲ, ಮಾಡುವುದೂ ಇಲ್ಲ, ಮಾತಾಡುವುದೂ ಇಲ್ಲ ॥೪॥

ಯೇ ಕೇಚನ ಸಮಾರಮ್ಭಾಃ ಯಾಶ್ಚ ಕಾಶ್ಚನ ದೃಷ್ಟಯಃ ।
ಹೇಯೋಪಾದೇಯತಸ್ತಾಸ್ತಾಃ ಕ್ಷೀಯನ್ತೇಧಿಗತೇ ಪದೇ ॥೫॥
ಪರಿತ್ಯಕ್ತ ಸಮಸ್ತೇಹಂ ಮನೋ ಮಧುರವೃತ್ತಿಮತ್ ।
ಸರ್ವತಃ ಸುಖಮಭ್ಯೇತಿ ಚನ್ದ್ರಬಿಮ್ಬ ಇವ ಸ್ಥಿತಮ್ ॥೬॥
ಅಪಿ ನಿರ್ಮನನಾರಮ್ಭಂ ಅಸ್ಯಸ್ತಾಖಿಲಕೌತುಕಮ್ ।
ಆತ್ಮನ್ಯೇವ ನ ಮಾತ್ಯನ್ತಃ ಇನ್ದಾವಿವ ರಸಾಯನಮ್ ॥೭॥
ನ ಕರೋತೀನ್ದ್ರಜಾಲಾನಿ ನಾನುಧಾವತಿ ವಾಸನಾಮ್ ।
ಬಾಲಚಾಪಲಮುತ್ಸೃಜ್ಯ ಪೂರ್ವಮೇವ ವಿರಾಜತೇ ॥೮॥

(ಗದ್ಯಂ) ಏವಂವಿಧಾಹಿ ವೃತ್ತಯಃ ಆತ್ಮತತ್ತ್ವಾವಲೋಕನಾಲ್ಲಭ್ಯನ್ತೇನಾನ್ಯಥಾ॥
ತಸ್ಮಾದ್ವಿಚಾರೇಣಾತ್ಮೈವಾನ್ವೇಷ್ಟವ್ಯಉಪಾಸನೀಯೋ ಜ್ಞಾತವ್ಯೋ ಯಾವಜ್ಜೀವಂ ಪುರುಷೇಣ ನೇತರದಿತಿ ॥೧೦॥

ಸ್ವಾನುಭೂತೇಶ್ಚ ಶಾಸ್ತ್ರಸ್ಯ ಗುರೋಶ್ಚೈವೈಕವಾಕ್ಯತಾ ।
ಯಸ್ಯಾಭ್ಯಾಸೇನ ತೇನಾತ್ಮಾ ಸನ್ತತೇನಾವಲೋಕ್ಯತೇ ॥೧೧॥

ಮತ್ತು, ಇದು ಹೇಯವೆಂಬುದಾಗಿಯೂ ಇದು ಉಪಾದೇಯವೆಂಬುದಾಗಿಯೂ ಅಭಿಪ್ರಾಯವಿರುವುದರಿಂದ, ಈ ಲೋಕದಲ್ಲಿ ಯಾವ ಕಾರ್ಯಾರಂಭಗಳು ಮಾಡಲ್ಪಡುವುವೋ, ಯಾವ ನಾನಾವಿಧ ವ್ಯವಹಾರಗಳಿರುವುವೋ, ಅವೆಲ್ಲವೂಕೂಡ—ಆ ಪರಮಪದಜ್ಞಾನವಾದಬಳಿಕ ಲಯಹೊಂದುವುವು ॥೫॥

ಸಮಸ್ತವಾದ ವ್ಯಾಪಾರವನ್ನೂ ಬಿಟ್ಟು—ಕೇವಲ ಶಾಂತಸ್ಥಿತಿಯಲ್ಲಿರುವ ಮನಸ್ಸು, ಚಂದ್ರಮಂಡಲದಲ್ಲಿರುವಂತೆ ಎಲ್ಲಕಡೆಯಲ್ಲಿಯೂ ಸುಖಹೊಂದುತ್ತದೆ ॥೬॥

ಮತ್ತು ಇಂತಹ ಮನಸ್ಸು, ಸಮಸ್ತವಾದ ಆಲೋಚನಾಕಾರ್ಯಗಳನ್ನೂ ಪರಿತ್ಯಜಿಸಿ, ಸಕಲ ಕುತೂಹಲಗಳನ್ನೂ ಶಾಂತಿಪಡಿಸಿ,—ಚಂದ್ರನಲ್ಲಿ ಅಮೃತವು ಅಡಗಲಾರದಂತೆ—ತನ್ನೊಳಗೆ ತಾನೇ ಅಡಗಲಾರದಿರುವುದು ॥೭॥

ಇನ್ನೂ ಈ ಮನಸ್ಸು, ಇಂದ್ರಜಾಲಸದೃಶವಾದ ಕಪಟವೊಂದನ್ನೂ ಮಾಡುವುದಿಲ್ಲ; ಇದಕ್ಕೆ ಕಾರಣಭೂತವಾದ ಕರ್ಮವಾಸನೆಯನ್ನೂ ಅನುಸರಿಸುವುದಿಲ್ಲ; ಹುಡುಗರಂತೆ ಭ್ರಾಂತಿಯಿಂದುಂಟಾಗಿದ್ದ ಚಾಂಚಲ್ಯವನ್ನು ಪರಿತ್ಯಜಿಸಿ, ಅನಾದಿಸಿದ್ಧವಾದ ಆತ್ಮಸುಖವುಳ್ಳದಾಗಿಯೇ ಪ್ರಕಾಶಿಸುತ್ತಿರುತ್ತದೆ ॥೮॥

ಈ ರೀತಿಯಾದ ವೃತ್ತಿಗಳೆಲ್ಲವೂ ಆತ್ಮತತ್ವದರ್ಶನದಿಂದ ಸಿಕ್ಕುವುವು; ಬೇರೆಯಾದ ಮಾರ್ಗವಿಲ್ಲ ॥೯॥

ಆದಕಾರಣ, ಪುರುಷನು ಯಾವಜ್ಜೀವವೂ ಆತ್ಮನನ್ನೇ ಶ್ರವಣಮನನಾದಿಗಳಿಂದ ವಿಚಾರಮಾಡಬೇಕು, ಉಪಾಸಿಸಬೇಕು, ತಿಳಿಯಬೇಕು; ಮತ್ತೊಂದನ್ನಲ್ಲ ॥೧೦॥

ಯಾವನಿಗೆ ಅಭ್ಯಾಸಾತಿಶಯದಿಂದ ತನ್ನನುಭವಕ್ಕೂ ಶಾಸ್ತ್ರಕ್ಕೂ ಗುರೂಪದೇಶಕ್ಕೂ ಏಕರೂಪತೆಯುಂಟಾಗುವುದೋ, ಅವನು ನಿರಂತರನಾಗಿ ಆತ್ಮತತ್ವವನ್ನು ತಿಳಿಯುವನು ॥೧೧

ಅವಹೇಳಿತಶಾಸ್ತ್ರಾರ್ಥೈಃ ಅವಜ್ಞಾತಮಹಾಜನೈಃ |
ಕಷ್ಟಾಮಪ್ಯಾಪದಂ ಪ್ರಾಪ್ತೋ ನ ಮೂರ್ಖೈಃ ಸಮತಾಮಿಯಾತ್ ||೧೨||
ನ ವ್ಯಾಧಿರ್ನ ವಿಷಂ ನಾಪತ್ ತಥಾ ನಾಧಿಶ್ಚ ಭೂತಲೇ |
ಖೇದಾಯ ಸ್ವಶರೀರಸ್ಥಂ ಮೌರ್ಖ್ಯಮೇಕಂ ಯಥಾ ನೃಣಾಮ್ ||೧೩||
ಕಿಂಚಿತ್ ಸಂಸ್ಕೃತಬುದ್ಧೀನಾಂ ಶ್ರುತಂ ಶಾಸ್ತ್ರಮಿದಂ ಯಥಾ |
ಮೌರ್ಖ್ಯಾಪಹಂ ತಥಾ ಶಾಸ್ತ್ರಂ ಅನ್ಯದಸ್ತಿ ನ ಕಿಂಚನ ||೧೪||
ಇದಂ ಶ್ರಾವ್ಯಂ ಸುಖಕರಂ ಯಥಾದೃಷ್ಟಾಂತಸುಂದರಮ್ |
ಅವಿರುದ್ಧಮಶೇಷೇಣ ಶಾಸ್ತ್ರಂ ವಾಕ್ಯಾರ್ಥಬಂಧುನಾ ||೧೫||
ಆಪದೋ ಯಾದುರುತ್ತಾರಾಃ ಯಾಶ್ಚ ತುಚ್ಛಾಃ ಕುಯೋನಯಃ |
ತಾಸ್ತಾ ಮೌರ್ಖ್ಯಾತ್ ಪ್ರಸೂಯಂತೇ ಖದಿರಾದಿವ ಕಂಟಕಾಃ ||೧೬||
ವರಂ ಶರಾವಹಸ್ತಸ್ಯ ಚಾಂಡಾಲಾಗಾರವೀಥಿಷು |
ಭಿಕ್ಷಾರ್ಥಮಟನಂ ರಾಮ ನ ಮೌರ್ಖ್ಯಹತಜೀವಿತಮ್ ||೧೭||
ವರಂ ಘೋರಾಂಧಕೂಪೇಷು ಕೋಟರೇಷ್ವೇವ ಭೂರುಹಾಮ್ |

ಆದುದರಿಂದ, ಎಷ್ಟು ಕಷ್ಟವಾದ ಆಪತ್ತನ್ನು ಹೊಂದಿದರೂ, ಶಾಸ್ತ್ರಾರ್ಥಗಳನ್ನೂ ಮಹಾತ್ಮರನ್ನೂ ತಿರಸ್ಕರಿಸುವ ಮೂಢರೊಡನೆ ಹೋಲಿಕೆಯನ್ನು ಹೊಂದಬಾರದು ॥೧೨॥

ಈ ಭೂಮಿಯಲ್ಲಿ ಮನುಷ್ಯರಿಗೆ ತಮ್ಮ ಶರೀರದಲ್ಲಿರುವ ಮೂಢತನವು ಎಷ್ಟುಮಟ್ಟಿಗೆ ಖೇದಹೇತುವಾಗುವುದೋ, ಅಷ್ಟುಮಟ್ಟಿಗೆ—ವ್ಯಾಧಿಯೂ ಆಗುವುದಿಲ್ಲ; ವಿಷವೂ ಆಗುವುದಿಲ್ಲ; ವಿಪತ್ತೂ ಆಗುವುದಿಲ್ಲ; ರೋಗವೂ ಆಗುವುದಿಲ್ಲ ॥ ೧೩ ॥

ಸ್ವಲ್ಪ ಶಾಸ್ತ್ರಸಂಸ್ಕಾರವುಳ್ಳ ಬುದ್ಧಿಯುಂಟಾಗಿರುವವರಿಗೆ, ಈ ಶಾಸ್ತ್ರವು (ವಾಸಿಷ್ಠ ರಾಮಾಯಣ) ಕೇಳಲ್ಪಟ್ಟುದಾಗಿ ಎಷ್ಟುಮಟ್ಟಿಗೆ ಮೂರ್ಖತನವನ್ನು ಹೋಗಲಾಡಿಸುತ್ತದೆಯೋ, ಅಷ್ಟುಮಟ್ಟಿಗೆ ಹೋಗಲಾಡಿಸುವ ಮತ್ತೊಂದು ಗ್ರಂಥವಿಲ್ಲ ॥೧೪॥

ಆದಕಾರಣ, ವೇದಾಂತ ವಾಕ್ಯಗಳಿಗೆಲ್ಲ ವಿಷಯನಾದ ಪರಮಾತ್ಮನೇ ಬಂಧುವಾಗಿರುವ ಪುರುಷನು, ಆನಂದವುಂಟುಮಾಡುವುದಾಗಿಯೂ—ಆಯಾ ಸಂದರ್ಭಗಳಿಗೆ ತಕ್ಕ ಉದಾಹರಣೆಗಳಿಂದ ಸುಂದರವಾಗಿಯೂ—ಪೂರ್ವೋತ್ತರ ವಿರೋಧವಿಲ್ಲದುದಾಗಿಯೂ ಇರುವ ಈ ಗ್ರಂಥವನ್ನು ಸಂಪೂರ್ಣವಾಗಿ ಕೇಳಬೇಕು ॥೧೫॥

ಈ ಪ್ರಪಂಚದಲ್ಲಿ ದಾಟಲಸಾಧ್ಯವಾದ ಯಾವ ವಿಪತ್ತುಗಳಿರುವುವೋ, ಅಧಮವಾದ ಯಾವ ನೀಚ ಜನ್ಮಗಳಿರುವುವೋ, ಅವೆಲ್ಲವೂ—ಕಗ್ಗಲಿಗಿಡದಿಂದ ಮುಳ್ಳುಗಳು ಹುಟ್ಟುವಂತೆ—ಮೂರ್ಖತನದಿಂದ ಹುಟ್ಟುತ್ತವೆ ॥೧೬॥

ಅಯ್ಯಾ! ರಾಮ! ಕೈಲಿ ಶ್ರಾವೆಯನ್ನು ಹಿಡಿದುಕೊಂಡು ಚಂಡಾಲರ ಮನೆಗಳ ಬೀದಿಯಲ್ಲಿ ಭಿಕ್ಷೆಗಾಗಿ ಅಲೆಯುವುದಾದರೂ ಮೇಲೆನ್ನಿಸುವುದು; ಮೂರ್ಖತನದಿಂದ ದುಷ್ಟವಾದ ಬಾಳುಮಾತ್ರ ಮೇಲೆನ್ನಿಸುವುದಿಲ್ಲ ॥೧೭॥

ಘೋರವಾದ ಹಾಳುಬಾವಿಗಳಲ್ಲಿಯೂ ಮರಗಳ ಪೊಟ್ಟರೆಗಳಲ್ಲಿಯೂ ಒಬರಿಗೂ

ಅನ್ಧಕೀಟತ್ವಮೇಕಾನ್ತೇ ನ ಮೌರ್ಖ್ಯಮತಿದುಃಖದಮ್ ||೧೮||
ಇಮಮಾಲೋಕಮಾಸಾದ್ಯ ಮೋಕ್ಷೋಪಾಯಮಯಂ ಜನಃ |
ಅನ್ಧತಾಮೇತಿ ನ ಪುನಃ ಕಶ್ಚಿನ್ಮೋಹತಮಸ್ಯಪಿ ||೧೯||
ತಾವನ್ನಯತಿ ಸಙ್ಕೋಚಂ ತೃಷ್ಣಾ ವೈ ಮಾನವಾಮ್ಬುಜಮ್ |
ಯಾವದ್ವಿವೇಕಸೂರ್ಯಸ್ಯ ನೋದಿತಾ ವಿಮಲಾ ಪ್ರಭಾ ||೨೦||
ಸಂಸಾರದುಃಖಮೋಕ್ಷಾರ್ಥಂ ಮಾದೃಶೈಃ ಸಹ ಬನ್ಧುಭಿಃ |
ಸ್ವರೂಪಮಾತ್ಮನೋ ಜ್ಞಾತ್ವಾ ಗುರುಶಾಸ್ತ್ರಪ್ರಮಾಣತಃ ||೨೧||
ಜೀವನ್ಮುಕ್ತಾಶ್ಚರನ್ತೀಹ ಯಥಾ ಹರಿಹರಾದಯಃ |
ಯಥಾ ಬ್ರಹ್ಮರ್ಷಯಶ್ಚಾನ್ಯೇ ತಥಾ ವಿಹರ ರಾಘವ ||೨೨||
ಅನನ್ತಾನೀಹ ದುಃಖಾನಿ ಸುಖಃ ತೃಣಲವೋಪಮಮ್ |
ನಾತಃ ಸುಖೇಷು ಬಧ್ನೀಯಾತ್ ದೃಷ್ಟಿಂ ದುಃಖಾನುಬನ್ಧಿಷು ||೨೩||
ಯದನನ್ತಮನಾಯಾಸಂ ತತ್ಪದಂ ಸಾರಸಿದ್ಧಯೇ |
ಸಾಧನೀಯಂ ಪ್ರಯತ್ನೇನ ಪುರುಷೇಣ ವಿಜಾನತಾ ||೨೪||
ತಏವ ಪುರುಷಾರ್ಥಸ್ಯ ಭಾಜನಂ ಪುರುಷೋತ್ತಮಾಃ |

ಕಾಣದಂತೆ ಕುರುಡುಹುಳುವಾಗಿರುವುದೇ ಮೇಲು ; ಅತಿ ದುಃಖವನ್ನು ಕೊಡುವ ಮೂರ್ಖತನವು ಮೇಲಲ್ಲ ||೧೮||

ಆದಕಾರಣ ಈ ಮೋಕ್ಷೋಪಾಯಕಥಾರೂಪವಾದ ಬೆಳಕನ್ನು ಹೊಂದಿದರೆ, ಎಂತಹ ಮೋಹಾಂಧಕಾರದಲ್ಲಿಯೂ ಒಬ್ಬ ಮನುಷ್ಯನೂಕೂಡ ಮತ್ತೆ ಅಜ್ಞಾನವೆಂಬ ಅಂಧತೆಯನ್ನು ಹೊಂದುವುದಿಲ್ಲ ||೧೯||

ಮುಖ್ಯವಾಗಿ ವಿವೇಕವೆಂಬ ಸೂರ್ಯನ ನಿರ್ಮಲವಾದ ಪ್ರಭೆಯು ಎಲ್ಲಿಯವರೆಗೆ ಉದಯಿಸುವುದಿಲ್ಲವೋ, ಅಲ್ಲಿಯವರೆಗೂ ಮನುಷ್ಯನೆಂಬ ಕಮಲವನ್ನು ತೃಷ್ಣೆಯು ಸಂಕೋಚಪಡಿಸಿಯೇ ಇರುತ್ತದೆ ||೨೦||

ಆದಕಾರಣ, ಎಲೈ ರಾಮನೆ! ಈ ಸಂಸಾರದುಃಖ ವಿಮೋಚನಕ್ಕೋಸ್ಕರ, ನಮ್ಮಂಥ ಆಪ್ತರಾದ ಬಂಧುಗಳೊಡನೆ, ಗುರುಶಾಸ್ತ್ರಪ್ರಮಾಣಗಳಿಂದ ಆತ್ಮಸ್ವರೂಪವನ್ನು ತಿಳಿದುಕೊಂಡು,—ಜೀವನ್ಮುಕ್ತರಾದ ಹರಿಹರಾದಿಗಳೂ ಇತರರಾದ ಬ್ರಹ್ಮರ್ಷಿಗಳೂ ಇರುವಂತೆ-ನೀನೂ ಈ ಲೋಕದಲ್ಲಿ ವಿಹರಿಸಿಕೊಂಡಿರು ||೨೧-೨೨||

ಈ ಪ್ರಪಂಚದಲ್ಲಾದರೋ—ದುಃಖಗಳು ಅಪಾರವಾಗಿರುವುವು ; ಸುಖವೆಂಬುದು ಹುಲ್ಲಿನ ಚೂರಿನಂತೆ ಅತ್ಯಲ್ಪವಾಗಿರುವುದು. ಆದಕಾರಣ, ದುಃಖಾನುಬಂಧಿಗಳಾದ ಈ ಪ್ರಾಪಂಚಿಕ ಸುಖಗಳಲ್ಲಿ ಎಂದಿಗೂ ದೃಷ್ಟಿಯಿಡಬಾರದು ||೨೩||

ಆದುದರಿಂದ ಜ್ಞಾನಿಯಾದ ಪುರುಷನು, ಪರಮಪುರುಷಾರ್ಥಪ್ರಾಪ್ತಿಗಾಗಿ, ನಾಶರಹಿತವಾಗಿಯೂ ಆಯಾಸವಿಲ್ಲದುದಾಗಿಯೂ ಇರುವ ಆ ಜ್ಞಾನಮಾರ್ಗವನ್ನು ಪ್ರಯತ್ನದಿಂದ ಸಾಧಿಸಬೇಕು ||೨೪||

ಈ ಲೋಕದಲ್ಲಿ ಯಾರ ಮನಸ್ಸು ಲೋಕೋತ್ತರವಾದ ಆ ಪರಮಪದವನ್ನು ಆಶ್ರ

ಅನುತ್ತಮಪದಾಲಮ್ಬಿ ಮನೋ ಯೇಷಾಂ ಗತಜ್ವರಮ್ ॥೨೪॥
ಸರ್ವಭೋಗಾಶನಮಾತ್ರೇಣ ರಾಜ್ಯಾದಿಷು ಸುಖೇಷು ಯೇ ।
ಸನ್ತುಷ್ಟಾದುಷ್ಟಮನಸೋ ವಿದ್ಧಿ ತಾನನ್ಧದರ್ದುರಾನ್ ॥೨೬॥
ಯೇ ಶಠೇಷು ದುರನ್ತೇಷು ದುಷ್ಕೃತಾರಮ್ಭಶಾಲಿಷು ।
ದ್ವಿಷತ್ಸು ಮಿತ್ರರೂಪೇಷು ಭಕ್ತಾತ್ಮೈ ಭೋಗಭೋಗಿಷು ॥೨೭॥
ತೇ ಯಾನ್ತಿ ದುರ್ಗಮಾದ್ದುರ್ಗಂ ದುಃಖಾದ್ದುಃಖಂ ಭಯಾದ್ಭಯಮ್ ।
ನರಕಾನ್ನರಕಂ ಮೂಢಾಃ ಮೋಹಮನ್ಥರಬುದ್ಧಯಃ ॥೨೮॥
ಪರಸ್ಪರವಿನಾಶೋಕ್ತೇಃ ಶ್ರೇಯಸೋಸ್ಥೇ ನ ಕದಾಚನ ।
ಸುಖದುಃಖದಶೇ ರಾಮ ತಟಿತ್ಪ್ರಸರಭಙ್ಗುರೇ ॥೨೯॥
ಯೇ ವಿರಕ್ತಾ ಮಹಾತ್ಮಾನಃ ಸುವಿರಕ್ತಾ ಭವಾದೃಶಾಃ ।
ಪುರುಷಾನ್ ವಿದ್ಧಿ ತಾನ್ ವನ್ದ್ಯಾನ್ ಭೋಗಮೋಕ್ಷೈಕಭಾಜನಾನ್ ॥೩೦॥
ವಿವೇಕಂ ಪರಮಾಶ್ರಿತ್ಯ ವೈರಾಗ್ಯಾಭ್ಯಾಸಯೋಗತಃ ।
ಸಂಸಾರಸರಿತಂ ಘೋರಾಂ ಇಮಾಮಾಪದಮುತ್ತರೇತ್ ॥೩೧॥

ಯಿಸಿ ಸಂತಾಪರಹಿತವಾಗಿರುತ್ತದೆಯೋ, ಅಂತಹ ಪುರುಷಶ್ರೇಷ್ಠರೇ ಪರಮಪುರುಷಾರ್ಥಕ್ಕೆ ತಕ್ಕ ಪಾತ್ರವೆನ್ನಿಸುವರು ॥೨೪॥

ದುಷ್ಟಮನಸ್ಕರಾದ ಯಾರಾದರೆ ರಾಜ್ಯಾದಿ ಸುಖಗಳಲ್ಲಿದ್ದುಗೊಂಡು ವಿಷಯಭೋಗ ಮೃಷ್ಟಾನ್ನಭೋಜನ ಮಾತ್ರದಿಂದಲೇ ತುಷ್ಟರಾಗುವರೋ, ಅವರನ್ನು ಕುರುಡು ಕಪ್ಪೆಗಳೆಂಬುದಾಗಿ ನೀನು ತಿಳಿಯಬೇಕು ॥೨೬॥

ವಂಚಕರಾಗಿಯೂ ಪರಿಣಾಮದಲ್ಲಿ ಕೆಟ್ಟವರಾಗಿಯೂ ದುಷ್ಕಾರ್ಯಮಾಡುವವರಾಗಿಯೂ ಪ್ರಾಪಂಚಿಕಭೋಗಗಳನ್ನನುಭವಿಸತಕ್ಕವರಾಗಿಯೂ ಇರುವ ಮಿತ್ರರೆಂಬ ಶತ್ರುಗಳಲ್ಲಿ ಯಾರು ಆಸಕ್ತರಾಗಿರುವರೋ, ಅಂತಹ ಅಜ್ಞಾನವ್ಯಾಪ್ತಮತಿಗಳಾದ ಮೂಢರು-ಒಂದು ಸಂಕಟದ ದೆಸೆಯಿಂದ ಮತ್ತೊಂದು ಸಂಕಟವನ್ನು ಹೊಂದುವರು; ಒಂದು ದುಃಖದದೆಸೆಯಿಂದ ಮತ್ತೊಂದು ದುಃಖವನ್ನು ಹೊಂದುವರು; ಒಂದು ಭಯದ ದೆಸೆಯಿಂದ ಮತ್ತೊಂದು ಭಯವನ್ನು ಹೊಂದುವರು ॥೨೭-೨೮॥

ಈ ಪ್ರಪಂಚದಲ್ಲಿ ಸುಖದಿಂದ ದುಃಖಕ್ಕೂ ದುಃಖದಿಂದ ಸುಖಕ್ಕೂ ನಾಶವುಂಟೆಂದು ಹೇಳಿರುವಕಾರಣ, ಪುರುಷನೆಂದಿಗೂ ಶಾಂತಿಯುಳ್ಳಿರುವುದಕ್ಕಾಗಲಾರದು. ಅಯ್ಯಾ! ರಾಮ! ಪುರುಷನಿಗೆ ಸುಖದುಃಖಾವಸ್ಥೆಗಳೆರಡೂ ಮಿಂಚು ಹೊಳೆಯುವಂತೆ ಕ್ಷಣಭಂಗುರವಾದವುಗಳು ॥೨೯॥

ನಿನ್ನಂತೆ ವಿರಕ್ತರಾಗಿ ವಿವೇಕಿಗಳಾಗಿರುವ ಮಹಾತ್ಮರಾರಿವರೋ, ಅವರೇ ಭೊಗಕ್ಕೂ ಮೋಕ್ಷಕ್ಕೂ ಮುಖ್ಯಪಾತ್ರರಾದ ನಮಸ್ಕಾರಾರ್ಹರಾದ ಪುರುಷರೆಂದು ತಿಳಿ ॥೩೦॥

ವೈರಾಗ್ಯಾಭ್ಯಾಸರೂಪವಾದುಪಾಯದಿಂದ ಉತ್ತಮವಾದ ವಿವೇಕವನ್ನು ಹೊಂದಿ, ಈ ಘೋರವಾದ ಸಂಸಾರನದಿಯೆಂಬ ವಿಪತ್ತನ್ನು ದಾಟಬೇಕು ॥೩೧॥

ನ ಸ್ವಪ್ತವ್ಯಂ ಚ ಸಂಸಾರಮಾಯಾಸ್ವಿಹ ವಿಜಾನತಾ ।
ವಿಷಮೋರ್ಜನಸಮ್ಮೋಹದಾಯಿನೀಷು ವಿವೇಕಿನಾ ॥೩೦॥
ಸಂಸಾರಮಿಮಮಾಸಾದ್ಯ ಯಸ್ತಿಷ್ಠತ್ಯವಹೇಲಯಾ ।
ಜ್ವಲಿತಸ್ಯ ಗೃಹಸ್ಯೋಚ್ಚೈಃ ಶೇತೇ ತಾರ್ಣಸ್ಯ ಸಂಸ್ತರೇ ॥೩೩॥
ಯತ್ ಪ್ರಾಪ್ಯ ನ ನಿವರ್ತನ್ತೇ ಯದಾಸಾದ್ಯ ನ ಶೋಚತೇ ।
ತತ್ ಪದಂ ಶೇಮುಷೀಲಭ್ಯಂ ಅಸ್ತ್ಯೇವಾತ್ರ ನ ಸಂಶಯಃ ॥೩೪॥
ನಾಸ್ತಿ ಚೇತ್ ತದ್ವಿಚಾರೇಣ ದೋಷಃ ಕೋ ಭವತಾಂ ಭವೇತ್ ।
ಅಸ್ತಿ ಚೇತ್ ತತ್ ಸಮುತ್ತೀರ್ಣಾಃ ಭವಿಷ್ಯಥ ಭವಾರ್ಣವಾತ್ ॥೩೫॥
ಪ್ರವೃತ್ತಿಃ ಪುರುಷಸ್ಯೇಹ ಮೋಕ್ಷೋಪಾಯವಿಚಾರಣೇ ।
ಯದಾ ಭವತ್ಯಾಶು ತದಾ ಮೋಕ್ಷಭಾಗೀ ಸಉಚ್ಯತೇ ॥೩೬॥
ಅನಪಾಯಿ ನಿರಾಶಙ್ಕಂ ಸ್ವಾಸ್ಥ್ಯಂ ವಿಗತವಿಭ್ರಮಮ್ ।
ನ ವಿನಾ ಕೇವಲೀಭಾವಾತ್ ವಿದ್ಯತೇ ಭುವನತ್ರಯೇ ॥೩೭॥
ತತ್ಪ್ರಾಪ್ತಾವುತ್ತಮಪ್ರಾಪ್ತೌ ನ ಕ್ಲೇಶಉಪಜಾಯತೇ ।
ನ ಧನಾನ್ಯುಪಕುರ್ವನ್ತಿ ನ ಮಿತ್ರಾಣಿ ನ ಬಾನ್ಧವಾಃ ॥೩೮॥

ಈ ಲೋಕದಲ್ಲಿ ವಿವೇಕಿಯಾದ ಪ್ರಾಜ್ಞನು, ವಿಷದಂತೆ ಹೆಚ್ಚಾಗಿ ಮೋಹಕೊಡ ತಕ್ಕ ಸಂಸಾರವೆಂಬ ಕಪಟೋಪಾಯಗಳಲ್ಲಿ ಎಂದಿಗೂ ಮಲಗಬಾರದು ॥೩೨॥

ಯಾವ ಮನುಷ್ಯನು ಈ ಸಂಸಾರಮಾರ್ಗವನ್ನು ಹೊಂದಿದ್ದರೂ ಇದರಲ್ಲಿ ಉಪೇಕ್ಷೆ ಯಿಂದಿರುವನೋ, ಅವನು ಉರಿಯುತ್ತಿರುವ ಹುಲ್ಲುಮನೆಯ ಹಾಸಿಗೆಯಮೇಲೆ ಮಲ ಗುವನು ॥೩೩॥

ಯಾವುದನ್ನು ಹೊಂದಿದಮೇಲೆ ಹಿಂದಿರುಗುವುದಿಲ್ಲವೋ—ಯಾವುದನ್ನು ಸೇರಿದ ಮೇರೆ ಮರಳಿ ದುಃಖಪ್ರಾಪ್ತಿಯಿಲ್ಲವೋ,--ಅಂತಹ ಜ್ಞಾನೈಕಲಭ್ಯವಾದ ಪರಮಪದವೊಂ ದಿದ್ದೇ ಇರುವುದು; ಈ ವಿಷಯದಲ್ಲಿ ಸಂಶಯವಿಲ್ಲ ॥೩೪॥

ಒಂದುವೇಳೆ ಅದಿರಲಿಲ್ಲವಾದರೂ, ಅದನ್ನು ವಿಚಾರ ಮಾಡುವುದರಿಂದ ನಿಮಗಾ ಗುವ ದೋಷವೇನು? ಅದಿದ್ದುಬಿಟ್ಟರೋ-ಸಂಸಾರವೆಂಬ ಸಮುದ್ರದಿಂದ ಪಾರಾಗುವಿರಿ॥

ಈ ಮೋಕ್ಷೋಪಾಯವನ್ನು ವಿಚಾರಮಾಡುವ ವಿಷಯದಲ್ಲಿ ಯಾವಾಗ ಪುರುಷನಿಗೆ ಪ್ರವೃತ್ತಿಯುಂಟಾಗುತ್ತದೆಯೋ, ಆಗಲೇ ಶೀಘ್ರವಾಗಿ ಅವನು ಮೋಕ್ಷಕ್ಕೆ ಪಾತ್ರನಾದ ನೆಂದು ಹೇಳಲ್ಪಡುವನು ॥೩೬॥

ದೇಹೇಂದ್ರಿಯಾದಿಗಳೊಂದೂ ಇಲ್ಲದಂತೆ ಮಾಡಿ ಮೋಕ್ಷವನ್ನುಂಟುಮಾಡುವ ಈ ಶಾಸ್ತ್ರದಿಂದ ಫಲವೇನೆಂದು ಆಶಂಕಿಸಬಾರದು; ಸ್ವರ್ಗಾದಿಗಳಿಗಿಂತಲೂ ಮೋಕ್ಷಸುಖ ವತ್ಯುತ್ತಮವಾದುದು; ಇದಕ್ಕೆಂದಿಗೂ ನಾಶವಿಲ್ಲ; ಇದರಲ್ಲಿ ಯಾವ ಶಂಕೆಯೂ ಇಲ್ಲ; ಯಾವ ವಿಧವಾದ ಭ್ರಾಂತಿಯೂ ಇಲ್ಲ. ಇಂತಹ ಸ್ವಾಸ್ಥ್ಯವು ಈ ಕೈವಲ್ಯಹೊರತು ಮತ್ತಾ ವುದರಿಂದಲೂ ಲೋಕತ್ರಯದಲ್ಲಿಯೂ ಸಿಕ್ಕುವುದಿಲ್ಲ ॥೩೭॥

ಆ ವಿಚಾರದಲ್ಲಿ ಪ್ರವೃತ್ತಿಯುಂಟಾಗಿಬಿಟ್ಟರೆ, ಉತ್ತಮವಾದ ಮೋಕ್ಷವನ್ನು ಹೊಂ ದುವುದರಲ್ಲಿ ಕ್ಲೇಶವುಂಟಾಗುವುದಿಲ್ಲ. ಆ ಮೋಕ್ಷಪ್ರಾಪ್ತಿಯ ವಿಷಯದಲ್ಲಿ—ಧನಗಳೂ

ನ ಹಸ್ತಪಾದಚಲನಂ ನ ದೇಶಾನ್ತರಸಙ್ಗಮಃ |
ನ ಕಾಯಕ್ಲೇಶವೈಧುರ್ಯಂ ನ ತೀರ್ಥಾಯತನಾಶ್ರಮಾಃ ||೩೯||
ಪುರುಷಾರ್ಥೈಕಸಾಧ್ಯೇನ ವಾಸನೈಕಾರ್ಥಕರ್ಮಣಾ |
ಕೇವಲಂ ತನ್ಮನೋಮಾತ್ರಜಯೇನಾಸಾದ್ಯತೇ ಫಲಮ್ ||೪೦||
ವಿವೇಕಮಾತ್ರಸಾಧ್ಯಂ ತತ್ ವಿಚಾರೈಕಾನ್ತನಿಶ್ಚಯಮ್ |
ತ್ಯಜತಾ ದುಃಖಜಾಲಾನಿ ನರೇಣೈತದವಾಪ್ಯತೇ ||೪೧||
ಸುಖಸೇವ್ಯಾಸನಸ್ಥೇನ ತದ್ವಿಚಾರಯತಾ ಸ್ವಯಮ್ |
ನ ಶೋಚ್ಯತೇ ಪದಂ ಪ್ರಾಪ್ಯ ನ ಸ ಭೂಯೋಭಿಜಾಯತೇ ||೪೨||
ತತ್ ಸಮಸ್ತಸುಖಾಸಾರಸೀಮಾನ್ತಂ ಸಾಧವೋ ವಿದುಃ |
ತದನುತ್ತಮನಿಸ್ಯನ್ದಂ ಪರಮಾಹೂರಸಾಯನಮ್ ||೪೩||
ಕ್ಷಯಿತ್ವಾತ್ ಸಸ್ವಭಾವಾನಾಂ ಸ್ವರ್ಗಮಾನುಷ್ಯಯೋರ್ದ್ವಯೋಃ |
ಸುಖಂ ನಾಸ್ತ್ಯೇವ ಸಲಿಲಂ ಮೃಗತೃಷ್ಣಾಸ್ವಿವೈತಯೋಃ ||೪೪||

ಸಹಾಯವಾಗುವುದಿಲ್ಲ; ಮಿತ್ರರೂ ಆಗುವುದಿಲ್ಲ; ಬಂಧುಗಳೂ ಆಗುವುದಿಲ್ಲ; ಕರಚರಣಾದ್ಯವಯವವ್ಯಾಪಾರವೂ ಆಗುವುದಿಲ್ಲ; ದೇಶಾಂತರಪ್ರಾಪ್ತಿಯೂ ಆಗುವುದಿಲ್ಲ; ಉಪವಾಸಾದಿ ಕಾಶಕ್ಲೇಶಗಳಿಂದ ಸಂಕಟಪಡುವಿಕೆಯೂ ಸಹಾಯವಾಗುವುದಿಲ್ಲ; ಪುಣ್ಯತೀರ್ಥಗಳೂ ದೇವಾಲಯಗಳೂ ಪುಣ್ಯಾಶ್ರಮಗಳೂ ಆಗುವುದಿಲ್ಲ. ಮತ್ತೇನೆಂದರೆ:—ನಮ್ಮ ಪುರುಷಪ್ರಯತ್ನವೊಂದರಿಂದಲೇ ಸಾಧ್ಯವಾಗಿಯೂ ದೃಢವಾದ ಶುಭವಾಸನೆಯೊಂದೇ ಮುಖ್ಯಕಾರ್ಯವುಳ್ಳದಾಗಿಯೂ ಇರುವ ಮನೋಜಯಮಾತ್ರದಿಂದ ಆ ಉತ್ತಮಪದವು ಹೊಂದಲ್ಪಡುವುದು ||೩೯-೪೦||

ಆದಕಾರಣ, ದುಃಖಕರವಾದ ವಿಷಯಸಮೂಹಗಳನ್ನೆಲ್ಲ ಬಿಟ್ಟಿರುವ ಪುರುಷನು, ಕೇವಲ ವಿವೇಕ ಸಾಧ್ಯವಾಗಿಯೂ ಶ್ರವಣ ಮನನಾದಿ ವಿಚಾರಗಳಿಂದಮಾತ್ರ ನಿಶ್ಚಯಿಸತಕ್ಕದಾಗಿಯೂ ಇರುವ ಈ ಮೋಕ್ಷಸುಖವನ್ನು ಹೊಂದುವನು ||೪೧||

ಈ ರೀತಿಯಾಗಿ ಆ ಪರಮಪದವನ್ನು ಹೊಂದಿದವನು, ಆಯಾಸವಿಲ್ಲದಂತೆ ಸುಖದಿಂದ ಸೇವಿಸಬಹುದಾದ ಆಸನದಲ್ಲಿದ್ದುಗೊಂಡು, ತತ್ವಲ್ಲಿ ತಾನೇ ವಿಚಾರಮಾಡುತ, ಪುನಃ ಶೋಕಭಾಗಿಯಾಗುವುದಿಲ್ಲ; ಅವನು ಮತ್ತೆ ಹುಟ್ಟುವುದಿಲ್ಲ ||೪೨||

ಸಾಧುಗಳಾದವರು—ಅದನ್ನು ಸಮಸ್ತವಾದ ಸುಖಸಂಪಾತಗಳ ಸೀಮೆಯೆಂದು ಹೇಳುವರು; ಮತ್ತು ಸರ್ವೋತ್ತಮವಾಗಿ ಸರ್ವದಾ ಸ್ರವಿಸುತ್ತಿರುವ ರಸಾಯನವೆಂದೂ ಹೇಳುವರು ||೪೩||

ಸ್ವರ್ಗಲೋಕ ಮನುಷ್ಯಲೋಕಗಳೆರಡರಲ್ಲಿಯೂ ಸಮಸ್ತ ಪದಾರ್ಥಗಳೂ ನಾಶಹೊಂದತಕ್ಕುವುಗಳಾಗಿರುವುದರಿಂದ—ಬಿಸಿಲ್ಗುದುರೆಯಲ್ಲಿ ನೀರಿನಂತೆ ಇವುಗಳಲ್ಲಿ ಸುಖವಿಲ್ಲವೇ ಇಲ್ಲ ||೪೪||

ಅತೋ ಮನೋಜಯಶ್ಚಿನ್ತ್ಯಃ ಶಮಸನ್ತೋಷಸಾಧನಃ |
ಅನನ್ತಸಮಸಂಯೋಗಃ ತಸ್ಮಾದಾನನ್ದ ಆಪ್ಯತೇ ||೪೫||
ತಿಷ್ಠತಾ ಗಚ್ಛತಾ ಚೈವ ಪತತಾ ಭ್ರಮತಾ ತಥಾ |
ರಕ್ಷಸಾ ದಾನವೇನಾಪಿ ದೇವೇನ ಪುರುಷೇಣ ವಾ ||೪೬||
ಮನಃಪ್ರಶಮನೋದ್ಭೂತಂ ತತ್ ಪ್ರಾಪ್ಯಂ ಪರಮಂ ಸುಖಮ್ |
ವಿಕಾಸಿಶಮಪುಷ್ಪಸ್ಯ ವಿವೇಕೋಚ್ಚತರೋಃ ಫಲಮ್ ||೪೭||
ವ್ಯವಹಾರಪರೇಣಾಪಿ ಕಾರ್ಯಬೃನ್ದಮವಿನ್ದತಾ |
ಭಾನುನೇವಾಮ್ಬರಸ್ಥೇನ ನೋಜ್ಝ್ಯತೇ ನ ಚ ವಾಞ್ಛ್ಯತೇ ||೪೮||
ಮನಃ ಪ್ರಶಾನ್ತಮತ್ಯಚ್ಛಂ ವಿಶ್ರಾನ್ತಂ ವಿಗತಭ್ರಮಮ್ |
ಅನೀಹಂ ವಿಗತಾಭೀಷ್ಟಂ ನಾಭಿವಾಞ್ಛತಿ ನೋಜ್ಝತಿ ||೪೯||
ಮೋಕ್ಷದ್ವಾರೇ ದ್ವಾರಪಾಲಾನ್ ಇಮಾಞ್ಛೃಣು ಯಥಾಕ್ರಮಮ್ |
ಯೇಷಾಮೇಕತಮಾಸಕ್ತ್ಯಾ ಮೋಕ್ಷದ್ವಾರಂ ಪ್ರವಿಶ್ಯತೇ ||೫೦||

ಆದಕಾರಣ, ಶಾಂತಿಸುಖಹೇತುವಾದ ಮನೋಜಯವನ್ನು ಕುರಿತು ಪರ್ಯಾಲೋಚಿಸಬೇಕು. ಆದರಿಂದ ಅನಂತನಾದ ಪರಮಾತ್ಮನಲ್ಲಿ ಸಾಮರಸ್ಯರೂಪವಾದ ಆನಂದವು ಹೊಂದಲ್ಪಡುತ್ತದೆ ||೪೫||

ಶಾಂತಿಯೆಂಬ ಪುಷ್ಪವರಳಿರುವ ವಿವೇಕವೆಂಬ ದೊಡ್ಡಗಿಡಕ್ಕೆ ಫಲವಾದ ಆ ಪರಮಸುಖವು, ಮನಶ್ಶಾಂತಿಯಿಂದುದ್ಭವಿಸಿ ಅನುಭವಿಸತಕ್ಕುದಾಗಿರುವುದು ; ಇಷ್ಟೇಹೊರತು, ಶರೀರಶ್ರಮಾದಿನಿಯಮವೂ ಅಧಿಕಾರಿಯೋಗ್ಯತಾನಿಯಮವೂ ಇಲ್ಲ. ನಿಂತಿರುವವನಾಗಲಿ ನಡೆಯುತಿರುವವನಾಗಲಿ ಬೀಳುತಿರುವವನಾಗಲಿ ಸುತ್ತುತಿರುವನಾಗಲಿ—ಇದನ್ನು ಹೊಂದಬಹುದು; ಮತ್ತು ರಾಕ್ಷಸನಾಗಲಿ ದಾನವನಾಗಲಿ ದೇವನಾಗಲಿ ಮನುಷ್ಯನಾಗಲಿ—ಯಾರುಬೇಕಾದರೂ ಹೊಂದಬಹುದು ||೪೬—೪೭||

ಹೀಗೆ ಹೊಂದಿದಮೇಲೆ ಲೋಕವ್ಯವಹಾರವನ್ನು ನಡೆಯಿಸುತಿದ್ದರೂ ಆದರ ಫಲವನ್ನನುಭವಿಸದಿರುವವನಾಗಿ ಪುರುಷನು—ಅಂತರಿಕ್ಷದಲ್ಲಿರುವ ಸೂರ್ಯನು ಅಂತರಿಕ್ಷವನ್ನೋಪಾದಿಯಲ್ಲಿ—ಆ ಪದವನ್ನು ಬಿಡುವುದೂ ಇಲ್ಲ; ಯಾವುದನ್ನೂ ಅಪೇಕ್ಷಿಸುವುದೂ ಇಲ್ಲ ||೪೮||

ಆದರೆ ಮನಸ್ಸಿರುವಾಗ ಇಚ್ಛಾದಿಗಳು ಹುಟ್ಟದಿರುವುದು ಹೇಗೆಂದು ಶಂಕಿಸಬಾರದು. ಕೇವಲ ಶಾಂತವಾಗಿ ಅತಿ ನಿರ್ಮಲವಾಗಿ ಭ್ರಾಂತಿರಹಿತವಾಗಿ ನಿಷ್ಕಾಮವಾಗಿ ಅಭೀಷ್ಟ (ಬೇಕಾದವಸ್ತು) ರಹಿತವಾಗಿರುವ ಮನಸ್ಸು—ತಾನೊಂದನ್ನಪೇಕ್ಷಿಸುವುದೂ ಇಲ್ಲ; ಬಿಡುವುದೂ ಇಲ್ಲ ||೪೯||

ನಾನು ಹಿಂದೆ ಹೇಳಿದ ಮೋಕ್ಷದ್ವಾರದಲ್ಲಿರುವ ದ್ವಾರಪಾಲಕರನ್ನು ಯಥಾಕ್ರಮವಾಗಿ ವಿವರಿಸುವೆನು ; ಕೇಳುವವನಾಗು. ಇವರಲ್ಲಿ ಒಬ್ಬನನ್ನಾಶ್ರಯಿಸಿದರೂ ಮೋಕ್ಷದ್ವಾರದಲ್ಲಿ ಪ್ರವೇಶವುಂಟಾಗುವುದು ||೫೦||

ಸುಖದೋಷದಶಾದೀರ್ಘಾ ಸಂಸಾರಮರುಮಣ್ಡಲೀ ।
ಜನ್ತೋಃ ಶೀತಲತಾಮೇತಿ ಶೀತರಶ್ಮಿಸಮಪ್ರಭಾ ॥೫೧॥
ಶಮೇನಾಸಾದ್ಯತೇ ಶ್ರೇಯಃ ಶಮೋ ಹಿ ಪರಮಂ ಪದಮ್ ।
ಶಮಃ ಶಿವಃ ಶಮಃ ಶಾನ್ತಿಃ ಶಮೋ ಭ್ರಾನ್ತಿನಿವಾರಣಮ್ ॥೫೨॥
ಪುಂಸಃ ಪ್ರಶಮತೃಪ್ತಸ್ಯ ಶೀತಲಾಚ್ಛತರಾತ್ಮನಃ ।
ಶಮಭೂಷಿತಚಿತ್ತಸ್ಯ ಶತ್ರುರಪ್ಯೇತಿ ಮಿತ್ರತಾಮ್ ॥೫೩॥
ಶಮಚನ್ದ್ರಮಸಾ ಯೇಷಾಂ ಆಶಯಃ ಸಮಲಙ್ಕೃತಃ ।
ಕ್ಷೀರೋದಾನಾಮಿವೋದೇತಿ ತೇಷಾಂ ಪರಮಶುದ್ಧತಾ ॥೫೪॥
ಹೃತ್ಕುಶೇಶಯಕೋಶೇಷು ಯೇಷಾಂ ಶಮಕುಶೇಶಯಮ್ ।
ಸದಾ ವಿಕಸಿತಂ ತೇ ಹಿ ದ್ವಿಹೃತ್ಪದ್ಮಾಃ ಸಮಾಹರೇಃ ॥೫೫॥
ಶಮಶ್ರೀಃ ಶೋಭತೇ ಯೇಷಾಂ ಮುಖಾದಾವಕಳಙ್ಕಿತೇ ।
ತೇ ಕುಲೀನೇನ್ದವೋ ವನ್ದ್ಯಾಃ ಸೌನ್ದರ್ಯವಿಜಿತೇನ್ದ್ರಿಯಾಃ ॥೫೬॥

ಈ ಸಂಸಾರವೆಂಬುದೇ ಒಂದು ದೊಡ್ಡ ಮರುಭೂಮಿಯು; ಇದರಲ್ಲಿ ಸುಖಾಶೆಯೆಂಬ ತೃಷ್ಣೆಯಿರುವುದರಿಂದ ಇದು ಮತ್ತೂ ದೀರ್ಘವಾಗುವುದು. ಇಂತಹ ಸಂಸಾರ ಮರುಭೂಮಿಯೂ ಕೂಡ, ಶಾಂತಿಯಿಂದ ಪ್ರಾಣಿಗಳಿಗೆ ಚಂದ್ರನಂತೆ ತಣ್ಣಗಾಗುವುದು॥

ಈ ಶಮದಿಂದ ಉತ್ತಮವಾದ ಶ್ರೇಯಸ್ಸು ಹೊಂದಲ್ಪಡುವುದು ; ಈ ಶಮವೇ ಪರಮ ಪದವೆನ್ನಿಸುವುದು ; ಶಮವೇ ಮಂಗಳಕರವು ; ಶಮವೇ ಸರ್ವದುಃಖಶಾಂತಿಕರವಾದುದು ; ಅಜ್ಞಾನನಿವಾರಣೆಮಾಡತಕ್ಕುದೂ ಶಮವೇ ॥೫೨॥

ಶಮದಿಂದ ತೃಪ್ತನಾಗಿಯೂ ದಯಾರ್ದ್ರವಾದ ನಿರ್ಮಲ ಸ್ವಭಾವವುಳ್ಳವನಾಗಿಯೂ ಶಾಂತಿಯಿಂದಲಂಕರಿಸಲ್ಪಟ್ಟ ಚಿತ್ತವುಳ್ಳವನಾಗಿಯೂ ಇರುವ ಪುರುಷನಿಗೆ, ಶತ್ರುವೂ ಮಿತ್ರನಾಗುವನು ॥೫೩॥

ಯಾರ ಹೃದಯವು ಶಮವೆಂಬ ಚಂದ್ರನಿಂದ ಅಲಂಕರಿಸಲ್ಪಡುತ್ತದೆಯೋ, ಅವರಿಗೆ—ಕ್ಷೀರಸಮುದ್ರಗಳಿಗೋಪಾದಿಯಲ್ಲಿ—ಅತ್ಯಂತವಾಗಿ (೧) ಪರಿಶುದ್ಧತೆಯುಂಟಾಗುವುದು॥೫೪॥

ಯಾವ ಸತ್ಪುರುಷರ ಹೃದಯಕಮಲಗಳಲ್ಲಿ ಶಾಂತಿಯೆಂಬ ಕಮಲವು ವಿಕಸಿತವಾಗಿರುತ್ತದೆಯೋ, ಅವರು (೨) ಎರಡು ಹೃದಯಕಮಲವುಳ್ಳವರಾಗಿ ವಿಷ್ಣುವಿಗೆ ಸಮಾನರಾಗುವರು ॥೫೫॥

ಯಾವ ಪುರುಷರ ನಿಷ್ಕಳಂಕವಾದ ಮುಖಾದ್ಯವಯವಗಳಲ್ಲಿ ಶಾಂತಿಸಮೃದ್ಧಿಯು ಪ್ರಕಾಶಿಸುತ್ತದೆಯೋ, ಸದ್ಗುಣಸಂಪತ್ತಿಯಿಂದ ಇಂದ್ರಿಯಗಳನ್ನು ವಶಪಡಿಸಿಕೊಂಡಿರುವ ಅಂತಹ ಮಹಾತ್ಮರು ಸರ್ವರಿಗೂ ವಂದನೀಯರು ॥೫೬॥

---

(೧) ಪರಿಶುದ್ಧತೆ = ಮನುಷ್ಯಪರವಾಗಿ ಪರಿಶುದ್ಧತ್ವ, ಕ್ಷೀರಸಮುದ್ರಪರವಾಗಿ ಶುಭ್ರತ್ವ.

(೨) ವಿಷ್ಣುವಿಗೆ ಹೃದಯಕಮಲವೊಂದು—ಬ್ರಹ್ಮನ ಉತ್ಪತ್ತಿಕಮಲವೊಂದು—ಎರಡು ಹೃದಯಕಮಲಗಳಾದುವು; ಪುರುಷರಿಗೆ ಹೃದಯಕಮಲವೊಂದು—ಶಮವೆಂಬ ಕಮಲವೊಂದು—ಎರಡು ಕಮಲಗಳಾದುವು.

ತ್ರೈಲೋಕ್ಯೋದರವರ್ತಿನ್ಯೋ ನಾನನ್ದಾಯ ತಥಾ ಶ್ರಿಯಃ ।
ಸಾಮ್ರಾಜ್ಯಸಮ್ಪತ್ಪ್ರತಿಮಾಃ ಯಥಾ ಶಮವಿಭೂತಯಃ ॥೫೭॥
ಯಾನಿ ದುಃಖಾನಿ ಯಾ ತೃಷ್ಣಾ ದುಸ್ಸಹಾಯೇ ದುರಾಧಯಃ ।
ತತ್ ಸರ್ವಂ ಶಾನ್ತಚೇತಸ್ಸು ತಮೋಽರ್ಕೇಷ್ವಿವ ನಶ್ಯತಿ ॥೫೮॥
ಮನೋ ಹಿ ಸರ್ವಭೂತಾನಾಂ ಪ್ರಸಾದಮಧಿಗಚ್ಛತಿ ।
ನ ತಥೇನ್ದೋರ್ಯಥಾ ಶಾನ್ತೇ ಜನೇ ಜನಿತಕೌತುಕಮ್ ॥೫೯॥
ಶಮಶಾಲಿನಿ ಸೌಹಾರ್ದವತಿ ಸರ್ವೇಷು ಜನ್ತುಷು ।
ಸುಜನೇ ಪರಮಂ ತತ್ತ್ವಂ ಸ್ವಯಮೇವ ಪ್ರಸೀದತಿ ॥೬೦॥
ಮಾತರೀವ ಪರಂ ಯಾನ್ತಿ ವಿಷಮಾಣಿ ಮೃದೂನಿ ಚ ।
ವಿಶ್ವಾಸಮಿಹ ಭೂತಾನಿ ಸರ್ವಾಣಿ ಶಮಶಾಲಿನಿ ॥೬೧॥
ನ ರಸಾಯನಪಾನೇನ ನ ಲಕ್ಷ್ಮ್ಯಾಲಿಙ್ಗನೇನ ಚ ।
ತಥಾ ಸುಖಮವಾಪ್ನೋತಿ ಶಮೇನಾನ್ತರ್ಯಥಾ ಮನಃ ॥೬೨॥

---

(೧) ಸಾಮ್ರಾಜ್ಯ ಸಂಪತ್ಸಮಾನವಾದ ಶಮಸಂಪತ್ತಿಗಳು ಹೇಗೆ ಆನಂದಹೇತುಗಳಾಗುವುವೋ, ಅಷ್ಟುಮಟ್ಟಿಗೆ ಮೂರುಲೋಕದಲ್ಲಿಯೂ ತುಂಬಿರುವ ಐಶ್ವರ್ಯವೂ ಕೂಡ ಆಗುವುದಿಲ್ಲ ॥೫೭॥

ಈ ಪ್ರಪಂಚದಲ್ಲಿ ಯಾವ ದುಃಖಗಳೂ ಯಾವ ತೃಷ್ಣೆಯೂ ಸಹಿಸಲಸಾಧ್ಯವಾದ ಯಾವ ದುರ್ವ್ಯಸನಗಳೂ ಇರುವುವೋ, ಅವೆಲ್ಲವೂ ಸೂರ್ಯನಲ್ಲಿ ಅಂಧಕಾರದಂತೆ—ಶಾಂತಹೃದಯನಲ್ಲಿ ನಾಶಹೊಂದುವುವು ॥೫೮॥

ಸಮಸ್ತ ಭೂತಗಳ ಮನಸ್ಸೂ—ಶಾಂತನಾದ ಪುರುಷನಲ್ಲಿ ಕುತೂಹಲವುಳ್ಳದಾಗಿ ಹೇಗೆ ಸಂತೋಷ ಹೊಂದುತ್ತದೆಯೋ, ಅಷ್ಟುಮಟ್ಟಿಗೆ ಚಂದ್ರನಲ್ಲಿಯೂ ಹೊಂದುವುದಿಲ್ಲ ॥೫೯॥

ಶಾಂತಿಯುಕ್ತನಾಗಿ ಸರ್ವಪ್ರಾಣಿಗಳಲ್ಲಿಯೂ ಸೌಹಾರ್ದವುಳ್ಳವನಾದ ಸತ್ಪುರುಷನಲ್ಲಿ, ಆ ಪರತತ್ವವು ತಾನೇ ಪ್ರಕಾಶಹೊಂದುತ್ತದೆ ॥೬೦॥

ಈ ಲೋಕದಲ್ಲಿ ಕ್ರೂರಗಳಾಗಲಿ—ಅಥವಾ ಮೃದುಗಳಾಗಲಿ ಸರ್ವಭೂತಗಳೂ, ಶಾಂತಿಯುಕ್ತನಾದವನಲ್ಲಿ ತಾಯಿಯಂತೆ ಹೆಚ್ಚಾಗಿ ನಂಬುಗೆಯಿಡುತ್ತವೆ ॥೬೧॥

ಮನುಷ್ಯರ ಮನಸ್ಸು—ಶಾಂತಿಯಿಂದ ಹೇಗೆ ಅಂತರವಾದ ಆನಂದವನ್ನು ಪಡೆಯುತ್ತದೆಯೋ, ಹಾಗೆ—ರಸಾಯನ ಸೇವನೆಯಿಂದಲೂ ಪಡೆಯುವುದಿಲ್ಲ; ಲಕ್ಷ್ಮಿಯ ಆಲಿಂಗನದಿಂದಲೂ ಪಡೆಯುವುದಿಲ್ಲ ॥೬೨॥

---

(೧) ಸಾಮ್ರಾಜ್ಯಸಂಪತ್ತೇ ಸಮಾನವಾಗಿ ಉಳ್ಳವು-ಅಂದರೆ ಸಾಮ್ರಾಜ್ಯಸಂಪತ್ತು ಆಕಾರದಲ್ಲಿ ಈ ಶಮಸಂಪತ್ತಿಗೆ ಸಮಾನವಾಗಿ ಕಾಣುವುದೆಂದೂ ಗುಣದಲ್ಲಿ ಶಮಸಂಪತ್ತೇ ಅತ್ಯುತ್ಕೃಷ್ಟವೆಂದೂ ಭಾವವು.

ಸರ್ವಾಧಿವ್ಯಾಧಿಕಲಿತಂ ಕ್ರಾನ್ತಂ ತೃಷ್ಣಾವರತ್ರಯಾ ।
ಮನಃ ಶಮಾಮೃತಾಸೇಕೈಃ ಸಮಾಶ್ವಾಸಯ ರಾಘವ ॥೬೩॥
ಯತ್ ಕರೋಷಿ ಯದಶ್ನಾಸಿ ಶಮಶೀತಲಯಾ ಧಿಯಾ ।
ತತ್ಪ್ರತಿಸ್ವದತೇ ಸ್ವಾದು ನೇತರತ್ ತಾತ ಮಾನಸೇ ॥೬೪॥
ಶಮಾಮೃತರಸಾಚ್ಛನ್ನಂ ಮನೋ ಯಾಮೇತಿ ನಿರ್ವೃತಿಮ್ ।
ಛಿನ್ನಾನ್ಯಪಿ ತಯಾಙ್ಗಾನಿ ಮನ್ಯೇ ರೋಹನ್ತಿ ರಾಘವ ॥೬೫॥
ನ ಪಿಶಾಚಾನ ರಕ್ಷಾಂಸಿ ನ ದೈತ್ಯಾನ ಚ ಶತ್ರವಃ ।
ನ ಚ ವ್ಯಾಘ್ರಭುಜಙ್ಗಾವಾ ದ್ವಿಷನ್ತಿ ಶಮಶಾಲಿನಮ್ ॥೬೬॥
ಸುಸನ್ನದ್ಧಸಮಸ್ತಾಙ್ಗಂ ಪ್ರಶಮಾಮೃತವರ್ಮಣಾ ।
ವೇಧಯನ್ತಿ ನ ದುಃಖಾನಿ ಶರಾವಜ್ರಶಿಲಾಮಿವ ॥೬೭॥
ನ ತಥಾ ಶೋಭತೇ ರಾಜಾ ಅಪ್ಯನ್ತಃಪುರಸಂಸ್ಥಿತಃ ।
ಸಮಯಾ ಸ್ವಚ್ಛಯಾ ಬುದ್ಧ್ಯಾ ಯಥೋಪಶಮಶೀಲಯಾ ॥೬೮॥
ಪ್ರಾಣಾತ್ ಪ್ರಿಯತರಂ ದೃಷ್ಟ್ವಾ ತುಷ್ಟಿಮೇತಿ ನ ವೈ ಜನಃ ।
ಯಾಮಾಯಾತಿ ಜನಃ ಶಾನ್ತಿಂ ಅವಲೋಕ್ಯ ಶಮಾಶಯಮ್ ॥೬೯॥

ಅಯ್ಯಾ! ರಾಘವ! ಸಮಸ್ತವಾದ ಆಧಿವ್ಯಾಧಿಗಳಿಂದ ಅಳ್ಳಾಡಿಸಲ್ಪಟ್ಟು—ತೃಷ್ಣೆಯೆಂಬ ಚರ್ಮರಜ್ಜುವಿನಿಂದ ಸೆಳೆಯಲ್ಪಟ್ಟಿರುವ ಮನಸ್ಸನ್ನು, ಶಾಂತಿಯೆಂಬ ಅಮೃತಸೇಚನೆಯಿಂದ ಸಮಾಧಾನಗೊಳಿಸು ॥೬೩॥

ಅಯ್ಯಾ! ರಾಮ! ಶಾಂತಿಯಿಂದ ಶೀತಲವಾಗಿರುವ ಬುದ್ಧಿಯಿಂದ—ಯಾವುದನ್ನು ಮಾಡುತ್ತೀಯೋ, ಯಾವುದನ್ನನುಭವಿಸುತ್ತೀಯೋ, ಅದೇ ಮನಸ್ಸಿನಲ್ಲಿ ಹೆಚ್ಚಾಗಿ ರುಚಿಸುತ್ತದೆಯಲ್ಲದೆ. ಮತ್ತಾವುದೂ ರುಚಿಸುವುದಿಲ್ಲ ॥೬೪॥

ಅಯ್ಯಾ! ರಾಘವ! ಶಾಂತಿಯೆಂಬ ಅಮೃತರಸದಿಂದ ಅವೃತವಾಗಿ ಮನಸ್ಸು ಯಾವ ಆನಂದವನ್ನು ಹೊಂದುತ್ತದೆಯೋ, ಅವಯವಗಳು ಕತ್ತರಿಸಲ್ಪಟ್ಟರೂ—ಆ ಆನಂದದಿಂದ ಪುನಃ ಬೆಳೆಯುತ್ತವೆಯೆಂದು ತೋರುತ್ತದೆ ॥೬೫॥

ಶಾಂತಿಯುಕ್ತನನ್ನು—ಪಿಶಾಚಗಳೂ ದ್ವೇಷಿಸುವುದಿಲ್ಲ; ರಾಕ್ಷಸರೂ ದ್ವೇಷಿಸುವುದಿಲ್ಲ; ದೈತ್ಯರೂ ದ್ವೇಷಿಸುವುದಿಲ್ಲ; ಶತ್ರುಗಳೂ ದ್ವೇಷಿಸುವುದಿಲ್ಲ; ಕೊನೆಗೆ ಹುಲಿ ಹಾವು ಮುಂತಾದುವೂ ದ್ವೇಷಿಸುವುದಿಲ್ಲ ॥೬೬॥

ಶಾಂತಿಯೆಂಬ ಅಮೃತಮಯವಾದ ಕವಚದಿಂದ ಸಮಸ್ತ ಅವಯವಗಳನ್ನೂ ಚೆನ್ನಾಗಿ ಕಟ್ಟಿಕೊಂಡಿರುವ ಮನುಷ್ಯನನ್ನು,—ಬಾಣಗಳು ವಜ್ರದ ಕಲ್ಲನ್ನೋಪಾದಿಯಲ್ಲಿ ಯಾವ ದುಃಖಗಳೂ ಸೀಳುವುದಿಲ್ಲ ॥೬೭॥

ದೊರೆಯಾದವನು—ಉಪಶಮಯುಕ್ತವಾಗಿ ಸರ್ವತ್ರ ಸಮಾನವಾಗಿರುವ ನಿರ್ಮಲವಾದ ಬುದ್ಧಿಯಿಂದ ಹೇಗೆ ಪ್ರಕಾಶಿಸುವನೋ, ಅಂತಃಪುರದಲ್ಲಿದ್ದರೂ ಅಷ್ಟುಮಟ್ಟಿಗೆ ಪ್ರಕಾಶಿಸುವುದಿಲ್ಲ ॥೬೮॥

ಪ್ರಪಂಚದಲ್ಲಿ ಜನರು ಶಾಂತಿಯುಕ್ತವಾದ ಅಭಿಪ್ರಾಯವುಳ್ಳವನನ್ನು ಕಂಡು

ಸಮಯಾ ಶಮಶಾಲಿನ್ಯಾ ವೃತ್ತ್ಯಾ ಯಃ ಸಾಧು ವರ್ತತೇ ।
ಅಭಿನನ್ದಿತಯಾ ಲೋಕೇ ಜೀವತೀಹ ಸ ನೇತರಃ ॥೨೦॥
ಅನುದ್ಧತಮನಾಃ ಶಾನ್ತಃ ಸಾಧುಃ ಕರ್ಮ ಕರೋತಿ ಯತ್ ।
ತತ್ ಸರ್ವಮಭಿನನ್ದನ್ತಿ ತಸ್ಯೈವಾಭೂತಜಾತಯಃ ॥೨೧॥
ಶ್ರುತ್ವಾ ಸ್ಪೃಷ್ಟ್ವಾ ಚ ದೃಷ್ಟ್ವಾ ಚ ಭುಕ್ತ್ವಾ ಸ್ನಾತ್ವಾ ಶುಭಾಶುಭಮ್ ।
ನ ಹೃಷ್ಯತಿ ಗ್ಲಾಯತಿ ಯಃ ಸ ಶಾನ್ತ ಇತಿ ಕಥ್ಯತೇ ॥೨೨॥
ಯಃ ಸಮಃ ಸರ್ವಭೂತೇಷು ಭಾವಿ ಕಾಙ್ಕ್ಷತಿ ನೋಜ್ಝತಿ ।
ಜಿತ್ವೇನ್ದ್ರಿಯಾಣಿ ಯತ್ನೇನ ಸ ಶಾನ್ತ ಇತಿ ಕಥ್ಯತೇ ॥೨೩॥
ಸ್ಪೃಷ್ಟ್ವಾವದಾತಯಾ ಬುದ್ಧ್ಯಾ ಯಥೈವಾನ್ತಸ್ತಥಾ ಬಹಿಃ ।
ದೃಶ್ಯನ್ತೇ ಯತ್ರ ಕಾರ್ಯಾಣಿ ಸ ಶಾನ್ತ ಇತಿ ಕಥ್ಯತೇ ॥೨೪॥
ತುಷಾರಕರಬಿಮ್ಬಾಭಂ ಮನೋ ಯಸ್ಯ ನಿರಾಕುಲಮ್ ।
ಮರಣೋತ್ಸವಯುದ್ಧೇಷು ಸ ಶಾನ್ತ ಇತಿ ಕಥ್ಯತೇ ॥೨೫॥

ಯಾವ ಶಾಂತಿಯನ್ನು ಹೊಂದುವರೋ, ಅಂಥ ತುಷ್ಟಿಯನ್ನು ತಮ್ಮ ಪ್ರಾಣಕ್ಕಿಂತ ಪ್ರಿಯತರನಾದವನನ್ನು ಕಂಡರೂ ಜನರು ಹೊಂದುವುದಿಲ್ಲ ॥೧೯॥

ಯಾವನು ಸರ್ವತ್ರ ಸಮವಾಗಿಯೂ ಶಾಂತಿಯುಕ್ತವಾಗಿಯೂ ಪ್ರಪಂಚದಲ್ಲೆಲ್ಲ ಶ್ಲಾಘ್ಯವಾಗಿಯೂ ಇರುವ ನಡತೆಯಿಂದಿರುವನೋ, ಅವನೇ ಬದುಕಿರತಕ್ಕವನಲ್ಲದೆ ಮತ್ತೊಬ್ಬನಲ್ಲ ॥೨೦॥

ಗರ್ವರಹಿತವಾದ ಮನಸ್ಸುಳ್ಳವನಾಗಿ ಶಾಂತನಾಗಿರುವ ಸಾಧುವು ಯಾವ ಕರ್ಮವನ್ನು ಮಾಡುವನೋ, ಅವನ ಆ ಕೆಲಸವನ್ನೆಲ್ಲ—ಈ ಪ್ರಾಣಿಸಮುದಾಯಗಳು ಶ್ಲಾಘಿಸುವುವು॥

ಶಾಂತನಾರೆಂದರೆ:—ಯಾವನು ಪ್ರಿಯವನ್ನಾಗಲಿ ಅಥವಾ ಅಪ್ರಿಯವನ್ನಾಗಲಿ—ಕೇಳಿದರೂ ಸ್ಪರ್ಶಮಾಡಿದರೂ ನೋಡಿದರೂ ಅನುಭವಿಸಿದರೂ ಅದರಲ್ಲಿ ಮುಳುಗಿದರೂ ಕೂಡ—ಪ್ರಿಯದಿಂದ ಹರ್ಷವನ್ನೂ ಅಪ್ರಿಯದಿಂದ ವ್ಯಥೆಯನ್ನೂ ಪಡೆಯುವುದಿಲ್ಲವೋ, ಅವನು ಶಾಂತನೆಂದು ಹೇಳಲ್ಪಡುವನು ॥೨೨॥

ಯಾವನು ಸರ್ವಪ್ರಾಣಿಗಳಲ್ಲಿಯೂ ಸಮಾನನಾಗಿದ್ದುಕೊಂಡು—ಪ್ರಯತ್ನದಿಂದ ಇಂದ್ರಿಯಗಳನ್ನು ಜಯಿಸಿ—ಮುಂದಾಗುವುದನ್ನು ಅಪೇಕ್ಷಿಸದೆಯೂ ಈಗಿರುವುದನ್ನು ಬಿಡದೆಯೂ ಇರುವನೋ, ಅವನು ಶಾಂತನೆಂದು ಹೇಳಲ್ಪಡುವನು ॥೨೩॥

ಇತರರು ಮಾಡುವ ಕಪಟಾದಿಗಳನ್ನು ಕಂಡರೂ—ತನ್ನ ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡಿರುವ ಯಾವ ಮನುಷ್ಯನಲ್ಲಿ, ಹೊರಗೂ ಒಳಗೂ ಒಂದೇವಿಧವಾದ ಕಾರ್ಯಗಳು ಕಾಣುತ್ತವೆಯೋ, ಅವನು ಶಾಂತನೆಂದು ಹೇಳಲ್ಪಡುವನು ॥೨೪॥

ಯಾವನ ಮನಸ್ಸು—ಮರಣಪ್ರಾಪ್ತವಾದರೂ ಉತ್ಸವಪ್ರಾಪ್ತವಾದರೂ ಯುದ್ಧಪ್ರಾಪ್ತವಾದರೂ ಕಳವಳಪಡದೆ ಚಂದ್ರಮಂಡಲದಂತೆ ಶೀತಳವಾಗಿಯೇ ಇರುತ್ತದೆಯೋ, ಅವನು ಶಾಂತನೆಂದು ಹೇಳಲ್ಪಡುವನು ॥೨೫॥

ಸ್ಥಿತೋಽಪಿ ನಸ್ಥಿತಇವ ನ ಹೃಷ್ಯತಿ ನ ಕುಪ್ಯತಿ ।
ಯಃ ಸುಷುಪ್ತಸಮಃ ಸ್ವಸ್ಥಃ ಸ ಶಾನ್ತ ಇತಿ ಕಥ್ಯತೇ ॥೭೬॥
ಅಮೃತಸ್ಯನ್ದಸುಭಗಾ ಯಸ್ಯ ಸರ್ವಜನಂ ಪ್ರತಿ ।
ದೃಷ್ಟಿಃ ಪ್ರಸರತಿ ಪ್ರೀತಾ ಸ ಶಾನ್ತ ಇತಿ ಕಥ್ಯತೇ ॥೭೭॥
ಯೋಽನ್ತಃ ಶೀತಲತಾಂ ಯಾತೋ ಯೋ ಭಾವೇಷು ನ ಮಜ್ಜತಿ ।
ವ್ಯವಹಾರೀ ನ ಸಮ್ಮೂಢಃ ಸ ಶಾನ್ತ ಇತಿ ಕಥ್ಯತೇ ॥೭೮॥
ಅಪ್ಯಾಪತ್ಸು ದುರನ್ತಾಸು ಕಲ್ಪಾನ್ತೇಷು ಮಹತ್ಸ್ವಪಿ ।
ತುಚ್ಛೇಽಹಂ ನ ಮನೋ ಯಸ್ಯ ಸ ಶಾನ್ತ ಇತಿ ಕಥ್ಯತೇ ॥೭೯॥
ಆಕಾಶಸದೃಶೀ ಯಸ್ಯ ಪುಂಸಃ ಸಂವ್ಯವಹಾರಿಣಃ ।
ಕಳಙ್ಕಮೇತಿ ನ ಮತಿಃ ಸ ಶಾನ್ತ ಇತಿ ಕಥ್ಯತೇ ॥೮೦॥
ತಪಸ್ವಿಷು ಬಹುಜ್ಞೇಷು ಯಾಜಕೇಷು ನೃಪೇಷು ಚ ।
ಬಲವತ್ಸು ಗುಣಾಢ್ಯೇಷು ಶಮವಾನೇವ ರಾಜತೇ ॥೮೧॥
ಶಮಸಂಸಕ್ತಮನಸಾಂ ಮಹತಾಂ ಗುಣಶಾಲಿನಾಮ್ ।

ಹರ್ಷಶೋಕಹೇತುವಾದ ಪ್ರದೇಶದಲ್ಲಿದ್ದರೂ—ಯಾವನು ಅಲ್ಲಿಲ್ಲದಂತೆ ಸುಷುಪ್ತಾವಸ್ಥೆಯಲ್ಲಿದ್ದವನಿಗೆ ಸಮಾನನಾಗಿ ಸ್ವಸ್ಥನಾಗಿರುತ ಹರ್ಷಿಸದೆಯೂ ಕೋಪಿಸದೆಯೂ ಇರುವನೋ, ಅವನು ಶಾಂತನೆಂದು ಹೇಳಲ್ಪಡುವನು ॥೭೬॥

ಯಾವನ ದೃಷ್ಟಿಯು—ಸರ್ವರ ವಿಷಯದಲ್ಲಿಯೂ ಅಮೃತವನ್ನು ಸ್ರವಿಸುವಂತೆ ಮನೋಹರವಾಗಿ ಪ್ರೀತಿಯುಕ್ತವಾಗಿ ಪ್ರಸರಿಸುತ್ತದೆಯೋ, ಅವನು ಶಾಂತನೆಂದು ಹೇಳಲ್ಪಡುವನು ॥೭೭॥

ಯಾವನು – ಮನಸ್ಸಿನಲ್ಲಿ ದಯಾರ್ದ್ರನಾಗಿರುವನೋ, ಯಾವನು—ಪ್ರಾಪಂಚಿಕ ವ್ಯವಹಾರವುಳ್ಳವನಾಗಿದ್ದರೂ ಮೂಢನಾಗದೆ ವಿಷಯಗಳಲ್ಲಿ ಸಿಕ್ಕಿಕೊಳ್ಳುವುದಿಲ್ಲವೋ, ಅವನು ಶಾಂತನೆಂದು ಹೇಳಲ್ಪಡುವನು ॥೭೮॥

ಅತಿ ದುರಂತವಾದ ವಿಪತ್ತುಗಳಲ್ಲಿಯೂ ಮಹಾಪ್ರಳಯಗಳಲ್ಲಿಯೂ ಕೂಡ ಯಾವನ ಮನಸ್ಸು ತುಚ್ಛವಾದ ಆಶೆಯುಳ್ಳದಾಗುವುದಿಲ್ಲವೋ, ಅವನು ಶಾಂತನೆಂದು ಹೇಳಲ್ಪಡುವನು ॥೭೯॥

ಪ್ರಪಂಚವ್ಯವಹಾರವನ್ನೆಲ್ಲ ಚೆನ್ನಾಗಿ ನಡೆಯಿಸುತಲೇ ಇರುವ ಯಾವ ಪುರುಷನ ಬುದ್ಧಿಯು, ಆಕಾಶದಂತೆ ಕಳಂಕಲೇಪವನ್ನು ಹೊಂದಿರುವುದೋ, ಅವನು ಶಾಂತನೆಂದು ಹೇಳಲ್ಪಡುವನು ॥೮೦॥

ತಪಸ್ವಿಗಳಲ್ಲಿಯೂ ಪ್ರಾಜ್ಞರಲ್ಲಿಯೂ ಯಾಜಕ (ಯಜ್ಞಾದಿಗಳನ್ನು ಮಾಡಿಸತಕ್ಕವರು—ಪುರೋಹಿತ) ರಲ್ಲಿಯೂ ದೊರೆಗಳಲ್ಲಿಯೂ ಬಲಿಷ್ಠರಲ್ಲಿಯೂ ಗುಣಾಢ್ಯರಲ್ಲಿಯೂ ಇವರೆಲ್ಲರ ಮಧ್ಯದಲ್ಲಿಯೂ ಕೂಡ, ಯಾವನು ಶಮಯುಕ್ತನೋ—ಅವನೇ ಪ್ರಕಾಶಿಸುತ್ತಾನೆ ॥೮೧॥

ಉದೇತಿ ನಿರ್ವೃತಿಶ್ಚಿತ್ತಾತ್ ಜ್ಯೋತ್ಸ್ನೇವ ಸಿತರೋಚಿಷಃ ||೮೦||
ಸೀಮಾನ್ತೇ ಗುಣಪೂಗಾನಾಂ ಪೌರುಷೈಕಾನ್ತಭೂಷಣಮ್ |
ಸಙ್ಕಟೇಷು ಭಯಸ್ಥಾನೇ ಶಮಃ ಶ್ರೀರ್ಮಾ ವಿರಾಜತೇ ||೮೩||

ಶಮಮಮೃತಮಹಾರ್ಯಮಾರ್ಯಗುಪ್ತಂ
ಪರಮವಲಮ್ಬ್ಯ ಪರಂ ಪದಂ ಪ್ರಯಾತಾಃ |
ರಘುತನಯ ಯಥಾ ಮಹಾನುಭಾವಾಃ
ಕ್ರಮಮನುಪಾಲಯ ಸಿದ್ಧಯೇ ತಮೇವ ||೮೪||

ಇತಿ ಮುಮುಕ್ಷುವ್ಯವಹಾರಪ್ರಕರಣೇ ಶಮನಿರೂಪಣಂ ನಾಮ
ತ್ರಯೋದಶಃ ಸರ್ಗಃ.

ಶಾಂತಿಯುಳ್ಳಾಸಕ್ತವಾದ ಮನಸ್ಸುಳ್ಳವರಾಗಿ ಗುಣಶಾಲಿಗಳಾಗಿರುವ ಮಹಾತ್ಮರ ಹೃದಯದಿಂದ—ಚಂದ್ರನಿಂದ ಬೆಳ್ದಿಂಗಳಂತೆ— ಉತ್ತಮವಾದ ಸುಖವುದ್ಭವಿಸುವುದು ||

ಸಮಸ್ತ ಗುಣಸಮೂಹಕ್ಕೂ ಎಲ್ಲೆಯಾಗಿಯೂ ಪೌರುಷಕ್ಕೆ ಮುಖ್ಯಭೂಷಣವಾಗಿಯೂ ಇರುವ ಸರ್ವೋತ್ಕೃಷ್ಟವಾದ ಶಮವು, ಸಂಕಟಕಾಲಗಳಲ್ಲಿಯೂ ಭಯವಿಷಯಗಳಲ್ಲಿಯೂ ಪ್ರಕಾಶಿಸುತ್ತದೆ ||೮೩||

ಅಯ್ಯಾ! ರಾಮ! ಇತರರಿಂದ ಅಪಹರಿಸಲಸಾಧ್ಯವಾಗಿಯೂ ದೊಡ್ಡವರಿಂದ ಚೆನ್ನಾಗಿ ಸಂರಕ್ಷಿಸಲ್ಪಟ್ಟದಾಗಿಯೂ ಇರುವ ಉತ್ಕೃಷ್ಟವಾದ ಶಾಂತಿಯೆಂಬ ಅಮೃತವನ್ನಾಶ್ರಯಿಸಿ—ಮಹಾತ್ಮರಾದವರು ಹೇಗೆ ಪರಮಪದವಿಯನ್ನು ಹೊಂದಿರುವರೋ, ನೀನೂ ಪುರುಷಾರ್ಥಸಿದ್ಧಿಗೋಸ್ಕರ ಅದೇ ಕ್ರಮವನ್ನೇ ಅನುಸರಿಸುವವನಾಗು ||೮೪||

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಶಮನಿರೂಪಣವೆಂಬ
ಹದಿಮೂರನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಚತುರ್ದಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಶಾಸ್ತ್ರಾವಬೋಧಾಮಲಯಾ ಧಿಯಾ ಪರಮಪೂತಯಾ ।
ಕರ್ತವ್ಯಃ ಕಾರಣಜ್ಞೇನ ವಿಚಾರೋಽನಿಶಮಾತ್ಮನಃ ॥೧॥
ವಿಚಾರಾತ್ ತೀಕ್ಷ್ಣತಾಮೇತ್ಯ ಧೀಃ ಪಶ್ಯತಿ ಪರಂ ಪದಮ್ ।
ದೀರ್ಘಸಂಸಾರರೋಗಸ್ಯ ವಿಚಾರೋ ಹಿ ಮಹೌಷಧಮ್ ॥೨॥
ಆಪದ್ವನಮನನ್ತೇಹಾಪರಿಸಲ್ಲವಿತಾಕೃತಿ ।
ವಿಚಾರಕ್ರಕಚಚ್ಛಿನ್ನಂ ನೈವ ಭೂಯಃ ಪ್ರರೋಹತಿ ॥೩॥
ಮೋಹೇನ ಬನ್ಧುನಾಶೇಷು ಸಙ್ಕಟೇಷು ಶಮೇಷು ಚ ।
ಸರ್ವಂ ವ್ಯಾಪ್ತಂ ಮಹಾಪ್ರಾಜ್ಞ ವಿಚಾರೋ ಹಿ ಸತಾಂ ಗತಿಃ ॥೪॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹದಿನಾಲ್ಕನೆಯ ಸರ್ಗವು.

ಸಾಧುಸಙ್ಗಮಸಚ್ಛಾಸ್ತ್ರಭಾವಶುದ್ಧ್ಯಪಬೃಂಹಿತಃ ।
ಶಮಸನ್ತೋಷಯೋರ್ಹೇತುಃ ವಿಚಾರೋತ್ರ ಪ್ರಶಸ್ಯತೇ ॥

ಸಾಧುಸಂಗಮ ಸಚ್ಛಾಸ್ತ್ರ ಚಿತ್ತಶುದ್ಧಿ ಇವುಗಳಿಂದ ಪರಿಪೂರ್ಣವಾಗಿಯೂ, ಶಮಕ್ಕೂ ಸಂತೋಷಕ್ಕೂ ಕಾರಣಭೂತವಾಗಿಯೂ ಇರುವ ವಿಚಾರವು ಈ ಸರ್ಗದಲ್ಲಿ ಪ್ರಶಂಸಿಸಲ್ಪಡುವುದು.

ಈರೀತಿಯಾಗಿ ಮೋಕ್ಷರಾಜಗೃಹದ ದ್ವಾರಪಾಲಕರಲ್ಲಿ ಶಮವೆಂಬವನನ್ನು ವರ್ಣಿಸಿ, ಈಗ ವಸಿಷ್ಠಮುನಿಯು ವಿಚಾರಸ್ವರೂಪವನ್ನು ವರ್ಣಿಸಲುಪಕ್ರಮಿಸಿ, ಶ್ರೀರಾಮನನ್ನು ಕುರಿತು ಹೇಳಿದರು.

ಅಯ್ಯಾ! ರಾಮ! ಈಗ ವಿಚಾರವೆಂಬುದನ್ನು ವಿಶದಪಡಿಸುವೆನು; ಕೇಳುವವನಾಗು. ಮನುಷ್ಯನಾದವನು, ಶಾಸ್ತ್ರಜ್ಞಾನದಿಂದ ನಿರ್ಮಲವಾಗಿರುವ ಪರಮಪವಿತ್ರವಾದ ಬುದ್ಧಿಯಿಂದ, ಕಾರ್ಯಕಾರಣಭಾವವನ್ನು ಚೆನ್ನಾಗಿ ತಿಳಿದವನಾಗಿ, ಸರ್ವದಾ ಆತ್ಮವಿಚಾರ ಮಾಡುತ್ತಿರಬೇಕು ॥೧॥

ವಿಚಾರದಿಂದ ಬುದ್ಧಿಯು ಚುರುಕಾಗಿ ಪರಮಪದ ಜ್ಞಾನವುಂಟಾಗುವುದು; ಸಂಸಾರವೆಂಬ ದೀರ್ಘರೋಗಕ್ಕೆ ವಿಚಾರವು ದಿವ್ಯೌಷಧವಾಗಿರುವುದು ॥೨॥

ನಾನಾವಿಧ ವ್ಯಾಪಾರಗಳೆಂಬ ಚಿಗುರುಗಳಿಂದ ಪರಿಪೂರ್ಣವಾದ ಆಪತ್ತೆಂಬ ಕಾಡು, ವಿಚಾರವೆಂಬ ಗರಗಸದಿಂದ ಕತ್ತರಿಸಲ್ಪಟ್ಟುದಾಗಿ, ಪುನಃ ಹುಟ್ಟುವುದೇ ಇಲ್ಲ॥೩॥

ಪ್ರಾಜ್ಞಶಿರೋಮಣಿಯಾದ ರಾಮನೆ! ಬಂಧುನಾಶಾದಿ ದುಃಖಗಳಲ್ಲಿಯೂ ಇತರ ವಿಧವಾದ ಸಂಕಟಗಳಲ್ಲಿಯೂ ಕೊನೆಗೆ ಚಿತ್ತಶಾಂತಿಯಾಗುವ ಸಂಗರ್ಭದಲ್ಲಿಯೂ ಕೂಡ, ಮೋಹವು ಸಮಸ್ತವನ್ನೂ ವ್ಯಾಪಿಸಿಕೊಂಡು ಬಿಡುವುದು. ಆದಕಾರಣ, ಇಂತಹ ಸಂದರ್ಭಗಳಲ್ಲೆಲ್ಲ ವಿಚಾರವೇ ಸತ್ಪುರುಷರಿಗೆ ಗತಿಯು ॥೪॥

ನ ವಿಚಾರಂ ವಿನಾ ಕಶ್ಚಿತ್ ಉಪಾಯೋಽಸ್ತಿ ವಿಪಶ್ಚಿತಾಮ್ ।
ವಿಚಾರಾದಶುಭಂ ತ್ಯಕ್ತ್ವಾ ಶುಭಮಾಯಾತಿ ಧೀಃ ಸತಾಮ್ ॥೫॥
ಬಲಂ ಬುದ್ಧಿಶ್ಚ ತೇಜಶ್ಚ ಪ್ರತಿಪತ್ತಿಃ ಕ್ರಿಯಾ ಫಲಮ್ ।
ಫಲನ್ತ್ಯೇತಾನಿ ಸರ್ವಾಣಿ ವಿಚಾರೇಣೈವ ಧೀಮತಾಮ್ ॥೬॥
ಯುಕ್ತಾಯುಕ್ತಮಹಾದೀಪಂ ಅಭಿವಾಞ್ಛಿತಸಾಧಕಮ್ ।
ಸ್ಫಾರಂ ವಿಚಾರಮಾಶ್ರಿತ್ಯ ಸಂಸಾರಜಲಧಿಂ ತರೇತ್ ॥೭॥
ಆಲೂನಹೃದಯಾಮ್ಭೋಜಾನ್ ಮಹಾಮೋಹಮತಙ್ಗಜಾನ್ ।
ವಿದಾರಯತಿ ಶುದ್ಧಾತ್ಮಾ ವಿಚಾರೋ ನಾಮ ಕೇಸರೀ ॥೮॥
ಮೂಢಾಃ ಕಾಲವಶೇನೇಹ ಯದ್ಗತಾಃ ಪರಮಂ ಪದಮ್ ।
ತದ್ವಿಚಾರಪ್ರದೀಪಸ್ಯ ವಿಜೃಮ್ಭಿತಮನುತ್ತಮಮ್ ॥೯॥
ರಾಜ್ಯಾನಿ ಸಮ್ಪದಃ ಸ್ಫಾರಾಃ ಭೋಗೋ ಮೋಕ್ಷಶ್ಚ ಶಾಶ್ವತಃ ।
ವಿಚಾರಕಲ್ಪವೃಕ್ಷಸ್ಯ ಫಲಾನ್ಯೇತಾನಿ ರಾಘವ ॥೧೦॥
ಯಾವಿವೇಕವಿಕಾಸಿನ್ಯೋ ಮತಯೋ ಮಹತಾಮಿಹ ।
ನ ತಾವಿಪದಿ ಮಜ್ಜನ್ತಿ ತುಮ್ಬಕಾನೀವ ವಾರಿಣಿ ॥೧೧॥
ವಿಚಾರೋದಯಕಾರಿಣ್ಯಾ ಧಿಯಾ ವ್ಯವಹರನ್ತಿ ಯೇ ।

ವಿದ್ವಾಂಸರಾದವರಿಗೆ ವಿಚಾರ ಹೊರತು ಮತ್ತಾವ ಉಪಾಯವೂ ಇಲ್ಲ. ಈ ವಿಚಾರದಿಂದ, ಸತ್ಪುರುಷರ ಬುದ್ಧಿಯು—ಕೆಟ್ಟುದದನ್ನು ಬಿಟ್ಟು ಒಳ್ಳೆಯದನ್ನೇ ಸೇರುತ್ತದೆ ॥೫॥

ಬಲ ಬುದ್ಧಿ ತೇಜಸ್ಸು ಕಾಲೋಚಿತಸ್ಫೂರ್ತಿ ಕರ್ಮಾಚರಣೆ ಕರ್ಮಫಲ—ಇವುಗಳೆಲ್ಲವೂ ವಿಚಾರದಿಂದಲೇ ಪ್ರಾಜ್ಞರಿಗೆ ಫಲಿಸುವುವು ॥೬॥

ಯುಕ್ತಾಯುಕ್ತ ವಿವೇಚನೆಗೆ ದೊಡ್ಡ ದೀಪವಾಗಿಯೂ ಇಷ್ಟಾರ್ಥವನ್ನು ಸಾಧಿಸಿಕೊಡತಕ್ಕುದಾಗಿಯೂ ಇರುವ ಅಧಿಕವಾದ ವಿಚಾರವನ್ನಾಶ್ರಯಿಸಿ, ಸಂಸಾರವೆಂಬ ಸಮುದ್ರವನ್ನು ದಾಟಬೇಕು ॥೭॥

ಹೃದಯವೆಂಬ ಕಮಲವನ್ನು ಚೆನ್ನಾಗಿ ಮರ್ದಿಸಿರುವ ಮಹಾಮೋಹವೆಂಬ ಆನೆಗಳನ್ನು, ದೋಷಶೂನ್ಯವಾದ ವಿಚಾರವೆಂಬ ಸಿಂಹವು ಸೀಳಿಬಿಡುತ್ತದೆ ॥೮॥

ಕೇವಲ ಮೂಢಾತ್ಮರಾಗಿದ್ದವರೂ ಕೂಡ, ಕಾಲಪರವಶತೆಯಿಂದ ಪರಮಪದವನ್ನು ಹೊಂದಿದುದಾವುದುಂಟೋ, ಅದು—ವಿಚಾರವೆಂಬ ದೀಪದ ಸರ್ವೋತ್ತಮವಾದ ವಿಜೃಂಭಣೆಯು ॥೯॥

ಅಯ್ಯಾ! ರಾಮ! ರಾಜ್ಯಗಳೂ ವಿಸ್ತಾರವಾದ ಸಂಪತ್ತುಗಳೂ ಭೋಗವೂ ಶಾಶ್ವತವಾದ ಮೋಕ್ಷವೂ—ಇವೆಲ್ಲವೂ ಕೂಡ, ವಿಚಾರವೆಂಬ ಕಲ್ಪವೃಕ್ಷದ ಫಲಗಳು ॥೧೦

ಈ ಲೋಕದಲ್ಲಿ ಯಾವ ಬುದ್ಧಿಗಳು ವಿವೇಕದಿಂದ ವಿಕಾಸಪಡೆದಿರುತ್ತವೆಯೋ, ಅವುಗಳು—ನೀರಿನಲ್ಲಿ ಸೋರೆ ಬುರುಡೆಯಂತೆ—ವಿಪತ್ತಿನಲ್ಲಿ ಮುಳುಗುವುದಿಲ್ಲ ॥೧೧॥

ಯಾವ ಮನುಷ್ಯರು ವಿಚಾರಹುಟ್ಟಿಸುವ ಬುದ್ಧಿಯಿಂದ ಲೋಕವ್ಯಾಪಾರಮಾಡುತ್ತಿ

ಫಲಾನಾಮತ್ಯುದಾರಾಣಾಂ ಭಾಜನಂ ಹಿ ಭವನ್ತಿ ತೇ ||೧೨||
ಮೂರ್ಖಹೃತ್ಕಾನನಸ್ಥಾನಾಂ ಆಶಾಪ್ರಥಮರೋಧಿನಾಮ್ |
ಅವಿಚಾರಕರಞ್ಜಾನಾಂ ಮಞ್ಜರ್ಯೋ ದುಃಖರೀತಯಃ ||೧೩||
ಕಜ್ಜಲಕ್ಷೋದಮಲಿನಾ ಮದಿರಾಮದಧರ್ಮಿಣೀ |
ಅವಿಚಾರಮಯೀ ನಿದ್ರಾ ಯಾತು ತೇ ರಾಘವ ಕ್ಷಯಮ್ ||೧೪||
ಮಹಾಪದತಿದೀರ್ಘೇಷು ಸದ್ವಿಚಾರಪರೋ ನರಃ |
ನ ನಿಮಜ್ಜತಿ ಮೋಹೇಷು ತೇಜೋರಾಶಿಸ್ತಮಸ್ಸ್ವಿವ ||೧೫||
ಮಾನಸೇ ಸರಸಿ ಸ್ವಚ್ಛೇ ವಿಚಾರಕಮಲೋತ್ಕರಃ |
ನೂನಂ ವಿಕಸಿತೋ ಯಸ್ಯ ಹಿಮವಾನಿವ ಭಾತಿ ಸಃ ||೧೬||
ವಿಚಾರವಿಕಲಾ ಯಸ್ಯ ಮತಿರ್ಮಾನ್ದ್ಯಮುಪೇಯುಷಃ |
ತಸ್ಯೋದೇತ್ಯಶನಿಶ್ಚನ್ದ್ರಾತ್ ಮುಧಾ ಯಕ್ಷಃ ಶಿಶೋರಿವ ||೧೭||
ದುಃಖಖಣ್ಡಕಮಸ್ಥೂಲಂ[1] ವಿಪನ್ನವಲತಾಮಧುಃ |
ರಾಮ ದೂರೇ ಪರಿತ್ಯಾಜ್ಯೋ ನಿರ್ವಿವೇಕೋ ನರಾಧಮಃ ||೧೮||

ರುತ್ತಾರೆಯೋ, ಅವರು ಅತಿ ಶ್ರೇಷ್ಠವಾದ ಫಲಗಳಿಗೆ ಪಾತ್ರರಾಗುತ್ತಾರೆ ||೧೨||

ಮೂರ್ಖರ ಹೃದಯವೆಂಬ ಕಾಡಿನಲ್ಲಿ ಬೆಳೆದು—ಪುರುಷಾರ್ಥಸಂಪಾದನೇಚ್ಛೆಯೆಂಬ ದಿಕ್ಕುಗಳನ್ನು ಮೊದಲು ತಡೆಯುತ್ತಿರುವ—ವಿಚಾರಶೂನ್ಯತೆಯೆಂಬ ಮುಳ್ಳುಗಿಡಗಳಿಗೆ, ದುಃಖಪರಂಪರೆಗಳೇ ಕುಸುಮಮಂಜರಿಗಳಾಗುವುವು ||೧೩||

ಅಯ್ಯಾ! ರಾಮ! ಕಾಡಿಗೆಯ ಹುಡಿಯಂತೆ ಮಲಿನವಾಗಿಯೂ—ಮದ್ಯದಂತೆ ಮದವುಂಟುಮಾಡುವ ಸ್ವಭಾವವುಳ್ಳುದಾಗಿಯೂ ಇರುವ—ಅವಿಚಾರವೆಂಬ ನಿದ್ರೆಯು, ನಿನಗೆ ಕ್ಷಯಹೊಂದಲಿ ||೧೪||

ಉತ್ತಮವಾದ ವಿಚಾರದಲ್ಲಿ ಆಸಕ್ತನಾದ ಮನುಷ್ಯನು, ಸೂರ್ಯನು ಕತ್ತಲೆಯಲ್ಲಿ ಮುಳುಗದಿರುವಂತೆ, ದೊಡ್ಡ ವಿಪತ್ತುಗಳುಳ್ಳುದಾಗಿ ಅತಿ ದೀರ್ಘವಾದ ಮೋಹದಲ್ಲಿ ಎಂದಿಗೂ ಮುಳುಗುವುದಿಲ್ಲ ||೧೫||

ಯಾವ ಪುರುಷನಿಗೆ, ಹೃದಯವೆಂಬ ಮಾನಸಸರಸ್ಸಿನಲ್ಲಿ—ವಿಚಾರವೆಂಬ ಕಮಲ ಸಮೂಹವು ವಿಕಾಸಹೊಂದಿರುತ್ತದೆಯೋ, ಅವನು ನಿಶ್ಚಯವಾಗಿ ಹಿಮವತ್ಪರ್ವತದಂತೆ ಪ್ರಕಾಶಿಸುವನು ||೧೬||

ಕೇವಲ ಮೂಢತನಹೊಂದಿರುವ ಯಾವನ ಬುದ್ಧಿಯು ವಿಚಾರಶೂನ್ಯವಾಗಿರುತ್ತದೆಯೋ, ಅವನಿಗೆ—ಬಾಲಕನಿಗೆ ಸುಳ್ಳುಸುಳ್ಳಾಗಿ ವೇತಾಳಾದಿಗಳು ಹುಟ್ಟುವಂತೆ—ಚಂದ್ರಸಮಾನವಾದ ಮನಸ್ಸಿನಿಂದ ಸಿಡಿಲಿನಂತಿರುವ ದುಃಖಸಮುದಾಯವುದ್ಭವಿಸುವುದು ||

ಅಯ್ಯಾ! ರಾಮ! ದುಃಖಗಳೆಂಬ ಧಾನ್ಯಗಳನ್ನು ತುಂಬುವುದಕ್ಕೆ ದೊಡ್ಡ ತೊಂಬೆಯಾಗಿಯೂ—ವಿಪತ್ತೆಂಬ ನೂತನವಾದ ಲತೆ ಚಿಗುರುವುದಕ್ಕೆ ವಸಂತಕಾಲವಾಗಿಯೂ ಇರುವ—ವಿವೇಕಶೂನ್ಯನಾದ ಪುರುಷಾಧಮನನ್ನು ದೂರದಲ್ಲಿ ಬಿಟ್ಟುಬಿಡಬೇಕು ||೧೮||

---

1. ನ ವಿದ್ಯತೇ ಸ್ಥೂಲಂ ಯಸ್ಮಾತ್. ಅತಿಸ್ಥೂಲಮಿತ್ಯರ್ಥಃ.

ಯೇ ಕೇಚನ ದುರಾರಂಭಾಃ ದುರಾಚಾರಾದುರಾಧಯಃ ।
ಅವಿಚಾರೇಣ ತೇ ಭಾನ್ತಿ ವೇತಾಳಾಸ್ತಮಸಾ ಯಥಾ ॥೧೯॥
ಅವಿಚಾರಿಣಮೇಕಾನ್ತವನದ್ರುಮಸಧರ್ಮಕಮ್ ।
ಅಕ್ಷಮಂ ಸಾಧುಕಾರ್ಯೇಷು ದೂರೇ ಕುರು ರಘೂದ್ವಹ ॥೨೦॥
[1]ವಿವಿಕ್ತಂ ಹಿ ಮನೋ ಜನ್ತೋಃ ಆಶಾವೈವಶ್ಯವರ್ಜಿತಮ್ ।
ಪರಾಂ ನಿರ್ವೃತಿಮಭ್ಯೇತಿ ಪೂರ್ಣಚನ್ದ್ರ ಇವಾತ್ಮನಿ ॥೨೧॥
ವಿವೇಕಿತೋದಿತಾ ದೇಹೇ ಸರ್ವಂ ಶೀತಲಯತ್ಯಲಮ್ ।
ಅಲಙ್ಕರೋತಿ ಚಾತ್ಯನ್ತಂ ಜ್ಯೋತ್ಸ್ನೇವ [2]ಭುವನಂ ಯಥಾ ॥೨೨॥
ಪರಮಾರ್ಥಪತಾಕಾಯಾಃ ಧಿಯೋ ಧವಳಚಾಮರಮ್ ।
ವಿಚಾರೋ ರಾಜತೇ ಜನ್ತೋಃ ರಜನ್ಯಾಮಿವ ಚನ್ದ್ರಮಾಃ ॥೨೩॥
ವಿಚಾರಚಾರವೋ ಜೀವಾಃ ಭಾಸಯನ್ತೋ ದಿಶೋ ದಶ ।
ಭಾನ್ತಿ ಭಾಸ್ಕರವನ್ನೂನಂ ಭೂಯೋ ಭವಭಯಾಪಹಾಃ ॥೨೪॥

ಈ ಪ್ರಪಂಚದಲ್ಲಿ, ಯಾವ ಯಾವ ದುಷ್ಕಾರ್ಯಗಳೂ ದುರಾಚಾರಗಳೂ ದುರ್ವ್ಯಸನಗಳೂ ಇರುವುವೋ, ಅವುಗಳೆಲ್ಲವೂ – ಕತ್ತಲೆಯಿಂದ ಪಿಶಾಚಗಳು ಕಾಣಿಸಿಕೊಳ್ಳುವಂತೆ ವಿಚಾರಶೂನ್ಯತೆಯಿಂದ ಕಾಣಿಸಿಕೊಳ್ಳುವುವು ॥೧೯॥

ರಘುಶ್ರೇಷ್ಠನೆ ! ಮನುಷ್ಯಸಂಚಾರವೇ ಇಲ್ಲದ ಅರಣ್ಯದಲ್ಲಿರುವ ಮರಕ್ಕೆ ಸಮನಾಗಿ—ಯಾವ ಸತ್ಕರ್ಮವನ್ನೂ ಮಾಡಲಾರದ—ವಿಚಾರಶೂನ್ಯನನ್ನು ದೂರವಾಗಿ ಬಿಟ್ಟುಬಿಡು ॥೨೦॥

ವಿಚಾರಸಹಿತವಾಗಿ ಆಶಾಪರವಶವಾಗದಿರುವ ಮನುಷ್ಯನ ಮನಸ್ಸು, ಪೂರ್ಣಚಂದ್ರನಲ್ಲಿಯೋಪಾದಿಯಲ್ಲಿ—ಆತ್ಮನಲ್ಲಿ ಅತ್ಯುತ್ತಮನಾದ ವಿಶ್ರಾಂತಿಸುಖವನ್ನು ಪಡೆಯುವುದು ॥೨೧॥

ಮನುಷ್ಯರಿಗೆ ದೇಹದಲ್ಲುದ್ಭವಿಸಿದ ವಿವೇಕವು,—ಬೆಳ್ದಿಂಗಳಿನಂತೆಯೂ ನೀರಿನಂತೆಯೂ—ಸರ್ವರನ್ನೂ ಅತ್ಯಂತವಾಗಿ ಶೀತಲಪಡಿಸುವುದು; ಮತ್ತು ಅತ್ಯಂತವಾಗಿ ಅಲಂಕಾರಪಡಿಸುವುದು ॥೨೨॥

ಪ್ರಾಣಿಗೆ ಪರಮಪುರುಷಾರ್ಥವೆಂಬುದೇ ಒಂದು ರಾಜಭವನವು; ಆ ರಾಜಭವನಕ್ಕೆ ಬುದ್ಧಿಯು ಧ್ವಜಪಟವಾಗಿರುವುದು; ಇಂತಹ ಧ್ವಜಪಟಕ್ಕೆ ವಿಚಾರವು ಶ್ವೇತಚಾಮರವಾಗಿರುವುದು. ಇಂತಹ ವಿಚಾರವು—ರಾತ್ರಿಯಲ್ಲಿ ಚಂದ್ರನಂತೆ—ಪ್ರಕಾಶಿಸುತ್ತಿರುವುದು ॥೨೩॥

ವಿಚಾರದಿಂದ ಮನೋಹರರಾಗಿ—ಸಂಸಾರಭಯವನ್ನು ನಿಶ್ಶೇಷವಾಗಿ ನಾಶಪಡಿಸಿರುವ ಜೀವರುಗಳು, ಸೂರ್ಯನಂತೆ ಹತ್ತುದಿಕ್ಕುಗಳನ್ನೂ ಬೆಳಗುತ ವಿಶೇಷವಾಗಿ ಪ್ರಕಾಶಿಸುವರು ॥೨೪॥

---

1. ವಿವಿಕ್ತಮ್ =ವಿವೇಕಸಹಿತಮ್.

2. ಭುವನಮ್ =ಜಲಮ್.

ಬಾಲಸ್ಯ ಸ್ವಮನೋಮೋಹಕಲ್ಪಿತಃ ಪ್ರಾಣಹಾರಕಃ ।
ರಾತ್ರೌ ನಭಸಿ ವೇತಾಳೋ ವಿಚಾರೇಣೈವ ಲೀಯತೇ ॥೨೫॥
ಸರ್ವಏವ ಜಗದ್ಭಾವಾಃ ಅವಿಚಾರೇಣ ಚಾರವಃ ।
ಅವಿದ್ಯಮಾನಸದ್ಭಾವಾಃ ವಿಚಾರವಿಶರಾರವಃ ॥೨೬॥
ಪುಂಸೋ ನಿಜಮನೋಮೋಹಕಲ್ಪಿತೋನಲ್ಪದುಃಖದಃ ।
ಸಂಸಾರಚಿರವೇತಾಳೋ ವಿಚಾರೇಣ ವಿಲೀಯತೇ ॥೨೭॥
ಸಮಂ ಸುಖಂ ನಿರಾಬಾಧಂ ಅನನ್ತಮನಪಾಶ್ರಯಮ್ ।
ವಿದ್ಧೀಮಂ ಕೇವಲೀಭಾವಂ ವಿಚಾರೋಚ್ಚತರೋಃ ಫಲಮ್ ॥೨೮॥
ಅಚಲಸ್ಥಿತಿತೋದಾರಾ ಪ್ರಕಟಾಭೋಗತೇಜಸಾ ।
ತೇನ ನಿಷ್ಕಾಮತೋ ದೇತಿ ಶೀತತೇವೇನ್ದುನೋದಿತಾ ॥೨೯॥
ಸ್ವವಿಚಾರಮಹೌಷಧ್ಯಾ ಸಾಧುಶ್ಚಿತ್ತನಿಷಣ್ಣಯಾ ।
ತಯೋತ್ತಮತ್ವಪ್ರದಯಾ ನಾಭಿವಾಞ್ಛತಿ ನೋಜ್ಝತಿ ॥೩೦॥

ಬಾಲಕನು ರಾತ್ರಿಯಲ್ಲಿ ತನ್ನ ಮನಸ್ಸಿನ ಮೋಹದಿಂದ ಆಕಾಶದೊಳಗೆ ಒಂದು ಪಿಶಾಚವನ್ನು ಕಲ್ಪಿಸಿಕೊಳ್ಳುವನಲ್ಲವೆ! ಈ ಕಲ್ಪಿತವಾದ ಪಿಶಾಚವು ಅವನ ಪ್ರಾಣವನ್ನೇ ಅಪಹರಿಸಿಬಿಡುವುದು; ಆದರೆ ಆ ಬಾಲಕನು ಆಗ ಚೆನ್ನಾಗಿ ವಿಚಾರಮಾಡಿದರೆ, ಅದರಿಂದಲೇ ಆ ಪಿಶಾಚವು ಲಯಹೊಂದುವುದು ॥೨೫॥

ಹಾಗೆಯೇ ಪ್ರಾಪಂಚಿಕವಾದ ಸಮಸ್ತ ಪದಾರ್ಥಗಳೂ ವಿಚಾರವಿಲ್ಲದೆ ಮನೋಹರಗಳಾಗಿ ಕಾಣುವುವು; ಇವು ಎಂದಿಗೂ ಶಾಶ್ವತಸ್ಥಿತಿಯುಳ್ಳುವುಗಳಲ್ಲ; ಇವು ವಿಚಾರದಿಂದ ಲಯಹೊಂದುವುವು ॥೨೬॥

ಮನುಷ್ಯನು ತನ್ನ ಮನಸ್ಸಿನ ಮೋಹದಿಂದ ಕಲ್ಪಿಸಿಕೊಂಡಿರುವುದಾಗಿಯೂ ಅತಿಯಾಗಿ ದುಃಖಕೊಡತಕ್ಕುದಾಗಿಯೂ ಬಹುಕಾಲದಿಂದ ಬಂದಿರತಕ್ಕುದಾಗಿಯೂ ಇರುವ ಸಂಸಾರವೆಂಬ ವೇತಾಳವು, ವಿಚಾರದಿಂದ ಲಯಹೊಂದುವುದು ॥೨೭॥

ಸರ್ವರಿಗೂ ಸಮವಾಗಿ ಸುಖರೂಪವಾಗಿ ಬಾಧರಹಿತವಾಗಿ ಶಾಶ್ವತವಾಗಿ ಪರಾಧೀನವಲ್ಲದುದಾಗಿರುವ—ಈ ಕೈವಲ್ಯ (ಮೋಕ್ಷ) ವನ್ನೇ ವಿಚಾರವೆಂಬ ದೊಡ್ಡ ಮರಕ್ಕೆ ಫಲವೆಂದು ತಿಳಿ ॥೨೮॥

ಮತ್ತು ಈ ವಿಚಾರದಿಂದ ನಿರತಿಶಯವಾದ ಆನಂದವು ಪ್ರಕಟವಾಗುವುದು; ಚಂದ್ರನಿಂದ ಶೈತಲ್ಯ ಹುಟ್ಟುವಂತೆ—ಇದರ ತೇಜಸ್ಸಿನಿಂದ ನಿಷ್ಕಾಮತೆ (ಆಶೆಯಿಲ್ಲದಿರುವಿಕೆ) ಹುಟ್ಟುವುದು. ಈ ನಿಷ್ಕಾಮತೆಯು ನಿಶ್ಚಲವಾದ ಸ್ಥಿತಿಯುಳ್ಳ ಕಾರಣ ಬಹಳ ಪ್ರಶಸ್ತವಾಗಿರುವುದು ॥೨೯॥

ಈ ವಿಧವಾಗಿ ಮನಸ್ಸಿನಲ್ಲಿ ನೆಲೆಸಿ ಉತ್ತಮಪದಕೊಡತಕ್ಕ ಆತ್ಮವಿಚಾರವೆಂಬ ಮಹೌಷಧಿಯಿಂದ, ಸಾಧುವು—ಅಲಬ್ಧವಾದುದುದನ್ನಪೇಕ್ಷಿಸುವುದೂ ಇಲ್ಲ. ಲಬ್ಧವಾದುದನ್ನು ಬಿಡುವುದೂ ಇಲ್ಲ ॥೩೦॥

ತತ್ಪದಾಲಮ್ಬನಂ ಚೇತಃ ಸ್ಫಾರಮಾಭಾಸಮಾಗತಮ್ ।
ನಾಸ್ತಮೇತಿ ನ ಚೋದೇತಿ ಖಮಿವಾತಿತತಾನ್ತರಮ್ ॥೩೧॥
ನ ದದಾತಿ ನ ಚಾದತ್ತೇ ನ ಚೋನ್ನಮತಿ ಶಾಮ್ಯತಿ ।
ಕೇವಲಂ ಸಾಕ್ಷಿವತ್ ಪಶ್ಯನ್ ಜಗದಾಭೋಗಿ ತಿಷ್ಠತಿ ॥೩೨॥
ನ ಚ ಶಾಮ್ಯತಿ ನಾಪ್ಯನ್ತಃ ನಾಪಿ ಬಾಹ್ಯೇವತಿಷ್ಠತಿ[1] ।
ನ ಚ ನೈಷ್ಕರ್ಮ್ಯಮಾದತ್ತೇ ನ ಚ ಕರ್ಮಣಿ ಮಜ್ಜತಿ ॥೩೩॥
ಉಪೇಕ್ಷತೇ ಗತಂ ವಸ್ತು ಸಂಪ್ರಾಪ್ತಮನುವರ್ತತೇ ।
ನ ಕ್ಷುಬ್ಧೋ ನ ಚ ವಾಕ್ಷುಬ್ಧೋ ಭಾತಿ ಪೂರ್ಣ ಇವಾರ್ಣವಃ ॥೩೪॥
ಏವಂ ಪೂರ್ಣೇನ ಮನಸಾ ಮಹಾತ್ಮಾನೋ ಮಹಾಶಯಾಃ ।
ಜೀವನ್ಮುಕ್ತಾ ಜಗತ್ಯಸ್ಮಿನ್ ವಿಹರನ್ತೀಹ ಯೋಗತಃ ॥೩೫॥
ಉಷಿತ್ವಾ ಸುಚಿರಂ ಕಾಲಂ ಧೀರಾಸ್ತೇ ಯಾವದೀಪ್ಸಿತಮ್ ।
ತೇ ತನುನ್ತೇ ಪರಿತ್ಯಜ್ಯ ಯಾನ್ತಿ ಕೇವಲತಾಂ ತತಾಮ್ ॥೩೬॥

ಹೀಗೆ ಚಿತ್ತವು ಆ ಪರಮಪದವನ್ನವಲಂಬಿಸಿಕೊಂಡು, ಅತ್ಯಧಿಕವಾದ ಪ್ರಕಾಶವನ್ನು ಹೊಂದಿ, ಆಕಾಶದಂತೆ ಅತಿ ವಿಸ್ತೀರ್ಣವಾಗಿ, ಅಸ್ತೋದಯಗಳೊಂದೂ ಇಲ್ಲದಿರುವುದು ॥೩೧॥

ಈ ವಿಧವಾದ ಮನಸ್ಸುಳ್ಳವನು—ಯಾವುದನ್ನೂ ಕೊಡುವುದಿಲ್ಲ; ತೆಗೆದುಕೊಳ್ಳುವುದೂ ಇಲ್ಲ; ಗರ್ವಪಡುವುದೂ ಇಲ್ಲ; ತಗ್ಗುವುದೂ ಇಲ್ಲ. ಈ ವಿಶಾಲವಾದ ಪ್ರಪಂಚವನ್ನೆಲ್ಲ ಕೇವಲ ಸಾಕ್ಷಿಯಂತೆ ನೋಡುತ ವಾಸಮಾಡಿಕೊಂಡಿರುವನು. ಆದರೆ ಇವನಿಗೆ ಸುಷುಪ್ತಿಕಾಲದಂತೆ ಸರ್ವವ್ಯಾಪಾರವೂ ಶಾಂತವಾಗಿರುವುದಿಲ್ಲ; ಆದರೂ ಇವನು ಅಂತರವಾದ ವಿಷಯಗಳಲ್ಲಿಯೂ ನಿಂತಿರುವುದಿಲ್ಲ,—ಬಾಹ್ಯಗಳಲ್ಲಿಯೂ ನಿಂತಿರುವುದಿಲ್ಲ; ನಿಷ್ಕರ್ಮನಾಗಿರುವುದೂ ಇಲ್ಲ,—ಕರ್ಮಗಳಲ್ಲಿ ಆಸಕ್ತನಾಗಿಯೂ ಇರುವುದಿಲ್ಲ; ಮತ್ತು ಯಾವುದಾದರೂ ಹೋಗಿಬಿಟ್ಟರೆ ಅದಕ್ಕಾಗಿ ವ್ಯಸನಪಡದೆ ಉಪೇಕ್ಷೆಯಿಂದಲೇ ಇರುತ್ತಾನೆ; ತಾನಾಗಿ ಬಂದುದನ್ನು ಅನುಭವಿಸಿಕೊಂಡಿರುತ್ತಾನೆ; ಯಾವುದಕ್ಕೂ ಕಳವಳಪಡುವುದಿಲ್ಲ; ಚಿತ್ತಕ್ಷೋಭವಿಲ್ಲದೆಯೂ ಇರುವುದಿಲ್ಲ; ಸಮುದ್ರದಂತೆ ಪರಿಪೂರ್ಣನಾಗಿ ಗಂಭೀರನಾಗಿ ಪ್ರಕಾಶಿಸುತ್ತಿರುವನು ॥೩೨—೩೪॥

ಹೀಗೆ ಪರಿಪೂರ್ಣವಾದ ಮನಸ್ಸಿನೊಡಗೂಡಿದ ಮಹಾಶಯರಾದ ಮಹಾತ್ಮರು ಚಿತ್ತವೃತ್ತಿಗಳನ್ನು ಗೆದ್ದು, ಈ ಲೋಕದಲ್ಲಿ ಈ ಶರೀರದಲ್ಲಿಯೇ ಜೀವನ್ಮುಕ್ತರಾಗಿ ವಿಹರಿಸುತ್ತಿರುವರು ॥೩೫॥

ಈರೀತಿಯಾಗಿ ಧೀರರಾದ ಆ ಮಹಾತ್ಮರು ತಮ್ಮ ಇಚ್ಛೆಯಿರುವವರೆಗೆ ಬಹುಕಾಲವಿದ್ದು, ಕೊನೆಯಲ್ಲಿ ಆ ಅಭಿಪ್ರಾಯವನ್ನೂ ಬಿಟ್ಟುಬಿಟ್ಟು, ಅಪರಿಚ್ಛಿನ್ನವಾದ ಕೈವಲ್ಯವನ್ನು ಹೊಂದುವರು ॥೩೬॥

---

1. ಆರ್ಷಂ =ಪರಸ್ಮೈಪದಂ,

ಕೋಽಹಂ ಕಸ್ಯ ಚ ಸಂಸಾರಃ ಇತ್ಯಾಪದ್ಯಪಿ ಧೀಮತಾ ।
ಚಿನ್ತನೀಯಂ ಪ್ರಯತ್ನೇನ ಸಪ್ರತೀಕಾರಮಾತ್ಮನಾ ॥೩೭॥
ಕಾರ್ಯಸಙ್ಕಟಸನ್ದೇಹಂ ರಾಜಾ ಜಾನಾತಿ ರಾಘವ ।
ನಿಷ್ಫಲಂ ಸಫಲಂ ವಾಪಿ ವಿಚಾರೇಣೈವ ನಾನ್ಯಥಾ ॥೩೮॥
ವೇದವೇದಾನ್ತಸಿದ್ಧಾನ್ತಸ್ಥಿತಯಃ ಸ್ಥಿತಿಕಾರಣಮ್ ।
ನಿರ್ಣೀಯನ್ತೇ ವಿಚಾರೇಣ ದೀಪೇನ ಚ ಧ್ರುವೋ ನಿಶಿ ॥೩೯॥
ಅನಷ್ಟಮನ್ಧಕಾರೇಷು ಬಹುತೇಜಸ್ಸ್ವಜಿಂಹಿತಮ್ ।
ಪಶ್ಯತ್ಯಪಿ ವ್ಯವಹಿತಂ ವಿಚಾರಶ್ಚಾರುಲೋಚನಮ್ ॥೪೦॥
ವಿವೇಕಾನ್ಧೋ ಹಿ ಜಾತ್ಯನ್ಧಃ ಶೋಚ್ಯಃ ಸರ್ವಸ್ಯ ದುರ್ಮತಿಃ ।
ದಿವ್ಯಚಕ್ಷುರ್ವಿವೇಕಾತ್ಮಾ ಜಯತ್ಯಖಿಲವಸ್ತುಷು ॥೪೧॥
ಪರಮಾತ್ಮಮಯೀ ಮಾನ್ಯಾ ಮಹಾನನ್ದೈಕಸಾಧಿನೀ ।
ಕ್ಷಣಮೇಕಂ ಪರಿತ್ಯಾಜ್ಯಾ ನ ವಿಚಾರಚಮತ್ಕೃತಿಃ ॥೪೨॥
ವಿಚಾರಚಾರುಃ ಪುರುಷೋ ಮಹತಾಮಪಿ ರೋಚತೇ ।
ಪರಿಪಕ್ವಚಮತ್ಕಾರಂ ಸಹಕಾರಫಲಂ ಯಥಾ ॥೪೩॥

ಆದಕಾರಣ ಬುದ್ಧಿವಂತನಾದವನು, ಎಂತಹ ಆಪತ್ತು ಬಂದರೂ—ನಾನು ಯಾರು? ಸಂಸಾರವೆಂಬುದು ಯಾರಿಗೆ? ಇದಕ್ಕೆ ಪ್ರತೀಕಾರವೇನು?—ಎಂದು ತನ್ನಲ್ಲಿ ತಾನೇ ಪ್ರಯತ್ನಪೂರ್ವಕವಾಗಿ ಯೋಚಿಸಬೇಕು ॥೩೭॥

ಅಯ್ಯಾ! ರಾಮ! ದೊರೆಗೆ ಯಾವುದಾದರೊಂದುವಿಧವಾಗಿ ತನ್ನ ರಾಜ್ಯಕಾರ್ಯದಲ್ಲಿ ಸಂದೇಹವುಂಟಾದರೆ, ಅದು ಸಫಲವೆಂಬುದನ್ನಾಗಲಿ—ಅಥವಾ ನಿಷ್ಫಲವೆಂಬುದನ್ನಾಗಲಿ—ಅವನು ವಿಚಾರದಿಂದಲೇ ತಿಳಿಯುವನಲ್ಲದೆ ಬೇರೆಯಿಲ್ಲ ॥೩೮॥

ರಾತ್ರಿಯಲ್ಲಿ ದೀಪದಿಂದ ವಸ್ತುಪರಿಜ್ಞಾನವಾಗುವಂತೆ, ಪ್ರಪಂಚಸ್ಥಿತಿಗೆ ಮುಖ್ಯಕಾರಣವಾದ ವೇದವೇದಾಂತ ತತ್ವವೂ ಕೂಡ-ವಿಚಾರದಿಂದಲೇ ನಿರ್ಣಯಿಸಲ್ಪಡುವುದು॥

ಮನುಷ್ಯರಿಗೆ ವಿಚಾರವೆಂಬುದೇ ಒಂದು ಸುಂದರವಾದ ನೇತ್ರವು; ಇದು ಎಂತಹ ಕತ್ತಲೆಯುಲ್ಲಿಯೂ ನಷ್ಟವಾಗುವುದಿಲ್ಲ; ಎಷ್ಟು ದೊಡ್ಡ ತೇಜಸ್ಸಿನಲ್ಲಿಯೂ ಕೊಕ್ಕರಿಸಿಕೊಳ್ಳುವುದಿಲ್ಲ. ಇದು ಎಷ್ಟು ದೂರದಲ್ಲಿರತಕ್ಕ ಪದಾರ್ಥವನ್ನಾದರೂ ನೋಡುವುದು ॥೪೦॥

ಯಾವನು ವಿವೇಕಶೂನ್ಯನೋ, ಅವನು ಹುಟ್ಟುಕುರುಡನು; ಅಂತಹ ಬುದ್ಧಿಶೂನ್ಯನು ಸರ್ವರಿಗೂ ಶೋಚನೀಯನಾಗುವನು. ಯಾವನು ವಿವೇಕವನ್ನೇ ಆತ್ಮನಂತೆ ಪ್ರೀತಿಸುವನೋ, ಅವನು ಉತ್ತಮವಾದ ಜ್ಞಾನದೃಷ್ಟಿಯುಳ್ಳವನಾಗಿ ಸರ್ವಪದಾರ್ಥಗಳಲ್ಲಿಯೂ ಮೇಲಾಗಿರುವನು ॥೪೧॥

ಆದಕಾರಣ, ಸರ್ವದಾ ಪರಮಾತ್ಮಧ್ಯಾನಪ್ರಚುರವಾಗಿ ಪರಮಾನಂದಮುಖ್ಯಸಾಧಕವಾಗಿರುವ ಸರ್ವೋತ್ತಮವಾದ ವಿಚಾರವನ್ನು ಒಂದುಕ್ಷಣವೂ ಬಿಡಕೂಡದು ॥೪೨॥

ವಿಚಾರದಿಂದ ಸುಂದರನಾದ ಪುರುಷನು, ಪರಿಪಕ್ವವಾದ ಮಾಧುರ್ಯವುಳ್ಳ ಮಾವಿನ ಹಣ್ಣಿನಂತೆ, ತತ್ವಜ್ಞಾನಿಗಳಿಗೂ ಕೂಡ ಇಷ್ಟನಾಗುವನು ॥೪೩॥

ವಿಚಾರಕಾನ್ತಮತಯೋ ನಾನೇಕೇಷು ಪುನಃಪುನಃ ।
ಲುಠನ್ತಿ ದುಃಖಶ್ವಭ್ರೇಷು ಜ್ಞಾನಾಧ್ವಗತಯೋ ನರಾಃ ॥೪೪॥
ನ ತಥಾ ರೌತಿ ತಥಾ ರೋಗೀ ನಾನರ್ಥಶತಜರ್ಜರಃ ।
ಅವಿಚಾರವಿನಷ್ಟಾತ್ಮಾ ಯಥಾಜ್ಞಃ ಪರಿರೋದಿತಿ ॥೪೫॥
ವರಂ ಕರ್ದಮಭೇಕತ್ವಂ ಮಲಕೀಟಕತಾ ವರಮ್ ।
ವರಮನ್ಧಗುಹಾಹಿತ್ವಂ ನ ನರಸ್ಯಾವಿಚಾರಿತಾ ॥೪೬॥
ಸರ್ವಾನರ್ಥನಿಜಾವಾಸಂ ಸರ್ವಸಾಧುತಿರಸ್ಕೃತಮ್ ।
ಸರ್ವದೌಸ್ಸ್ಥ್ಯಸೀಮಾನ್ತಂ ಅವಿಚಾರಂ ಪರಿತ್ಯಜೇತ್ ॥೪೭॥
ನಿತ್ಯಂ ವಿಚಾರಯುಕ್ತೇನ ಭವಿತವ್ಯಂ ಮಹಾತ್ಮನಾ ।
ತಥಾನ್ಧಕೂಪೇ ಪತತಾಂ ವಿಚಾರೋ ಹ್ಯವಲಮ್ಬನಮ್ ॥೪೮॥
ಸ್ವಯಮೇವಾತ್ಮನಾತ್ಮಾನಂ ಅವಷ್ಟಭ್ಯ ವಿಚಾರತಃ ।
ಸಂಸಾರಮೋಹಜಲಧೇಃ ತಾರಯೇತ್ ಸ್ವಮನೋಮೃಗಮ್ ॥೪೯॥

ವಿಚಾರದಿಂದ ಮನೋಹರವಾದ ಬುದ್ಧಿಯುಳ್ಳವರಾಗಿ ಜ್ಞಾನಮಾರ್ಗದಲ್ಲಿ ಸಂಚರಿಸುವ ಮನುಷ್ಯರು, ಅಸಂಖ್ಯಾಕವಾದ ದುಃಖಗಳೆಂಬ ಗುಂಡಿಗಳಲ್ಲಿ ಮತ್ತೆಮತ್ತೆ ಹೊರಳುವುದಿಲ್ಲ ॥೪೪॥

ವಿಚಾರವಿಲ್ಲದೆ ಆತ್ಮಸ್ವರೂಪನಾಶಮಾಡಿಕೊಂಡಿರುವ ಅಜ್ಞನು ಹೇಗೆ ಅಳುವನೋ, ಹಾಗೆ—ರೋಗಿಯೂ ಅಳುವುದಿಲ್ಲ; ನೂರಾರು ವಿಪತ್ತುಗಳಿಗೊಳಪಟ್ಟು ಶಿಥಿಲನಾಗಿರತಕ್ಕವನೂ ಅಳುವುದಿಲ್ಲ ॥೪೫॥

ಮನುಷ್ಯನಿಗೆ—ಕೆಸರಿನಲ್ಲಿ ಕಪ್ಪೆಯಾಗಿರುವುದಾದರೂ ಮೇಲೆನ್ನಿಸುವುದು; ಮಲದ ಮಧ್ಯದಲ್ಲಿ ಹುಳುವಾಗಿರುವುದಾದರೂ ಮೇಲೆನ್ನಿಸುವುದು; ಪಾಳುಗುಹೆಯಲ್ಲಿ ಹಾವಾಗಿ ಬಿದ್ದುಕೊಂಡಿರುವುದಾದರೂ ಮೇಲೆನ್ನಿಸುವುದು. ಆದರೆ, ವಿಚಾರಶೂನ್ಯತೆಮಾತ್ರ ಎಂದಿಗೂ ಮೇಲಾಗಲಾರದು ॥೪೬॥

ಆದಕಾರಣ, ಸರ್ವವಿಪತ್ತುಗಳಿಗೂ ಸ್ವಕೀಯವಾದ ಆವಾಸರೂಪವಾದುದಾಗಿಯೂ—ಸಮಸ್ತ ಸಜ್ಜನರಿಂದಲೂ ತಿರಸ್ಕರಿಸಲ್ಪಟ್ಟುದಾಗಿಯೂ—ಸಮಸ್ತ ದುರವಸ್ಥೆಗಳಿಗೂ ಎಲ್ಲೆಕಟ್ಟಾಗಿಯೂ ಇರುವ—ವಿಚಾರಶೂನ್ಯತೆಯನ್ನು ಬಿಟ್ಟುಬಿಡಬೇಕು ॥೪೭॥

ಮಹಾತ್ಮನಾದವನು ನಿತ್ಯವೂ ವಿಚಾರಯುಕ್ತನಾಗಿರಬೇಕು. ಏಕೆಂದರೆ:—ವಿಷಯಾನುರಾಗವೆಂಬುದು ಎಂಥವರನ್ನೂ ಕುರುಡುಮಾಡಿಬಿಡುವುದರಿಂದ, ಹಾಳುಬಾವಿಯಂತೆ ಅದರಲ್ಲಿ ಬೀಳುವಾಗ—ವಿಚಾರವೇ ಅವಲಂಬನವಾಗುವುದು ॥೪೮॥

ಮನುಷ್ಯನು, ರಾಗದ್ವೇಷಾದಿ ಪ್ರವಾಹದಿಂದ ಕೊಚ್ಚಿ ಹೋಗುತ್ತಿದ್ದರೂ—ವಿಚಾರದಿಂದ ತನ್ನನ್ನು ತಾನೇ ಬಲವಾಗಿ ಹಿಡಿದುಕೊಂಡು, ಮನಸ್ಸೆಂಬ ಮೃಗವನ್ನು ಸಂಸಾರಮೋಹವೆಂಬ ಸಮುದ್ರದದೆಸೆಯಿಂದ ದಾಟಿಸಬೇಕು ॥೪೯॥

ಕೋಽಹಂ ಕಥಮಯಂ ದೋಷಃ ಸಂಸಾರಾಖ್ಯ ಉಪಾಗತಃ ।
ನ್ಯಾಯೇನೇತಿ ಪರಾಮರ್ಶೋ ವಿಚಾರಇತಿ ಕಥ್ಯತೇ ॥೫೦॥
ಅನ್ಧಾನ್ಧಂ ಮೋಹಸುಘನಂ ಚಿರಂ ದುಃಖಾಯ ಕೇವಲಮ್ ।
ಕೃತಂ ಶಿಲಾಯಾಹೃದಯಂ ದುರ್ಮತೇಶ್ಚಾವಿಚಾರಿಣಃ ॥೫೧॥
ಭಾವಾಭಾವಗ್ರಹೋತ್ಸರ್ಗದೃಶಾಮಿಹ ಹಿ ರಾಘವ ।
ನ ವಿಚಾರಾದೃತೇ ತತ್ತ್ವಂ ಜ್ಞಾಯತೇ ಸಾಧು ಕಿಂಚನ ॥೫೨॥
ವಿಚಾರಾಜ್ಜ್ಞಾಯತೇ ತತ್ತ್ವಂ ತತ್ತ್ವಾದ್ವಿಶ್ರಾನ್ತಿರಾತ್ಮನಿ ।
ಅತೋ ಮನಸಿ ಶಾನ್ತತ್ವಂ ಸರ್ವದುಃಖಪರಿಕ್ಷಯಃ ॥೫೩॥
ಸಫಲತಾಂ ಫಲತೇ ಭುವಿ ಕರ್ಮಣಾಂ ಪ್ರಕಟತಾಂ ಕಿಲ ಗಚ್ಛತಿ[1] ಉತ್ತಮಾಮ್ ।
ಸ್ಫುಟವಿಚಾರದೃಶೈವ ವಿಚಾರಿತಾ ಶಮವತೇ ಭವತೇ ಚ ವಿರೋಚತಾಮ್ ॥೫೪॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ವಿಚಾರನಿರೂಪಣಂ ನಾಮ
ಚತುರ್ದಶಃ ಸರ್ಗಃ.

ಇದುವರೆಗೂ ಹೇಳಿದ ವಿಚಾರವೆಂಬುದಾವುದೆಂದರೆ:—ನಾನು ಯಾರು? ಈ ಸಂಸಾರವೆಂಬ ದೋಷವು ನನಗೆ ಹೇಗೆ ಬಂದಿತು?—ಎಂಬುದಾಗಿ ಶಾಸ್ತ್ರೀಯವಾದ ಯುಕ್ತಿಯಿಂದ ಆಲೋಚಿಸುವುದೇ ವಿಚಾರವೆಂದು ಹೇಳಲ್ಪಡುವುದು ॥೫೦॥

ಕುರುಡರಲ್ಲೆಲ್ಲ ಕುರುಡನೆನ್ನಿಸಿ ಅಜ್ಞಾನದಿಂದ ನಿಬಿಡವಾದ ಶಿಲಾಹೃದಯವೂ, ವಿಚಾರಶೂನ್ಯನಾದ ದುರ್ಬುದ್ಧಿಯ ಹೃದಯವೂ ಕೂಡ, ಕೇವಲ ದುಃಖಾನುಭವಕ್ಕಾಗಿಯೇ ನಿರ್ಮಿತವಾಗಿರುವುವು ॥೫೧॥

ಅಯ್ಯಾ! ರಾಘವ! ಈ ಪ್ರಪಂಚದಲ್ಲಿ ಸತ್ಯವಾದುದರ ಸ್ವೀಕಾರವನ್ನೂ ಅಸತ್ಯವಾದುದರ ಪರಿತ್ಯಾಗವನ್ನೂ ತಿಳಿಯುವ ವಿವೇಕಿಗಳಿಗೆ, ವಿಚಾರವಿಲ್ಲದೆ ಯಾವುದೊಂದು ತತ್ವವೂ ತಿಳಿಯುವುದಿಲ್ಲ ॥೫೨॥

ಹೀಗೆ ಈ ವಿಚಾರದಿಂದ ತತ್ವಜ್ಞಾನವುಂಟಾಗುವುದು! ತತ್ವಜ್ಞಾನದಿಂದ ಪರಮಾತ್ಮನಲ್ಲಿ ವಿಶ್ರಾಂತಿಯುಂಟಾಗುವುದು; ಅದರಿಂದ ಮನಸ್ಸಿನಲ್ಲಿ ಶಾಂತಿರೂಪವಾದ ಸರ್ವದುಃಖನಾಶವಾಗುವುದು ॥೫೩॥

ಈ ಪ್ರಪಂಚದಲ್ಲಿ ಸಮಸ್ತಜನರೂ ಕೂಡ ಸ್ಪಷ್ಟವಾದ ವಿಚಾರದೃಷ್ಟಿಯಿಂದಲೇ—ತಾವು ಮಾಡಿದ ಕರ್ಮಗಳಿಗೆ ಫಲಹೊಂದುವರು; ಇದರಿಂದಲೇ ಉತ್ತಮವಾದ ಪ್ರಕಾಶವನ್ನೂ ಹೊಂದುವರು. ಆದಕಾರಣ, ಅಯ್ಯಾ! ರಾಮ! ಕೇವಲ ಶಾಂತಿಯುಕ್ತನಾದ ನೀನೂ ಕೂಡ, ಈ ವಿಚಾರದಲ್ಲಿ ಅಭಿರುಚಿಯಿಡು ॥೫೪॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ವಿಚಾರ ನಿರೂಪಣವೆಂಬ
ಹದಿನಾಲ್ಕನೆಯ ಸರ್ಗವು.

1. ಆರ್ಷಃ ಸನ್ಧ್ಯಭಾವಃ. ವೈಯಾಕರಣಾಸ್ತು ವಾಕ್ಯತ್ವಾದದೋಷಂ ಮನ್ಯನ್ತೇ.

ಅಥ ಮುಮುಕ್ಷುವ್ಯವಹಾರಪ್ರಕರಣೇ ಪಞ್ಚದಶಃ ಸರ್ಗಃ.

ಶ್ರೀ ವಸಿಷ್ಠಉವಾಚ.

ಸನ್ತೋಷೋ ಹಿ ಪರಂ ಶ್ರೇಯಃ ಸನ್ತೋಷಃ ಸುಖಮುಚ್ಯತೇ |
ಸನ್ತುಷ್ಟಃ ಪರಮಭ್ಯೇತಿ ವಿಶ್ರಾಮಮರಿಸೂದನ ||೧||
ಸನ್ತೋಷೈಶ್ವರ್ಯಸುಖಿನಾಂ ಚಿರವಿಶ್ರಾನ್ತಚೇತಸಾಮ್ |
ಸಾಮ್ರಾಜ್ಯಮಪಿ ಶಾನ್ತಾನಾಂ ಜರತ್ತೃಣಲವಾಯತೇ ||೨||
ಸನ್ತೋಷಶಾಲಿನೀ ಬುದ್ಧಿಃ ರಾಮ ಸಂಸಾರವೃತ್ತಿಷು |
ವಿಷಮಾಸ್ವಪ್ಯನುದ್ವಿಗ್ನಾ ನ ಕದಾಚನ ಹೀಯತೆ ||೩||
ಸನ್ತೋಷಾಮೃತಪಾನೇನ ಯೇ ಶಾನ್ತಾಸ್ತೃಪ್ತಿಮಾಗತಾಃ |

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹದಿನೈದನೆಯ ಸರ್ಗವು.

ವೈರಾಗ್ಯಕಲ್ಪವೃಕ್ಷಸ್ಯ ಚ್ಛಾಯೇವ ಸುಖಶೀತಲಃ |
ತೃತೀಯೋ ದ್ವಾರಪಾಲೋತ್ರ ಸನ್ತೋಷಉಪವರ್ಣ್ಯತೇ ||

ವೈರಾಗ್ಯವೆಂಬ ಕಲ್ಪವೃಕ್ಷದ ನೆಳಲಿನಂತೆ ಸುಖಕರವಾಗಿಯೂ ಶೀತಲವಾಗಿಯೂ ಇರುವ ಸಂತೋಷವೆಂಬ ತೃತೀಯ ದ್ವಾರಪಾಲನು ಈ ಸರ್ಗದಲ್ಲಿ ವರ್ಣಿಸಲ್ಪಡುವನು.

ಹಿಂದೆ ಹೇಳಿದ ನಾಲ್ಕುಮಂದಿ ದ್ವಾರಪಾಲಕರಲ್ಲಿ ಶಮ ವಿಚಾರಗಳೆಂಬ ಇಬ್ಬರನ್ನು ವರ್ಣಿಸಿ, ಈಗ ಕ್ರಮಪ್ರಾಪ್ತನಾದ ಸಂತೋಷವೆಂಬ ಮೂರನೆಯವನನ್ನು ವರ್ಣಿಸಲುಪಕ್ರಮಿಸಿರುವ ಶ್ರೀ ವಸಿಷ್ಠಮುನಿಗಳು ಶ್ರೀರಾಮನನ್ನು ಕುರಿತು ಮತ್ತೆ ಹೇಳಿದರು.

ಅಯ್ಯಾ! ರಾಮ! ಈಗ ಮೂರನೆಯವನಾದ ಸಂತೋಷವೆಂಬವನನ್ನು ನಿನಗೆ ಹೇಳುವನು, ಕೇಳು. ಮನುಷ್ಯನಿಗೆ ಸಂತೋಷವೇ ಉತ್ಕೃಷ್ಟವಾದ ಶ್ರೇಯಸ್ಸು; ಇದೇ ಸುಖವು. ಅಯ್ಯಾ! ಶತ್ರುಸಂಹಾರಕನೆ! ಸಂತೋಷವುಳ್ಳವನು ಅತ್ಯುತ್ಕೃಷ್ಟವಾದ ವಿಶ್ರಾಂತಿಯನ್ನು ಪಡೆಯುವನು ||೧||

ಸಂತೋಷವೆಂಬ ಐಶ್ವರ್ಯದಿಂದ ಆನಂದಹೊಂದಿ—ಶಾಶ್ವತವಾಗಿ ವಿಶ್ರಾಂತಿಪಡೆದ ಮನಸ್ಸುಳ್ಳ ಶಾಂತರಿಗೆ, ದೊಡ್ಡ ಸಾಮ್ರಾಜ್ಯ ಪದವಿಯೂ ಕೂಡ, ಜೀರ್ಣವಾದ ಒಂದು ಸಣ್ಣ ಹುಲ್ಲುಕಡ್ಡಿಯಂತೆ ತೋರುವುದು ||೨||

ಅಯ್ಯಾ! ರಾಮ! ಸಂತೋಷಯುಕ್ತವಾದ ಬುದ್ಧಿಯು, ಎಷ್ಟು ಕಷ್ಟವಾದ ಸಂಸಾರವ್ಯಾಪಾರಗಳಲ್ಲಿಯೂ ಕೂಡ ಕಳವಳಪಡದೆ, ಎಂದಿಗೂ ಹೀನವಾಗದಿರುವುದು ||೩||

ಶಾಂತರಾಗಿರುವ ಯಾವ ಪುರುಷರು, ಸಂತೋಷವೆಂಬ ಅಮೃತವನ್ನು ಪಾನಮಾಡಿ

ಭೋಗಶ್ರೀರತುಲಾ ತೇಷಾಂ ವಿಷಾ ಪ್ರತಿವಿಷಾಯತೇ ||೪||
ನ ತಥಾ ಸುಖಯನ್ತ್ಯೇತಾಃ ಪೀಯೂಷರಸವೀಚಯಃ |
ಯಥಾತಿಮಧುರಾಸ್ವಾದಃ ಸನ್ತೋಷೋ ದೋಷನಾಶನಃ ||೫||
ಅಪ್ರಾಪ್ತವಾಞ್ಛಾಮುತ್ಸೃಜ್ಯ ಸಮ್ಪ್ರಾಪ್ತೇ ಸಮತಾಂ ಗತಃ |
ಅದೃಷ್ಟಖೇದಾಖೇದೋ ಯಃ ಸ ಸನ್ತುಷ್ಟ ಇಹೋಚ್ಯತೇ ||೬||
ಆತ್ಮನಾತ್ಮನಿ ಸನ್ತೋಷಂ ಯಾವದ್ಯಾತಿ ನ ಮಾನಸಮ್ |
ಉದ್ಭವನ್ತ್ಯಾಪದಸ್ತಾವತ್ ಲತಾ ಇವ ಮನೋಬಿಲಾತ್ ||೭||
ಸನ್ತೋಷಶೀತಲಂ ಚೇತಃ ಶುದ್ಧವಿಜ್ಞಾನದೃಷ್ಟಿಭಿಃ |
ಭೃಶಂ ವಿಕಾಸಮಾಯಾತಿ ಸೂರ್ಯಾಂಶುಭಿರಿವಾಮ್ಬುಜಮ್ ||೮||
ಆಶಾವೈವಶ್ಯವಿವಶೇ ಚಿತ್ತೇ ಸನ್ತೋಷವರ್ಜಿತೇ |
ಮ್ಲಾನೇ ವಕ್ತ್ರಮಿವಾದರ್ಶೇ ನ ಜ್ಞಾನಂ ಪ್ರತಿಬಿಮ್ಬತಿ ||೯||
ಅಜ್ಞಾನಘನಯಾಮಿನ್ಯಾ ಸಙ್ಕೋಚಂ ನ ನರಾಮ್ಬುಜಮ್|
ಯಾತ್ಯಸಾವುದಿತೋ ಯಸ್ಯ ನಿತ್ಯಸನ್ತೋಷಭಾಸ್ಕರಃ ||೧೦||

ಆದರಿಂದ ತೃಪ್ತರಾಗಿರುವರೋ, ಅವರಿಗೆ—ಅಸದೃಶವಾದ ಈ ಪ್ರಾಪಂಚಿಕಭೋಗಸಂಪತ್ತು ಪ್ರತಿಕೂಲವಾಗಿ ವಿಷದಂತೆ ಕಾಣುತ್ತದೆ ||೪||

ಸಕಲ ದೋಷಗಳನ್ನೂ ನಾಶಪಡಿಸುವ—ಅತಿ ಮಧುರವಾದ ರುಚಿಯುಳ್ಳ—ಈ ಸಂತೋಷವು ಹೇಗೆ ಆನಂದವುಂಟುಮಾಡುತ್ತದೆಯೋ, ಅಷ್ಟುಮಟ್ಟಿಗೆ—ಸರ್ವೋತ್ತಮವಾದ ಆ ಅಮೃತರಸದ ಅಲೆಗಳೂ ಸಂತೋಷಪಡಿಸುವುದಿಲ್ಲ ||೫||

ಯಾವ ಮನುಷ್ಯನು—ಸಿಕ್ಕದಿರುವುದರಲ್ಲಿ ಆಶೆಯನ್ನಿಟ್ಟುಕೊಳ್ಳದೆ—ತಾನಾಗಿ ಬಂದಿರುವುದರಲ್ಲಿ ಉದಾಸೀನಭಾವದಿಂದಿರುತ-ಖೇದಮೋದಗಳೊಂದನ್ನೂ ಅರಿಯದಿರುವನೋ, ಅವನೇ ಸಂತೋಷವುಳ್ಳವನೆಂದು ಈ ಲೋಕದಲ್ಲಿ ಹೇಳಲ್ಪಡುವನು ||೬||

ಎಲ್ಲಿಯವರೆಗೆಪುರುಷರ ಮನಸ್ಸು ತಾನಾಗಿ ಆತ್ಮನಲ್ಲಿ ಸಂತೋಷಪಡೆಯುವುದಿಲ್ಲವೋ, ಅದುವರೆಗೂ ಮನಸ್ಸೆಂಬ ಹಳ್ಳದದೆಸೆಯಿಂದ ವಿಪತ್ತುಗಳು ಲತೆಗಳಂತೆ ಬಂದರಹಿಂದೊಂದು ಹುಟ್ಟುತ್ತಲೇ ಇರುತ್ತವೆ ||೭||

ಸಂತೋಷದಿಂದ ತಣ್ಣಗಿರುವ ಮನಸ್ಸು, ಸೂರ್ಯಕಿರಣಗಳಿಂದ ಕಮಲವರಳುವಂತೆ, ಶುದ್ಧವಾದ ಜ್ಞಾನದೃಷ್ಟಿಯಿಂದ ಅತ್ಯಂತ ವಿಕಾಸಹೊಂದುವುದು ||೮||

ಆಶಾಪರವಶವಾಗಿ ಸಂತೋಷರಹಿತವಾಗಿರುವ ಮನಸ್ಸಿನಲ್ಲಿ—ಮಲಿನವಾದ ಕನ್ನಡಿಯಲ್ಲಿ ಮುಖವು ಪ್ರತಿಬಿಂಬಿಸದಿರುವಂತೆ—ಜ್ಞಾನೋಪದೇಶವು ಪ್ರತಿಫಲಿಸುವುದಿಲ್ಲ ||೯||

ಯಾರಿಗೆ ಈ ನಿತ್ಯವಾದ ಸಂತೋಷವೆಂಬ ಸೂರ್ಯನುದಯಿಸಿರುವನೋ, ಅಂತಹ ಮನುಷ್ಯನೆಂಬ ಕಮಲವು—ಅಜ್ಞಾನವೆಂಬ ಅಂಧಕಾರ ರಾತ್ರಿಯಿಂದ ಸಂಕೋಚಹೊಂದುವುದಿಲ್ಲ ||೧೦||

ಅಕಿಂಚನೋಽಪ್ಯಸೌ ಜನ್ತುಃ ಸಾಮ್ರಾಜ್ಯಸುಖಮಶ್ನುತೇ ।
ಆಧಿವ್ಯಾಧಿವಿನಿರ್ಮುಕ್ತಂ ಸನ್ತುಷ್ಟಂ ಯಸ್ಯ ಮಾನಸಮ್ ॥೧೧॥

ನಾಭಿವಾಞ್ಛತ್ಯಸಮ್ಪ್ರಾಪ್ತಂ ಪ್ರಾಪ್ತಂ ಭುಙ್ಕ್ತೇ ಯಥಾಕ್ರಮಮ್ ।
ಯಃ ಸುಸೌಮ್ಯಸಮಾಚಾರಃ ಸನ್ತುಷ್ಟ ಇತಿ ಕಥ್ಯತೇ ॥೧೨॥

ಸನ್ತುಷ್ಟಿಪರಿತೃಪ್ತಸ್ಯ ಮಹತಃ ಪೂರ್ಣಚೇತಸಃ ।
ಕ್ಷೀರಾಬ್ಧೇರಿವ ಶುದ್ಧಸ್ಯ ಮುಖೇ ಲಕ್ಷ್ಮೀರ್ವಿರಾಜತೇ ॥೧೩॥

ಪೂರ್ಣತಾಮಲಮಾಶ್ರಿತ್ಯ ಸ್ವಾತ್ಮನ್ಯೇವಾತ್ಮನಾ ಸ್ವಯಮ್ ।
ಪೌರುಷೇಣ ಪ್ರಯತ್ನೇನ ತೃಷ್ಣಾಂ ಸರ್ವತ್ರ ವರ್ಜಯೇತ್ ॥೧೪॥

ಸನ್ತೋಷಾಮೃತಪೂರ್ಣಸ್ಯ ಶಾನ್ತಶೀತಲಯಾ ಧಿಯಾ ।
ಸ್ವಯಂ ಸ್ಥೈರ್ಯಂ ಮನೋ ಯಾತಿ ಶೀತಾಂಶೋರಿವ ಶಾಶ್ವತಮ್ ॥೧೫॥

ಸನ್ತೋಷಪುಷ್ಟಮನಸಂ ಭೃತ್ಯಾ ಇವ ಮಹರ್ದ್ಧಯಃ ।
ರಾಜಾನಮುಪತಿಷ್ಠನ್ತಿ ಕಿಙ್ಕರತ್ವಮುಪಾಗತಾಃ ॥೧೬॥

ಆತ್ಮನ್ಯೇವಾತ್ಮನಿ ಸ್ವಸ್ಥೇ ಸನ್ತುಷ್ಟೇ ಪುರುಷೇ ಸ್ಥಿತೇ ।
ಪ್ರಶಾಮ್ಯನ್ತ್ಯಾಧಯಃ ಸರ್ವೇ ಪ್ರಾವೃಷೀವಾಶು ಪಾಂಸವಃ ॥೧೭॥

ಯಾವ ಪ್ರಾಣಿಗೆ ಮನಸ್ಸು ಸಂತುಷ್ಟವಾಗಿರುವುದೋ, ಅವನು—ಹುಟ್ಟುದರಿದ್ರನಾಗಿದ್ದರೂ—ಆಧಿವ್ಯಾಧಿಗಳಿಂದ ರಹಿತವಾದ ಸಾಮ್ರಾಜ್ಯ ಸೌಖ್ಯವನ್ನನುಭವಿಸುವನು ॥

ಯಾವನು ಅತಿ ಸೌಮ್ಯವಾದ ಆಚರಣೆಯುಳ್ಳವನಾಗಿ, ಅಲಬ್ಧವಾದುದನ್ನಪೇಕ್ಷಿಸದೆಯೂ ಪ್ರಾಪ್ತವಾದುದನ್ನು ಆಯಾ ಕಾಲಾನುಗುಣವಾಗಿ ಅನುಭವಿಸುತಲೂ ಇರುವನೋ, ಅವನೇ ಸಂತುಷ್ಟನೆಂದು ಹೇಳಲ್ಪಡುವನು ॥೧೨॥

ಹೀಗೆ ಸಂತೋಷದಿಂದ ತೃಪ್ತನಾಗಿ ಪರಿಪೂರ್ಣಹೃದಯನಾಗಿರುವ ಶುದ್ಧನಾದ ಮಹಾತ್ಮನಿಗೆ, ಕ್ಷೀರಸಮುದ್ರದಂತೆ ಮುಖದಲ್ಲಿ ಲಕ್ಷ್ಮಿಯು ಪ್ರಕಾಶಿಸುತ್ತಿರುವಳು ॥೧೩॥

ಈಪ್ರಕಾರವಾಗಿ ತನ್ನಲ್ಲಿ ತಾನೇ ಪರಿಪೂರ್ಣ ಸ್ವಭಾವವನ್ನವಲಂಬಿಸಿಕೊಂಡು, ಪುರುಷಪ್ರಯತ್ನದಿಂದ ಸರ್ವವಿಷಯದಲ್ಲಿಯೂ ತೃಷ್ಣೆಯನ್ನು ಬಿಟ್ಟುಬಿಡಬೇಕು ॥೧೪॥

ಚಂದ್ರನಂತೆ ಸಂತೋಷವೆಂಬ ಅಮೃತದಿಂದ ಪರಿಪೂರ್ಣನಾಗಿರುವವನ ಮನಸ್ಸು, ಶಾಂತವಾಗಿ ಶೀತಲವಾಗಿರುವ ಬುದ್ಧಿಯಿಂದ—ತಾನಾಗಿಯೇ ಶಾಶ್ವತವಾದ ಸ್ಥೈರ್ಯವನ್ನು ಪಡೆಯುವುದು ॥೧೫॥

ಸಂತೋಷದಿಂದ ಪೂರ್ಣವಾದ ಮನಸ್ಸುಳ್ಳವನನ್ನು, ರಾಜನನ್ನು ಭೃತ್ಯರೋಪಾದಿಯಲ್ಲಿ—ಮಹಾಸಂಪತ್ತುಳ್ಳವರೂ ಕೂಡ ಚಾಕರರಾಗಿ ಸೇವಿಸುತ್ತಾರೆ ॥೧೬॥

ಹೀಗೆ ಪುರುಷನು ತನ್ನಲ್ಲಿ ತಾನೇ ಸಂತುಷ್ಟನಾಗಿ ಸ್ವಸ್ಥನಾಗಿರುತಿರಲು, ಮಳೆಗಾಲದಲ್ಲಿ ಧೂಳಿನಂತೆ—ಸಮಸ್ತ ವ್ಯಥೆಗಳೂ ಬೇಗನೆ ಶಾಂತವಾಗುವುವು ॥೧೭॥

ನಿತ್ಯಂ ಶೀತಲಯಾ ರಾಮ ಕಳಙ್ಕಪರಿಭಿನ್ನಯಾ ।
ಪುರುಷಃ ಶುದ್ಧಯಾ ವೃತ್ತ್ಯಾ ಭಾತಿ ಪೂರ್ಣತಯೇನ್ದುವತ್ ॥೧೮॥
ಸಮತಾಸುನ್ದರಂ ವಕ್ತ್ರಂ ಪುರುಷಸ್ಯಾವಲೋಕಯರ್ನ್ ।
ತೋಷಮೇತಿ ಯಥಾ ಲೋಕೋ ನ ತಥಾ ಧನಸಞ್ಚಯೈಃ ॥೧೯॥
ಸಮತಯಾ ಮತಯಾ ಗುಣಶಾಲಿನಾಂ ಪುರುಷರಾಡಿಹ ಯಃ ಸಮಲಙ್ಕೃತಃ ।
ತಮಮಲಂ ಪ್ರಣಮನ್ತಿ ನಭಶ್ಚರಾಃ ಅಪಿ ಮಹಾಮುನಯೋ ರಘುನನ್ದನ ॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ಸನ್ತೋಷನಿರೂಪಣಂ
ನಾಮ ಪಞ್ಚದಶಃ ಸರ್ಗಃ.

ಅಯ್ಯಾ! ರಾಮ! ಚಂದ್ರನು ಪರಿಪೂರ್ಣನಾದಾಗ ಕಳಂಕಯುಕ್ತನಾಗಿದ್ದರೂ ಅದರ ಲೇಪವಿಲ್ಲದಿರುವಂತೆ ಪುರುಷನೂಕೂಡ ಸಂತೋಷವಿಲ್ಲದಾಗ ದೋಷಯುಕ್ತವಾಗಿದ್ದರೂ—ಸಂತೋಷಪ್ರಾಪ್ತ್ಯನಂತರದಲ್ಲಿ ನಿತ್ಯಶೀತಲವಾಗಿಯೂ ಪರಿಶುದ್ಧವಾಗಿಯೂ ಇರುವ ವ್ಯಾಪಾರದಿಂದ ಪ್ರಕಾಶಿಸುವನು ॥೧೮॥

ಸಕಲ ವಿಷಯದಲ್ಲಿಯೂ ತೃಪ್ತಿಹೊಂದಿ ಸರ್ವತ್ರ ಸಮವಾದ ಸ್ಥಿತಿಯಿಂದ ಸುಂದರವಾದ ಪುರುಷನ ಮುಖವನ್ನು ನೋಡಿ—ಜನರು ಹೇಗೆ ಸಂತೋಷಪಡುವರೋ, ಅನೇಕ ದ್ರವ್ಯಸಮೂಹದಿಂದಲೂ ಅಷ್ಟುಮಟ್ಟಿಗೆ ಸಂತೋಷಪಡುವುದಿಲ್ಲ ॥೧೯॥

ಅಯ್ಯಾ! ರಘುನಂದನನೆ! ಈ ಲೋಕದಲ್ಲಿ ಗುಣಶಾಲಿಗಳಿಗೆಲ್ಲ ಇಷ್ಟವಾಗಿರುವ ಸಮತೆಯಿಂದ (ತಾರತಮ್ಯವಿಲ್ಲದೆ ಎಲ್ಲರಲ್ಲಿಯೂ ಏಕವಿಧವಾಗಿರುವಿಕೆ) ಯಾವ ಪುರುಷಶ್ರೇಷ್ಠನು ಅಲಂಕರಿಸಲ್ಪಟ್ಟಿರುವನೋ, ನಿರ್ಮಲನಾದ ಆ ಮಹಾನುಭಾವನನ್ನು ದೇವತೆಗಳೂ ಮರ್ಹಿಗಳೂಕೂಡ ನಮಸ್ಕರಿಸುವರು ॥೨೦॥

ಇದು ಮುಮುಕ್ಷುವ್ಯವಹಾರ ಪ್ರಕರಣದಲ್ಲಿ ಸನ್ತೋಷನಿರೂಪಣವೆಂಬ
ಹದಿನಯ್ದನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಷೋಡಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ವಿಶೇಷೇಣ ಮಹಾಬುದ್ಧೇ ಸಂಸಾರೋತ್ತರಣೇ ನೃಣಾಮ್ ।
ಸರ್ವತ್ರೋಪಕರೋತೀಹ ಸಾಧುಃ ಸಾಧುಸಮಾಗಮಃ ॥೧॥

ಸಾಧುಸಙ್ಗತರೋರ್ಜಾತಂ ವಿವೇಕಕುಸುಮಂ ಸಿತಮ್ ।
ರಕ್ಷನ್ತಿ ಯೇ ಮಹಾತ್ಮಾನೋ ಭಾಜನಂ ತೇ ಫಲಶ್ರಿಯಃ ॥೨॥

ಶೂನ್ಯಮಾಕೀರ್ಣತಾಮೇತಿ ಮೃತಿರಪ್ಯುತ್ಸವಾಯತೇ ॥
ಆಪತ್ ಸಮ್ಪದಿವಾಭಾತಿ ವಿದ್ವಜ್ಜನಸಮಾಗಮೇ ॥೩॥

ಹಿಮಮಾಪತ್ಸರೋಜಿನ್ಯಾಃ ಮೋಹನೀಹಾರಮಾರುತಃ ।
ಜಯತ್ಯೇಕೋ ಜಗತ್ಯಸ್ಮಿನ್ ಸಾಧುಃ ಸಾಧುಸಮಾಗಮಃ ॥೪॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹದಿನಾರನೆಯ ಸರ್ಗವು.

ಚತುರ್ಥೋ ದ್ವಾರಪಾಲೋತ್ರ ವರ್ಣ್ಯತೇ ಸಾಧುಸಙ್ಗಮಃ ।
ಚತುರ್ಷ್ವೇಕೈಕಸೇವಾಪಿ ಪುರುಷಾರ್ಥಫಲೇತ್ಯಪಿ ॥

ಈ ಸರ್ಗದಲ್ಲಿ—ನಾಲ್ಕನೆಯ ದ್ವಾರಪಾಲಕನಾದ ಸಾಧುಸಂಗಮಸ್ವರೂಪವೂ, ಈ ನಾಲ್ಕರಲ್ಲೊಂದೊಂದರ ಸೇವೆಯಾದರೂ ಪುರುಷಾರ್ಥವನ್ನು ಫಲಿಸುತ್ತದೆಂಬ ವಿಷಯವೂ ವರ್ಣಿಸಲ್ಪಡುವುವು.

ಮತ್ತೆ ವಸಿಷ್ಠಮಹರ್ಷಿಗಳು ಶ್ರೀರಾಮನನ್ನು ಕುರಿತು ಹೇಳಿದರು.

ಮಹಾಪ್ರಾಜ್ಞನಾದ ರಾಮನೆ! ಈ ಲೋಕದಲ್ಲಿ ಮನುಷ್ಯರಿಗೆ ಸಂಸಾರವನ್ನು ದಾಟುವವಿಷಯದಲ್ಲಿ, ಸರ್ವೋತ್ಕೃಷ್ಟವಾದ ಸಾಧುಸಮಾಗಮವು, ಹಿಂದೆ ಹೇಳಿದ ಮೂರುಮಂದಿಗಿಂತಲೂ ವಿಶೇಷವಾಗಿ ಸರ್ವಾವಸ್ಥೆಗಳಲ್ಲಿಯೂ ಉಪಕಾರಮಾಡುತ್ತದೆ ॥೧॥

ಸಾಧುಸಂಗವೆಂಬ ವೃಕ್ಷದಿಂದ ಹುಟ್ಟಿದ ವಿವೇಕವೆಂಬ ಶುಭ್ರವಾದ ಪುಷ್ಪವನ್ನು ಯಾವ ಮಹಾತ್ಮರು ಕಾಪಾಡಿಕೊಳ್ಳುವರೋ, ಅವರು ಉತ್ತರತ್ರ ಫಲಸಂಪತ್ತಿಗೆ ಪಾತ್ರರಾಗುವರು ॥೨॥

ಜ್ಞಾನಿಗಳಾದ ಸಾಧುಗಳ ಸಮಾಗಮವಾದರೆ—ಪಾಳಾಗಿದ್ದುದೂ ಕೂಡ ಜನಪರಿಪೂರ್ಣವಾದಂತೆ ಕಾಣುವುದು; ಮರಣವೂ ಕೂಡ ಉತ್ಸವದಂತಾಗುವುದು; ವಿಪತ್ತೂ ಕೂಡ ಸಂಪತ್ತಿನಂತೆ ತೋರುವುದು ॥೩॥

ವಿಪತ್ತೆಂಬ ಕಮಲಲತೆಗೆ ಹಿಮವಾಗಿಯೂ—ಅಜ್ಞಾನವೆಂಬ ಮಂಜಿಗೆ ಗಾಳಿಯಾಗಿಯೂ ಇರುವ ಪ್ರಶಸ್ತವಾದ ಸಾಧುಸಮಾಗಮವೊಂದೇ, ಈ ಲೋಕದಲ್ಲಿ ಸರ್ವೋತ್ಕೃಷ್ಟವಾಗಿರುವುದು ॥೪॥

ಪರಂ ವಿವರ್ಧನಂ ಬುದ್ಧೇಃ ಅಜ್ಞಾನತರುಶಾತನಮ್ |
ಸಮುತ್ಸಾರಣಮಾಧೀನಾಂ ವಿದ್ಧಿ ಸಾಧುಸಮಾಗಮಮ್ ||೫||
ವಿವೇಕಃ ಪರಮೋ ದೀಪೋ ಜಾಯತೇ ಸಾಧುಸಙ್ಗಮಾತ್ |
ಮನೋಹರೋಜ್ಜ್ವಲೋ ನೂನಂ ಅಸೇಕಾದಿವ ಗುಚ್ಛಕಃ ||೬||
ನಿರಪಾಯಾಂ ನಿರಾಬಾಧಾಂ ನಿರ್ವೃತಿಂ ನಿತ್ಯಪೀವರೀಮ್ |
ಅನುತ್ತಮಾಂ ಪ್ರಯಚ್ಛನ್ತಿ ಸಾಧುಸಙ್ಗವಿಭೂತಯಃ ||೭||
ಅಪಿ ಕಷ್ಟತರಾಂ ಪ್ರಾಪ್ತೈಃ ದಶಾಂ ವಿವಶತಾಂ ಗತೈಃ |
ಮನಾಗಪಿ ನ ಸನ್ತ್ಯಾಜ್ಯಾ ಮಾನವೈಃ ಸಾಧುಸಙ್ಗತಿಃ ||೮||
ಸಾಧುಸಙ್ಗತಯೋ ಲೋಕೇ ಸನ್ಮಾರ್ಗಸ್ಯ ಚ ದೀಪಿಕಾಃ|
ಹಾರ್ದಾನ್ಧಕಾರಹಾರಿಣ್ಯೋ ಭಾಸೋ ಜ್ಞಾನವಿವಸ್ವತಃ ||೯||
ಯಃ ಸ್ನಾತಃ ಶೀತಸಿತಯಾ ಸಾಧುಸಙ್ಗತಿಗಙ್ಗಯಾ |
ಕಿಂ ತಸ್ಯ ದಾನೈಃ ಕಿಂ ತೀರ್ಥೈಃ ಕಿಂ ತಪೋಭಿಃ ಕಿಮಧ್ವರೈಃ ||೧೦||

ಮತ್ತು, ಈ ಸಾಧುಸಮಾಗಮವು—ಜ್ಞಾನವನ್ನು ಹೆಚ್ಚಾಗಿ ಅಭಿವೃದ್ಧಿಪಡಿಸತಕ್ಕುದೆಂದೂ, ಅಜ್ಞಾನವೆಂಬ ವೃಕ್ಷವನ್ನು ಕತ್ತರಿಸತಕ್ಕುದೆಂದೂ, ಮನೋವ್ಯಥೆಗಳನ್ನೆಲ್ಲ ಓಡಿಸಿ ಬಿಡತಕ್ಕುದೆಂದೂ ತಿಳಿ ||೫||

ನೀರುಹೊಯ್ಯೋಣದರಿಂದ—ಮನೋಹರವಾಗಿಯೂ ಪ್ರಕಾಶಮಾನವಾಗಿಯೂ ಇರುವ ಪುಷ್ಪಗುಚ್ಛವು ಹುಟ್ಟುವಂತೆ, ಸಾಧುಸಮಾಗಮದಿಂದ ವಿವೇಕವೆಂಬ ಸರ್ವೋತ್ಕೃಷ್ಟವಾದ ದೀಪವು ಹುಟ್ಟುವುದು ||೬||

ಇನ್ನೂ ಈ ಸಾಧುಸಂಗಮಸಂಪತ್ತುಗಳು—ನಾಶರಹಿತವಾಗಿಯೂ ವ್ಯಥಾರಹಿತವಾಗಿಯೂ ನಿತ್ಯವಾಗಿ ಪರಿಪೂರ್ಣವಾಗಿಯೂ ಸರ್ವೋತ್ಕೃಷ್ಟವಾಗಿಯೂ ಇರುವ ಆನಂದವನ್ನು ಕೊಡುತ್ತವೆ||೭||

ಆದಕಾರಣ, ಮನುಷ್ಯರು ಎಷ್ಟು ಕಷ್ಟತಮವಾದ ಅವಸ್ಥೆಯನ್ನು ಹೊಂದಿದರೂ—ಎಷ್ಟು ಪರಾಧೀನರಾಗಿದ್ದರೂ—ಸಾಧುಸಂಗಮವನ್ನು ಸ್ವಲ್ಪವೂ ಬಿಡಕೂಡದು ||೮||

ಮತ್ತು, ಲೋಕದಲ್ಲಿ ಸಾಧುಸಹವಾಸವು—ಜ್ಞಾನವೆಂಬ ಸೂರ್ಯನಿಗೆ ಕಿರಣಗಳಾಗಿರುವುದು, ಇದು—ಸನ್ಮಾರ್ಗವೆಂಬ ನಕ್ಷತ್ರಮಾರ್ಗವನ್ನು ಪ್ರಕಾಶಪಡಿಸತಕ್ಕುದಾಗಿಯೂ ಮನಸ್ಸಿನ ಅಜ್ಞಾನವೆಂಬ ಕತ್ತಲೆಯನ್ನು ಪರಿಹರಿಸತಕ್ಕುದಾಗಿಯೂ ಇರುವುದು||೯||

ಯಾವ ಮನುಷ್ಯನು—(೧) ಶೀತಲವಾಗಿಯೂ ಶುಭ್ರವಾಗಿಯೂ ಇರುವ ಸಾಧುಸಹವಾಸವೆಂಬ ಗಂಗಾನದಿಯಲ್ಲಿ ಸ್ನಾನಮಾಡುತ್ತಾನೆಯೋ, ಅವನಿಗೆ—ನಾನಾವಿಧ ದಾನಗಳಿಂದೇನು ? ಇತರತೀರ್ಥಗಳಿಂದೇನು ? ತಪಸ್ಸುಗಳಿಂದೇನು ? ಯಜ್ಞಗಳಿಂದೇನು?||೧೦||

---

(೧) ಗಂಗೆಯು ತಣ್ಣಗೆ ಬಿಳುಪಾಗಿರುವುದು ! ಸತ್ಸಹವಾಸವು ದಯಾರಸ ಪರಿಪೂರ್ಣವಾಗಿ ನಿರ್ಮಲವಾಗಿರುವುದು.

ನೀರಾಗಾಶ್ಛಿನ್ನಸನ್ದೇಹಾಃ ಗಳಿತಗ್ರನ್ಥಯೋಽನಘ ।
ಸಾಧವೋ ಯದಿ ವಿದ್ಯನ್ತೇ ಕಿಂ ತಪಸ್ತೀರ್ಥಸಙ್ಗ್ರಹೈಃ ॥೧೧॥
ವಿಶ್ರಾನ್ತಮನಸೋ ಧನ್ಯಾಃ ಪ್ರಯತ್ನೇನ ಪರೇಣ ಹಿ ।
ದರಿದ್ರೇಣೇವ ಮಣಯಃ ಪ್ರೇಕ್ಷಣೀಯಾಹಿ ಸಾಧವಃ ॥೧೨॥
ಸತ್ಸಮಾಗಮಸೌನ್ದರ್ಯಶಾಲಿನೀ ಧೀಮತಾಂ ಮತಿಃ ।
ಕಮಲೇವಾಪ್ಸರೋಬೃನ್ದೇ ಸರ್ವದೈವ ವಿರಾಜತೇ ॥೧೩॥
ತೇನಾಮಲವಿಚಾರಸ್ಯ ಪದಸ್ಯಾಗ್ರಾವಚೂಳತಾ ।
ಪ್ರಥಿತಾ ಯೇನ ಧನ್ಯೇನ ನ ತ್ಯಕ್ತಾ ಸಾಧುಸಙ್ಗತಿಃ ॥೧೪॥
ವಿಚ್ಛಿನ್ನಗ್ರನ್ಥಯಸ್ತಜ್ಜ್ಞಾಃ ಸಾಧವಃ ಸರ್ವಸಮ್ಮತಾಃ ।
ಸರ್ವೋಪಾಯೇನ ಸಂಸೇವ್ಯಾಃ ತೇ ಹ್ಯುಪಾಯಾಭವಾಮ್ಬುಧೌ ॥೧೫॥
ತಪಿತೇ ನರಕಾಗ್ನೀನಾಂ ಸಂಶುಷ್ಕೇನ್ಧನತಾಂ ಗತಾಃ ।
ಯೈರ್ದೃಷ್ಟಾಹೇಲಯಾ ಸನ್ತೋ ನರಕಾನಲವಾರಿದಾಃ ॥೧೬॥

ಎಲೈ ನಿರ್ದೋಷನಾದ ರಾಮನೆ! ವಿಷಯಾಭಿಲಾಷಶೂನ್ಯರಾಗಿಯೂ—ಸಂದೇಹಗಳನ್ನೆಲ್ಲ ಕಳೆದುಕೊಂಡಿರತಕ್ಕವರಾಗಿಯೂ—(೧) ಹೃದಯಗ್ರಂಥಿಯನ್ನು ಬಿಟ್ಟವರಾಗಿಯೂ ಇರುವ—ಸಾಧುಗಳಿದ್ದುಬಿಟ್ಟರೆ, ತಪಸ್ಸುಗಳಿಂದಲೂ ತೀರ್ಥಯಾತ್ರೆಗಳಿಂದಲೂ ಫಲವೇನು? ॥೧೧॥

ಆದಕಾರಣ, ಮನಸ್ಸಿನಲ್ಲಿ ವಿಶ್ರಾಂತಿಪಡೆದವರಾಗಿರುವ ಧನ್ಯರಾದ ಸಾಧುಗಳನ್ನು—ದರಿದ್ರನು ರತ್ನಗಳನ್ನು ನೋಡುವಂತೆ—ಹೆಚ್ಚಾದ ಪ್ರಯತ್ನದಿಂದ ನೋಡಬೇಕು ॥೧೨॥

ಪ್ರಾಜ್ಞರಾದವರ ಬುದ್ಧಿಯು, ಸತ್ಪುರುಷರ ಸಹವಾಸದಿಂದ ಸೌಂದರ್ಯಯುಕ್ತವಾಗಿ-ಅಪ್ಸರಸ್ಸಮೂಹದ ಮಧ್ಯದಲ್ಲಿ ಲಕ್ಷ್ಮಿಯಂತೆ ಸರ್ವದಾ ಪ್ರಕಾಶಿಸುತ್ತಿರುವುದು॥೧೩

ಇಂತಹ ಸಾಧುಸಂಗತಿಯನ್ನು ಯಾವ ಪುಣ್ಯಾತ್ಮನು ಬಿಡದಿರುವನೋ, ಅವನು—ನಿರ್ಮಲ ವಿಚಾರವಾದ ಆ ಪರಮಪದವನ್ನು ಮೊದಲು ಶಿರೋಭೂಷಣಮಾಡಿರುವಂತೆ ಪ್ರಸಿದ್ಧನಾಗುವನು (೨) ॥೧೪॥

ಪೂರ್ವೋಕ್ತರೀತಿಯಾದ ಹೃದಯಗ್ರಂಥಿಯನ್ನು ಭೇದಿಸಿರತಕ್ಕವರಾಗಿಯೂ ತತ್ವಜ್ಞರಾಗಿಯೂ ಸರ್ವರಿಗೂ ಸಮ್ಮತರಾಗಿಯೂ ಇರುವ ಸಾಧುಗಳನ್ನು, ಸಮಸ್ತವಾದ ಉಪಾಯದಿಂದಲೂ ಚೆನ್ನಾಗಿ ಸೇವಿಸಬೇಕು. ಈ ಸಂಸಾರವೆಂಬ ಸಮುದ್ರವನ್ನು ದಾಟುವುದರಲ್ಲಿ, ಅವರೇ ಸರಿಯಾದ ಉಪಾಯಭೂತರಾದವರು ॥೧೫॥

ಆದರೆ, ನರಕವೆಂಬ ಬೆಂಕಿಗೆ ಮೋಡದಂತಿರುವ(ನರಕವನ್ನು ಆರಿಸುವ) ಸತ್ಪುರುಷರನ್ನು—ಯಾರು ತಿರಸ್ಕಾರಬುದ್ಧಿಯಿಂದ ಕಾಣುವರೋ, ಅವರು—ನರಕವೆಂಬ ಅಗ್ನಿಗೆ ಒಣಗಿದ ಸೌದೆಯಾಗುವರು (ನರಕಯಾತನೆಯನ್ನು ಬೆಳೆಸುವರು) ॥೧೬॥

---

(೧) ನಿರ್ಗುಣನಾದ ಪರಬ್ರಹ್ಮನಲ್ಲಿ ಅಂತಃಕರಣವನ್ನೂ ಅಂತಃಕರಣ ಧರ್ಮವನ್ನೂ ಆರೋಪಿಸಿಕೊಂಡು ತಿಳಿಯುವಿಕೆಗೆ ಹೃದಯಗ್ರಂಥಿಯೆಂದು ಹೆಸರು.

(೨) ಸಾಧುಸಂಗಮದಲ್ಲಿರತಕ್ಕವನು—ಎಲ್ಲರಿಗಿಂತಲೂ ಮೊದಲೇ ತತ್ವಜ್ಞಾನಿಯಾಗುವನೆಂದು ಭಾವವು.

ದಾರಿದ್ರ್ಯಂ ಮರಣಂ ದುಃಖಂ ಇತ್ಯಾದಿವಿಷಯೋ ಭ್ರಮಃ |
ಸರ್ವ್ವಂ ಶಾಮ್ಯತ್ಯಶೇಷೇಣ ಸಾಧುಸಙ್ಗಮಭೇಷಜೈಃ ||೧೭||
ಸನ್ತೋಷಃ ಸಾಧುಸಙ್ಗಶ್ಚ ವಿಚಾರೋಥ ಶಮಸ್ತಥಾ |
ಏತಏವ ಭವಾಮ್ಭೋಧೌ ಉಪಾಯಾಸ್ತರಣೇ ನೃಣಾಮ್ ||೧೮||
ಸನ್ತೋಷಃ ಪರಮೋ ಲಾಭಃ ಸತ್ಸಙ್ಗಃ ಪರಮಾ ಗತಿಃ |
ವಿಚಾರಃ ಪರಮಂ ಜ್ಞಾನಂ ಶಮೋ ಹಿ ಪರಮಂ ಸುಖಮ್||೧೯||
ಚತ್ವಾರಏತೇ ವಿಮಲಾಃ ಉಪಾಯಾಭವಭೇದನೇ |
ಯೈರಭ್ಯಸ್ತಾಸ್ತ ಉತ್ತೀರ್ಣಾಃ ಮೋಹವಾರಿಭವಾರ್ಣವಾತ್ ||೨೦||
ಏಕಸ್ಮಿನ್ನೇವ ವೈತೇಷಾಂ ಅಭ್ಯಸ್ತೇ ವಿಮಲೋದಯೇ |
ಚತ್ವಾರೋಪಿ ಕಿಲಾಭ್ಯಸ್ತಾಃ ಭವನ್ತಿ ಸುಧಿಯಾಂ ವರ ||೨೧||
ಏಕೋಪ್ಯೇಕೋಪಿ ಸರ್ವೇಷಾಂ ಏಷಾಂ ಪ್ರಸವಭೂರಿಹ |
ಸರ್ವಸಂಸಿದ್ಧಯೇ ತಸ್ಮಾತ್ ಯತ್ನೇನೈಕಂ ಸಮಾಶ್ರಯೇತ್ ||೨೨||
ಸತ್ಸಮಾಗಮಸನ್ತೋಷವಿಚಾರಾಃ ಸುವಿಚಾರಿತಮ್ |
ಪ್ರವರ್ತನ್ತೇ ಶಮಸ್ವಚ್ಛೇ ವಾಹನಾನೀವ ಸಾಗರೇ ||೨೩||

ದಾರಿದ್ರ್ಯ ಮರಣ ದುಃಖ—ಇವು ಮೊದಲಾದ ವಿಷಯವೇ ಒಂದು ದೊಡ್ಡ ಸನ್ನಿಪಾತವು; ಇದು— ಸತ್ಸಹವಾಸವೆಂಬ ದಿವ್ಯೌಷಧಗಳಿಂದ ನಿಶ್ಶೇಷನಾಗಿ ನಾಶಹೊಂದುವುದು ||೧೭||

ಅಯ್ಯಾ! ರಾಮ! ಹೀಗೆ ಪೂರ್ವೋಕ್ತವಾದ ಸಂತೋಷ ಸತ್ಸಹವಾಸ ವಿಚಾರ ಶಮ—ಇವುಗಳೇ ಮನುಷ್ಯರಿಗೆ ಸಂಸಾರಸಮುದ್ರವನ್ನು ದಾಟುವುದರಲ್ಲಿ ಉಪಾಯುಗಳು||

ಪುರುಷರಿಗೆ—ಸಂತೋಷವೇ ಉತ್ತಮವಾದ ಲಾಭವು; ಸತ್ಸಹವಾಸವೇ ಉತ್ತಮವಾದ ಗತಿಯು; ವಿಚಾರವೇ ಉತ್ತಮವಾದ ಜ್ಞಾನವು; ಶಮವೇ ಉತ್ತಮವಾದ ಸೌಖ್ಯವು ||೧೯||

ಸಂಸಾರದುಃಖವನ್ನು ಭೇದಿಸುವುದರಲ್ಲಿ ಮುಖ್ಯವಾಗಿರುವ ಈ ನಿರ್ಮಲವಾದ ನಾಲ್ಕು ಉಪಾಯುಗಳನ್ನೂ ಯಾರು ಅಭ್ಯಸಿಸುವರೋ, ಅವರು- ಮೋಹವೆಂಬ ಜಲದಿಂದ ಪರಿಪೂರ್ಣವಾದ ಸಂಸಾರವೆಂಬ ಸಮುದ್ರವನ್ನು ದಾಟಿದವರೆಂದು ತಿಳಿಯಬೇಕು ||೨೦||

ಸದ್ಬುದ್ಧಿಗಳಲ್ಲೆಲ್ಲ ಶ್ರೇಷ್ಠನಾದ ರಾಮನೆ! ಅಥವಾ ಈ ನಾಲ್ಕರ ಮಧ್ಯದಲ್ಲಿ ಯಾವುದಾದರೊಂದನ್ನು ನಿರ್ಮಲನಾಗಿ ಅಭ್ಯಾಸಮಾಡಿದರೂ, ಆ ನಾಲ್ಕನ್ನೂ ಅಭ್ಯಾಸಮಾಡಿದಂತೆಯೇ ಆಗುವುದು ||೨೧||

ಇವುಗಳ ಮಧ್ಯದಲ್ಲಿ ಒಂದೊಂದೇ ಆದರೂ ನಾಲ್ಕನ್ನೂ ಉಂಟುಮಾಡುತ್ತವೆ. ಆದಕಾರಣ ಇವೆಲ್ಲವೂ ಸಿದ್ಧಿಸುವುದಕ್ಕೋಸ್ಕರ, ಯಾವುದಾದರೊಂದನ್ನು ಪ್ರಯತ್ನಪೂರ್ವಕವಾಗಿ ಆಶ್ರಯಿಸಬೇಕು ||೨೨||

ಚೆನ್ನಾಗಿ ವಿಚಾರಮಾಡಿ ಶಾಂತಿಯನ್ನು ಪಡೆದು ಅದರಿಂದ ನಿರ್ಮಲನಾಗಿರತಕ್ಕವನಲ್ಲಿ,- ದೊಡ್ಡದೊಡ್ಡ ವ್ಯಾಪಾರದ ಹಡಗುಗಳು ಸಮುದ್ರದಲ್ಲಿ ಚೆನ್ನಾಗಿ ಸಂಚರಿಸುವಂತೆ—ಸತ್ಸಹವಾಸ ಸಂತೋಷ ವಿಚಾರಗಳು ಚೆನ್ನಾಗಿ ಪ್ರವರ್ತಿಸುತ್ತಿರುತ್ತವೆ ||೨೩||

ವಿಚಾರಸನ್ತೋಷಶಮಸತ್ಸಮಾಗಮಶಾಲಿನಿ ।
ಪ್ರವರ್ತನ್ತೇ ಶ್ರಿಯೋ ಜನ್ತೌ ಕಲ್ಪವೃಕ್ಷಾಶ್ರಿತೇ ಯಥಾ ॥೨೪॥
ವಿಚಾರಶಮಸತ್ಸಙ್ಗಸನ್ತೋಷವತಿ ಮಾನವೇ ।
ಪ್ರವರ್ತನ್ತೇ ಪ್ರಪೂರ್ಣೇನ್ದೌ ಸೌನ್ದರ್ಯಾದ್ಯಾ ಗುಣಾ ಇವ ॥೨೫॥
ಸತ್ಸಙ್ಗಸನ್ತೋಷಶಮವಿಚಾರವತಿ ಸನ್ಮತೌ ।
ಪ್ರವರ್ತನ್ತೇ ಮನ್ತ್ರಿವರೇ ರಾಜನೀವ ಜಯಶ್ರಿಯಃ ॥೨೬॥
ತಸ್ಮಾದೇಕತಮಂ ನಿತ್ಯಂ ಏತೇಷಾಂ ರಘುನನ್ದನ ।
ಪೌರುಷೇಣ ಮನೋ ಜಿತ್ವಾ ಯತ್ನೇನಾಭ್ಯಾಹರೇದ್ಗುಣಮ್ ॥೨೭॥
ಪರಂ ಪೌರುಷಮಾಶ್ರಿತ್ಯ ಜಿತ್ವಾ ಚಿತ್ತಮತಙ್ಗಜಮ್ ।
ಯಾವದೇಕೋ ಗುಣೋ ನಾನ್ತಃ ತಾವನ್ನಾಸ್ತ್ಯುತ್ತಮಾ ಗತಿಃ ॥೨೮॥
ಪೌರುಷೇಣ ಪ್ರಯತ್ನೇನ ದನ್ತೈರ್ದನ್ತಾನ್ ವಿಚೂರ್ಣಯೇಃ ।
ಯಾವನ್ನಾಭಿನಿವಿಷ್ಟಂ ತೇ ಮನೋ ರಾಮ ಗುಣಾರ್ಜನೇ ॥೨೯॥
ದೇವೋ ಭವಾಥ ಯಕ್ಷೋ ವಾ ಪುರುಷಃ ಪಾದಪೋಥವಾ ।
ತಾವತ್ತವ ಮಹಾಬಾಹೋ ನೋಪಾಯೋಸ್ತೀಹ ಕಶ್ಚನ ॥೩೦॥

ಹಾಗೆಯೇ, ಕಲ್ಪವೃಕ್ಷವನ್ನಾಶ್ರಯಿಸಿದ ಪ್ರಾಣಿಯಲ್ಲಿ ಸಂಪತ್ತುಗಳು ನೆಲೆಸುವಂತೆ, ವಿಚಾರ ಸಂತೋಷ ಶಮ ಸತ್ಸಹವಾಸಗಳುಳ್ಳವನಲ್ಲಿ ಜ್ಞಾನಸಂಪತ್ತು ನೆಲೆಸುವುದು ॥೨೪॥

ಮತ್ತು, ವಿಚಾರವನ್ನು ಸಂಪಾದಿಸಿ ಬಳಿಕ ಶಮ ಸತ್ಸಂಗ ಸಂತೋಷಗಳುಳ್ಳ ಮನುಷ್ಯನಲ್ಲಿ, ಪೂರ್ಣಚಂದ್ರನಂತೆ ನೈರ್ಮಲ್ಯ ಸೌಭಾಗ್ಯಾದಿ ಗುಣಗಳು ನೆಲೆಸುವುವು ॥೨೫॥

ಇನ್ನು, ಸತ್ಸಂಗವನ್ನು ಪಡೆದು ಆಮೇಲೆ ಸಂತೋಷ ಶಮ ವಿಚಾರಗಳುಳ್ಳವನಾದ ಪ್ರಾಜ್ಞನಲ್ಲಿ, ಉತ್ತಮನಾದ ಮಂತ್ರಿಯುಳ್ಳ ದೊರೆಯಲ್ಲಿ ಜಯಲಕ್ಷ್ಮಿಯು ನೆಲೆಸುವಂತೆ, ಇಂದ್ರಿಯಜಯಸಂಪತ್ತು ನೆಲೆಸುವುದು ॥೨೬॥

ಅಯ್ಯಾ! ರಾಮ! ಆದಕಾರಣ, ಪುರುಷಕಾರದಿಂದ ಮನಸ್ಸನ್ನು ಜಯಿಸಿ, ಈ ನಾಲ್ಕರೊಳಗೊಂದನ್ನಾದರೂ ಪ್ರಯತ್ನಪೂರ್ವಕವಾಗಿ ಸರ್ವದಾ ಸಂಪಾದಿಸಬೇಕು ॥೨೭॥

ಉತ್ತಮವಾದ ಪೌರುಷವನ್ನವಲಂಬಿಸಿ—ಮನಸ್ಸೆಂಬ ಮದ್ದಾನೆಯನ್ನು ಜಯಿಸಿ—ಹೃದಯದಲ್ಲಿ ಒಂದು ಗುಣವಾದರೂ ನೆಲೆಸುವವರೆಗೂ, ಮನುಷ್ಯನಿಗೆ ಉತ್ತಮಗತಿಯಿಲ್ಲ॥

ಅಯ್ಯಾ! ರಾಮ! ನಿನ್ನ ಮನಸ್ಸು ಈ ಗುಣಗಳನ್ನು ಸಂಪಾದಿಸುವ ವಿಷಯದಲ್ಲಿ ಚೆನ್ನಾಗಿ ಅಭಿನಿವೇಶವುಳ್ಳದಾಗುವವರೆಗೂ, ಪುರುಷಕಾರದಿಂದ ಹಲ್ಲು ಕಡಿಯುತ ಉದ್ಯೋಗಶೀಲನಾಗಿರು ॥೨೯॥

ಎಲೈ ಮಹಾಬಾಹುವೆ! ನೀನು ದೇವತೆಯಾಗಿ ಬೇಕಾದರೂ ಇರು; ಯಕ್ಷಕನಾಗಿಯಾದರೂ ಇರು. ಮನುಷ್ಯನಾಗಿಯಾದರೂ ಇರು; ಕೊನೆಗೊಂದು ಗಿಡವಾಗಿ ಬೇಕಾದರೂ ಇರು. ನೀನು ಈ ಗುಣಸಂಪಾದನೆಮಾಡುವವರೆಗೆ, ಯಾವದೊಂದುಪಾಯವೂ ಇಲ್ಲ ॥೩೦॥

ಏಕಸ್ಮಿನ್ನೇವ ಫಲದೇ ಗುಣೇ ಬಲಮುಪಾಗತೇ ।
ಕ್ಷೀಯನ್ತೇ ಸರ್ವಏವಾಶು ದೋಷಾವಿವಶಚೇತಸಃ ॥೨೧॥
ಗುಣೇ ವಿವೃದ್ಧೇ ವರ್ಧನ್ತೇ ಗುಣಾದೋಷಜಯಪ್ರದಾಃ ।
ದೋಷೇ ವಿವೃದ್ಧೇ ವರ್ಧನ್ತೇ ದೋಷಾಗುಣವಿನಾಶನಾಃ ॥೨೨॥
ಮನೋಮೋಹವನೇ ಹ್ಯಸ್ಮಿನ್ ವೇಗಿನೀ ವಾಸನಾಸರಿತ್ ।
ಶುಭಾಶುಭಬೃಹತ್ಕೂಲಾ ನಿತ್ಯಂ ವಹತಿ ಜನ್ತುಷು ॥೨೩॥
ಸಾ ಹಿ ಸ್ವೇನ ಪ್ರಯತ್ನೇನ ಯಸ್ಮಿನ್ನೇವ ನಿಪಾತ್ಯತೇ ।
ಕೂಲೇ ತೇನೈವ ವಹತಿ ಯಥೇಚ್ಛಸಿ ತಥಾ ಕುರು ॥೨೪॥
ಪುರುಷಯತ್ನಜವೇನ ಮನೋವನೇ ಶುಭತಟಾನುಗತಾಂ ಕ್ರಮಶಃ ಕುರು।
ವರಮತೇ ನಿಜಭಾವಮಹಾಸದೀಂ ಅಹಹ ತೇನ ಮನಾಗಪಿ ನೋಹ್ಯಸೇ ॥೫೨॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ಸದಾಚಾರನಿರೂಪಣಂ
ನಾಮ ಷೋಡಶಃ ಸರ್ಗಃ.

ಈ ಗುಣಗಳಲ್ಲಿ ಒಂದೇಆದರೂ, ಪ್ರಬಲವಾಗಿ—ಫಲೋನ್ಮುಖವಾಗಿಬಿಟ್ಟರೆ, ಅದಕ್ಕೆ ಪರಾಧೀನವಾದ ಮನಸ್ಸುಳ್ಳ ಪುರುಷನ ದೋಷಗಳೆಲ್ಲವೂ ಬೇಗನೆ ಕ್ಷಯಹೊಂದುವುವು ॥

ಮನುಷ್ಯನಿಗೆ ಯಾವುದಾದರೊಂದು ಗುಣವು ಹೆಚ್ಚಿಬಿಟ್ಟರೆ, ಅದರಿಂದ—ದೋಷಗಳನ್ನೆಲ್ಲ ಗೆಲ್ಲುವ ಗುಣಗಳೇ ಹೆಚ್ಚುವುವು; ಅದಲ್ಲದೆ—ಯಾವುದಾದರೊಂದು ದೋಷವು ಹೆಚ್ಚಿದರೆ, ಗುಣಗಳನ್ನೆಲ್ಲ ಚೆನ್ನಾಗಿ ನಾಶಪಡಿಸುವ ದೋಷಗಳೇ ಹೆಚ್ಚುವುವು ॥೨೨॥

ಸಮಸ್ತ ಪ್ರಾಣಿಗಳಲ್ಲಿಯೂ ಮನಸ್ಸಿನ ಮೋಹವೆಂಬ ದೊಡ್ಡದೊಂದು ಕಾಡಿರುವುದು; ಈ ಕಾಡಿನಲ್ಲಿ ಕರ್ಮವಾಸನೆಯೆಂಬ ನದಿಯು ಸರ್ವದಾ ಹರಿಯುತ್ತಿರುವುದು; ಈ ನದಿಗೆ ಶುಭಾಶುಭ ಫಲಗಳೆಂಬ ಎರಡು ದಡಗಳಿರುವುವು (೧) ॥೨೩॥

ನದಿಯು ಪ್ರವಾಹವನ್ನು ಪ್ರಯತ್ನದಿಂದ ಒಂದುಕಡೆಗೆ ಅಡ್ಡಗಟ್ಟುಕಟ್ಟಿ ಬೇಕಾದ ಕಡೆಗೆ ತಿರುಗಿಸುವರಲ್ಲವೆ! ಹಾಗೆಯೇ, ಈ ವಾಸನೆಯೆಂಬ ನದಿಯೂಕೂಡ, ನಮ್ಮ ಪ್ರಯತ್ನದಿಂದ ಯಾವ ದಡದ ಕಡೆಗೆ ಕೆಡವಲ್ಪಡುತ್ತದೆಯೋ, ಆ ದಡದಲ್ಲಿಯೇ ಹರಿಯುತ್ತದೆ. ಯಾವ ದಡದಲ್ಲಿ ಹರಿಯಬೇಕೆಂದು ನೀನಪೇಕ್ಷಿಸುವೆಯೋ, ಹಾಗೆಮಾಡು ॥

ಪ್ರಶಸ್ತಬುದ್ಧಿಯಾದ ಎಲೈ ರಾಮನೆ! ನಿನ್ನ ವಾಸನೆಯೆಂಬ ಮಹಾನದಿಯನ್ನು, ಪುರುಷಕಾರದ ವೇಗದಿಂದ, ಮನಸ್ಸೆಂಬ ವನದಲ್ಲಿ ಶುಭಕರ್ಮವೆಂಬ ದಡವನ್ನೇ ಅನುಸರಿಸಿ ಹರಿಯುವಂತೆ ಕ್ರಮವಾಗಿ ಮಾಡು. ಹೀಗೆ ಮಾಡಿದರೆ, ಅಶುಭವಾಸನಾಪ್ರವಾಹವು ನಿನ್ನನ್ನು ಸ್ವಲ್ಪವೂ ಕೊಚ್ಚಿಕೊಂಡು ಹೋಗುವುದಿಲ್ಲ. ಬಳಿಕ ಇದು ಬಲು ಆಶ್ಚರ್ಯವಾಗಿ ಕಾಣುವುದು ॥೨೫॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಸದಾಚಾರನಿರೂಪಣವೆಂಬ
ಹದಿನಾರನೆಯ ಸರ್ಗವು.

---

(೧) ನದಿಯುಪ್ರವಾಹವು ಎರಡು ದಡಗಳನ್ನಾಗಲೀ ಒಂದೊಂದನ್ನಾಗಲಿ ಸೇರಿಕೊಂಡಿರುವಂತೆ, ಮನೋವಾಸನೆಯು ಶುಭಾಶುಭಗಳೆರಡನ್ನಾಗಲಿ—ಅಥವಾ ಅವುಗಳಲ್ಲೊಂದನ್ನಾಗಲಿ ಸೇರಿಕೊಂಡೇ ಇರುವುದೆಂದು ಭಾವವು.

ಅಥ ಮುಮುಕ್ಷುವ್ಯವಹಾರಪ್ರಕರಣೇಸ ಪ್ತದಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏವಮನ್ತರ್ವಿವೇಕೋ ಯಃ ಸ ಮಹಾನಿಹ ರಾಘವ ।
ಯೋಗ್ಯೋ ಜ್ಞಾನಗಿರಃ ಶ್ರೋತುಂ ರಾಜೇವ ನಯಭಾರತೀಮ್ ॥೧॥
ಅವದಾತೋಽವದಾತಸ್ಯ ವಿಚಾರಸ್ಯ ಮಹಾಶಯಃ ।
ಜಡಸಙ್ಗೋಜ್ಝಿತೋ ಯೋಗ್ಯಃ ಶರದಿನ್ದೋರ್ಯಥಾ ನಭಃ ॥೨॥
ತ್ವಮೇತಯಾಖಣ್ಡಿತಯಾ ಗುಣಲಕ್ಷ್ಮ್ಯಾ ಸಮಾಶ್ರಿತಃ ।
ಮನೋಮೋಹಹರಂ ವಾಕ್ಯಂ ವಕ್ಷ್ಯಮಾಣಮಿದಂ ಶೃಣು ॥೩॥
ಪುಣ್ಯಕಲ್ಪದ್ರುಮೋ ಯಸ್ಯ ಫಲಭಾರಾನತಃ ಸ್ಥಿತಃ ।
ಮುಕ್ತಯೇ ಜಾಯತೇ ಜನ್ತೋಃ ತಸ್ಯೇದಂ ಶ್ರೋತುಮುದ್ಯಮಃ ॥೪॥

ಮುಮುಕ್ಷುವ್ಯವಹಾರ ಪ್ರಕರಣದಲ್ಲಿ ಹದಿನೇಳನೆಯ ಸರ್ಗವು.

ಗ್ರನ್ಥಸಙ್ಖ್ಯಾವಿಭಾಗೋತ್ರ ಭಿನ್ನಃ ಪ್ರಕರಣಕ್ರಮೈಃ ।
ವಿಭಕ್ತೈರ್ವರ್ಣನೀಯಾರ್ಥೈಃ ಗುಣೈಶ್ಚಾಥೋಪವರ್ಣ್ಯತೇ ॥

ಆಯಾ ಪ್ರಕರಣ ಕ್ರಮಾನುಸಾರವಾಗಿ ವಿಭಾಗಿಸಿರುವ ವರ್ಣನೀಯವಾದ ವಿಷಯಗಳೊಡನೆಯೂ, ಅವುಗಳ ಗುಣಗಳೊಡನೆಯೂ, ಈ ಗ್ರಂಥದ ಶ್ಲೋಕಸಂಖ್ಯಾವಿಭಾಗವು ಈ ಸರ್ಗದಲ್ಲಿ ತಿಳಿಸಲ್ಪಡುವುವು.

ಇದುವರೆಗೆ ವಸಿಷ್ಠಮುನಿಗಳು ಈ ಗ್ರಂಥವನ್ನು ತಿಳಿದುಕೊಳ್ಳುವವನಿಗಿರಬೇಕಾದ ಸಾಧನಸಂಪತ್ತಿಯನ್ನು ವರ್ಣಿಸಿ, ಈಗ ಈ ಗ್ರಂಥದ ಶ್ಲೋಕಸಂಖ್ಯಾದಿಗಳನ್ನು ತಿಳಿಸಲುಪಕ್ರಮಿಸಿ, ಮತ್ತೆ ಶ್ರೀರಾಮನನ್ನು ಕುರಿತು ಹೇಳಿದರು.

ಅಯ್ಯಾ! ರಾಘವ! ಯಾವ ಮನುಷ್ಯನು ಈ ರೀತಿಯಾಗಿ ಒಳಗೆ ವಿವೇಕವನ್ನು ಸಂಪಾದಿಸಿಕೊಂಡಿರುವನೋ, ಅಂತಹ ಮಹಾತ್ಮನು—ರಾಜನೀತಿಯನ್ನು ಕೇಳುವುದಕ್ಕೆ ದೊರೆಯು ಅರ್ಹನಾಗುವಂತೆ—ಈ ಜ್ಞಾನಶಾಸ್ತ್ರವಚನಗಳನ್ನು ಕೇಳುವುದಕ್ಕೆ ಅರ್ಹನಾಗುವನು ॥೧॥

ಮಳೆಯೆಲ್ಲ ಕಳೆದು ನಿರ್ಮಲವಾಗಿರುವ ಆಕಾಶವು—ನಿರ್ಮಲನಾದ ಶರಚ್ಚಂದ್ರನಿಗೆ ಯೋಗ್ಯವಾಗುವಂತೆ, ನಿರ್ಮಲವಾಗಿರುವ ಈ ಗ್ರಂಥವಿಚಾರಕ್ಕೆ—ಜಡರ ಸಹವಾಸವನ್ನು ಬಿಟ್ಟು ನಿರ್ಮಲನಾಗಿರುವ ಮಹಾಶಯನೇ ಯೋಗ್ಯನು ॥೨॥

ನೀನು ಸಂಪೂರ್ಣವಾದ ಈ ಗುಣಸಂಪತ್ತಿನಿಂದ ಆಶ್ರಯಿಸಲ್ಪಟ್ಟಿರುವೆಯಾದಕಾರಣ, ಮನಸ್ಸಿನ ಅಜ್ಞಾನವನ್ನು ಅಪಹರಿಸತಕ್ಕುದಾಗಿ ನನ್ನಿಂದ ಹೇಳಲ್ಪಡುವ ಈ ವಚನವನ್ನು ಕೇಳು ॥೩॥

ಯಾವ ಮನುಷ್ಯನಿಗೆ—ಪುಣ್ಯವೆಂಬ ಕಲ್ಪವೃಕ್ಷವು ಫಲಭಾರಗಳಿಂದ ಬೊಗ್ಗಿರುವುದೋ, (ಫಲೋನ್ಮುಖವಾಗಿದೆಯೋ) ಅವನಿಗೆ ಮೋಕ್ಷಾರ್ಥವಾದ ಈ ಗ್ರಂಥಶ್ರವಣದಲ್ಲಿ ಉದ್ಯಮವುಂಟಾಗುವುದು ॥೪॥

ಪಾವನಾನಾಮುದಾರಾಣಾಂ ಪರಬೋಧೈಕದಾಯಿನಾಮ್ |
ವಚಸಾಂ ಭಾಜನಂ ಭೂತ್ಯೈ ಭವ್ಯೋ ಭವತಿ ನಾಧಮಃ ||೫||
ಮೋಕ್ಷೋಪಾಯಾಭಿಧಾನೇಯಂ ಸಂಹಿತಾ ಸಾರಸಮ್ಮಿತಾ |
ತ್ರಿಂಶದ್ದ್ವೇ ಚ ಸಹಸ್ರಾಣಿ ಜ್ಞಾತಾ ನಿರ್ವಾಣದಾಯಿನೀ ||೬||
ದೀಪೇ ಯಥಾ ವಿನಿದ್ರಸ್ಯ ಜ್ವಲಿತೇ ಸಮ್ಪ್ರವರ್ತತೇ |
ಆಲೋಕೋಽನಿಚ್ಛತೋಽಪ್ಯೇವಂ ನಿರ್ವಾಣಮನಯಾ ಭವೇತ್ ||೭||
ಸ್ವಯಂ ಜ್ಞಾತಾ ಶ್ರುತಾ ವಾಪಿ ಭ್ರಾನ್ತಿಶಾನ್ತ್ಯೈಕಸೌಖ್ಯದಾ |
ಆಪ್ರೇಕ್ಷ್ಯ ವರ್ಣಿತಾ ಸದ್ಯೋ ಯಥಾ ಸ್ವರ್ಗತರಙ್ಗಿಣೀ ||೮||
ಯಥಾ ರಜ್ಜ್ವಾಮಹಿಭ್ರಾನ್ತಿಃ ವಿನಶ್ಯತ್ಯವಲೋಕನಾತ್ |
ತಥೈತತ್ಪ್ರೇಕ್ಷಣಾಚ್ಛಾನ್ತಿಂ ಏತಿ ಸಂಸಾರದುಃಖಿತಾ ||೯||
ಯುಕ್ತಿಯುಕ್ತಾರ್ಥವಾಕ್ಯಾನಿ ಕಲ್ಪಿತಾನಿ ಪೃಥಕ್ಪೃಥಕ್ |
ದೃಷ್ಟಾನ್ತಸಾರಸೂಕ್ತಾನಿ ಚಾಸ್ಯಾಂ ಪ್ರಕರಣಾನಿ ಷಟ್ ||೧೦||

ಪರಮಪವಿತ್ರವಾಗಿಯೂ ಅತಿಗಂಭೀರವಾಗಿಯೂ ಉತ್ತಮವಾದ ತತ್ವಜ್ಞಾನವನ್ನು ಕೊಡುವುದರಲ್ಲಿ ಅತಿಮುಖ್ಯವಾಗಿಯೂ ಇರುವ ಈ ಗ್ರಂಥವಾಕ್ಯಗಳಿಗೆ, ಪ್ರಶಸ್ತನಾದವನೇ ಮುಕ್ತಿಗಾಗಿ ಪಾತ್ರನಾಗುವನಲ್ಲದೆ, ಅಧಮನಾದವನೆಂದಿಗೂ ಆಗುವುದಿಲ್ಲ ||೫||

ಮೋಕ್ಷೋಪಾಯವೆಂದು ಹೆಸರುಳ್ಳ ಈ ಗ್ರಂಥವು, ಅತಿ ಸಾರಭೂತವಾದ ವಿಷಯಗಳಿಂದ ಸೇರಿಸಲ್ಪಟ್ಟಿರುವುದು; ಇದು ಮುವ್ವತ್ತೆರಡುಸಾವಿರ ಶ್ಲೋಕವುಳ್ಳದು; ಇದು ಚೆನ್ನಾಗಿ ತಿಳಿಯಲ್ಪಟ್ಟರೆ ದಿವ್ಯವಾದ ಮೋಕ್ಷಸುಖವನ್ನು ಕೊಡತಕ್ಕದು ||೬||

ದೀಪವು ಚೆನ್ನಾಗಿ ಉರಿಯುತಿರುವಾಗ, ನಿದ್ರೆಯಿಲ್ಲದೆ ಎಚ್ಚರವಾಗಿರುವವನಿಗೆ ಅಪೇಕ್ಷಿಸದಿದ್ದರೂ ಹೇಗೆ ಬೆಳಕು ಉಂಟಾಗುತ್ತದೆಯೋ, ಹಾಗೆ ಈ ಗ್ರಂಥಶ್ರವಣ ಮಾಡತಕ್ಕವನಿಗೆ ಅಪೇಕ್ಷೆಯಿಲ್ಲದಿದ್ದರೂ ತನಗೆತಾನೇ ಮೋಕ್ಷವುಂಟಾಗುವುದು ||೭||

ಗಂಗೆಯನ್ನು ತಾನಾಗಿ ನೋಡಿದರೂ—ಇತರರ ಮುಖದಿಂದ ಕೇಳಿದರೂ ಅದು ದಿವ್ಯವಾದ ಸುಖವನ್ನುಂಟುಮಾಡುವಂತೆ, ಈ ಗ್ರಂಥವನ್ನು ತಾನಾಗಿ ಚೆನ್ನಾಗಿ ಪರಿಶೀಲಿಸಿ ತಿಳಿದುಕೊಂಡರೂ—ಇತರರಿಂದ ಹೇಳಲ್ಪಟ್ಟದನ್ನು ಕೇಳಿದರೂ—ಇದು ಸಂಸಾರ ಭ್ರಮೆಯನ್ನು ಶಾಂತಿಪಡಿಸಿ ದಿವ್ಯವಾದ ಮೋಕ್ಷಸುಖವನ್ನು ಕೊಡತಕ್ಕದು ||೮||

ಹಗ್ಗವನ್ನು ನೋಡಿ ಸರ್ಪವೆಂದು ಉಂಟಾಗಿರುವ ಭ್ರಾಂತಿಯು—ಚೆನ್ನಾಗಿ ನೋಡೋಣದರಿಂದ ಹೇಗೆ ಹೋಗುತ್ತದೆಯೋ, ಹಾಗೆಯೇ ಈ ಗ್ರಂಥವನ್ನು ನೋಡೋಣದರಿಂದ ಸಂಸಾರದುಃಖವು ಶಾಂತಿಹೊಂದುವುದು ||೯||

ಈರೀತಿಯಾಗಿರುವ ಈ ಗ್ರಂಥದಲ್ಲಿ, ಯುಕ್ತಿಯುಕ್ತವಾದ ವಿಷಯಗಳನ್ನು ಹೇಳುವ ವಾಕ್ಯವುಳ್ಳವಾಗಿಯೂ—ಶ್ರೇಷ್ಠವಾದ ದೃಷ್ಟಾಂತಗಳೊಡನೆ ಕೂಡಿಕೊಂಡಿರುವ ಉಪಾಖ್ಯಾನಗಳುಳ್ಳವಾಗಿಯೂ ಇರುವ ಆರು ಪ್ರಕರಣಗಳು, ಬೇರೆಬೇರೆಯಾಗಿ ಏರ್ಪಡಿಸಲ್ಪಟ್ಟಿರುವವು ||೧೦||

ವೈರಾಗ್ಯಾಖ್ಯಂ ಪ್ರಕರಣಂ ಪ್ರಥಮಂ ಪರಿಕೀರ್ತಿತಮ್ |
ವಿರಾಗೋ ವರ್ಧತೇ ಯೇನ ಸೇಕೇನೇವ ಮಹಾತರುಃ ||೧೧||
ಅನುಬನ್ಧೇನ ಸಹಿತಂ ದಿಷ್ಟ್ಯತತ್ತ್ವನಿರೂಪಣಮ್ |
ಸಾರ್ಧಂ ಸಹಸ್ರಂ ಗ್ರನ್ಥಸ್ಯ ಯಸ್ಮಿನ್ ಹೃದಿ ವಿಚಾರಿತೇ ||೧೨||
ಪ್ರಕಾಶಾಚ್ಛುದ್ಧತೋದೇತಿ ಮಣಾವಿವ ಸುಮಾರ್ಜಿತೇ |
ಮುಮುಕ್ಷುವ್ಯವಹಾರಾಖ್ಯಂ ತತಃ ಪ್ರಕರಣಂ ಕೃತಮ್ ||೧೩||
ಸಹಸ್ರಮಾತ್ರಂ ಗ್ರನ್ಥಸ್ಯ ಯುಕ್ತಿಗ್ರನ್ಥೇನ ಸುನ್ದರಮ್ |
ಸ್ವಭಾವೋಹಿ ಮುಮುಕ್ಷೂಣಾಂ ನರಾಣಾಂ ಯತ್ರ ವರ್ಣ್ಯತೇ ||೧೪||
ಅಥೋತ್ಪತ್ತಿಪ್ರಕರಣಂ ದೃಷ್ಟಾನ್ತಾಖ್ಯಾಯಿಕಾಮಯಮ್ |
ಸಪ್ತಗ್ರನ್ಥಸಹಸ್ರಾಣಿ ವಿಜ್ಞಾನಪ್ರತಿಪಾದಕಮ್ ||೧೫||
ಜಾಗತೀ ದ್ರಷ್ಟೃದೃಶ್ಯಶ್ರೀಃ ಅಹಂತ್ವಮಿತಿರೂಪಿಣೀ |
ಅನುತ್ಪನ್ನೈವೋತ್ಥಿತೇವ ಯತ್ರೇತಿ ಪರಿವರ್ಣ್ಯತೇ ||೧೬||

ಇವುಗಳಲ್ಲಿ ಮೊದಲನೆಯ ಪ್ರಕರಣವು ವೈರಾಗ್ಯಪ್ರಕರಣವೆಂದು ಹೇಳಲ್ಪಟ್ಟಿರುವುದು. ಎಂತಹ ಮರುಭೂಮಿಯಲ್ಲಾರೂ ಬೇಕಾದಷ್ಟು ನೀರು ಹೊಯ್ದರೆ ಮರವು ಬೆಳೆಯುವಂತೆ, ಎಂತಹ ಮೂಢನಿಗಾದರೂ ಈ ವೈರಾಗ್ಯಪ್ರಕರಣವನ್ನು ತಿಳಿದುಕೊಂಡರೆ ಉತ್ತಮವಾದ ವಿರಕ್ತಿಯು ವೃದ್ಧಿಹೊಂದುವುದು ||೧೧||

ಈ ವೈರಾಗ್ಯಪ್ರಕರಣವು ಉಪೋದ್ಘಾತದಿಂದ ಸಹಿತವಾಗಿರುವುದು; ಇದು ತತನಿರೂಪಣೆಯನ್ನು ತೋರಿಸತಕ್ಕುದಾಗಿರುವುದು; ಇದು ಒಂದೂವರೆಸಾವಿರ ಗ್ರಂಥಸಂಖ್ಯೆಯುಳ್ಳುದು; ಇದನ್ನು ಮನಸ್ಸಿನಲ್ಲಿ ವಿಚಾರ ಮಾಡಿದರೆ—ರತ್ನವನ್ನು ತೊಳೆದರೆ ಅದರ ಕೊಳೆ ಹೋಗಿ ಪ್ರಕಾಶವಧಿಕವಾಗುವಂತೆ—ವಿಷಯದೋಷಜ್ಞಾನವಾಗಿ ಪರಿಶುದ್ಧತೆಯುಂಟಾಗುವುದು ||೧೨—೧೩||

ಬಳಿಕ ಮುಮುಕ್ಷುವ್ಯವಹಾರವೆಂಬ ಪ್ರಕರಣವು ಮಾಡಲ್ಪಟ್ಟಿರುವುದು; ಇದು ಒಂದುಸಾವಿರ ಗ್ರಂಥಪ್ರಮಾಣವುಳ್ಳುದು; ಇದು ಕಾರ್ಯಕಾರಣಭಾವಗಳನ್ನು ಸೇರಿಸಿರುವುದರಿಂದ ಬಹುಸುಂದರವಾಗಿರುವುದು; ಇದರಲ್ಲಿ ಮುಮುಕ್ಷುಗಳು ಜ್ಞಾನಮಾರ್ಗಕ್ಕೆ ಅಧಿಕಾರ ಪಡೆಯಬೇಕಾದರೆ ಸಂಪಾದಿಸಬೇಕಾದ ಸಾಧನಸಂಪತ್ತೆಲ್ಲವೂ ವರ್ಣಿಸಲ್ಪಟ್ಟಿರುವುದು ||೧೪||

ಆಮೇಲೆ ಉತ್ಪತ್ತಿ ಪ್ರಕರಣವು; ಇದು ದೃಷ್ಟಾಂತಗಳಿಂದಲೂ ಉಪಾಖ್ಯಾನಗಳಿಂದಲೂ ತುಂಬಿರುವುದು; ಇದು ಏಳುಸಾವಿರ ಗ್ರಂಥಸಂಖ್ಯೆಯುಳ್ಳುದು; ಇದು ಜ್ಞಾನಮಾರ್ಗವನ್ನು ವಿಶದಪಡಿಸತಕ್ಕುದು | ಈ ಪ್ರಕರಣದಲ್ಲಿ ಪ್ರಪಂಚದ ಸ್ವರೂಪವು ವಿವರಿಸಲ್ಪಡುವುದು. 'ನಾನು—ನೀನು' ಎಂಬ ವ್ಯವಹಾರವೇ ಪ್ರಪಂಚವಾಗಿರುವುದು; ಇದೇ ಜ್ಞಾತೃ (ತಿಳಿಯತಕ್ಕವ) ವೆಂಬುದಾಗಿಯೂ ಜ್ಞೇಯ (ತಿಳಿಯಲ್ಪಡುತಕ್ಕುದು) ವೆಂಬುದಾಗಿಯೂ ಇರುವುದು (೧) ಇದೇ ಪ್ರಪಂಚವೆಂಬ ಸೌಭಾಗ್ಯವು; ಇದು ವಾಸ್ತವ್ಯವಾಗಿ

---

(೧) ನಾನು-ನೀನು-ಎಂಬ ವ್ಯವಹಾರವೇ ಪ್ರಪಂಚನೆಂಬುದಾಗಿ ವೇದಾಂತಮತವು. ಇಲ್ಲಿ 'ನೀನು' ಎಂದರೆ ಇದು ಎಂಬುದಾಗಿ ಅರ್ಥವು. ಇದರಿಂದ ನಾನು ತಿಳಿಯತಕ್ಕವನೆಂದೂ ಇದು ತಿಳಿಯಲ್ಪಡತಕ್ಕುದೆಂದೂ ಹೇಳಿದಂತಾಯಿತು. ಹೀಗೆ 'ನಾನು' ಎಂಬುದೂ 'ತಿಳಿಯುತ್ತೇನೆ' ಎಂಬುದೂ ಕೇವಲ ಕಲ್ಪಿತವೆಂದು ಭಾವವು.

ಯಸ್ಮಿನ್ ಶ್ರುತೇಜಗದಿದಂ ಶ್ರೋತಾನ್ತರ್ಬುಧ್ಯತೇಖಿಲಮ್ ।
ಸಾಸ್ಮದ್ಯುಷ್ಮತ್ ಸವಿಸ್ತಾರಂ ಸಲೋಕಾಕಾಶಪರ್ವತಮ್ ॥೧೭॥
ಪಿಣ್ಡಗ್ರಹವಿನಿರ್ಮುಕ್ತಂ ನಿರ್ಭಿತ್ತಿಕಮಪರ್ವತಮ್ ।
ಪೃಥ್ವ್ಯಾದಿಭೂತರಹಿತಂ ಸಙ್ಕಲ್ಪಇವ ಪತ್ತನಮ್ ॥೧೮॥
ಸ್ವಪ್ನೋಪಲಮ್ಭಭಾವಾಭಂ ಮನೋರಾಜ್ಯವದಾತತಮ್ ।
ಗನ್ಧರ್ವನಗರಪ್ರಖ್ಯಂ ಅರ್ಥಶೂನ್ಯೋಪಲಮ್ಭನಾತ್ ॥೧೯॥
ದ್ವಿಚನ್ದ್ರವಿಭ್ರಮಾಭಾಸಂ ಮೃಗತೃಷ್ಣಾಮ್ಬುಮನ್ಥರಮ್ ।
ನೌಯಾನೇ ಲೋಲಶೈಲಾಭಂ ಸತ್ಯಲಾಭವಿವರ್ಜಿತಮ್ ॥೨೦॥
ಚಿತ್ತಭ್ರಮಪಿಶಾಚಾಭಂ ನಿರ್ಬೀಜಮಪಿ ಭಾಸುರಮ್ ।
ಕಥಾರ್ಥಪ್ರತಿಭಾಸಾಭಂ ವ್ಯೋಮಮುಕ್ತಾವಳೀನಿಭಮ್ ॥೨೧॥
ಕಟಕತ್ವಂ ಯಥಾ ಹೇಮ್ನಿ ತರಙ್ಗತ್ವಂ ಯಥಾಮ್ಭಸಿ ।
ಯಥಾ ನಭಸಿ ನೀಲತ್ವಂ ಅಸದೇವೋತ್ಥಿತಂ ಸದಾ ॥೨೨॥

ಹುಟ್ಟಿಯೇ ಇಲ್ಲ; ಹೀಗಿದ್ದರೂ ಹುಟ್ಟಿರುವಂತೆ ಕಾಣುವುದು. ಈ ವಿಷಯವು ಈ ಉತ್ಪತ್ತಿ ಪ್ರಕರಣದಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿರುವುದು ॥ ಈ ಪ್ರಕರಣವನ್ನು ಕೇಳಿದರೆ, ಶ್ರೋತೃವಾದವನು—ನಾನು ನೀನು ಎಂಬ ವ್ಯವಹಾರಯುಕ್ತವಾಗಿಯೂ ಅತಿವಿಸ್ತಾರವಾಗಿಯೂ ಸಮಸ್ತ ಲೋಕ ಆಕಾಶ ಪರ್ವತ ಇವುಗಳೊಡನೆ ಕೂಡಿಕೊಂಡುದಾಗಿಯೂ ಇರುವ ಈ ಸಮಸ್ತ ಪ್ರಪಂಚವನ್ನೂ—ಈರೀತಿಯಾಗಿ ತಿಳಿಯುವನು ॥ ಅವನಿಗೆ ಯಾವರೀತಿಯಾದ ಜ್ಞಾನವುಂಟಾಗುವುದೆಂದರೆ :— ಈ ಪ್ರಪಂಚದಲ್ಲಿ ಆಕಾರಸಹಿತವಾಗಿ ಪದಾರ್ಥಗಳು ಕಾಣುವುವಲ್ಲವೆ ! ಅವನಿಗೆ ಈ ವಿಧವಾದ ಜ್ಞಾನವೇ ಹೋಗಿಬಿಡುವುದು ; ನಾನಾವಿಧವಾದ ಭೇದಗಳೊಂದೂ ಇಲ್ಲದಂತಾಗುವುದು ; ಪರ್ವತಗಳೂ ಇರುವುದಿಲ್ಲ. ನಮ್ಮ ಮನಸ್ಸಿನಲ್ಲಿ ಒಂದು ಪಟ್ಟಣವಿದೆಯೆಂದು ಕಲ್ಪಿಸಿಕೊಂಡರೆ, ಅದರಲ್ಲಿ ಪೃಥಿವಿ ಮುಂತಾದ ಪಂಚಮಹಾಭೂತಗಳು ಇಲ್ಲದಿರುವಂತೆಯೇ ನಮ್ಮ ಕಣ್ಣಿಗೆ ಕಾಣುವ ಪ್ರಪಂಚದಲ್ಲಿಯೂ ಯಾವುದೂ ಇಲ್ಲ॥ ಹೀಗೆ ಪದಾರ್ಥವೊಂದೂ ಇಲ್ಲದೆಯೇ ಆ ಪದಾರ್ಥವಿರುವಂತೆ ಕಾಣುವುದರಿಂದ, ಸ್ವಪ್ನಾನುಭವಕಾಲದಲ್ಲಿ ಕಾಣುವ ಪದಾರ್ಥಗಳಂತೆಯೂ— ಮನಸ್ಸಿನಲ್ಲಿ ಕಲ್ಪಿಸಿಕೊಂಡ ದೊಡ್ಡ ದೊರೆತನದಂತೆಯೂ—ಪೂರ್ವೋಕ್ತವಾದ ಗಂಧರ್ವನಗರದಂತೆಯೂ ಇರುವುದ.॥ ನಮ್ಮ ನೇತ್ರದೋಷದಿಂದ ಇಬ್ಬರು ಚಂದ್ರರಿರುವಂತೆ ಕಾಣುವುದಿಲ್ಲವೆ! ಮರುಮರೀಚಿಕೆಯುಲ್ಲಿ ನೀರಿದೆಯೆಂಬ ಭ್ರಾಂತಿಯುಂಟಾಗುವುದಿಲ್ಲವೆ! ಹಡಗಿನಲ್ಲಿ ಕುಳಿತುಕೊಂಡು ಹೋಗುವಾಗ ತೀರದಲ್ಲಿರುವ ಪರ್ವತಗಳೆಲ್ಲವೂ ಓಡುವಂತೆ ತೋರುವುದಿಲ್ಲವೆ! ಇವೆಲ್ಲವೂ ಅಸತ್ಯವಾಗಿರುವಂತೆಯೇ ಈ ಪ್ರಪಂಚವೂ ಅಸತ್ಯವಾಗಿರುವುದು॥ ನಮ್ಮ ಮನೋಭ್ರಾಂತಿಯಿಂದ ಕಲ್ಪಿಸಿಕೊಂಡಿರುವ ಪಿಶಾಚದಂತೆ ಬೀಜವೇ ಇಲ್ಲದಿದ್ದರೂ ಪ್ರಕಾಶಿಸುತ್ತಿರುವುದು; ನಾವೊಂದು ಕಥೆಯನ್ನು ಕೇಳಿದರೆ, ಅದರ ವಿಷಯವೆಲ್ಲ ಅಸತ್ಯವಾಗಿದ್ದರೂ ಮನಸ್ಸಿನಲ್ಲಿ ಸ್ಫುರಿಸುತ್ತಿರುವಂತೆ ಇದೂ ಸ್ಫುರಿಸುತ್ತಿರುವುದು; ಅಂತರಿಕ್ಷದಲ್ಲಿ ಒಂದು ಮುಕ್ತಾಹಾರವಿರುವುದೆಂದು ಕಲ್ಪಿಸಿಕೊಂಡರೆ ಅದು ಸುಳ್ಳಾಗುವಂತೆ ಇದೂ ಸುಳ್ಳಾದುದು॥ ಕಡಗವು ಸ್ವಭಾವತಃ ಚಿನ್ನವೇ ಆಗಿದ್ದರೂ ಅದಕ್ಕೆ ಬೇರೆಯಾದ ಹೆಸರಿರುವಂತೆಯೂ—ಅಲೆಯೆಲ್ಲವೂ ಜಲವೇಆಗಿದ್ದರೂ ಬೇರೆಯಾದ ಹೆಸರಿರುವಂತೆಯೂ

ಅಭಿತ್ತಿ ರಜ್ಗರಹಿತಂ ಉಪಲಬ್ಧಿಮನೋಹರಂ |
ಸ್ವಪ್ನೇವಾ ವ್ಯೋಮ್ನಿ ವಾ ಚಿತ್ರಂ ಅಕರ್ತೃ ಚಿರಭಾಸುರಮ್ ||೨೩||
ಅವಹ್ನಿರೇವ ವಹ್ನಿತ್ವಂ ಧತ್ತೇ ಚಿತ್ರಾನಲೋ ಯಥಾ |
ದಧಾತ್ಯೇವಂ ಜಗಚ್ಛಬ್ದರೂಪಾರ್ಥಮಸದಾತ್ಮಕಮ್ ||೨೪||
ತರಙ್ಗೋತ್ಪಲಮಾಲಾಭಂ ದೃಷ್ಟನೃತ್ಯಮಿವೋತ್ಥಿತಮ್ |
ಚಕ್ರಚೀತ್ಕಾರಪೂರ್ಣಸ್ಯ ಜಲರಾಶಿಮಿವೋದ್ಯತಮ್ ||೨೫||
ಶೀರ್ಣಪತ್ರಂ ಭ್ರಷ್ಟನಷ್ಟಂ ಗ್ರೀಷ್ಮೇ ವನಮಿವಾರಸಮ್ |
ಮರಣವ್ಯಗ್ರಚಿತ್ತಾಭಂ ಶಿಲಾಗೃಹಗುಹಾಸ್ಪದಮ್ ||೨೬||
ಅನ್ಧಕಾರಗೃಹೈಕೈಕನೃತ್ತಮುನ್ಮತ್ತಚೇಷ್ಟಿತಮ್ |
ಪ್ರಶಾನ್ತಾಜ್ಞಾನನೀಹಾರಂ ವಿಜ್ಞಾನಶರದಮ್ಬರಮ್ ||೨೭||
ಸಮುತ್ಕೀರ್ಣಮಿವ ಸ್ತಮ್ಭೇ ಚಿತ್ರಂ ಭಿತ್ತಾವಿವೋದಿತಮ್ |

ಈ ಪ್ರಪಂಚಕ್ಕೆ ಹೆಸರು ಮಾತ್ರ ಬೇರೆಯಾಗಿರುವುದಲ್ಲದೆ, ಇದೇ ಒಂದು ಪದಾರ್ಥವಲ್ಲ. ಆಕಾಶವು ಸ್ವಭಾವತಃ ಶೂನ್ಯಪದಾರ್ಥವಾಗಿದ್ದರೂ ಅದನ್ನು ನೋಡಿ ಕಪ್ಪಾಗಿದೆ ಎಂಬುದಾಗಿ ಅಸತ್ಯವಾದ ಜ್ಞಾನವುಂಟಾಗುವಂತೆ ಈ ಪ್ರಪಂಚಜ್ಞಾನವೂ ಅಸತ್ಯವಾಗಿಯೇ ಇದ್ದರೂ ಸರ್ವದಾ ಕಾಣಿಸಿಕೊಳ್ಳುವುದು. ಸ್ವಪ್ನದಲ್ಲಿಯಾದರೂ ಆಕಾಶದಲ್ಲಿಯಾದರೂ ಒಂದು ಚಿತ್ರವಿರುವುದೆಂದು ಕಲ್ಪಿಸಿಕೊಂಡರೆ ಅದು—ಗೋಡೆಯೂ ಬಣ್ಣವೂ ಬರೆದವನೂ ಇಲ್ಲದೆಯೇ ನಮ್ಮ ಅನುಭವಕ್ಕೆ ಮಾತ್ರ ಮನೋಹರವಾಗಿರುವಂತೆ, ಈ ಪ್ರಪಂಚವೂ ಬಹುಕಾಲದಿಂದ ಇರುವಂತೆ ಪ್ರಕಾಶಿಸುತ್ತಿರುವುದು. ಚಿತ್ರದಲ್ಲಿ ಒಂದು ಅಗ್ನಿಯನ್ನು ಬರೆದರೆ, ಅದು ಬೆಂಕಿಯಲ್ಲದಿದ್ದರೂ ಬೆಂಕಿಯೆಂಬ ವ್ಯವಹಾರವನ್ನು ಧರಿಸಿರುವಂತೆ, ಈ ಜಗತ್ತೂ ಕೂಡ ಅಸತ್ಯವಾಗಿಯೇ ಹೆಸರನ್ನು ಪಡೆದು ಒಂದು ಪದಾರ್ಥರೂಪವನ್ನು ಧರಿಸಿರುತ್ತದೆ. ಜಲತರಂಗಗಳನ್ನು ದೂರದಲ್ಲಿ ನೋಡಿ ಉತ್ಪಲಮಾಲೆಯೆಂದು ತಿಳಿಯುವುದಿಲ್ಲವೆ! ಹಿಂದೆ ಒಂದು ನರ್ತನವನ್ನು ನೋಡಿದ್ದರೆ ಅದು ಈಗ ನಮ್ಮ ಕಣ್ಣೆದುರಾಗಿರುವಂತೆ ತೋರುವುದಿಲ್ಲವೆ! ಮನುಷ್ಯನು ಅಂಗತಂಗನಾಗಿ ಮಲಗಿಕೊಂಡು ಬಾಯಲ್ಲಿ ನೀರುತುಂಬಿಕೊಂಡು ಮೇಲ್ಮುಖವಾಗಿ ಉಸಿರುಬಿಟ್ಟರೆ, ಆಗ ಬಾಯಲ್ಲಿರುವ ನೀರಿನ ಹನಿಗಳೊಡನೆ ಗಾಳಿಯು ಮೇಲಕ್ಕೆ ಹೋಗಿ ದುಂಡಾಗಿ ಹರಡಿಕೊಂಡು ಅಲ್ಲಿ ದೊಡ್ಡದೊಂದು ಸರಸ್ಸಿರುವಂತೆ ಅವನಿಗೆ ತೋರುವುದಿಲ್ಲವೆ! ಇವೆಲ್ಲವೂ ಹೇಗೆ ಅಸತ್ಯಗಳೋ, ಈ ಪ್ರಪಂಚಜ್ಞಾನವೂ ಹಾಗೆಯೇ ಅಸತ್ಯವಾದುದು॥ ಗ್ರೀಷ್ಮಕಾಲದಲ್ಲಿ ಮರದ ತೋಪು ಎಲೆಗಳೆಲ್ಲ ಒಣಗಿ ನೆಳಲಿಲ್ಲದೆ ಫಲರಹಿತವಾಗಿ ವ್ಯರ್ಥವಾಗಿರುವಂತೆ ಈ ಪ್ರಪಂಚವೂ ಇರುವುದು; ಮರಣೋನ್ಮುಖನಾದವನ ಚಿತ್ತವು ಭ್ರಾಂತಿಹೊಂದುತ ಮೂರ್ಛೆಹೋಗುತ ಅಸ್ಥಿರವಾಗಿರುವಂತೆ ಈ ಪ್ರಪಂಚವೂ ಇರುವುದು; ಮತ್ತು ಪರ್ವತಗುಹೆಯಂತೆ ಇದು ಅತಿಭಯಂಕರವಾದುದು॥ ಅಂಧಕಾರಮಯವಾದ ಗುಹೆಯಲ್ಲಿ ಒಬ್ಬೊಬ್ಬನೇ ನರ್ತನಮಾಡಿದರೆ ಅದು ಹುಚ್ಚುತನವೆನ್ನಿಸುವಂತೆ, ಈ ಪ್ರಪಂಚವ್ಯಾಪಾರವೂ ಹುಚ್ಚುಹುಚ್ಚಾಗಿರುವುದು. ಆದರೆ ವಾಸ್ತವ್ಯಸ್ಥಿತಿಯನ್ನು ವಿಚಾರಮಾಡಿ ಅಜ್ಞಾನವೆಂಬ ಮಂಜು ನಾಶಹೊಂದಿದಾಗ ವಿಜ್ಞಾನವೆಂಬ ಶರತ್ಕಾಲವಿಲಾಸಕ್ಕೆ ಆಕಾಶವಾಗುವುದು॥ ಮತ್ತು ಇದು ಸ್ತಂಭದಲ್ಲಿ ಕೊರೆದಿರುವ ಪ್ರತಿಮಾದಿಗಳಂತೆಯೂ

ಪಞ್ಚಾದಿವಾಭಿರಚಿತಂ ಸಚೇತನಮಚೇತನಮ್ ॥೨೮॥
ತತಃ ಸ್ಥಿತಿಪ್ರಕರಣಂ ಚತುರ್ಥಂ ಪರಿಕಲ್ಪಿತಮ್ ।
ತ್ರೀಣಿ ಗ್ರನ್ಥಸಹಸ್ರಾಣಿ ವ್ಯಾಖ್ಯಾನಾಖ್ಯಾಯಿಕಾಮಯಮ್ ॥೨೯॥
ಇತ್ಥಂ ಜಗದಹಂಭಾವರೂಪಸ್ಥಿತಿಮುಪಾಗತಮ್ ।
ದ್ರಷ್ಟೃದೃಶ್ಯಕ್ರಮಂ ಪ್ರೌಢಂ ಇತ್ಯತ್ರ ಪರಿಕೀರ್ತಿತಮ್ ॥೩೦॥
ದಶದಿಙ್ಮಣ್ಡಲಾಭೋಗಭಾಸುರೋಽಯಂ ಜಗದ್ಭ್ರಮಃ ।
ಇತ್ಥಮಭ್ಯಾಗತೋ ವೃದ್ಧಿಂ ಇತಿ ತತ್ರೋಚ್ಯತೇ ಚಿರಮ್ ॥೩೧॥
ಉಪಶಾನ್ತಿಪ್ರಕರಣಂ ತತಃ ಪಞ್ಚಸಹಸ್ರಕಮ್ ।
ಪಞ್ಚಮಂ ಪಾವನಂ ಪ್ರೋಕ್ತಂ ಯುಕ್ತಿಸನ್ತತಿಸುನ್ದರಮ್ ॥೩೨॥
ಇದಂ ಜಗದಹಂ ತ್ವಂ ಚ ಸ ಇತಿ ಭ್ರಾನ್ತಿರುತ್ಥಿತಾ ।
ಇತ್ಥಂ ಸಂಶಾಮ್ಯತೀತ್ಯಸ್ಮಿನ್ ಕಥ್ಯತೇ ಶ್ಲೋಕಸಙ್ಗ್ರಹೈಃ ॥೩೩॥
ಉಪಶಾನ್ತಿಪ್ರಕರಣೇ ಶ್ರುತೇ ಶಾಮ್ಯತಿ ಸಂಸೃತಿಃ ।
ಪ್ರಭೃಷ್ಟಚಿತ್ರಸೇನೇವ ಕಿಂಚಿಲ್ಲಭ್ಯೋಪಲಮ್ಭನಾ ॥೩೪॥

ಗೋಡೆಯುಲ್ಲಿ ಬರೆದಿರುವ ಚಿತ್ರದಂತೆಯೂ ಕೆಸರುಮಣ್ಣಿನಲ್ಲಿ ಮಾಡಿದ ಬೊಂಬೆಗಳಂತೆಯೂ—ನಿಶ್ಚೇತನವಾಗಿದ್ದರೂ ಸಚೇತನವಾಗಿ ಕಾಣಿಸಿಕೊಳ್ಳುವುದು. ಈ ಸಮಸ್ತ ವಿಷಯಜ್ಞಾನವೂ ಈ ಉತ್ಪತ್ತಿಪ್ರಕರಣವನ್ನು ಕೇಳಿದವನಿಗುಂಟಾಗುವುದು ॥೧೫—೨೮॥

ಬಳಿಕ ಸ್ಥಿತಿಪ್ರಕರಣವೆಂಬ ನಾಲ್ಕನೆಯ ಪ್ರಕರಣವು ರಚಿಸಲ್ಪಟ್ಟಿರುವುದು; ಇದು ಪ್ರಪಂಚಸ್ವರೂಪಾದಿವಿವರಣೆಗಳಿಂದಲೂ ಉಪಾಖ್ಯಾನಗಳಿಂದಲೂ ತುಂಬಿರುವುದು. ಇದು ಮೂರುಸಾವಿರ ಗ್ರಂಥಸಂಖ್ಯೆಯುಳ್ಳದು ॥೨೯॥

ಪರಬ್ರಹ್ಮನೇ ದ್ರಷ್ಟೃತ್ವವನ್ನೂ ದೃಶ್ಯತ್ವವನ್ನೂ ಹೊಂದಿ, (ಅಂದರೆ ತಾನೇ ನೋಡತಕ್ಕವನೂ ನೋಡಲ್ಪಡತಕ್ಕದ್ದೂ ಆಗಿ) ಜಗದ್ರೂಪವಾಗಿಯೂ ಅಹಂಕಾರರೂಪವಾಗಿಯೂ ಸ್ಥಿತಿಯನ್ನು ಪಡೆದು, ತಾನೇ ಭೋಕ್ತೃವಾಗಿಯೂ ಭೋಗ್ಯವಾಗಿಯೂ ಇರುವನೆಂಬ ವಿಷಯವು ಈಸ್ಥಿತಿಪ್ರಕರಣದಲ್ಲಿ ಹೇಳಲ್ಪಟ್ಟಿರುವುದು ॥೩೦॥

ದಶದಿಕ್ಕುಗಳ ಮಧ್ಯದಲ್ಲಿಯೂ ಪ್ರಕಾಶವಾಗಿರುವ ಈ ಜಗತ್ತೆಂಬ ಭ್ರಾಂತಿಯು, ಈ ವಿಧವಾಗಿ ಬಹುಕಾಲದಿಂದ ವೃದ್ಧಿಹೊಂದಿದೆಯೆಂಬ ವಿಷಯವು ಈಸ್ಥಿತಿಪ್ರಕರಣದಲ್ಲಿ ವಿವರಿಸಲ್ಪಡುವುದು ॥೩೧॥

ಬಳಿಕ ಅತಿಪವಿತ್ರವಾದ ಉಪಶಮಪ್ರಕರಣವೆಂಬ ಅಯ್ದನೆಯ ಪ್ರಕರಣವು; ಇದು ಅನೇಕ ಯುಕ್ತಿಸಮೂಹವಿಚಾರದಿಂದ ಸುಂದರವಾಗಿರುವುದು; ಇದು ಅಯ್ದುಸಾವಿರ ಗ್ರಂಥಸಂಖ್ಯೆಯುಳ್ಳದು ॥೩೨॥

ಮತ್ತು, ಇದು—ಜಗತ್ತು—ನಾನು—ನೀನು—ಅವನು—ಎಂಬುದಾಗಿ ಉತ್ಪನ್ನವಾಗಿರುವ ಭ್ರಾಂತಿಯು ಈರೀತಿಯಾಗಿ ಶಾಂತಿಯೊಂದುವುದೆಂಬ ವಿಷಯವು, ಶ್ಲೋಕಗಳನ್ನು ಸಂಗ್ರಹಿಸಿ ಈ ಪ್ರಕರಣದಲ್ಲಿ ಹೇಳಲ್ಪಡುವುದು ॥೩೩॥

ಈ ಉಪಶಮಪ್ರಕರಣವನ್ನು ಕೇಳಿದರೆ, ಈ ಸಂಸಾರವು ಶಾಂತಿಹೊಂದುವುದು (ಅಲ್ಪಾವಶೇಷವಾಗುವುದು). ಅದು ಹೇಗೆಂದರೆ:—ಒಂದು ಗೋಡೆಯಮೇಲೆ ಚಿತ್ರದಲ್ಲಿ ಸೇನೆಯನ್ನು ಬರೆದಿದ್ದು ಅದು ಅಲ್ಲಲ್ಲಿ ಶಿಥಿಲವಾಗಿ ಹೋದಾಗ ಆ ಸೇನೆಯು ಸ್ವಲ್ಪಸ್ವಲ್ಪ ಕಾಣಿಸುವುದಲ್ಲವೆ! ಹಾಗೆ ಈ ಪ್ರಪಂಚಕಲ್ಪನೆಯು ಸ್ವಲ್ಪಸ್ವಲ್ಪವಾಗಿ ಅನುಭವಕ್ಕೆ

ಶತಾಂಶಶಿಷ್ಟಾ ಭವತಿ ಸಂಶಾನ್ತ ಭ್ರಾನ್ತ ರೂಪಿಣೀ ।
ಅನ್ಯಸಙ್ಕಲ್ಪಚಿತ್ತಸ್ಥ ನಗರಶ್ರೀರಿವಾಸತೀ ॥೩೫॥
ಅಲಭ್ಯವಸ್ತುಪಾರ್ಶ್ವಸ್ಥಸ್ವಪ್ನಯುದ್ಧಕ್ಷೋರಾರವಾ ।
ಶಾನ್ತಸಙ್ಕಲ್ಪಮತ್ತಾಭ್ರಭೀಷಣಾಶನಿಶಬ್ದವತ್ ॥೩೬॥
ವಿಸ್ಮೃತಸ್ವಪ್ನಸಙ್ಕಲ್ಪನಿರ್ಮಾಣನಗರೋಪಮಾ ।
ಭವಿಷ್ಯನ್ನಗರೋದ್ಯಾನಪ್ರಸೂವನ್ಧ್ಯಾಮಲಾಙ್ಗಕಾ ॥೩೭॥
ತಸ್ಯಾಜಿಹ್ವೋಚ್ಯಮಾನೋನೋಗ್ರಕಥಾರ್ಥಾನುಭವೋಪಮಾ ।
ಅನುಲ್ಲಿಖಿತಚಿತ್ರಸ್ಯ ಚಿತ್ರವ್ಯಾಪ್ತೇವ ಭಿತ್ತಿಭೂಃ ॥೩೮॥
ಪರಿವಿಸ್ಮರ್ಯಮಾಣಾರ್ಥಕಲ್ಪನಾನಗರೀನಿಭಾ ।
ಸರ್ವರ್ತುಮದನುತ್ಪನ್ನವನಸ್ಪನ್ದಾಸ್ಫುಟಾಕೃತಿಃ ॥೩೯॥

ಬರುತ್ತಿರುವುದು! ಮತ್ತೊಬ್ಬ ಪುರುಷನು ತನ್ನ ಮನಸ್ಸಿನಲ್ಲಿ ಸಂಕಲ್ಪದಿಂದ ಒಂದು ನಗರವನ್ನು ನಿರ್ಮಿಸಿಕೊಂಡಿದ್ದರೆ, ಅದರ ಸೊಬಗು ನಮಗೆ ಅಸತ್ಯವಾದುದಾಗಿ—ಭ್ರಮೆಯಿಂದುಂಟಾದ ಆದರ ಆಕಾರವು ಶಾಂತಿಪಡೆದು—ನೂರರಲ್ಲೊಂದುಭಾಗಮಾತ್ರ ನಿಲ್ಲುವುದಿಲ್ಲವೆ! ಹಾಗೆಯೇ ಈ ಉಪಶಮಪ್ರಕರಣವನ್ನು ಕೇಳಿದವರಿಗೆ ಹಿಂದೆ ಉಂಟಾಗಿದ್ದ ಈ ಸಂಸಾರವೆಂಬ ಭ್ರಮೆಯು, ನೂರರಲ್ಲೊಂದುಪಾಲು ಅವಶಿಷ್ಟವಾಗುವುದು॥ ಮತ್ತು, ಸ್ವಪ್ನದಲ್ಲಿ ಯುದ್ಧಮಾಡುತಿರುವ ಒಬ್ಬ ಪುರುಷನು ಪಾರ್ಶ್ವದಲ್ಲಿ ಯಾವ ವಸ್ತುವನ್ನೂ ಹೊಂದದೆ ಬಹಳಹೊತ್ತು ಕೂಗಿಕೊಳ್ಳುತ ಒಳಿಕ ಅದು ಶಾಂತವಾಗುವಂತೆ, ಈ ಸಂಸಾರಭ್ರಮೆಯೂ ಶಾಂತವಾಗುವುದು; ಮದ್ದಾನೆಯು ಕೂಗಿನಂತೆ ಭಯಂಕರವಾದ ಮೇಘದ ಗುಡುಗನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದು ಅದು ಶಾಂತವಾಗುವಂತೆ ಈ ಸಂಸಾರಭ್ರಮೆ ಶಾಂತವಾಗುವುದು ॥ ಸ್ವಪ್ನದಲ್ಲಿಯೂ ಸಂಕಲ್ಪದಲ್ಲಿಯೂ ಒಂದು ನಗರವನ್ನು ನಿರ್ಮಾಣಮಾಡಿಕೊಂಡಿದ್ದು ಮರೆತುಬಿಟ್ಟರೆ ಅದು ಶಾಂತವಾಗುವಂತೆ ಇದೂ ಶಾಂತಿಹೊಂದುವುದು; ಇದುವರೆಗೂ ಹುಟ್ಟದೆ ಮುಂದೆ ನಿರ್ಮಾಣವಾಗುವ ಒಂದು ಪಟ್ಟಣದಲ್ಲಿ, ಬಂಜೆಯು ಪ್ರಸವಿಸಿದಳೆಂದರೆ ಅದರ ಸನ್ನಿವೇಶವು ಎಷ್ಟುಮಟ್ಟಿಗಿರುವುದೋ, ಈ ಸಂಸಾರಭ್ರಮೆಯೂ ಅಷ್ಟುಮಟ್ಟಿಗೆ ವಿಶದವಾಗಿರುವುದು ॥ ಆ ಬಂಜೆಯು ತನ್ನ ನಾಲ್ಗೆಯಿಂದ ತನ್ನ ಮಗನ ಪ್ರಚಂಡವಾದ ಶೌರ್ಯಾದಿ ಕಥೆಗಳನ್ನು ವರ್ಣಿಸಿದರೆ, ಆ ವಿಷಯವನ್ನು ನಾವು ಅನುಭವಿಸುವಂತೆ ಇದೂ ಇರುವುದು. ಎಂದಿಗೂ ಚಿತ್ರವನ್ನೇ ಬರೆಯದಿರುವವನ ಚಿತ್ರಗಳಿಂದ ಗೋಡೆಯೆಲ್ಲ ತುಂಬಿಹೋಗಿದೆಯೆಂದರೆ, ಈ ವಿಷಯವನ್ನು ನಾವು ಅನುಭವಿಸುವಂತೆ ಈ ಸಂಸಾರಾನುಭವವೂ ಇರುವುದು ॥ ನಮ್ಮ ಮನಸ್ಸಿನಲ್ಲಿ ಒಂದು ಪಟ್ಟಣವನ್ನು ಕಲ್ಪಿಸಿಕೊಂಡಿದ್ದು ಅದರ ವಿಷಯವನ್ನೆಲ್ಲ ನಾವು ಮರೆಯುತಬರುವಂತೆ ಈ ಸಂಸಾರಭ್ರಮೆಯೂ ಆಗುವುದು. ಹುಟ್ಟದೆಯೇ ಇರುವ ಕಾಡು ಸರ್ವಋತುಗಳಲ್ಲಿಯೂ ಅಳ್ಳಾಡುತಿದೆಯೆಂದರೆ, ಇದರ ವಿಷಯವು ಅಪ್ರಕಾಶವಾಗುವಂತೆ ಈ ಜಗದ್ಭ್ರಮೆಯೂ ಆಗುವುದು ॥ ಮುಂದೆ ಒಂದು ಹೂದೋಟವಾಗುತ್ತದೆಯೆಂದಿಟ್ಟುಕೊಂಡು, ಆದರಲ್ಲಿ ವಸಂತರ್ತುವಿನ ಸೊಬಗು ಈಗ ನಲಿಯುತ್ತದೆಂದು ವ್ಯವಹರಿಸುವಂತೆ ಈ ಸಂಸಾರಭ್ರಮೆಯಿರುವುದು. ಒಂದು ನದಿ

ಭಾವಿಪುಷ್ಪವನಾಕಾರವಸನ್ತರಸರಞ್ಜನಾ ।
ಅನ್ತರ್ಲೀನತರಙ್ಗೌಘಸೌಮ್ಯವಾರಿಸರಿತ್ಸಮಾ ॥೪೦॥
ನಿರ್ವಾಣಾಖ್ಯಂ ಪ್ರಕರಣಂ ತತಃ ಷಷ್ಠಮುದಾಹೃತಮ್ ।
ಶಿಷ್ಟೋ ಗ್ರನ್ಥಃ ಪರಿಮಾಣಂ ತಸ್ಯ ಜ್ಞಾನಮಹಾರ್ಥದಃ ॥೪೧॥
ಬುದ್ಧೇ ತಸ್ಮಿನ್ ಭವೇಚ್ಛ್ರೇಯೋ ನಿರ್ವಾಣಂ ಶಾನ್ತಕಲ್ಪನಮ್ ।
ಅಚೇತ್ಯಚಿತ್ಪ್ರಕಾಶಾತ್ಮಾ ವಿಜ್ಞಾನಾತ್ಮಾ ನಿರಾಮಯಃ ॥೪೨॥
ಪರಮಾಕಾಶಕೋಶಾಚ್ಛಃ ಶಾನ್ತಸರ್ವಭವಭ್ರಮಃ ।
ನಿರ್ವಾಪಿತಜಗದ್ಯಾತ್ರಃ ಕೃತಕರ್ತವ್ಯಸುಸ್ಥಿತಃ ॥೪೩॥
ಸಮಸ್ತಜನತಾರಮ್ಭವಜ್ರಸ್ತಮ್ಭೋ ನಭೋನಿಭಃ ।
ವಿನಿಗೀರ್ಣಯಥಾಸಙ್ಖ್ಯಜಗಜ್ಜಾಲಾತಿತೃಪ್ತಿಮಾನ್ ॥೪೪॥
ಆಕಾಶೀಭೂತನಿಶ್ಶೇಷರೂಪಾಲೋಕಮನಸ್ಕೃತಿಃ ।
ಕಾರ್ಯಕಾರಣಕರ್ತೃತ್ವಹೇಯಾದೇಯದೃಶೋಜ್ಝಿತಃ ॥೪೫॥

ಯಲ್ಲಿ ಮೊದಲು ಅಲೆಗಳು ಅತ್ಯಧಿಕವಾಗಿ ಏಳುತಲಿದ್ದು—ಬಳಿಕ ಅವೆಲ್ಲವೂ ಅಡಗಿಬಿಟ್ಟು ನೀರು ಶಾಂತವಾಗುವಂತೆ, ಈ ಸಂಸಾರಭ್ರಮೆಯೂ ಮೊದಲು ಅತ್ಯಧಿಕವಾಗಿದ್ದು ಬಳಿಕ ತಾನಾಗಿಯೇ ಶಾಂತಿಪಡೆಯುವುದು ॥೩೪—೪೦॥

ಮುಂದಕ್ಕೆ ಆರನೆಯದಾದ ನಿರ್ವಾಣವೆಂಬ ಪ್ರಕರಣವು ಹೇಳಲ್ಪಟ್ಟಿರುವುದು. ಜ್ಞಾನವೆಂಬ ಮಹಾಫಲವನ್ನು ಕೊಡತಕ್ಕ ಉಳಿದ ಗ್ರಂಥವೆಲ್ಲವೂ (ಹದಿನಾಲ್ಕುವರೆಸಾವಿರ)ಇದರಲ್ಲಿರುವುದು ॥೪೧॥

ಇದನ್ನು ತಿಳಿದುಕೊಂಡರೆ, ಮೂಲಭೂತವಾದ ಅವಿದ್ಯೆಯು ನಷ್ಟವಾಗುವುದರಿಂದ ಸಮಸ್ತ ವಿಕಲ್ಪಗಳೂ ಶಾಂತವಾಗಿ ಶಾಶ್ವತವಾದ ಮೋಕ್ಷಸುಖವುಂಟಾಗುವುದು. ಈ ಮೋಕ್ಷಸುಖಪಡೆದವನು ಹೇಗಿರುವನೆಂದರೆ:— ನಿರ್ವಿಷಯಕಜ್ಞಾನಪ್ರಕಾಶರೂಪನಾಗಿಯೂ ಸಮಸ್ತ ದುಃಖರಹಿತನಾಗಿಯೂ ನಿರ್ಮಲವಾದ ಆಕಾಶಮಂಡಲದಂತೆ ನಿರ್ಲೇಪನಾಗಿಯೂ ಸಮಸ್ತಜಗದ್ಭ್ರಾಂತಿಯನ್ನೂ ಶಮಗೊಳಿಸಿದವನಾಗಿಯೂ ಲೋಕವ್ಯಾಪಾರಗಳನ್ನೆಲ್ಲ ಮುಗಿಸಿದವನಾಗಿಯೂ ಕೃತಕೃತ್ಯನಾಗಿ ಶಾಂತನಾಗಿಯೂ ಇರುವನು. ಮತ್ತು, ಒಂದು ವಜ್ರಮಣಿಯ ಸ್ತಂಭವಿದ್ದರೆ, ಅದರೆದುರಾಗಿ ನಡೆಯತಕ್ಕ ವ್ಯಾಪಾರಗಳೆಲ್ಲವೂ ಅದರಲ್ಲಿ ಪ್ರತಿಫಲಿಸುತ ಅದು ಸರ್ವಕ್ಕೂ ಆಶ್ರಯವಾಗಿರುವಂತೆ, ಈ ಮುಕ್ತನೂಕೂಡ ಸಮಸ್ತವಾದ ಪ್ರಪಂಚವ್ಯಾಪಾರಕ್ಕೂ ತಾನು ಸಾಕ್ಷಿಯಾಗಿರುತ ಒಂದರ ಲೇಪವೂ ಇಲ್ಲದಂತಿರುವನು; ಮತ್ತು ಸಮಸ್ತ ಪ್ರಪಂಚಸಮೂಹವನ್ನೂ ಯಥಾಕ್ರಮವಾಗಿ ನುಂಗಿರುವವನಂತೆ ಬಹಳ ತೃಪ್ತನಾಗಿರುವನು. ಮತ್ತು ಸಮಸ್ತವಾದ ಬಾಹ್ಯಪ್ರಪಂಚಗಳನ್ನೂ ತಿಳಿಯುವ ಇಂದ್ರಿಯವಿಭಾಗವುಳ್ಳವನಾಗಿದ್ದರೂ ಆಕಾಶದಂತೆ ನಿರ್ಲೇಪವಾದ ಮನಸ್ಸುಳ್ಳವನಾಗಿರುವನು; ಇದು ಕಾರ್ಯವೆಂದೂ ಇದು ಕಾರಣವೆಂದೂ ಇದಕ್ಕೆ ಇವನು ಕರ್ತನೆಂದೂ ಇದು ಹೇಯವೆಂದೂ ಇದು ಉಪಾದೇಯವೆಂದೂ ಉಂಟಾಗುವ ಜ್ಞಾನವನ್ನು ಬಿಟ್ಟಿರುವನು. ಇವನು ಈ ಪ್ರಪಂಚದಲ್ಲಿ ದೇಹಯುಕ್ತನಾಗಿದ್ದರೂ ದೇಹಶೂನ್ಯನಂ

ಸದೇಹೋಽಪಿ ನಿರ್ದೇಹಃ ಸಸಂಸಾರೋಽಪ್ಯಸಂಸೃತಿಃ ।
ಚಿನ್ಮಯೋ ಘನಪಾಷಾಣಜಠರಾಪೀವರೋಪಮಃ ॥೪೬॥
ಚಿದಾದಿತ್ಯಸ್ತಪನ್ ಲೋಕಾನ್ [1]ಅನ್ಧಕಾರೋಪರೋಪಮಮ್ ।
ಪರಪ್ರಕಾಶರೂಪೋಽಪಿ ಪರಮಾನ್ಧ್ಯಮಿವಾಗತಃ ॥೪೭॥
ರುದ್ಧಸಂಸೃತಿದುರ್ಲೀಲಃ ಪ್ರಕ್ಷೀಣಾಶಾವಿಷೂಚಿಕಃ ।
ನಷ್ಟಾಹಙ್ಕಾರವೇತಾಳೋ ದೇಹವಾನಕಳೇಬರಃ ॥೪೮॥
ಕಸ್ಮಿಂಶ್ಚಿದ್ರೋಮಕೋಟ್ಯಗ್ರೇ ತಸ್ಯೇಯಮವತಿಷ್ಠತೇ ।
ಜಗಲ್ಲಕ್ಷ್ಮೀರ್ಮಹಾಮೇರೋಃ ಪುಷ್ಪೇ ಕ್ವಚಿದಿವಾಳಿನೀ ॥೪೯॥
ಪರಮಾಣೌ ಪರಮಾಣೌ ಚಿದಾಕಾಶಃ ಸ್ವಕೋಟರೇ ।
ಜಗಲ್ಲಕ್ಷ್ಮೀಸಹಸ್ರಾಣಿ ಧತ್ತೇ ಕೃತ್ವಾಥ ಪಶ್ಯತಿ ॥೫೦॥
ವಿತತತಾ ಹೃದಯಸ್ಯ ಮಹಾಮತೇಃ ಹರಿಹರಾಬ್ಜಜಲಕ್ಷಶತೈರಪಿ ।
ತುಲನಮೇತಿ ನ ಮುಕ್ತಿಮತೋ ಯತಃ ಪ್ರವಿತತಾಸ್ತಿ ನಿರುತ್ತಮವಸ್ತುನಃ ॥೫೧॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ಗ್ರನ್ಥಸಙ್ಖ್ಯಾದಿವರ್ಣನಂ ನಾಮ ಸಪ್ತದಶಃ ಸರ್ಗಃ

ತೆಯೇ ಇರುವನು; ಸಂಸಾರಯುಕ್ತನಾಗಿದ್ದರೂ ಸಂಸಾರಶೂನ್ಯನಂತೆಯೇ ಇರುವನು; ಮತ್ತು ಕೇವಲ ಜ್ಞಾನಮಯನಾಗಿಯೂ ದೊಡ್ಡಬಂಡೆಯ ಒಳಭಾಗದಂತೆ ಛಿದ್ರವಿಲ್ಲದೆ ಪರಿಪೂರ್ಣನಾಗಿಯೂ ಇರುವನು. ಹೀಗೆ ಜ್ಞಾನಶೂನ್ಯನಾಗಿ, ಘನವಾದ ಅಂಧಕಾರದಂತೆ ಲೋಕಗಳನ್ನು ತಪಿಸುತ ಸರ್ವೋತ್ಕೃಷ್ಟಪ್ರಕಾಶಸ್ವರೂಪನಾಗಿದ್ದರೂ ಇತರರಿಗೆ ಬಲುಕುರುಡನಂತೆ ತೋರುತಿರುವನು. ಮತ್ತು ಇವನು ಈ ಸಂಸಾರದ ದುಶ್ಚೇಷ್ಟೆಯನ್ನೆಲ್ಲ ತಡೆದವನಾಗಿಯೂ ಆಶೆಯೆಂಬ ವಿಷೂಚಿಕೆಯು ಕ್ಷಯಹೊಂದಿದವನಾಗಿಯೂ ಅಹಂಕಾರವೆಂಬ ಬೇತಾಳನು ನಾಶಹೊಂದಿದವನಾಗಿಯೂ ಸದೇಹನಾಗಿದ್ದರೂ ವಿದೇಹನಾಗಿಯೂ ಇರುವನು ॥೪೬—೪೮॥

ಹೀಗೆ ಜೀವನ್ಮುಕ್ತಾವಸ್ಥೆಯಲ್ಲಿರತಕ್ಕವನಿಗೆ ಮೇರುಪರ್ವತದ ಮೇಲೆ ಹೂವಿನ ಯಾವುದೋ ಒಂದು ಮೂಲೆಯಲ್ಲಿ ಭ್ರಮರವಿರುವಂತೆ, ಈ ಪ್ರಪಂಚದ ಸೊಬಗು ಒಂದು ರೋಮಕೂಪದ ತುದಿಯಲ್ಲಿರುವುದು ॥೪೯॥

ಆದರೆ, ಸೂಕ್ಷ್ಮವಾಗಿರುವ ಪ್ರದೇಶದಲ್ಲಿ ಅತಿವಿಸ್ತೃತವಾದ ಈ ಜಗತ್ತು ಪ್ರಕಾಶಿಸುತ್ತದೆಂಬುದು ಅಸಂಗತವೆಂದು ಶಂಕಿಸಬಾರದು. ಪ್ರತಿಯೊಂದು ಪರಮಾಣುವಿನಲ್ಲಿಯೂ ತನ್ನೊಳಗೆ ಕಲ್ಪಿಸಿಕೊಂಡಿರುವ ಆಕಾಶದಲ್ಲಿ ಮತ್ತೊಂದು ಜ್ಞಾನಾಕಾಶವಿದ್ದೇ ಇರುವುದು. ಇದು ಸಾವಿರಾರು ಜಗತ್ಸಂಪತ್ತನ್ನು ತಾನು ಧರಿಸುತಲೂ ಮಾಡುತಲೂ ಸಾಕ್ಷಿಯಾಗಿ ನೋಡುತಲೂ ಇರುವುದು ॥೫೦॥

ಹೀಗೆ ಮಹಾಪ್ರಾಜ್ಞನಾದ ಮುಕ್ತನ ಹೃದಯವಿಸ್ತಾರವು ಲಕ್ಷೋಪಲಕ್ಷ ಹರಿಹರಬ್ರಹ್ಮರಿಗೂ ಕೂಡ ಸಮಾನವಾಗುವುದಿಲ್ಲ. ಏಕೆಂದರೆ—ಆ ಲೋಕೋತ್ತರವಾದ ಪರಬ್ರಹ್ಮವಸ್ತುವು ಅಷ್ಟು ವಿಸ್ತಾರವಾಗಿರುವುದು ॥೫೧॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಗ್ರಂಥಸಂಖ್ಯಾದಿ ನಿರೂಪಣವೆಂಬ ಹದಿನೇಳನೆಯ ಸರ್ಗವು.

---

1. ಅನ್ಧಕಾರೋಪರೋಪಮಮಿತ್ಯತ್ರ ರಲಯೋರಭೇದಾತ್ ಅನ್ಧಕಾರೋಪಲೋಪಮಮಿತಿ ಭವತಿ.

ಅಥ ಮುಮುಕ್ಷುವ್ಯವಹಾರಪ್ರಕರಣೇ ಅಷ್ಟಾದಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅಸ್ಯಾಂ ವಾಚಿತಮಾತ್ರಾಯಾಂ ಪ್ರಬೋಧಃ ಸಮ್ಪ್ರವರ್ತತೇ ।
ಬೀಜಾದಿವ ಸತೋ ವ್ಯುಪ್ತಾತ್ ಅವಶ್ಯಂ ಭಾವಿ ಸತ್ಫಲಮ್ ॥೧॥
ಅಪಿ ಪೌರುಷಮಾದೇಯಂ ಶಾಸ್ತ್ರಂ ಚೇದ್ಯುಕ್ತಿಬೋಧಕಮ್ ।
ಅನ್ಯತ್ತ್ವಾರ್ಷಮಪಿ[1] ತ್ಯಾಜ್ಯಂ ಭಾವ್ಯಂ ನ್ಯಾಯ್ಯೈಕಸೇವಿನಾ ॥೨॥
ಯುಕ್ತಿಯುಕ್ತಮುಪಾದೇಯಂ ವಚನಂ ಬಾಲಕಾದಪಿ ।
ಅನ್ಯತ್ ತೃಣಮಿವ ತ್ಯಾಜ್ಯಂ ಅಪ್ಯುಕ್ತಂ ಪದ್ಮಜನ್ಮನಾ ॥೩॥
ಯೋಽಸ್ಮತ್ತಾತಸ್ಯ ಕೂಪೋಽಯಂ ಇತಿ ಕೌಪಂ [2]ಪಿಬತ್ಯಪಃ।

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹದಿನೆಂಟನೆಯ ಸರ್ಗವು.

ಏತದ್ಗ್ರನ್ಥಗುಣಾಮುಖ್ಯಾಃ ಮುಖ್ಯೈರಪ್ಯಾನುಷಙ್ಗಿಕೈಃ ।
ಫಲೈಃ ಸಹ ನಿರೂಪ್ಯನ್ತೇ ಗ್ರಾಹ್ಯಾಂಶಾಶ್ಚೋಪಮಾಸ್ವಿಹ ॥

ಈ ಗ್ರಂಥದ ಮುಖ್ಯಗುಣಗಳೂ, ಮುಖ್ಯವಾಗಿಯೂ ಆಂತರಾಳಿಕವಾಗಿಯೂ ಇರುವ ಫಲಗಳೂ, ಉಪಮಾನಗಳಲ್ಲಿ ಸ್ವೀಕರಿಸಬೇಕಾದ ಅಂಶಗಳೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಈರೀತಿಯಾಗಿ ಗ್ರಂಥಸಂಖ್ಯೆಯನ್ನು ಹೇಳಿದ ವಸಿಷ್ಠರು, ಈ ಗ್ರಂಥದ ಶೈಲಿ ಮುಂತಾದುದು ತಿಳಿಯುವುದಕ್ಕೋಸ್ಕರ ಇನ್ನೂ ವಿಶದವಾಗಿ ಹೇಳಲುಪಕ್ರಮಿಸಿದರು.

ಅಯ್ಯಾ! ರಾಮ! ಉತ್ತಮವಾದ ಬೀಜವನ್ನು ಸರಿಯಾಗಿ ಹದಮಾಡಿ ಬಿತ್ತಿದರೆ—ಅದರಿಂದ ಮುಂದೆ ಉತ್ತಮವಾದ ಫಲವುಂಟಾಗುವಂತೆ, ಈ ಗ್ರಂಥವನ್ನು ಓದಿದ ಮಾತ್ರದಿಂದಲೇ ಉತ್ತಮವಾದ ಜ್ಞಾನವುಂಟಾಗುವುದು ॥೧॥

ಜ್ಞಾನಸಂಪಾದನೆಗೆ ಇತರವಾದ ಅನೇಕ ಗ್ರಂಥಗಳಿರುವಾಗ ಇದನ್ನೇ ಓದಬೇಕೆಂದು ನಿಯಮವೇನೆಂದರೆ:—ಸರಿಯಾದ ಯುಕ್ತಿಗಳಿಂದ ತತ್ವನಿರ್ಣಯಮಾಡತಕ್ಕ ಶಾಸ್ತ್ರವು ಪುರುಷಕೃತವಾಗಿದ್ದರೂ ಕೂಡ ಅದನ್ನು ಸ್ವೀಕರಿಸಬೇಕು; ಅದಲ್ಲದೆ ಯುಕ್ತಿರಹಿತವಾದ ಶಾಸ್ತ್ರವು ವೇದದಲ್ಲಿದ್ದರೂ ಬಿಟ್ಟುಬಿಡತಕ್ಕುದು. ಅಂತು ಯಾವುದು ನ್ಯಾಯಯುಕ್ತವೋ, ಅದನ್ನೇ ಎಂದಿಗೂ ಸೇವಿಸತಕ್ಕವನಾಗಿರಬೇಕು ॥೨॥

ಯುಕ್ತಿಯುಕ್ತವಾದ ವಚನವು ಬಾಲಕನ ಮುಖದಿಂದಲಾದರೂ ಸ್ವೀಕರಿಸತಕ್ಕುದು. ಯುಕ್ತಿರಹಿತವಾದ ಮಾತು ಸಾಕ್ಷಾಚ್ಚತುರ್ಮುಖನಿಂದ ಹೇಳಲ್ಪಟ್ಟುದಾದರೂ, ಅದನ್ನು ಕಸದಂತೆ ಬಿಟ್ಟುಬಿಡಬೇಕು ॥೩॥

ಇದೂ ಅಲ್ಲದೆ ಮನುಷ್ಯನು ಎಂದಿಗೂ ಸಾರಗ್ರಹಣಮಾಡತಕ್ಕವನಾಗಿರಬೇಕು; ಇದು ನಮ್ಮಪ್ಪನ ಬಾವಿಯೆಂದು—ಯಾವನು ಮುಂದುಗಡೆ ಇರುವ ಗಂಗೆಯ ನೀರನ್ನು

1. ಅತ್ರ ಋಷಿಶಬ್ದೋ ವೇದಪರಃ. 2. ಲಿಂಗವಚನವ್ಯತ್ಯಯಆರ್ಷಃ.

ತ್ಯಕ್ತ್ವಾ ಗಾಙ್ಗಂ ಪುರಸ್ಥಂ ತಂ ಕೋನುಶಾಸ್ತ್ಯತಿರಾಗಿಣಮ್ ||೪||
ಯಥೋಷಸಿ ಪ್ರವೃತ್ತಾಯಾಂ ಆಲೋಕೋವಶ್ಯಮೇಷ್ಯತಿ |
ಅಸ್ಯಾಂ ವಾಚಿತಮಾತ್ರಾಯಾಂ ಸುವಿವೇಕಸ್ತಥೈಷ್ಯತಿ ||೫||
ಶ್ರುತಾಯಾಂ ಪ್ರಾಜ್ಞವದನಾತ್ ಬುದ್ಧ್ವಾಸ್ತಂ ಸ್ವಯಮೇವ ಚ |
ಶನೈಶ್ಶನೈರ್ವಿಚಾರೇಣ ಬುದ್ಧೌ ಸಂಸ್ಕಾರಆಗತೇ ||೬||
ಪೂರ್ವಂ ತಾವದುದೇತ್ಯನ್ತಃ ಭೃಶಂ ಸಂಸ್ಕೃತವಾಕ್ಯತಾ |
ಶುದ್ಧಮುಕ್ತಾಲತೇವೋಚ್ಚೈಃ ಯಾ ಸಭಾಸ್ಥಾನಭೂಷಣಮ್ ||೭||
ಪರಾ ನಾಗರತೋದೇತಿ ಮಹತ್ತ್ವಗುಣಶಾಲಿನೀ |
ಸಾ ಯಯಾ ಸ್ನೇಹಮಾಯಾನ್ತಿ ರಾಜಾನೋ [1]ಅಮರಾಅಪಿ ||೮||
ಪೂರ್ವಾಪರಜ್ಞಃ ಸರ್ವತ್ರ ನರೋ ಭವತಿ ಬುದ್ಧಿಮಾನ್ |
ಪದಾರ್ಥಾನಾಂ ಯಥಾ ದೀಪಹಸ್ತೋ ನಿಶಿ ಸುಲೋಚನಃ ||೯||
ಲೋಭಮೋಹಾದಯೋ ದೋಷಾಃ ತಾನವಂ ಯಾನ್ತ್ಯಲಂ ಶನೈಃ |
ಧಿಯೋ ದಿಶಃ ಸಮಾಸನ್ನಶರದೋ ಮಿಹಿಕಾ ಯಥಾ ||೧೦||

ಬಿಟ್ಟುಬಿಟ್ಟು—ಬಾವಿಯ ನೀರನ್ನೇ ಕುಡಿಯುತ್ತಾನೋ, ಅಂತಹ ಅತಿರಾಗಿಯಾದ ಮೂಢನನ್ನು ಯಾವನುತಾನೆ ಉಪದೇಶಿಸಬಲ್ಲನು? ॥೪॥

ಉಷಃಕಾಲವು ಬರಲಾಗಿ ಬೆಳಕು ಹೇಗೆ ಅವಶ್ಯವಾಗಿ ಬರುವುದೋ, ಹಾಗೆಯೇ ಈ ಗ್ರಂಥವನ್ನು ಓದಿದಮಾತ್ರದಿಂದಲೇ ಉತ್ತಮವಾದ ವಿವೇಕವುಂಟಾಗುವುದು ॥೫॥

ಇದನ್ನು ಪ್ರಾಜ್ಞರ ಮುಖದಿಂದ ಕೇಳಿದರೂ, ಅಥವಾ ಕೊನೆಯವರೆಗೆ ತಾನೇ ತಿಳಿದುಕೊಂಡರೂ, ಆಮೇಲೆ ಮೆಲ್ಲಮೆಲ್ಲಗೆ ವಿಚಾರಮಾಡಿ ಅದರಿಂದ ಬುದ್ಧಿಗೆ ಸಂಸ್ಕಾರವುಂಟಾಗಲಾಗಿ, ಮೊದಲು ಅತಿ ಶುದ್ಧವಾಗಿ ಮಾತಾಡುವ ಶಕ್ತಿಯು ಒಳಗುಂಟಾಗುವುದು. ಈ ಶಕ್ತಿಯು ಶುದ್ಧವಾದ ಮುಕ್ತಾಸರದಂತೆ ಸಭಾಸ್ಥಾನದಲ್ಲಿ ಅತ್ಯಂತ ಅಲಂಕಾರವಾಗಿರುವುದು ॥೬—೭॥

ಮತ್ತು ದೊಡ್ಡಸ್ತಿಕೆಯಿಂದ ಪ್ರಕಾಶಿಸುವ—ಅತ್ಯಧಿಕವಾದ ನಾಗರಕತೆಯೂ (ಚಾತುರ್ಯ) ಈ ಗ್ರಂಥಾಭ್ಯಾಸದಿಂದುಂಟಾಗುವುದು. ಈ ನಾಗರಕತೆಯಿಂದ ದೊರೆಗಳೂ ಕೊನೆಗೆ ದೇವತೆಗಳೂ ಕೂಡ ಸ್ನೇಹಪಡುವರು ॥೮॥

ಇನ್ನೂ, ರಾತ್ರಿಯಲ್ಲಿ ಕೈಲಿ ದೀಪಹಿಡಿದುಕೊಂಡಿರುವ—ಕಣ್ಣು ಚೆನ್ನಾಗಿರುವವನು ಪದಾರ್ಥಗಳನ್ನೆಲ್ಲ ಸ್ಪಷ್ಟವಾಗಿ ತಿಳಿಯುವಂತೆ, ಈ ಗ್ರಂಥಾಭ್ಯಾಸದಿಂದ, ಪುರುಷನು ಬುದ್ಧಿವಂತನಾಗಿ, ಪೂರ್ವಾಪರಗಳನ್ನು ಗೊತ್ತುಮಾಡಿಕೊಂಡು, ಸಮಸ್ತ ವಸ್ತುತತ್ವವನ್ನೂ ತಿಳಿಯುವನು ॥೯॥

ಶರತ್ಕಾಲವು ಸಮೀಪಿಸಿದಾಗ ದಿಕ್ಕುಗಳ ವೃಷ್ಟಿಜಲಕಣವು ಕೃಶವಾಗುವಂತೆ, ಲೋಭಮೋಹಾದಿಬುದ್ಧಿದೋಷಗಳೆಲ್ಲವೂ ಈ ಗ್ರಂಥಪರಿಚಯದಿಂದ ಮೆಲ್ಲಗೆ ಸಂಪೂರ್ಣವಾಗಿ ನಾಶಹೊಂದುವುವು ॥೧೦॥

---

1. ಆಕಾರಶ್ರವಣಮಾರ್ಷಮ್.

ಕೇವಲಂ ಸಮವೇಕ್ಷ್ಯಂ ತೇ ವಿವೇಕಾಧ್ಯಾಸನಂ ಧಿಯಃ ।
ನ ಕಿಂಚನ ಫಲಂ ಧತ್ತೇ ಸ್ವಾಭ್ಯಾಸೇನ ವಿನಾ ಕ್ರಿಯಾ ॥೧೧॥
ಮನಃ ಪ್ರಸಾದಮಾಯಾತಿ ಶರದೀವ ಮಹತ್ ಸರಃ ॥
ಪರಂ ಸಾಮ್ಯಮುಪಾವರ್ತ್ತೇ ನಿರ್ಮನ್ದರಇವಾರ್ಣವಃ ॥೧೨॥
ನಿರಸ್ತಕಾಳಿಮಾ ರತ್ನಶಿಖೇವಾಸ್ತತಮಃಪಟಾ ।
ಪ್ರತಿಜ್ವಲತ್ಯಲಂ ಪ್ರಜ್ಞಾ ಪದಾರ್ಥಪ್ರವಿಭಾಗಿನೀ ॥೧೩॥
ದೈನ್ಯದಾರಿದ್ರ್ಯದೋಷಾಢ್ಯಾಃ ದೃಷ್ಟಯೋ ದರ್ಶಿತಾನ್ತರಾಃ ।
ನ ನಿಕೃನ್ತನ್ತಿ ಮರ್ಮಾಣಿ ಸಸನ್ನಾಹಮಿವೇಷವಃ ॥೧೪॥
ಹೃದಯಂ ನಾವಲುಮ್ಪನ್ತಿ ಭೀಮಾಃ ಸಂಸೃತಿಭೀತಯಃ ।
ಪುರಸ್ಸ್ಥಿತಮಪಿ ಪ್ರಾಜ್ಞಂ ಮಹೋಪಲಮಿವೇಷವಃ ॥೧೫॥
ಕಥಂ ಸ್ಯಾದಾದಿತಾ ಜನ್ಮಕರ್ಮಣಾಂ ದೈವಪುಂಸ್ತ್ವಯೋಃ ।

ಹೀಗೆ ಬುದ್ಧಿಗೆ ವಿವೇಕವುಂಟುಮಾಡುವ ಈ ಗ್ರಂಥವನ್ನು ನೀನು ಅತ್ಯಂತವಾಗಿ ಪದೇಪದೇ ನೋಡುತಿರಬೇಕು. ಮನುಷ್ಯನಿಗೆ ಯಾವ ಕೆಲಸವಾದರೂ ತನ್ನ ಅಭ್ಯಾಸವಿಲ್ಲದೆ ಸ್ವಲ್ಪ ಫಲವನ್ನೂ ಉಂಟುಮಾಡಲಾರದು ॥೧೧॥

ಶರತ್ಕಾಲ ಬಂದಾಗ ದೊಡ್ಡ ಕೊಳವು ನಿರ್ಮಲವಾಗುವಂತೆ, ಈ ಗ್ರಂಥಪರಿಚಯವಾದಾಗ ಮನಸ್ಸು ನಿರ್ಮಲವಾಗುವುದು. ಮಥನಾನಂತರದಲ್ಲಿ ಮಂದರಪರ್ವತವನ್ನು ತೆಗೆದುಬಿಟ್ಟಮೇಲೆ ಸಮುದ್ರವು ನಿಶ್ಚಲವಾಗಿ ನಿಂತಂತೆ, ಪುರುಷನ ಮನಸ್ಸು ನಿಶ್ಚಲವಾಗಿ ನಿಲ್ಲುವುದು ॥೧೨॥

ಮತ್ತು ರತ್ನದೀಪಜ್ವಾಲೆಯು ಕಾಡಿಗೆಯೇ ಇಲ್ಲದೆ ಅಂಧಕಾರವನ್ನೆಲ್ಲ ನಾಶಪಡಿಸಿ ಪದಾರ್ಥಗಳನ್ನು ವಿಭಾಗಿಸಿ ತೋರಿಸುತ ಉರಿಯುವಂತೆ, ಮನುಷ್ಯನ ಬುದ್ಧಿಯೂ ಕೂಡ ಅವಿದ್ಯಾರಹಿತವಾಗಿ ತಮೋಗುಣದ ಆವರಣವನ್ನು ತಪ್ಪಿಸಿಕೊಂಡು ಪ್ರತಿಯೊಂದು ವಸ್ತುತತ್ವವನ್ನೂ ಬೇರೆಬೇರೆಯಾಗಿ ತೋರಿಸುತ ಅಧಿಕವಾಗಿ ಪ್ರಕಾಶಿಸುವುದು ॥೧೩॥

ಚೆನ್ನಾಗಿ ಕವಚತೊಟ್ಟ ಸಿದ್ಧನಾಗಿರುವವನನ್ನು ಬಾಣಗಳು ಭೇದಿಸಲಾರದಂತೆ, ಈ ಗ್ರಂಥಪರಿಚಯವುಳ್ಳವನಿಗೆ—ದೈನ್ಯ ದಾರಿದ್ರ್ಯ ಮುಂತಾದ ದೋಷಗಳೊಡಗೂಡಿದ ಯಾವ ಜ್ಞಾನವೂ ಕೂಡ—ಛಿದ್ರಾನ್ವೇಷಣೆ ಮಾಡಿಕೊಂಡು ಮರ್ಮಚ್ಛೇದಮಾಡುವುದಿಲ್ಲ ॥೧೪॥

ಮುಂದುಗಡೆಯೇ ಇರುವುದಾದರೂ ದೊಡ್ಡ ಬಂಡೆಯನ್ನು ಬಾಣಗಳು ಸ್ವಲ್ಪವೂ ಲೋಪಪಡಿಸಲಾರದಂತೆ, ಈ ಗ್ರಂಥಪರಿಚಯದಿಂದ ತಿಳಿವಳಿಕೆಪಡೆದಿರುವ ಮನಸ್ಸನ್ನು-ಅತಿಭಯಂಕರವಾದ ಸಂಸಾರ ಭಯಗಳು ಸ್ವಲ್ಪವೂ ಲೋಪಪಡಿಸಲಾರವು ॥೧೫॥

ಇನ್ನೂ, ಈ ಸಂಸಾರದಲ್ಲಿ ದೊಡ್ಡದೊಂದು ಸಂಶಯವುಂಟು. ಪುರುಷನು ಮೊದಲು ಜನ್ಮವೆತ್ತಿ—ಬಳಿಕ ಕರ್ಮಮಾಡತಕ್ಕವನಾಗಿದ್ದಪಕ್ಷದಲ್ಲಿ, ಪೌರುಷವು ಮುಖ್ಯವೆಂದು ಹೇಳಬೇಕಾಗುವುದು ; ಅದಲ್ಲದೆ ಜನ್ಮಕ್ಕಿಂತ ಹಿಂದೆಯೇ ಕರ್ಮವಿದ್ದು—ಅದಕ್ಕನುಗುಣವಾಗಿ ಜನ್ಮವೆತ್ತುತಿದ್ದರೆ, ಆಗ ದೈವವೇ ಮುಖ್ಯವೆಂದು ಹೇಳಬೇಕಾದೀತು. ಕೆಲವುವೇಳೆ

ಇತ್ಯಾದಿಸಂಶಯಗಣಃ ಶಾಮ್ಯತ್ಯಹ್ನಿ ಯಥಾ ತಮಃ ‖೧೬‖
ಸರ್ವದಾ ಸರ್ವಭಾವೇಷು ಸಂಶಾನ್ತಿರುಪಜಾಯತೇ ।
ಯಾಮಿನ್ಯಾಮಿವ ಶಾನ್ತಾಯಾಂ ಪ್ರಜ್ಞಾಲೋಕಉಪಾಗತೇ ‖೧೭‖
ಸಮುದ್ರಸ್ಯೇವ ಗಾಮ್ಭೀರ್ಯಂ ಧೈರ್ಯಂ ಮೇರೋರಿವ ಸ್ಥಿತಮ್ ।
ಅನ್ತಃಶೀತಲತಾ ಚೇನ್ದೋರಿವೋದೇತಿ ವಿಚಾರಿಣಃ ‖೧೮‖
ಸಾ ಜೀವನ್ಮುಕ್ತತಾ ತಸ್ಯ ಶನೈಃ ಪರಿಣತಿಂ ಗತಾ ।
ಶಾನ್ತಾಶೇಷವಿಶೇಷಸ್ಯ ಭವತ್ಯವಿಷಯೋ ಗಿರಾಮ್ ‖೧೯‖
ಸರ್ವಾರ್ಥಶೀತಲಾ ಶುದ್ಧಾ ಪರಮಾಲೋಕದಾಸ್ಯ ಧೀಃ ।
ಪರಂ ಪ್ರಕಾಶಮಾಯಾತಿ ಜ್ಯೋತ್ಸ್ನೇವ ಶರದೈನ್ದವೀ ‖೨೦‖
ಹೃದ್ಯಾಕಾಶೇ ವಿವೇಕಾರ್ಕೇ ಶಮಾಲೋಕಿನಿ ನಿರ್ಮಲೇ ।
ಅನರ್ಥಸಾರ್ಥಕರ್ತಾರೋ ನೋದ್ಯನ್ತಿ ಕಿಲ ಕೇತವಃ ‖೨೧‖

ಜನ್ಮವೇ ಆದಿಯೆಂದೂ, ಮತ್ತೆ ಕೆಲವುವೇಳೆ ಕರ್ಮವೇ ಆದಿಯೆಂದೂ ತೋರುವುದು. ಇವೆರಡುಪಕ್ಷದಲ್ಲಿ ಯಾವುದು ಶಾಸ್ತ್ರೀಯವು? — ಎಂಬುದಾಗಿಯೂ ಇನ್ನೂ ಇಂತಹ ಆನೇಕವಿಧವಾಗಿಯೂ ಹುಟ್ಟುವ ಸಂಶಯಸಮೂಹವೆಲ್ಲವೂ, ಹಗಲಿನಲ್ಲಿ ಕತ್ತಲೆಯಡಗುವಂತೆ, ಈ ಗ್ರಂಥವಿಚಾರದಿಂದ ನಿಶ್ಶೇಷವಾಗಿ ಶಾಂತವಾಗುವುದು ॥೧೬॥

ಮತ್ತು, ರಾತ್ರಿಯು ಕಳೆದು—ಪ್ರಪಂಚಕ್ಕೆಲ್ಲ ಜ್ಞಾನೋದಯಹೇತುವಾದ ಸೂರ್ಯೋದಯವಾಗಲಾಗಿ—ಜನರಿಗೆಲ್ಲ ಅಂಧಕಾರಶಾಂತಿಯುಂಟಾಗುವಂತೆ, ಈ ಗ್ರಂಥ ವಿಚಾರಮಾಡತಕ್ಕವರಿಗೆ ಅಜ್ಞಾನನಾಶವಾಗಿ ಸಕಲ ವಿಷಯಗಳಲ್ಲಿಯೂ ರಾಗದ್ವೇಷಗಳು ಶಾಂತಿಹೊಂದುವುವು ॥೧೭॥

ಈ ಗ್ರಂಥವಿಚಾರಮಾಡತಕ್ಕವನಿಗೆ, ಸಮುದ್ರದಂತೆ ಗಾಂಭೀರ್ಯವೂ—ಮೇರುಪರ್ವತದಂತೆ ಅಚಂಚಲವಾದ ಧೈರ್ಯವೂ — ಚಂದ್ರನಂತೆ ಆಂತರವಾದ ಶೈತಲ್ಯವೂ ಉಂಟಾಗುವುವು ॥೧೮॥

ಇವೆಲ್ಲವೂ ಈ ವಿಚಾರಕ್ಕೆ ಆಂತರಾಳಿಕಫಲಗಳು; ಮುಖ್ಯಫಲವಾವುದೆಂದರೆ.— ಈ ಗ್ರಂಥವಿಚಾರಮಾಡತಕ್ಕವನಿಗೆ, ಸಕಲವಾದ ಲೋಕವ್ಯಾಪಾರವೂ ಶಾಂತವಾಗಿ,ಕ್ರಮವಾಗಿ ಭೂಮಿಕಾಕ್ರಮದಿಂದ ಪರಿಪಕ್ವವಾಗಿಯೂ ವರ್ಣಿಸಲಸಾಧ್ಯವಾಗಿಯೂ ಇರುವ ಜೀವನ್ಮುಕ್ತಾವಸ್ಥೆಯುಂಟಾಗುವುದು ॥೧೯॥

ಮತ್ತು, ಈ ಗ್ರಂಥವಿಚಾರಮಾಡತಕ್ಕವನಿಗೆ, ಸರ್ವಪದಾರ್ಥಗಳ ವಿಷಯದಲ್ಲಿಯೂ ಶೀತಲವಾಗಿಯೂ ಪರಮಾತ್ಮ ಸಾಕ್ಷಾತ್ಕಾರವನ್ನು ಕೊಡತಕ್ಕುದಾಗಿಯೂ ಇರುವ ಶುದ್ಧವಾದ ಜ್ಞಾನವು,—ಶರಚ್ಚಂದ್ರನ ಬೆಳ್ದಿಂಗಳಂತೆ—ಅಧಿಕವಾದ ಪ್ರಕಾಶವನ್ನು ಪಡೆಯುವುದು ॥೨೦॥

ಈ ಗ್ರಂಥವಿಚಾರ ಮಾಡತಕ್ಕವನ ಹೃದಯವೆಂಬ ಆಕಾಶದಲ್ಲಿ ವಿವೇಕವೆಂಬ ಸೂರ್ಯನುದಯಿಸುವನು; ಇವನು ಶಾಂತಿಯೆಂಬ ಪ್ರಕಾಶವುಂಟಾಗಿ ನಿರ್ಮಲನಾಗಿರುವನು; ಇಂತಹ ಹೃದಯಾಕಾಶದಲ್ಲಿ ವಿಪತ್ಸಮುದಾಯಸೂಚಕಗಳಾದ ಕಾಮಕ್ರೋಧಾದಿಗಳೆಂಬ ಧೂಮಕೇತುಗಳು ಉದಯಿಸುವುದಿಲ್ಲ ॥೨೧॥

ಶಾಮ್ಯನ್ತಿ ಶುದ್ಧಿಮಾಯಾನ್ತಿ ಸೌಮ್ಯಾಸ್ತಿಷ್ಠನ್ತಿ ಸೋನ್ನತೇ ।
ಅಚಞ್ಚಲೇ[1] ಜಲೇಽತೃಷ್ಣಾಃ ಶರದೀವಾಭ್ರಮಾಲಿಕಾಃ ॥೨೨॥
ಯತ್ಕಿಂಚನಕರೀ ಕ್ರೂರಾ ಗ್ರಾಮ್ಯತಾ ವಿನಿವರ್ತತೇ ।
ದೀನಾನನಾ ಪಿಶಾಚಾನಾಂ ಲೀಲೇವ ದಿವಸಾಗಮೇ ॥೨೩॥
ಧರ್ಮಭಿತ್ತೌ ಭೃಶಂ ಲಗ್ನಾಂ ಧಿಯಂ ಧೈರ್ಯಧುರಂ ಗತಾಮ್ ।
ಆಧಯೋ ನ ವಿಧುನ್ವನ್ತಿ ವಾತಾಶ್ಚಿತ್ರಲತಾಮಿವ ॥೨೪॥
ನ ಪತತ್ಯವಟೇ ಜ್ಞಸ್ತು ವಿಷಯಾಸಙ್ಗರೂಪಿಣಿ ।
ಕಃ ಕಿಲ ಜ್ಞಾತಸರಣಿಃ ಶ್ವಭ್ರಂ ಸಮನುಧಾವತಿ ॥೨೫॥
ಸಚ್ಛಾಸ್ತ್ರಸಾಧುವೃತ್ತಾನಾಂ ಅವಿರೋಧಿನಿ ಕರ್ಮಣಿ ।
ರಮತೇ ಧೀರ್ಯಥಾಪ್ರಾಪ್ತೇ ಸಾಧ್ವೀವಾನ್ತಃ ಪುರಾಜಿರೇ ॥೨೬॥
ಜಗತಾಂ ಕೋಟಿಲಕ್ಷೇಷು ಯಾವನ್ತಃ ಪರಮಾಣವಃ ।
ತೇಷಾಮೇಕೈಕಶೋಽನ್ತಸ್ಥಾನ್ ಸರ್ಗಾನ್ ಪಶ್ಯತ್ಯಸಙ್ಗಧೀಃ ॥೨೭॥

ಶರತ್ಕಾಲದಲ್ಲಿ ಮೇಘಪಂಕ್ತಿಗಳಿರುವಂತೆ, ಈ ಗ್ರಂಥ ವಿಚಾರಮಾಡತಕ್ಕವರು ಜಡವಾದ ವಿಷಯದಲ್ಲಿ ತೃಷ್ಣಾರಹಿತರಾಗಿ ಆ ಸರ್ವೋತ್ತಮವಾದ ಶಾಶ್ವತವಾದ ಪರಮಪದದಲ್ಲಿ ಸೌಮ್ಯರಾಗಿರುವರು ; ಶಾಂತರಾಗುವರು ; ಪರಿಶುದ್ಧರೂ ಆಗುವರು ॥೨೨॥

ಇನ್ನೂ ಈ ಗ್ರಂಥವಿಚಾರ ಮಾಡತಕ್ಕವನಿಗೆ—ದ್ವೇಷಾದಿದುಷ್ಕಾರ್ಯಗಳನ್ನುಂಟುಮಾಡುತಕ್ಕದಾಗಿಯೂ ಬಲು ಕೆಟ್ಟದಾಗಿಯೂ ದೀನವಾದ ಮುಖವುಳ್ಳದಾಗಿಯೂ ಇರುವ ಗ್ರಾಮ್ಯತೆಯು (ನಾಗರಕತೆಯಿಲ್ಲದಿರುವಿಕೆ), ಬೆಳಗಾದಬಳಿಕ ಪಿಶಾಚಗಳ ವಿಲಾಸವೆಲ್ಲ ಹೊರಟುಹೋಗುವಂತೆ, ಹೋಗಿಬಿಡುವುದು ॥೨೩॥

ಈ ಗ್ರಂಥವಿಚಾರಮಾಡತಕ್ಕವರ ಬುದ್ಧಿಯು, ಧರ್ಮವೆಂಬ ಗೋಡೆಯಲ್ಲಿ ಚೆನ್ನಾಗಿ ಅಂಟಿಕೊಂಡು ಧೈರ್ಯಭಾರವನ್ನು ವಹಿಸಿಕೊಂಡಿರುವುದು. ಚಿತ್ರದಲ್ಲಿ ಬರೆದಿರುವ ಲತೆಯನ್ನು ಗಾಳಿಗಳು ಅಲ್ಲಾಡಿಸಲಾರದಂತೆ, ಮನೋವ್ಯಥೆಗಳು ಇಂತಹ ಬುದ್ಧಿಯನ್ನು ಅಲ್ಲಾಡಿಸಲಾಗುವುದಿಲ್ಲ ॥೨೪॥

ಈ ಗ್ರಂಥವಿಚಾರದಿಂದ ತತ್ವಜ್ಞನಾಗಿಬಿಟ್ಟ ಮನುಷ್ಯನಾದರೋ, ವಿಷಯಾಸಕ್ತಿರೂಪವಾದ ಗುಂಡಿಯಲ್ಲಿ ಬೀಳುವುದಿಲ್ಲ. ಈ ಪ್ರಪಂಚದಲ್ಲಿ ದಾರಿ ಗೊತ್ತಾಗಿರುವ ಯಾವ ಮನುಷ್ಯನುತಾನೆ ಹಳ್ಳದಕಡೆಗೆ ಓಡಿಹೋಗುವನು ? ॥೨೫॥

ಪತಿವ್ರತೆಯು ಅಂತಃಪುರದ ಅಂಗಳದಲ್ಲಿ ಆಟವಾಡುವಂತೆ, ಈ ಗ್ರಂಥವಿಚಾರಕನ ಬುದ್ಧಿಯು--ಸಚ್ಛಾಸ್ತ್ರಗಳಿಗೂ ದೊಡ್ಡವರಿಗೂ ವಿರೋಧವಿಲ್ಲದೆ ಆಯಾಕಾಲಾನುಗುಣವಾಗಿ ಪ್ರಾಪ್ತವಾದ ಕರ್ಮದಲ್ಲಿ ವಿಹರಿಸಿಕೊಂಡಿರುವುದು ॥೨೬॥

ಕೋಟಿಲಕ್ಷಸಂಖ್ಯಾಕವಾಗಿ (ಲೆಕ್ಕವಿಲ್ಲದಷ್ಟು) ರುವ ಈ ಜಗತ್ತುಗಳಲ್ಲಿ ಎಷ್ಟು ಪರಮಾಣುಗಳಿರುವುವೋ, ಅವುಗಳಲ್ಲಿ ಪ್ರತಿಯೊಂದರೊಳಗೂ ಒಂದೊಂದು ಸೃಷ್ಟಿಯಿರುವಂತೆ ಈ ಗ್ರಂಥವಿಚಾರಕನು ತಿಳಿಯುವನು ; ಆದರೂ ಇವನ ಮನಸ್ಸು ಯಾವುದರಲ್ಲಿಯೂ ಸೇರಿಕೊಳ್ಳದಿರುವುದು ॥೨೭॥

---

1. ಲಡಯೋರಭೇದಮಾಶ್ರಿತ್ಯ ' ಜಡೇ ' ಇತಿ ಯೋಜನೀಯಮ್.

ಮೋಕ್ಷೋಪಾಯಾವಬೋಧೇನ ಶುದ್ಧಾನ್ತಃಕರಣಂ ಜನಮ್ |
ನ ಖೇದಯತಿ ಭೋಗೌಘೋ ನಚಾನನ್ದಯತಿ ಕ್ವಚಿತ್ ||೨೮||
ಪರಮಾಣೌಪರಮಾಣೌ ಸರ್ಗವರ್ಗಾನಿರರ್ಗಳಾಃ |
ಯೇ ಪತನ್ತ್ಯುತ್ಪತನ್ತ್ಯಮ್ಬುವೀಚಿವತ್ ತಾನ್ ಸ ಪಶ್ಯತಿ ||೨೯||
ನ ದ್ವೇಷ್ಟಿ ಸಮ್ಪ್ರವೃತ್ತಾನಿ ನ ನಿವೃತ್ತಾನಿ ಕಾಙ್ಕ್ಷತಿ |
ಕಾರ್ಯಾಣ್ಯೇಷ ಪ್ರಬುದ್ಧೋಽಪಿ ನಿಷ್ಪ್ರಬುದ್ಧಇವ ದ್ರುಮಃ ||೩೦||
ದೃಶ್ಯತೇ ಲೋಕಸಾಮಾನ್ಯೋ ಯಥಾಪ್ರಾಪ್ತಾನುವೃತ್ತಿಮಾನ್ |
ಇಷ್ಟಾನಿಷ್ಟಫಲಪ್ರಾಪ್ತೌ ಹೃದಯೇನಾಪರಾಜಿತಃ ||೩೧||
ಬುದ್ಧ್ವೇದಮಖಿಲಂ ಶಾಸ್ತ್ರಂ ವಾಚಯಿತ್ವಾ ವಿವಿಚ್ಯತಾಮ್ |
ಅನುಭೂಯತಏವೈತತ್ ನತೂಕ್ತಂ ವರಶಾಪವತ್ ||೩೨||
ಶಾಸ್ತ್ರಂ ಸುಬೋಧಮೇವೇದಂ ಸಾಲಙ್ಕಾರವಿಭೂಷಿತಮ್[1] ||

ಮೋಕ್ಷೋಪಾಯನಾಮಕವಾದ ಈ ಗ್ರಂಥದ ಪರಿಜ್ಞಾನದಿಂದ ಪರಿಶುದ್ಧಹೃದಯನಾದ ಮನುಷ್ಯನನ್ನು— ಭೋಗಸಮೂಹವು ಯಾವಸಮಯದಲ್ಲಿಯೂ ಖೇದಪಡಿಸುವುದೂ-ಆನಂದಪಡಿಸುವುದೂ ಇಲ್ಲ ॥೨೮॥

ಈ ಗ್ರಂಥವಿಚಾರದಿಂದ ತತ್ವಜ್ಞಾನಪಡೆದವನು, ಪ್ರತಿಯೊಂದು ಪರಮಾಣುವಿನಲ್ಲಿಯೂ, ನೀರಿನ ಅಲೆಗಳಂತೆ ನಿರರ್ಗಳವಾಗಿ ನಾಶಹೊಂದುತಲೂ ಉತ್ಪತ್ತಿ ಹೊಂದುತಲೂ ಇರುವ ಸೃಷ್ಟಿಸಮುದಾಯಗಳನ್ನು ತಿಳಿಯುವನು ॥೨೯॥

ಇವನು ಕಾರ್ಯಸ್ವರೂಪಫಲಗಳನ್ನು ತಿಳಿದವನಾಗಿದ್ದರೂ, ಅವುಗಳನ್ನು ತಿಳಿಯದವನಂತೆ ಒಂದು ಮರದಂತಿದ್ದುಗೊಂಡು, ತಾನಾಗಬಂದ ಕರ್ಮಗಳನ್ನು ದ್ವೇಷಿಸುವುದೂಇಲ್ಲ; ತಪ್ಪಿಹೋದುವುಗಳನ್ನು ಅಪೇಕ್ಷಿಸುವುದೂಇಲ್ಲ ॥೩೦॥

ಹೀಗೆ ಇಷ್ಟಾನಿಷ್ಟಫಲಗಳೊದಗಿದಾಗ, ತನ್ನ ಮನಸ್ಸಿಗೆ ತಾನಧೀನನಾಗದೆ, ಅದನ್ನು ತನ್ನ ವಶದಲ್ಲಿಟ್ಟುಕೊಂಡು, ಕಾಲಾನುಗುಣವಾಗಿ ಬಂದುದನ್ನೆಲ್ಲ ಅನುಸರಿಸುತ ಇತರ ಜನರಂತೆಯೇ ಕಾಣುವನು ॥೩೧॥

ಆದಕಾರಣ, ಅಯ್ಯಾ! ರಾಮ! ಈ ಶಾಸ್ತ್ರ (ವಾಸಿಷ್ಠ) ವನ್ನೆಲ್ಲ ಮೊದಲು ಚೆನ್ನಾಗಿ ತಿಳಿದುಕೊಂಡು, ಬಳಿಕ ಪದೇಪದೇ ಓದುತ, ಚೆನ್ನಾಗಿ ಅರ್ಥವಿಚಾರಮಾಡುತಿರು. ಆದರೆ ಇದು ಬರಿಯ ಬಾಯಿಮಾತೆಂದು ತಿಳಿಯಬೇಡ; ಮಹಾತ್ಮರು ವರವನ್ನಾಗಲಿ ಶಾಪವನ್ನಾಗಲಿ ಕೊಟ್ಟರೆ—ಅದು ಎಂದಿದ್ದರೂ ನಮ್ಮ ಅನುಭವಕ್ಕೆ ಬಂದೇತೀರುವಂತೆ, ಈ ಗ್ರಂಥವಿಚಾರವೂಕೂಡ ಪುರುಷರ ಅನುಭವಕ್ಕೆ ಬಂದೇತೀರುವುದು ॥೩೨॥

ಆದರೆ ಈ ಶಾಸ್ತ್ರವು ಅತಿಗಹನವೆಂದೂ ಇದನ್ನು ತಿಳಿಯುವುದು ಬಹು ಕಷ್ಟವೆಂದೂ ಹೆದರಬಾರದು. ಇದು ಕೇವಲ ಸುಬೋಧವಾಗಿಯೇ ಇರುವುದು; ಇದಲ್ಲದೆ ಇದು ಮಹಾಕಾವ್ಯರೂಪವಾಗಿರುವುದರಿಂದ, ಅಲಂಕಾರಗಳಿಂದಲೂ ಕಾವ್ಯಗುಣಗಳಿಂದಲೂ

---

1. ವಿಭೂಷಿತ—ಭಾವೇಕ್ತಃ, ವಿಭೂಷಣಮಿತ್ಯರ್ಥಃ.

ಕಾವ್ಯಂ ರಸಮಯಂ ಚಾರು ದೃಷ್ಟಾಂತೈಃ ಪ್ರತಿಪಾದಿತಮ್ ॥೩೩॥
ಬುಧ್ಯತೇ ಸ್ವಯಮೇವೇದಂ ಕಿಂಚಿತ್ಪದಪದಾರ್ಥವಿತ್ ।
ಸ್ವಯಂ ಮಸ್ತು ನ ವೇತ್ತೀದಂ ಶ್ರೋತವ್ಯಂ ತೇನ ಪಣ್ಡಿತಾತ್ ॥೩೪॥
ಯಸ್ಮಿನ್ ಶ್ರುತೇ ಮತೇ ಜ್ಞಾತೇ ತಪೋಧ್ಯಾನಜಪಾದಿಕಮ್।
ಮೋಕ್ಷಪ್ರಾಪ್ತೌ ನರಸ್ಯೇಹ ನ ಕಿಂಚಿದುಪಯುಜ್ಯತೇ ॥೩೫॥
ಏತಚ್ಛಾಸ್ತ್ರಘನಾಭ್ಯಾಸಾತ್ ಪೌನಃಪುನ್ಯೇನ ವೀಕ್ಷಣಾತ್ ।
ಪಾಣ್ಡಿತ್ಯಂ ಸ್ಯಾದಪೂರ್ವಂ ಹಿ ಚಿತ್ತಸಂಸ್ಕಾರಪೂರ್ವಕಮ್ ॥೩೬॥
ಅಹಂ ಜಗದಿತಿ ಪ್ರೌಢೋ ದ್ರಷ್ಟೃದೃಶ್ಯಪಿಶಾಚಕಃ ।
ಪಿಶಾಚೋಽರ್ಕೋದಯೇನೇವ ಸ್ವಯಂ ಶಾಮ್ಯತ್ಯಯತ್ನತಃ ॥೩೭॥
ಭ್ರಮೋ ಜಗದಹಂ ಚೇತಿ ಸ್ಥಿತಏವೋಪಶಾಮ್ಯತಿ ।
ಸ್ವಪ್ನಮೋಹಃ ಪರಿಜ್ಞಾತಇವ ನೋ ಭ್ರಮಯತ್ಯಲಮ್ ॥೩೮॥

ಕೂಡಿಕೊಂಡಿರುವುದು ; ಮತ್ತು ಕೇವಲ ರಸಭರಿತವಾಗಿಯೂ ಮನೋಹರವಾಗಿಯೂ ದೃಷ್ಟಾಂತಗಳಿಂದ ವಿಷಯಪ್ರತಿಪಾದನೆಯುಳ್ಳದಾಗಿಯೂ ಇರುವುದು ॥೩೩॥

ಸ್ವಲ್ಪವಾಗಿ ಶಬ್ದಶಬ್ದಾರ್ಥಗಳನ್ನು ತಿಳಿದವನೂಕೂಡ ಇದನ್ನು ತಾನೇ ತಿಳಿದುಕೊಳ್ಳುವನು. ಆದರೆ ಯಾವನು ಅಷ್ಟು ಶಕ್ತಿಯೂ ಇಲ್ಲದೆ ಈ ವಾಸ್ತವ್ಯವಿಷಯವನ್ನು ತಿಳಿದುಕೊಳ್ಳಲಾರನೋ, ಅವನು ಪಂಡಿತರ ಮುಖದಿಂದ ಕೇಳಬೇಕು ॥೩೪॥

ಈ ಗ್ರಂಥವನ್ನು ಕೇಳಿ—ಬಳಿಕ ವಿಚಾರಮಾಡಿ--ಅನಂತರ ತತ್ವಜ್ಞಾನಪಡೆದರೆ, ಆಮೇಲೆ ಈ ಲೋಕದಲ್ಲಿ ತಪಸ್ಸು ಧ್ಯಾನ ಜಪ ಮುಂತಾದ ಯಾವುದೊಂದೂ ಮನುಷ್ಯನಿಗೆ ಮೋಕ್ಷಪ್ರಾಪ್ತಿಯ ವಿಷಯದಲ್ಲಿ ಉಪಯೋಗಿಸುವುದಿಲ್ಲ ॥೩೫॥

ಈ ಗ್ರಂಥವನ್ನು ದೃಢತರವಾಗಿ ಅಭ್ಯಾಸಮಾಡುವುದರಿಂದಲೂ ಮತ್ತೆಮತ್ತೆ ನೋಡುವುದರಿಂದಲೂ ಚಿತ್ತಶುದ್ಧಿಪೂರ್ವಕವಾಗಿ ಲೋಕೋತ್ತರವಾದ ಪಾಂಡಿತ್ಯವುಂಟಾಗುವುದು॥

ನಾನೆಂಬುದಾಗಿಯೂ ಜಗತ್ತೆಂಬುದಾಗಿಯೂ ಚೆನ್ನಾಗಿ ರೂಢಮೂಲವಾಗಿರುವ ದ್ರಷ್ಟೃದೃಶ್ಯಪಿಶಾಚವು, (೧) ಸೂರ್ಯೋದಯಾನಂತರ ಪಿಶಾಚವು ನಾಶಹೊಂದುವಂತೆ, ಈ ಗ್ರಂಥವಿಚಾರದಿಂದ ಪ್ರಯತ್ನವೇ ಇಲ್ಲದೆ ತನಗೆತಾನೇ ಶಾಂತಿಹೊಂದುವುದು ॥೩೭॥

ಸ್ವಪ್ನದಲ್ಲಿ ಮೂರ್ಛೆಯನ್ನನುಭವಿಸಿ ಅದರಿಂದ ಸಂಕಟಪಡುತ್ತಿದ್ದು ಬಳಿಕ ಇದು ಸ್ವಪ್ನವೆಂದು ತಿಳಿದಮೇಲೆ ಆ ಸಂಕಟವು ಹೋಗಿಬಿಡುವಂತೆ, ನಾನೆಂಬುದಾಗಿಯೂ ಜಗತ್ತೆಂಬುದಾಗಿಯೂ ಇರುವ ಭ್ರಮೆಯು, ಈ ಗ್ರಂಥವಿಚಾರಾನಂತರದಲ್ಲಿ ಶಾಂತಿಹೊಂದಿಬಿಡುತ್ತದೆಯಲ್ಲದೆ, ಮತ್ತೆ ಹೆಚ್ಚಾಗಿ ಕಳವಳವುಂಟುಮಾಡುವುದಿಲ್ಲ ॥೩೮॥

---

(೧) ನಾನು ದ್ರಷ್ಟೃ (ನೋಡತಕ್ಕವನು)ವೆಂದೂ-ಜಗತ್ತು ದೃಶ್ಯ (ನೋಡಲ್ಪಡತಕ್ಕದು)ವೆಂದೂ ಸಂಸ್ಕಾರವು ಚೆನ್ನಾಗಿ ಬೇರುಬಿಟ್ಟುಕೊಂಡು ಪಿಶಾಚದಂತೆ ಆಕ್ರಮಿಸಿಕೊಂಡಿರುತ್ತದೆಂದೂ, ಈ ಗ್ರಂಥ ವಿಚಾರಮಾಡಿದವನಿಗೆ ಆ ವಿಧವಾದ ವಾಸನೆಯೆಲ್ಲ ಅಡಗಿಬಿಡುವುದೆಂದೂ ಭಾವವು.

ಯಥಾ ಸಙ್ಕಲ್ಪನಗರೇ ಪುಂಸೋ ಹರ್ಷವಿಷಾದಿತಾ ।
ನ ಬಾಧತೇ ತಥೈವಾಸ್ಮಿನ್ ಪರಿಜ್ಞಾತೇ ಜಗದ್ಭ್ರಮೇ ॥೩೯॥
ಚಿತ್ರಸರ್ಪಃ ಪರಿಜ್ಞಾತೋ ನ ಸರ್ಪಭಯದೋ ಯಥಾ ।
ದೃಶ್ಯಸರ್ಪಃ ಪರಿಜ್ಞಾತಃ ತಥಾ ನ ಸುಖದುಃಖದಃ ॥೪೦॥
ಪರಿಜ್ಞಾನೇನ ಸರ್ಪತ್ವಂ ಚಿತ್ರಸರ್ಪಸ್ಯ ನಶ್ಯತಿ ।
ಯಥಾ ತಥೈವ ಸಂಸಾರಃ ಸ್ಥಿತಪಿಪ್ರೋಪಶಾಮ್ಯತಿ ॥೪೧॥
ಸುಮನಃಪಲ್ಲವಾಮರ್ದೇ ಕಿಂಚಿದ್ವ್ಯತಿಕರೋ ಭವೇತ್ ।
ಪರಮಾರ್ಥಪದಪ್ರಾಪ್ತೌ ನ ತು ವ್ಯತಿಕರೋಽಲ್ಪಕಃ ॥೪೨॥
ಗಚ್ಛತ್ಯವಯವಃ ಸ್ಪನ್ದಂ ಸುಮನಃಪತ್ರಮರ್ದನೇ ।
ಇಹ ಧೀಮಾತ್ರರೋಧಸ್ತು ನಾಙ್ಗಾವಯವಚಾಲನಮ್ ॥೪೩॥
ಸುಖಾಸನೋಪವಿಷ್ಟೇನ ಯಥಾಸಮ್ಭವಮಶ್ನತಾ ।

ಪುರುಷನು ಮನಸ್ಸಂಕಲ್ಪದಲ್ಲಿ ಒಂದು ಪಟ್ಟಣವನ್ನು ಕಲ್ಪಿಸಿಕೊಂಡಿದ್ದರೆ ಆದರ ವಿಷಯದಲ್ಲಿ ಅವನಿಗೆ ಹರ್ಷವೂ ವ್ಯಸನವೂ ಹೇಗೆ ಬಾಧೆಯುಂಟುಮಾಡುವುದಿಲ್ಲವೋ, ಹಾಗೆಯೇ ಈ ಜಗತ್ತೆಂಬ ಭ್ರಮೆಯು ತಿಳಿದಮೇಲೆ ಬಾಧೆಯುಂಟುಮಾಡುವುದಿಲ್ಲ ॥೩೯॥

ಚಿತ್ರದಲ್ಲಿ ಒಂದು ಹಾವನ್ನು ಬರೆದಿದ್ದರೆ ದೂರದಲ್ಲಿ ನೋಡಿ ಅದರಿಂದ ಭಯಪಟ್ಟು ಬಳಿಕ ಚೆನ್ನಾಗಿ ನೋಡಿ ಅದು ಚಿತ್ರವೆಂದು ತಿಳಿದಮೇಲೆ ಅದು ಸರ್ಪಭಯವನ್ನು ಹೇಗೆ ಕೊಡುವುದಿಲ್ಲವೋ, ಸರ್ಪಸದೃಶವಾದ ಈ ಪ್ರಪಂಚವೂ ಕೂಡ ಯಥಾರ್ಥವಾಗಿ ಗೊತ್ತಾದಮೇಲೆ ಸುಖದುಃಖಗಳನ್ನು ಕೊಡತಕ್ಕುದಾಗುವುದಿಲ್ಲ ॥೪೦॥

ಚಿತ್ರದಲ್ಲಿರುವ ಸರ್ಪವು ದೂರದಲ್ಲಿರುವಾಗ ನಮಗೆ ಸರ್ಪವಾಗಿಯೇ ಇರುವುದು. ಬಳಿಕ ಹತ್ತಿರಕ್ಕೆ ಬಂದು ತಿಳಿದಮೇಲೆಯೂ ಆ ಚಿತ್ರವಿದ್ದೇ ಇದ್ದರೂ ಅದರಲ್ಲಿ ಸರ್ಪತ್ವ ಮಾತ್ರ ಹೋಗಿಬಿಡುವುದು. ಹೀಗೆಯೇ ಸಂಸಾರವೂಕೂಡ ಮೊದಲಿನಂತೆಯೇ ಇದ್ದೇ ಇರುವುದು; ಆದರೆ ಇದು ಮನಃಕಲ್ಪಿತವೆಂದು ಜ್ಞಾನವುಂಟಾಗಿಬಿಡುವುದರಿಂದ ತತ್ವಜ್ಞನ ಭಾಗಕ್ಕೆ ಮಾತ್ರ ಶಾಂತವಾಗಿರುವುದು ॥೪೧॥

ಹೂವನ್ನಾಗಲಿ ಚಿಗುರನ್ನಾಗಲಿ ಸೀಳುವುದಕ್ಕಾದರೂ ಸ್ವಲ್ಪಪ್ರಯತ್ನವಾಗಬೇಕಾದೀತು; ಪರಮಪುರುಷಾರ್ಥರೂಪವಾದ ಮೋಕ್ಷಪದವನ್ನು ಹೊಂದುವುದಕ್ಕೆ ಸ್ವಲ್ಪವೂ ಪ್ರಯತ್ನಬೇಕಾಗಿರುವುದಿಲ್ಲ ॥೪೨॥

ಹೂವುಚಿಗುರುಗಳನ್ನು ತಿಕ್ಕುವುದರಲ್ಲಿ ನಮ್ಮ ಅವಯವವು ಸ್ವಲ್ಪ ಅಳ್ಳಾಡುವುದು; ಈ ಮೋಕ್ಷಪ್ರಾಪ್ತಿಯ ವಿಷಯದಲ್ಲಿಯಾದರೋ, ಬುದ್ಧಿಯೊಂದನ್ನು ಮಾತ್ರ ತಡೆದುಬಿಟ್ಟರಾಯ್ತು; ನಮ್ಮ ದೇಹವನ್ನಾಗಲಿ ಅವಯವವನ್ನಾಗಲಿ ಸ್ವಲ್ಪವೂ ಅಳ್ಳಾಡಿಸಬೇಕಾಗಿಲ್ಲ॥೪೩

ಈ ಪರಮಪುರುಷಾರ್ಥಪ್ರಾಪ್ತಿಗೆ ಯಾವ ಪ್ರಯತ್ನವನ್ನೂ ಮಾಡಬೇಕಾಗಿರುವುದಿಲ್ಲ. ಯೋಗಶಾಸ್ತ್ರಜ್ಞರು ಹೇಳುವಂತೆ ಎಂಭತ್ತುನಾಲ್ಕುಆಸನಗಳನ್ನು ಹಾಕಬೇಕಾದುದಿಲ್ಲ; ಸುಖಾಸನದಲ್ಲಿ ಕುಳಿತುಕೊಂಡಿರಬಹುದು; ಯಥಾಸಂಭವವಾಗಿ ಭೋಗಜಾಲವನ್ನೆಲ್ಲ ಅನುಭವಿ

ಭೋಗಜಾಲಂ ಸದಾಚಾರವಿರುದ್ಧೇಷು ನತಿಷ್ಠತಾ ||೪೪||
ಯಥಾಕ್ಷಣಂ ಯಥಾದೇಶಂ ಪ್ರವಿಚಾರಯತಾ ಸುಖಮ್ |
ಯಥಾಸಮ್ಭವಸತ್ಸಙ್ಗಂ ಇದಂ ಶಾಸ್ತ್ರಮಥೇತರತ್ ||೪೫||
ಆಸಾದ್ಯತೇ ಮಹಾಜ್ಞಾನಬೋಧಃ ಸಂಸಾರಶಾನ್ತಿದಃ |
ನ ಭೂಯೋ ಜಾಯತೇ ಯೇನ ಯೋನಿಯನ್ತ್ರಪ್ರಪೀಡನಮ್ ||೪೬||
ಏತಾವತ್ಯಪಿ ಯೇ ಭೀತಾಃ ಪಾಪಾಭೋಗರಸೇ ಸ್ಥಿತಾಃ|
ಸ್ವಮಾತೃವಿಷ್ಠಾಕೃಮಯಃ ಕೀರ್ತನೀಯಾನ ತೇಧಮಾಃ ||೪೭||
ಶೃಣು ತಾವದಿದಾನೀಂ ತ್ವಂ ಕಥ್ಯಮಾನಮಿದಂ ಮಯಾ |
ರಾಘುವ ಜ್ಞಾನವಿಸ್ತಾರಂ ಬುದ್ಧಿಸಾರತರಾನ್ತರಮ್ ||೪೮||
ಯಥೇದಂ ಶ್ರೂಯತೇ ಶಾಸ್ತ್ರಂ ತಾವಾಪಾತನಿಕಾಂ ಶೃಣು |
ವಿಚಾರ್ಯತೇ ಯಥಾರ್ಥೋಯಂ ಯಥಾ ಚ ಪರಿಭಾಷಯಾ ||೪೯||
ಯೇನೇಹಾನನುಭೂತೇರ್ಥೇ ದೃಷ್ಟೇನಾರ್ಥೇನ ಬೋಧನಮ್ |

ಸಬಹುದು ; ಆದರೆ ಸದಾಚಾರವಿರುದ್ಧವಾದ ವಿಷಯುಗಳಲ್ಲಿಮಾತ್ರ ಪ್ರವೇಶಿಸಕೂಡದು ; ಕಾಲದೇಶಗಳಲ್ಲಿ ಅವಕಾಶ ಸಿಕ್ಕಿದಷ್ಟು ಯಥಾಸಂಭವವಾಗಿ ಸತ್ಸಹವಾಸದಿಂದ ಈ ಶಾಸ್ತ್ರವನ್ನಾಗಲಿ ಅಥವಾ ಇಂತಹ ಮತ್ತೊಂದು ಗ್ರಂಥವನ್ನಾಗಲಿ ಸುಖವಾಗಿ ವಿಚಾರಮಾಡಿದರೆ ಸಾಕು. ಇಂಥವನಿಗೆ ಸಂಸಾರದುಃಖವನ್ನು ಶಾಂತಿಗೊಳಿಸುವ ಆ ಬ್ರಹ್ಮಜ್ಞಾನವು ಸಿಕ್ಕುವುದು. ಇದರಿಂದ ಮತ್ತೆ ಗರ್ಭಕೋಶದಲ್ಲಿ ಸಂಕಟಪಡುವ ಸ್ಥಿತಿಯುಂಟಾಗುವುದಿಲ್ಲ || ೪೪—೪೬ ||

ಅತಿ ಸುಖವಾಗಿರುವ ಇಷ್ಟಲ್ಪಕೆಲಸದಲ್ಲಿಯೂ ಕೂಡ ಹೆದರಿ—ಯಾವ ಪಾಪಿಷ್ಠರು ಭೋಗಾಸಕ್ತಿಯಲ್ಲಿರುವರೋ, ಅವರು ತಮ್ಮ ತಾಯಿಯ ಮಲದ ಕೃಮಿಯಂತೆ ಹುಟ್ಟಿರುವರು; ಅಂತಹ ಅಧಮರನ್ನು ಎಂದಿಗೂ ಉಚ್ಚರಿಸಬಾರದು ||೪೭||

ಅಯ್ಯಾ! ರಾಘವ! ನೀನು ಸಕಲ ವಿಷಯದಲ್ಲಿಯೂ ಉತ್ತಮನಾಗಿರುವ ಕಾರಣ, ಈಗ ನನ್ನಿಂದ ಹೇಳಲ್ಪಡುವ ಮೋಕ್ಷೋಪಾಯಗ್ರಂಥವನ್ನು ಕೇಳುವವನಾಗು; ಇದು ಜ್ಞಾನವನ್ನು ವಿಸ್ತಾರಪಡಿಸತಕ್ಕುದು; ಜ್ಞಾನದಿಂದ ಯಾರು ಶ್ರೇಷ್ಠರೆನಿಸುವರೋ, ಅವರೆಲ್ಲರಿಗೂ ಇದು ಅಂತರಂಗಭೂತವಾದುದು ||೪೮||

ಈ ಶಾಸ್ತ್ರವನ್ನು ಯಾವವಿಧವಾಗಿ ಕೇಳಬೇಕೋ, ಈ ಅರ್ಥವನ್ನು ಹೇಗೆ ವಿಚಾರಮಾಡಬೇಕೋ, ಮತ್ತು ಯಾವ ವಿಧವಾದ ಉಪಕ್ರಮೋಪಸಂಹಾರಾದಿರೂಪವಾದ ಪರಿಭಾಷೆಯಿಂದ ತಿಳಿಯಬೇಕೋ, ಆ ಅವತಾರಿಕೆಯನ್ನು ಮೊದಲು ಕೇಳು ||೪೯||

ಈ ಜ್ಞಾನಶಾಸ್ತ್ರವನ್ನು ಅನೇಕಸಂದರ್ಭದಲ್ಲಿ ದೃಷ್ಟಾಂತಮೂಲಕವಾಗಿ ತಿಳಿಯಪಡಿಸಬೇಕಾಗಿರುವುದರಿಂದ, ಮೊದಲು ದೃಷ್ಟಾಂತಲಕ್ಷಣವು ಹೇಳಲ್ಪಡುವುದು. ಈಪ್ರಪಂಚದಲ್ಲಿ ನಮ್ಮ ಅನುಭವಕ್ಕೆ ಬರದೆ ಇರುವ ವಿಷಯದಲ್ಲಿ, ನಾವು ಕಂಡಿರುವ ವಿಷಯದಿಂದ ತಿಳಿವಳಿಕೆಯುಂಟುಮಾಡುವುದಾವುದುಂಟೋ, ಇದನ್ನೇ ದೃಷ್ಟಾಂತವೆಂದು ಪಂಡಿತರು ಹೇ

ಬೋಧೋಪಕಾರಫಲದಂ ತಂ ದೃಷ್ಟಾನ್ತಂ ವಿದುರ್ಬುಧಾಃ ॥೫೦॥
ದೃಷ್ಟಾನ್ತೇನ ವಿನಾ ರಾಮ ನಾಪೂರ್ವಾರ್ಥೋಽವಬುಧ್ಯತೇ ।
ಯಥಾ ದೀಪಂ ವಿನಾ ರಾತ್ರೌ ಭಾಣ್ಡೋಪಸ್ಕರಣಂ ಗೃಹೇ॥೫೧॥
ಯೈರ್ಯೈಃ ಕಾಕುತ್ಸ್ಥ ದೃಷ್ಟಾನ್ತೈಃ ತ್ವಂ ಮಯೇಹಾವಬೋಧ್ಯಸೇ ।
ಸರ್ವೇ ಸಕಾರಣಾಸ್ತೇ ಹಿ ಪ್ರಾಪ್ಯಂ ತು ಸದಕಾರಣಮ್ ॥೫೨॥
ಉಪಮಾನೋಪಮೇಯಾನಾಂ ಕಾರ್ಯಕಾರಣತೋದಿತಾ ।
ವರ್ಜಯಿತ್ವಾ ಪರಂ ಬ್ರಹ್ಮ ಸರ್ವೇಷಾಮೇವ ವಿದ್ಯತೇ ॥೫೩॥
ಬ್ರಹ್ಮೋಪದೇಶೇ ದೃಷ್ಟಾನ್ತೋ ಯಸ್ತ್ವೇಹ ಹಿ ಕಥ್ಯತೇ ।
ಏಕದೇಶಸಧರ್ಮತ್ವಂ ತತ್ರಾನ್ತಃ ಪರಿಗೃಹ್ಯತೇ ॥೫೪॥

ಳುವರು; ಇದು ವಿಷಯಜ್ಞಾನರೂಪವಾದ ಉಪಕಾರವನ್ನು ಮಾಡಿ ದೊಡ್ಡ ಫಲವನ್ನು ಕೊಡತಕ್ಕುದು ॥೫೦॥

ಅಯ್ಯಾ! ರಾಮ! ರಾತ್ರಿಯಲ್ಲಿ ದೀಪವಿಲ್ಲದಿದ್ದರೆ ಮನೆಯಲ್ಲಿರುವ ಮಡಿಕೆಕುಡಿಕೆ ಮುಂತಾದಸಾಮಗ್ರಿಯು ಗೊತ್ತಾಗದಿರುವಂತೆ, ದೃಷ್ಟಾಂತವಿಲ್ಲದಿದ್ದರೆ ಅಪೂರ್ವವಾದ ವಿಷಯವು ಮನಸ್ಸಿಗಂಟುವುದಿಲ್ಲ ॥೫೧॥

ಅಯ್ಯಾ! ರಾಮ! ಈದೃಷ್ಟಾಂತದ ವಿಷಯದಲ್ಲಿ ತಿಳಿಯಬೇಕಾದ ವಿಶೇಷವೊಂದುಂಟು. ದೃಷ್ಟಾಂತವೆಂದರೆ ಸಾಮಾನ್ಯವಾಗಿ ಉಪಮಾನವೆಂದರ್ಥವು. ಒಂದುಪಮಾನದಿಂದ ಉಪಮೇಯವನ್ನು ತಿಳಿಸಬೇಕಾದರೆ, ಇವೆರಡರ ಧರ್ಮವೂ ಸಮಾನವಾದುದಾಗಿರಬೇಕಲ್ಲವೆ! ಆದರೆ ಈ ವೇದಾಂತಶಾಸ್ತ್ರದಲ್ಲಿ ಹೇಳುವ ದೃಷ್ಟಾಂತಗಳಲ್ಲಿ ಸ್ವಲ್ಪ ವಿಶೇಷವುಂಟು. ಈಗ ನಾನು ಯಾವಯಾವ ದೃಷ್ಟಾಂತಗಳಿಂದ ನಿನ್ನನ್ನುಪದೇಶಿಸುವೆನೋ, ಅವೆಲ್ಲವೂ ಒಂದು ಕಾರಣದಿಂದ ಹುಟ್ಟಿದುವುಗಳು; ಆದುದರಿಂದಲೇ ಅವೆಲ್ಲವೂ ಅಸತ್ಯಪದಾರ್ಥಗಳು. ಈ ಉಪಮಾನಗಳಿಂದ ತಿಳಿಯಬೇಕಾದ ಪರಬ್ರಹ್ಮವಸ್ತುವಾವುದುಂಟೋ ಅದು ಯಾವ ಕಾರಣದಿಂದಲೂ ಹುಟ್ಟಿದುದಲ್ಲ. ಆತಏವ ಅದು ಸತ್ಯವಾದ ಪದಾರ್ಥವು ॥೫೨॥

ಹೀಗೆ ಉಪಮಾನೋಪಮೇಯಗಳಿಗೆ ಮೇಲೆ ಹೇಳಿರುವ ಕಾರ್ಯತ್ವ ಕಾರಣತ್ವ ಮೊದಲಾದ ನಿಯಮವು, ಪರಬ್ರಹ್ಮನನ್ನು ಬಿಟ್ಟು ಮಿಕ್ಕ ಪದಾರ್ಥಗಳಿಗೆಲ್ಲ ಇರುವುದು ॥೫೩॥

ಪ್ರಕೃತದಲ್ಲಿ ನಿನಗೆ ಬ್ರಹ್ಮಸ್ವರೂಪವನ್ನು ತಿಳುಹಿಸುವುದಕ್ಕಾಗಿ ಯಾವ ದೃಷ್ಟಾಂತವು ಹೇಳಲ್ಪಡುವುದೋ, ಅದರಲ್ಲೆಲ್ಲ ಒಂದುಭಾಗದಲ್ಲಿ ಮಾತ್ರ ಸಾಮ್ಯವನ್ನು ಸ್ವೀಕರಿಸಿ ಪ್ರಕೃತವಿಷಯ ನಿರ್ಣಯಮಾಡಲ್ಪಡುವುದು. ಈಗ ಜಗತ್ತೆಲ್ಲವೂ ಬ್ರಹ್ಮನ ರೂಪಾಂತರವೇ ಹೊರತು ಪ್ರತ್ಯೇಕ ಪದಾರ್ಥವಲ್ಲವೆಂದು ತಿಳುಹಿಸಬೇಕಾದುದು ಪ್ರಕೃತವಿಷಯವು. ಇದನ್ನು ದೃಷ್ಟಾಂತವಿಲ್ಲದೆ ತಿಳುಹಿಸುವುದಕ್ಕಾಗಲಾರದಕಾರಣ ಸರ್ಪದೃಷ್ಟಾಂತವನು ಹೇಳುವೆವು. ರಜ್ಜುವನ್ನು ನೋಡಿ ಸರ್ಪವೆಂದು ಭ್ರಮಿಸುವಂತೆಯೇ ಬ್ರಹ್ಮವನ್ನು ನೋಡಿ ಜಗತ್ತೆಂದು ಭ್ರಮಿಸುತ್ತಾರೆಂದು ಹೇಳುವೆವು. ಇಲ್ಲಿ ಸರ್ಪವೆಂಬ ಜ್ಞಾನಕ್ಕೆ ರಜ್ಜುವು ಹೇಗೆ ಆಶ್ರಯವಾಯ್ತೋ, ಹಾಗೆಯೇ ಜಗತ್ತೆಂಬ ಜ್ಞಾನಕ್ಕೆ ಬ್ರಹ್ಮವೂ ಆಯ್ತೆಂದು ಆಶ್ರಯತ್ವರೂಪವಾದ ಒಂದಂಶದಲ್ಲಿ ಮಾತ್ರ ಪರಸ್ಪರ ಸಾಮ್ಯವೇ ಹೊರತು, ಬ್ರಹ್ಮನಲ್ಲಿರುವ ನಿತ್ಯತ್ವಾದಿ ಗುಣಗಳೆಲ್ಲವೂ ಎರಡರಲ್ಲಿಯೂ ಇರಬೇಕೆಂಬ ನಿಯಮವಿಲ್ಲವೆಂದು ತಿಳಿಯಬೇಕು ॥೫೪॥

ಯೋಯೋ ನಾಮೇಹ ದೃಷ್ಟಾನ್ತೋ ಬ್ರಹ್ಮತತ್ತ್ವಪಬೋಧನೇ |
ದೀಯತೇ ಸಸ ಬೋದ್ಧವ್ಯಃ ಸ್ವಪ್ನಜಾತೋ ಜಗದ್ಗತಃ ||೫೫||
ಏವಂ ಸತಿ ನಿರಾಕಾರೇ ಬ್ರಹ್ಮಣ್ಯಾಕಾರವಾನ್ ಕಥಮ್ |
ದೃಷ್ಟಾನ್ತ ಇತಿ ನೋದ್ಯನ್ತಿ ಮೂರ್ಖವೈಕಲ್ಪಿಕೋಕ್ತಯಃ ||೫೬||
ಅನ್ಯಾಸಿದ್ಧವಿರುದ್ಧಾದಿದೃಗ್ದೃಷ್ಟಾನ್ತಪ್ರದೂಷಣೈಃ |
ಸ್ವಪ್ನೋಪಮತ್ವಾಜ್ಜಗತಃ ಸಮುದೇತಿ ನ ಕಿಂಚನ ||೫೭||
ಅವಸ್ತು ಪೂರ್ವಾಪರಯೋಃ ವರ್ತಮಾನೇ ವಿಚಾರಿತಮ್ |
ಯಥಾ ಜಾಗ್ರತ್ ತಥಾ ಸ್ವಪ್ನಃ ಸಿದ್ಧಮಾಬಾಲಮಾಗತಮ್ ||೫೮||

ಹೀಗೆಯೇ ಇಲ್ಲಿ ಪರಬ್ರಹ್ಮತತ್ವವನ್ನು ತಿಳುಹಿಸುವ ವಿಷಯದಲ್ಲಿ ಯಾವಯಾವ ದೃಷ್ಟಾಂತವು ಕೊಡಲ್ಪಡುವುದೋ, ಆಯಾ ದೃಷ್ಟಾಂತವೆಲ್ಲ ಸ್ವಪ್ನದಲ್ಲುಂಟಾದಂತೆಯೇ ಜಗತ್ತಿನೊಳಗೆ ಸೇರಿಕೊಂಡಿರತಕ್ಕದಲ್ಲದೆ, ಅದೊಂದೂ ಸತ್ಯವಾದ ಪದಾರ್ಥವಲ್ಲ. ಈಗ ಪರಬ್ರಹ್ಮವು ಪರಮಾರ್ಥ ಸಚ್ಚಿದಾನಂದರೂಪವಾಗಿರುವುದರಿಂದ, ಅದಕ್ಕೆ ದೃಷ್ಟಾಂತಮಾಡಲು ಅಂತಹ ಸಚ್ಚಿದಾನಂದ ಪದಾರ್ಥವು ಮತ್ತೊಂದೂ ಇಲ್ಲವಾದಕಾರಣ, ಏಕದೇಶಸಾಮ್ಯವಿಟ್ಟುಕೊಂಡೇ ದೃಷ್ಟಾಂತಹೇಳಬೇಕಲ್ಲದೆ, ಸರ್ವಾಂಶದಲ್ಲಿಯೂ ಸಾಮ್ಯವಿರಬೇಕೆಂದು ನಿಯಮವಿಟ್ಟುಕೊಳ್ಳಕೂಡದು ॥೫೫॥

ಇದರಿಂದುಂಟಾಗುವ ನಿಶ್ಚಯವೇನೆಂದರೆ:—ಈ ದೃಷ್ಟಾಂತಸ್ವರೂಪವನ್ನು ತಿಳಿಯದ ಮೂರ್ಖರು—ನಿರಾಕಾರವಾದ ಪರಬ್ರಹ್ಮನ ವಿಷಯದಲ್ಲಿ ಆಕಾರಸಹಿತವಾದ ರಜ್ಜ್ವಾದಿ ಪದಾರ್ಥವು ಹೇಗೆ ದೃಷ್ಟಾಂತವು?—ಇತ್ಯಾದಿಪ್ರಕಾರವಾಗಿ ಮಾಡಬಹುದಾದ ಸಂಶಯವಚನಗಳು ಹುಟ್ಟುವುದಕ್ಕವಕಾಶವಿಲ್ಲ ॥೫೬॥

ಇದಲ್ಲದೆ ಇತರರು (ತಾರ್ಕಿಕರು) ಈ ದೃಷ್ಟಾಂತ ನಿರ್ಣಯದಲ್ಲಿ ಏಕಾಂಶಸ್ವೀಕಾರವೆಂದರಿಯದೆ, ಇದು ಅಸಿದ್ಧವೆಂದೂ ವಿರುದ್ಧವೆಂದೂ ತಿಳಿದು, ಈ ದೃಷ್ಟಾಂತವನ್ನು ದೂಷಿಸುವರು. ಆದರೆ ಈ ಜಗತ್ತು ಸ್ವಪ್ನಸದೃಶವಾಗಿರುವುದರಿಂದ, ದೃಷ್ಟಾಂತದ್ವಾರಾ ತಿಳಿಯಬೇಕಾಗಿರುವ ವಿಷಯವು ತಿಳಿಯುವವರೆಗೂ ಆ ವ್ಯವಹಾರವಿದ್ದುಬಿಟ್ಟು ಆಮೇಲೆ ಅದು ನಷ್ಟವಾದರೆ ಯಾವ ಹಾನಿಯೂ ಇಲ್ಲವಾದಕಾರಣ, ಅವರ ದೂಷಣೆಯಿಂದ ಯಾವ ಲೋಪವೂ ಉಂಟಾಗುವುದಿಲ್ಲ (೧) ॥೫೭॥

ಈ ಪ್ರಪಂಚವು ಸ್ವಪ್ನೋಪಮವೆಂಬುದು ಹೇಗೆಂದರೆ:—ಸ್ವಪ್ನವು—ಅದು ಆಗುವುದಕ್ಕೆ ಮೊದಲೂ ಆದಮೇಲೂ ಇರುವುದಿಲ್ಲ; ಆಗತಕ್ಕಕಾಲದಲ್ಲಿಯೂ ವಿಚಾರಮಾಡಿದರೆ ಅಸತ್ಯವೇ ಆಗುವುದು. ಪ್ರಪಂಚವೂ ಹೀಗೆಯೇ ಮೊದಲಿರಲೂ ಇಲ್ಲ; ಮುಂದೆ ಇರುವುದೂ ಇಲ್ಲ; ಈಗ ವರ್ತಮಾನಾವಸ್ಥೆಯಲ್ಲೂ ಇದರ ಸ್ವರೂಪವನ್ನು ವಿಚಾರಮಾಡಿದರೆ ಅಸತ್ಯವಾಗಿಯೇ ಕಾಣುವುದು. ಆದಕಾರಣ, ಜಾಗ್ರದವಸ್ಥೆ ಹೇಗಿರುವುದೋ,—ಸ್ವಪ್ನವೂ ಹಾಗೆಯೇ ಇರುವುದೆಂದು ಈ ವಿಷಯವು, ಬಾಲಕ ಮೊದಲಾಗಿ ಸರ್ವರಿಗೂ ಸಿದ್ಧವಾಗಿರುವುದಾಗಿ ತಿಳಿಯಬಂದಿರುವುದು ॥೫೮॥

---

(೧) ಈ ತಾರ್ಕಿಕಮತನಿರಾಸವು ಶಾಸ್ತ್ರಪರಿಚಯವಿಲ್ಲದವರಿಗೆ ತಿಳಿಯಲಾರದಾದ್ದರಿಂದ ಇಲ್ಲಿ ವಿಶೇಷವಾಗಿ ವಿವರಿಸಿಲ್ಲ.

ಸ್ವಪ್ನಸಙ್ಕಲ್ಪನಾಧ್ಯಾನವರಶಾಪೌಷಧಾದಿಭಿಃ ।
ಯಥಾರ್ಥಾಇಹ ದೃಷ್ಟಾನ್ತಾಃ ತದೂಪತ್ವಾಜ್ಜಗತ್ಸ್ಥಿತೇಃ ॥೪೯॥
ಮೋಕ್ಷೋಪಾಯಕೃತಾ ಗ್ರನ್ಥಕಾರೇಣಾನ್ಯೇಪಿ ಯೇ ಕೃತಾಃ ।
ಗ್ರನ್ಥಾಸ್ತೇಷ್ವಿಯಮೇವೈಕಾ ವ್ಯವಸ್ಥಾ ಬೋಧ್ಯಬೋಧನೇ ॥೬೦॥
ಸ್ವಪ್ನಾಭತ್ವಂ ಚ ಜಗತಃ ಶ್ರುತೇ ಶಾಸ್ತ್ರೇವಬುಧ್ಯತೇ ।
ಶೀಘ್ರಂ ನ ಪಾರ್ಯತೇ ವಕ್ತುಂ ವಾಕ್ಕಿಲ ಕ್ರಮವರ್ತಿನೀ ॥೬೧॥
ಸ್ವಪ್ನಸಙ್ಕಲ್ಪನಾಧ್ಯಾನನಗರಾದ್ಯುಪಮಂ ಜಗತ್ ।
ಯತಸ್ತ ಏವ ದೃಷ್ಟಾನ್ತಾಃ ತಸ್ಮಾತ್ ಸನ್ತೀಹ ನೇತರೇ ॥೬೨॥
ಅಕಾರಣೇ ಕಾರಣತಾ ಯದ್ಬೋಧಾಯೋಪಮೀಯತೇ ।

ಹಿಂದೆ (ವೈರಾಗ್ಯಪ್ರಕರಣದಲ್ಲಿ) ಹೇಳಿದಂತೆ ಸ್ವಪ್ನದಲ್ಲಿ ಅನುಭವಿಸುವ ವಿಷಯವೆಲ್ಲವೂ ಪ್ರಾತಿಭಾಸಿಕಸತ್ಯವಾಗಿರುವುದರಿಂದಲೂ, ಜಾಗ್ರದವಸ್ಥೆಯಲ್ಲಿರುವ ಪ್ರಪಂಚವು ವ್ಯಾವಹಾರಿಕಸತ್ಯವಾಗಿರುವುದರಿಂದಲೂ, ಇವೆರಡಕ್ಕೂ ಪರಸ್ಪರ ಸಾಮ್ಯ ಹೇಳುವುದಸಂಗತವೆಂದು ಶಂಕೆಯುಂಟಾಗಬಹುದು. ಆದರೆ ಸ್ವಪ್ನದಲ್ಲಿಯೂ ಅನೇಕವೇಳೆ ಸಂಕಲ್ಪ ಧ್ಯಾನ ವರ ಶಾಪ ಔಷಧ ಇತ್ಯಾದಿಗಳು ಸತ್ಯವಾಗಿ—ಅವುಗಳ ಫಲವೂ ಸಿಕ್ಕಿರುವಂತೆ ಗೊತ್ತಾಗುವುದು; ಆದಕಾರಣ ಪ್ರಪಂಚಸ್ಥಿತಿಯೂ ಆ ಸ್ವಪ್ನರೂಪವೆಂದು ಹೇಳಲಡ್ಡಿಯಿಲ್ಲ. ಹೀಗೆ ಈ ಸಂದರ್ಭದಲ್ಲಿ ಹೇಳುವ ದೃಷ್ಟಾಂತಗಳೆಲ್ಲವೂ ಸಮಂಜಸಗಳೆಂದು ತಿಳಿಯಬೇಕು ॥೪೯॥

ಈ ಮೋಕ್ಷೋಪಾಯನಾಮಕವಾದ ಗ್ರಂಥವನ್ನು ಮಾಡಿರುವ ವಾಲ್ಮೀಕಿಮುನಿಯಿಂದ ಇನ್ನೂ ಇತರವಾದ ಯಾವ ಗ್ರಂಥಗಳು ಮಾಡಲ್ಪಟ್ಟಿರುವುವೋ, ಅವುಗಳಲ್ಲಿಯೂ ಕೂಡ ತತ್ವವನ್ನು ತಿಳಿಯಪಡಿಸುವ ವಿಷಯದಲ್ಲಿ ಇದೇ ಮುಖ್ಯವಾದ ವ್ಯವಸ್ಥೆಯೆಂದು ತಿಳಿಯಬೇಕು ॥೬೦॥

ಹೀಗೆ ಪ್ರಪಂಚವು ಸ್ವಪ್ನತುಲ್ಯವೆಂಬುದೇ ಸಿದ್ಧವಾಗಿದ್ದಪಕ್ಷದಲ್ಲಿ, ಇದನ್ನು ಕೇಳಿದವರಿಗೆಲ್ಲ ತಟ್ಟನೆ ಆ ವಿಷಯದಲ್ಲಿ ನಂಬುಗೆಯೇತಕ್ಕುಂಟಾಗಬಾರದೆಂದರೆ:—ಈ ಪ್ರಪಂಚವು ಸ್ವಪ್ನಸಮಾನವೆಂಬ ವಿಷಯವು ಶಾಸ್ತ್ರವನ್ನು ಚೆನ್ನಾಗಿ ಶ್ರವಣಮಾಡಿದರೇ ತಿಳಿಯಬರುವುದಲ್ಲದೆ, ತಟ್ಟನೆ ಹೇಳಿ ತಿಳಿಯಪಡಿಸುವುದಕ್ಕೆ ಅಸಾಧ್ಯವು. ಪುರುಷರ ವಾಕ್ಕೆಂಬುವುದು ಒಂದು ಕ್ರಮವನ್ನನುಸರಿಸತಕ್ಕುದಾಗಿರುವುದರಿಂದ, ಬರಿಯಮಾತಿನಿಂದ ಹೇಳುವುದಕ್ಕಾಗಲಾರದು ॥೬೧॥

ಈ ಪ್ರಪಂಚಕ್ಕೆ ಸ್ವಪ್ನಾದಿಗಳನ್ನೇ ಏತಕ್ಕೆ ದೃಷ್ಟಾಂತ ಹೇಳಬೇಕೆಂದರೆ:—ಈ ಪ್ರಪಂಚವು ಸ್ವಪ್ನ ಸಂಕಲ್ಪ ಮಾನಸನಗರನಿರ್ಮಾಣ ಇತ್ಯಾದಿಗಳಿಗೇ ಸಮಾನವಾಗಿರುವುದರಿಂದ, ಅವುಗಳೇ ಇಲ್ಲಿ ದೃಷ್ಟಾಂತಗಳಾಗಿರುವುವಲ್ಲದೆ, ಇತರ ದೃಷ್ಟಾಂತಗಳಿಲ್ಲವೆಂದು ತಿಳಿಯಬೇಕು ॥೬೨॥

ಇದಿರಲಿ; ಇಲ್ಲಿ ಇನ್ನೂ ಒಂದು ವಿಚಾರವುಂಟು. ಪರಮಾತ್ಮನಿಗೂ ಸುವರ್ಣಾದಿಗಳಿಗೂ ಸಾಮ್ಯಹೇಳುವುದುಂಟಷ್ಟೆ! ಅಲ್ಲಿ ಸರ್ವಾಂಶಗಳಲ್ಲಿಯೂ ಸಾಮ್ಯ ಬರುತ್ತದೆಯೆ?

ನ ತತ್ರ ಸರ್ವಸಾಧರ್ಮ್ಯಂ ಸಮ್ಭವತ್ಯುಪಮಾಶ್ರಯೈಃ ॥೬೩॥
ಉಪಮೇಯಸ್ಯೋಪಮಾನಾತ್ ಏಕಾಂಶೇನ ಸಧರ್ಮತಾ ।
ಅಙ್ಗೀಕಾರ್ಯಾವಬೋಧಾಯ ಧೀಮತಾ ನಿರ್ವಿವಾದಿನಾ ॥೬೪॥
ಅರ್ಥಾವಲೋಕನೇ ದೀಪಾತ್ ಆಭಾಮಾತ್ರಾದೃತೇ ಕಿಲ ।
ನ ಸ್ಥಾನತೈಲವರ್ತ್ಯಾದಿ ಕಿಂಚಿದಪ್ಯುಪಯುಜ್ಯತೇ ॥೬೫॥
ಏಕದೇಶಸಮರ್ಥತ್ವಾತ್ ಉಪಮೇಯಾವಬೋಧನಮ್ ।
ಉಪಮಾನಂ ಕರೋತ್ಯಙ್ಗ ದೀಪೋಽರ್ಥಪ್ರಭಯಾ ಯಥಾ ॥೬೬॥
ದೃಷ್ಟಾನ್ತಸ್ಯಾಂಶಮಾತ್ರೇಣ ಬೋಧ್ಯಬೋಧೋದಯೇ ಸತಿ ।
ಉಪಾದೇಯತಯಾ ಗ್ರಾಹ್ಯೋ ಮಹಾವಾಕ್ಯಾರ್ಥನಿಶ್ಚಯಃ ॥೬೭॥
ನ ಕುತಾರ್ಕಿಕತಾಮೇತ್ಯ ನಾಶನೀಯಾ ಪ್ರಬುದ್ಧತಾ ।
ಅನುಭೂತ್ಯಪಲಾಪಾನ್ತೈಃ ಅಪವಿತ್ರೈರ್ವಿಕಲ್ಪಿತೈಃ ॥೬೮॥

ಪರಬ್ರಹ್ಮನು ಷಡ್ಭಾವವಿಕಾರರಹಿತನಾಗಿ ಪರಿಣಾಮರಹಿತನಾಗಿರುವುದರಿಂದಲೂ ಸುವರ್ಣಾದಿಗಳು ಪರಿಣಾಮವುಳ್ಳವುಗಳಾದುದರಿಂದಲೂ ಉಪಮಾನಕ್ಕಾಗಿ ಎಷ್ಟು ಶ್ರಮಪಟ್ಟರೂ ಅಲ್ಲಿಯೂ ಸರ್ವಾಂಶದಲ್ಲಿಯೂ ಸಾಧರ್ಮ್ಯಸಂಭವಿಸುವುದಿಲ್ಲ ॥೬೩॥

ಆದಕಾರಣ, ಉಪಮೇಯದಲ್ಲಿ ಉಪಮಾನದ ಏಕಾಂಶವಿದ್ದರೂ ವಿಷಯಜ್ಞಾನಕ್ಕೋಸ್ಕರ ಸಾಧರ್ಮ್ಯವುಂಟೆಂದು ಬುದ್ಧಿವಂತನಾದವನು ನಿರ್ವಿವಾದವಾಗಿ ಒಪ್ಪಿಕೊಂಡೇ ತೀರಬೇಕು ॥೬೪॥

ಶಾಸ್ತ್ರವಿಷಯವಿರಲಿ; ಪ್ರಪಂಚದಲ್ಲಿಯೂಕೂಡ – ರತ್ನವು ದೀಪದಂತೆ ಇದೆ— ಎಂದು ವ್ಯವಹರಿಸುವರಲ್ಲವೆ! ಇಲ್ಲಿ ದೀಪಕ್ಕೂ ರತ್ನಕ್ಕೂ ಉಪಮಾನೋಪಮೇಯತ್ವವನ್ನು ಹೇಳುವುದಿಲ್ಲವೆ! ಅಲ್ಲಿಯೂ ವಿಚಾರಮಾಡಿದರೆ, ದೀಪದಲ್ಲಿರುವ ಪ್ರಕಾಶಮಾತ್ರವನ್ನು ಬಿಟ್ಟರೆ, ಸ್ಥಳ ಎಣ್ಣೆ ಬತ್ತಿ ಮುಂತಾದುವುಗಳೊಂದೂ ಸಾಮ್ಯ ಹೇಳುವುದಕ್ಕುಪಯೋಗಿಸುವುದಿಲ್ಲ. ಅಲ್ಲಿಯೂ ಪ್ರಕಾಶರೂಪವಾದ ಏಕಾಂಶದಲ್ಲಿ ಮಾತ್ರ ಸಾಧರ್ಮ್ಯವೇ ಹೊರತು, ಸರ್ವಾಂಶದಲ್ಲಿಯೂ ಸಾಧರ್ಮ್ಯವು ಸಂಭವಿಸುವುದಿಲ್ಲ ॥೬೫॥

ಅಯ್ಯಾ! ರಾಮ! ಹೀಗೆ ರತ್ನವು ದೀಪದಂತೆ ಇದೆಯೆಂಬಲ್ಲಿ ಪದಾರ್ಥಪ್ರಕಾಶನರೂಪವಾದ ಒಂದಂಶವನ್ನುಮಾತ್ರ ಸ್ವೀಕರಿಸಿ ಉಪಮೇಯಜ್ಞಾನವಾಗುವಂತೆ, ಶಾಸ್ತ್ರದಲ್ಲಿಯೂ ಉಪಮಾನವು ಏಕದೇಶಸಾಮ್ಯದಿಂದ ಉಪಮೇಯಜ್ಞಾನವನ್ನುಂಟುಮಾಡುವುದು॥

ಹೀಗೆ ದೃಷ್ಟಾಂತದಲ್ಲಿರುವ ಏಕಾಂಶಮಾತ್ರದಿಂದ ಬೋಧ್ಯವಾದ ವಸ್ತುವಿನ ಜ್ಞಾನವುಂಟಾಗುತ್ತದೆಂಬ ವಿಷಯವು ಸಿದ್ಧವಾಗಲಾಗಿ, ಉಪನಿಷತ್ತಿನಲ್ಲಿ ಉಕ್ತವಾಗಿರುವ ಮಹಾವಾಕ್ಯಗಳ ಅರ್ಥನಿಶ್ಚಯವು ಸ್ವೀಕರಿಸಲ್ಪಡತಕ್ಕುದೆಂದು ತಿಳಿಯಬೇಕು ॥೬೭॥

ಅದುಬಿಟ್ಟು, ಕುತ್ಸಿತವಾದ ತರ್ಕಗಳನ್ನು ಮಾಡುತ, ಅನುಭವವನ್ನು ಅಪಲಾಪಮಾಡುವುದೇ ಪರಿಣಾಮವಾಗಿರುವ ಅಪರಿಶುದ್ಧವಾದ ಕಲ್ಪನೆಗಳಿಂದ ಜ್ಞಾನವನ್ನು ನಾಶಪಡಿಸಬಾರದು ॥೬೮॥

ವಿಚಾರಣಾದನುಭವಕಾರಿ ವೈರಿಣೋಽಪಿ ವಾಙ್ಮಯಂ ತ್ವನುಗತಮಸ್ಮದಾದಿಷು ।
ಸ್ತ್ರಿಯೋಕ್ತಮಪ್ಯಪಪರಮಾರ್ಥವೈದಿಕಂ ವಚೋ ವಚಃ ಪ್ರಲಪನಮೇವ
[ನಾಗಮಃ ॥೬೯॥

ಅಸ್ಮಾಕಮಸ್ತಿ ಮತಿರಙ್ಗ ತಯೇತಿ ಸರ್ವ
ಶಾಸ್ತ್ರೈಕವಾಕ್ಯಕರಣಂ ಫಲಿತಂ ಯತೋ ಯಃ ।
ಪ್ರಾತೀತಿಕಾರ್ಥಮುಪಶಾಸ್ತ್ರಸಿಜಾಙ್ಗಪುಷ್ಟಾತ್
ಸಂವೇದನಾದಿತರದಸ್ತಿ ತತಃ ಪ್ರಮಾಣಮ್ ॥೭೦॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ದೃಷ್ಟಾನ್ತನಿರೂಪಣಂ ನಾಮ
ಅಷ್ಟಾದಶಃ ಸರ್ಗಃ.

ಆದಕಾರಣ, ವಿಚಾರಮಾಡಿದಾಗ ಅನುಭವಕ್ಕೆ ಸರಿಯಾಗುವ ಮಾತು, ವೈರಿಯಿಂದ ಹೇಳಲ್ಪಟ್ಟರೂ ನಮ್ಮಂಥವರು ಅದನ್ನು ಅನುಸರಿಸುವರು; ಅದಲ್ಲದೆ ಪರಮಾರ್ಥವಾದ ಬ್ರಹ್ಮಪದಾರ್ಥವನ್ನು ಬಿಟ್ಟಿರುವ ಮಾತು, ನಮಗೆ ಕೇವಲ ಪ್ರೀತಿಪಾತ್ರಳಾದ ಪತ್ನಿಯಿಂದ ಹೇಳಲ್ಪಟ್ಟರೂ ಅದು ಅನರ್ಥಕಾರಿಯಾದ ಪ್ರಲಾಪವೇ ಹೊರತು, ಅದೆಂದಿಗೂ ಶಾಸ್ತ್ರೀಯ ವಚನವಾಗುವುದಿಲ್ಲ ॥೬೯॥

ಅಯ್ಯಾ! ರಾಮ! ಇಲ್ಲಿ ಇನ್ನೂ ಒಂದು ವಿಚಾರವುಂಟು; ಸಾಂಖ್ಯಾದಿಶಾಸ್ತ್ರಕರ್ತರಾದ ಕಪಿಲಾದಿಗಳೂ ಕೂಡ ತಮತಮಗೆ ತೋರಿದಂತೆ ಹೇಳಿರುವರಷ್ಟೆ! ಅವರೆಲ್ಲರ ಮತಕ್ಕಿಂತಲೂ ನಮ್ಮ ಮತದಲ್ಲಿ ಪ್ರಾಮಾಣ್ಯವಧಿಕವೇನು?—ಎಂಬುದೊಂದು ಶಂಕೆ ಹುಟ್ಟುವುದು. ಇಲ್ಲಿ ತಿಳಿಯಬೇಕಾದುದೇನೆಂದರೆ:—ಯಾವ ಜ್ಞಾನದಿಂದ ಯಾವ ತತ್ವ ಸಾಕ್ಷಾತ್ಕಾರರೂಪವಾದ ಶುಭಾವಹ ವಿಧಿಯುಂಟೋ, ಅಂತಹ ಜ್ಞಾನವು ನಮಗಿರುವುದು: ಅದರಿಂದ, ಅಪರೋಕ್ಷಾನುಭವಯೋಗ್ಯವಾದ ವಿಷಯವುಳ್ಳಂತೆ ಸಕಲ ಶ್ರುತಿಗಳಿಗೂ ಏಕವಾಕ್ಯತಾ ಸಂಪಾದನೆಯು ಫಲಿಸುವುದು. ಆದುದರಿಂದ ಶಾಸ್ತ್ರರಹಿತವಾದ ತಮ್ಮ ತರ್ಕಾದಿಗಳಿಂದ ಪರಿಪುಷ್ಟವಾಗಿರುವ ಸಾಂಖ್ಯಾದಿ ಜ್ಞಾನಕ್ಕಿಂತಲೂ ಬೇರೆಯಾದ ಅಪರೋಕ್ಷಜ್ಞಾನಾನುಭವಯೋಗ್ಯಾರ್ಥವಾದ ಪ್ರಮಾಣವು ನಮ್ಮಗಳಿಗಿರುವುದೆಂದು ತಿಳಿಯಬೇಕು॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ದೃಷ್ಟಾಂತನಿರೂಪಣವೆಂಬ
ಹದಿನೆಂಟನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಏಕೋನವಿಂಶಃ ಸರ್ಗಃ

ಶ್ರೀವಸಿಷ್ಠ ಉವಾಚ.

ವಿಶಿಷ್ಟಾಂಶಸಧರ್ಮತ್ವಂ ಉಪಮಾನೇಷು ಗೃಹ್ಯತೇ ।
ಕೋ ಭೇದಃ ಸರ್ವಸಾದೃಶ್ಯೇ ತೂಪಮಾನೋಪಮೇಯಯೋಃ ॥೧॥
ದೃಷ್ಟಾನ್ತಬುದ್ಧಾವೇಕಾತ್ಮಜ್ಞಾನಶಾಸ್ತ್ರಾರ್ಥವೇದನಾತ್ ।
ಮಹಾವಾಕ್ಯಾರ್ಥಸಂಸಿದ್ಧಾ ಶಾನ್ತಿರ್ನಿರ್ವಾಣಮುಚ್ಯತೇ ॥೨॥
ತಸ್ಮಾದ್ದೃಷ್ಟಾನ್ತದಾರ್ಷ್ಟಾನ್ತವಿಕಲ್ಪೋಲ್ಲಸಿತೈರಲಮ್ ।
ಯಯಾಕಯಾಚಿದ್ಯುಕ್ತ್ಯಾ ತು ಮಹಾವಾಕ್ಯಾರ್ಥಮಾಶ್ರಯೇತ್ ॥೩॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಹತ್ತೊಂಭತ್ತನೆಯ ಸರ್ಗವು

ದೃಷ್ಟಾನ್ತಾರ್ಥಪ್ರಸಙ್ಗೇನ ಮಾನತತ್ತ್ವಂ ವಿಶೋಧ್ಯತೇ ।
ನಿತ್ಯಾಪರೋಕ್ಷಂ ಬ್ರಹ್ಮೈವ ದ್ರಷ್ಟೃದೃಶ್ಯಾದಿಸಾಕ್ಷಿ ಯತ್ ॥

ಈ ಸರ್ಗದಲ್ಲಿ—ದೃಷ್ಟಾನ್ತವಿಷಯವನ್ನು ವಿಚಾರಮಾಡುವ ಪ್ರಸಂಗದಿಂದ, ಪ್ರಮಾಣಸ್ವರೂಪವು ನಿರ್ಣಯಿಸಲ್ಪಡುವುದು; ಮತ್ತು ದ್ರಷ್ಟೃ ದೃಶ್ಯ ಮುಂತಾದವುಗಳಿಗೆಲ್ಲ ಸಾಕ್ಷಿಯಾಗಿಯೂ ಕಾಲತ್ರಯದಲ್ಲಿಯೂ ನಿತ್ಯವಾಗಿಯೂ ಜ್ಞಾನಿಗಳಿಗೆ ಅಪರೋಕ್ಷವಾಗಿಯೂ ಇರುವ ಬ್ರಹ್ಮನ ಸ್ವರೂಪವೂ ವಿವರಿಸಲ್ಪಡುವುದು.

ಪೂರ್ವೋಕ್ತರೀತಿಯಾಗಿ, ಪ್ರಾಸಂಗಿಕವಾದ ದೃಷ್ಟಾಂತಸ್ವರೂಪವನ್ನು ವಿವರಿಸಿ, ಅದರೊಡನೆ ಪ್ರಸಕ್ತವಾದ ಪ್ರಮಾಣಸ್ವರೂಪವನ್ನು ವಿವರಿಸಲುಪಕ್ರಮಿಸಿ, ವಸಿಷ್ಠಮಹರ್ಷಿಗಳು ಶ್ರೀರಾಮನನ್ನು ಕುರಿತು ಮತ್ತೆ ಹೇಳಲುಪಕ್ರಮಿಸಿದರು.

ಅಯ್ಯಾ! ರಾಮ! ಹೀಗೆ ಉಪಮಾನಗಳಲ್ಲಿ ಮುಖ್ಯವಾದಂಶದಲ್ಲಿ ಮಾತ್ರವೇ ಸಾಧರ್ಮ್ಯವು ಸ್ವೀಕರಿಸಲ್ಪಡುತ್ತದೆ; ಅದಲ್ಲದೆ, ಸರ್ವಾಂಶದಲ್ಲಿಯೂ ಸಾದೃಶ್ಯವಿರಬೇಕೆಂದು ಹೇಳುವ ಪಕ್ಷದಲ್ಲಿ, ಉಪಮಾನೋಪಮೇಯಗಳಿಗೆ ಭೇದವೇನು? ॥೧॥

ಹೀಗೆ ದೃಷ್ಟಾಂತಜ್ಞಾನವಾಗಲಾಗಿ, ಅದ್ವಿತೀಯವಾದ ಆತ್ಮತತ್ವಜ್ಞಾನರೂಪವಾದ ಸಕಲ ವೇದಾಂತಶಾಸ್ತ್ರ ರಹಸ್ಯಾರ್ಥಜ್ಞಾನವುಂಟಾಗುವುದು ; ಈ ಜ್ಞಾನದಿಂದ ಮಹಾವಾಕ್ಯಾರ್ಥಜ್ಞಾನವುಂಟಾಗಿ ತನ್ಮೂಲಕವಾದ ಶಾಂತಿಯುಂಟಾಗುವುದು; ಈ ಶಾಂತಿಯೇ ಮೋಕ್ಷವೆಂದು ಹೇಳಲ್ಪಡುವುದು ॥೨॥

ಆದಕಾರಣ, ಈ ದೃಷ್ಟಾಂತದಾರ್ಷ್ಟಾಂತಿಕಗಳ (ಉಪಮಾನೋಪಮೇಯಗಳ) ಸ್ವರೂಪವನ್ನು ವಿವರಿಸುವುದಕ್ಕಾಗಿ ಮಾಡುವ ನಾನಾವಿಧ ವಿಕಲ್ಪ ವಿಚಾರಗಳಿಂದ ಪ್ರಯೋಜನವಿಲ್ಲ; ಯಾವುದಾದರೊಂದುವಿಧವಾದ ಮಾರ್ಗದಿಂದ ವೇದಾಂತ ಮಹಾವಾಕ್ಯದ ಅರ್ಥವನ್ನು ಆಶ್ರಯಿಸಬೇಕು ॥೩॥

ಶಾನ್ತಿಃ ಶ್ರೇಯಃ ಪರಂ ವಿದ್ಧಿ ತತ್ಪ್ರಾಪ್ತೌ ಯತ್ನವಾನ್ ಭವ ।
ಭೋಕ್ತವ್ಯಮೋದನಂ ಪ್ರಾಪ್ತಂ ಕಿಂ ತತ್ಸಿದ್ಧೌ ವಿಕಲ್ಪಿತೈಃ ॥೪॥
ಅಕಾರಣೈಃ ಕಾರಣಿಭಿಃ ಬೋಧಾರ್ಥಮುಪವಿನ್ಯಾಯತೇ ।
ಉಪಮಾನೈಸ್ತೂಪಮೇಯೈಃ ಸದೃಶೈರೇಕದೇಶತಃ ॥೫॥
ಸ್ಥಾತವ್ಯಂ ನೇಹ ಭೋಗೇಷು ವಿವೇಕರಹಿತಾತ್ಮನಾ ।
ಉಪಲೋದರಸಞ್ಜಾತಪರಿಪೀನಾನ್ಧಭೇಕವತ್ ॥೬॥
ದೃಷ್ಟಾನ್ತೈರ್ಯತ್ನಮಾಶ್ರಿತ್ಯ ಜೇತವ್ಯಂ ಪರಮಂ ಪದಮ್ ।
ವಿಚಾರಣವತಾ ಭಾವ್ಯಂ ಶಾನ್ತಿಶಾಸ್ತ್ರಾರ್ಥಶಾಲಿನಾ ॥೭॥
ಶಾಸ್ತ್ರೋಪಶಮಸೌಜನ್ಯಪ್ರಜ್ಞಾತಜ್ಜ್ಞಸಮಾಗಮೈಃ ।

ರಾಮ! ಈ ಮಹಾವಾಕ್ಯಾರ್ಥಜ್ಞಾನದಿಂದುಂಟಾಗುವ ಸರ್ವಸಂಸಾರಶಾಂತಿಯೇ ಪರಮ ಶ್ರೇಯಸ್ಸೆಂದು ತಿಳಿ; ಈ ಶಾಂತಿಯನ್ನು ಪಡೆಯುವ ವಿಷಯದಲ್ಲಿ ಸಂಪೂರ್ಣವಾಗಿ ಪ್ರಯತ್ನವುಳ್ಳವನಾಗು; ಮಿಕ್ಕ ವಿಚಾರಗಳನ್ನು ಬಿಟ್ಟುಬಿಡು. ತಿನ್ನಬೇಕಾದ ಅನ್ನವು ಸಿಕ್ಕಿಬಿಟ್ಟಮೇಲೆ, ಆ ಅನ್ನವು ಸಿದ್ಧಿಸುವುದಕ್ಕೆ ಕಾರಣಗಳಾವುವೆಂಬ ವಿಚಾರಗಳಿಂದ ಪ್ರಯೋಜನವೇನು? ॥೪॥

ಮುಖ್ಯವಾಗಿ ಪ್ರಪಂಚದಲ್ಲಿ ಉಪಮಾನೋಪಮೇಯಗಳನ್ನು ಹೇಳುವುದೇತಕ್ಕೆಂದರೆ:—ಪುರುಷರ ಬೋಧೆಗೆ ಬರದಿರುವ ವಿಷಯಗಳನ್ನು ಬೋಧಿಸಿ, ಪ್ರಕೃತಕಾರ್ಯ ನೆರವೇರುವುದಕ್ಕಾಗಿಯೇ ಹೇಳುವರು; ಇಷ್ಟೇ ಹೊರತು, ಅವೆರಡಕ್ಕೂ ಸರ್ವಾಂಶದಲ್ಲಿಯೂ ಸಾದೃಶ್ಯವಿರಬೇಕೆಂದಾಗಲಿ—ಇತರವಿಧವಾದ ಗುಣಸಂಪತ್ತಿರಬೇಕೆಂದಾಗಲಿ ನಿಯಮವಿಲ್ಲ. ಈಗ ಸಾಮಾನ್ಯವಾಗಿ ಬಾಲಕನು ಔಷಧಕುಡಿಯುವುದಿಲ್ಲವೆಂದು ಹಠಮಾಡುತಿದ್ದರೆ, ಅವನಿಗೆ ಆರೋಗ್ಯವುಂಟಾಗಲೆಂದು ಬಯಸುವ ತಾಯಿಯು 'ಔಷಧಕುಡಿ; ನಿನ್ನ ಅಣ್ಣನಂತೆಯೇ ನಿನಗೂ ಕೂದಲು ಬೆಳೆಯುತ್ತದೆ' ಎಂದು ಹೇಳುವಳು. ಈ ಔಷಧಪಾನವು ಕೂದಲು ಬೆಳೆಯುವುದಕ್ಕೆ ಕಾರಣವಲ್ಲ; ಆದರೆ ಇದಕ್ಕೆ ಆರೋಗ್ಯರೂಪವಾದ ಫಲವೇನೋ ಉಂಟೇಉಂಟು. ಇಂತಹ ಸಂದರ್ಭಗಳಲ್ಲಿ ಸರ್ವಾಂಶದಲ್ಲಿಯೂ ಸಾದೃಶ್ಯವಿರುವುದೇ ಇಲ್ಲ; ಏಕದೇಶದಲ್ಲಿ ಸಾದೃಶ್ಯವುಳ್ಳ ಉಪಮಾನೋಪಮೇಯಗಳಿಂದಲೇ ಪ್ರಕೃತವಿಷಯಜ್ಞಾನವುಂಟಾಗಲೆಂದು ಯೋಚಿಸಿ ಅದಕ್ಕಾಗಿ ಉಪಮಾನವು ಹೇಳಲ್ಪಡುತ್ತದೆ. ಹೀಗೆಯೇ ಶಾಸ್ತ್ರವಿಚಾರದಲ್ಲಿಯೂ ತಿಳಿಯಬೇಕು ॥೫॥

ಹೀಗೆ ವಿಚಾರಮಾಡುತ ಆತ್ಮಜ್ಞಾನಕ್ಕಾಗಿ ಪ್ರಯತ್ನಪಡತಕ್ಕವನು, ಕಲ್ಲುಪೊಟ್ಟರೆಯಲ್ಲಿ ಹುಟ್ಟಿ ಅಲ್ಲಿಯೇ ಬೆಳೆದಿರುವ ಕುರುಡುಕಪ್ಪೆಯಂತೆ— ವಿವೇಕರಹಿತನಾಗಿರಬಾರದು ॥೬॥

ಈ ವಿಧವಾದ ದೃಷ್ಟಾಂತಗಳಿಂದ ಬೋಧಪಡೆದವನಾಗಿ, ಪ್ರಯತ್ನಪೂರ್ವಕವಾಗಿ ಪರಮಪದವನ್ನು ವಶಪಡಿಸಿಕೊಳ್ಳಬೇಕು; ಸರ್ವದಾ ವಿಚಾರಪರನಾಗಿಯೂ ಶಾಂತಿಯುಕ್ತನಾಗಿಯೂ ಶಾಸ್ತ್ರಾರ್ಥಜ್ಞಾನಶಾಲಿಯಾಗಿಯೂ ಇರಬೇಕು ॥೭॥

ಮತ್ತು, ಶಾಸ್ತ್ರಪರಿಚಯ ಉಪಶಾಂತಿ ಸೌಜನ್ಯ ಪ್ರಜ್ಞೆ ಸರ್ವಜ್ಞಸಹವಾಸ—ಇವು

ಅನ್ತರಾನ್ತರಸಮ್ಪನ್ನಧರ್ಮಾರ್ಥೋಪಾರ್ಜನಕ್ರಿಯಃ ॥೮॥
ತಾವದ್ವಿಚಾರಯೇತ್ ಪ್ರಾಜ್ಞೋ ಯಾವದ್ವಿಶ್ರಾನ್ತಿಮಾತ್ಮನಿ ।
ಸಮ್ಪ್ರಯಾತ್ಯಪುನರ್ನಾಶಾಂ ಶಾನ್ತಿಂ ತುರ್ಯಪದಾಭಿಧಾಮ್ ॥೯॥
ತುರ್ಯವಿಶ್ರಾನ್ತಿಯುಕ್ತಸ್ಯ ಪ್ರತೀಪಸ್ಯ ಭವಾರ್ಣವಾತ್ ।
ಜೀವತೋಜೀವತಶ್ಚೈವ ಗೃಹಸ್ಥಸ್ಯ ತಥಾ ಯತೇಃ ॥೧೦॥
ನ ಕೃತೇನಾಕೃತೇನಾರ್ಥೋ ನ ಶ್ರುತಿಸ್ಮೃತಿವಿಭ್ರಮೈಃ ।
ನಿರ್ಮನ್ದರ ಇವಾಮ್ಭೋಧಿಃ ಸ ತಿಷ್ಠತಿ ಯಥಾಸ್ಥಿತಮ್ ॥೧೧॥
ಏಕಾಂಶೇನೋಪಮಾನಾನಾಂ ಉಪಮೇಯಸಧರ್ಮತಾ ।
ಬೋದ್ಧವ್ಯಂ ಬೋಧ್ಯಬೋಧಾಯ ನ ಸ್ಥೇಯಂ ಬೋಧಚಞ್ಚುನಾ ॥೧೨॥
ಯಯಾಕಯಾಚಿದ್ಯುಕ್ತ್ಯಾ ತು ಬೋದ್ಧವ್ಯಂ ಬೋಧ್ಯಮೇವ ತೇ ।
ಯುಕ್ತಾಯುಕ್ತಂ ನ ಪಶ್ಯನ್ತಿ ವ್ಯಾಕುಲಾಬೋಧಚಞ್ಚವಃ ॥೧೩॥
ಹೃದಯೇ ಸಂವಿದಾಕಾಶೇ ವಿಶ್ರಾನ್ತೇನುಭವಾತ್ಮನಿ ।

ಗಳಿಂದ ಕ್ರಮಕ್ರಮವಾಗಿ ಧರ್ಮಗಳನ್ನೂ ಅರ್ಥಗಳನ್ನೂ ಆರ್ಜಿಸುವ ಕೆಲಸವನ್ನು ನೆರವೇರಿಸಿಕೊಂಡವನಾಗಿ, ಪ್ರಾಜ್ಞನಾದವನು, ಆತ್ಮನಲ್ಲಿ ವಿಶ್ರಾಂತಿಪಡೆದು—ಪುನರಾವೃತ್ತಿಯಿಲ್ಲದ ತುರ್ಯಾವಸ್ಥೆಯೆಂದು ಪ್ರಸಿದ್ಧವಾದ ಶಾಂತಿಯನ್ನು ಹೊಂದುವವರೆಗೂ—ವಿಚಾರಮಾಡುತಲೇ ಇರಬೇಕು ॥೮–೯॥

ಹೀಗೆ ತುರ್ಯಾವಸ್ಥೆಯಲ್ಲಿ ವಿಶ್ರಾಂತಿಪಡೆದು—ಸಂಸಾರಸಮುದ್ರದಿಂದ ದಾಟಿಹೋಗಿರತಕ್ಕವನಿಗೆ, ಅವನು ಜೀವದಶೆಯಲ್ಲಿದ್ದರೂ ವಿದೇಹದಶೆಯಲ್ಲಿದ್ದರೂ—ಅವನು ಗೃಹಸ್ಥನಾಗಿದ್ದರೂ ಅಥವಾ ಯತಿಯಾಗಿದ್ದರೂ—ಯಾವಕೆಲಸವನ್ನೂ ಮಾಡಿದರೂ ಪ್ರಯೋಜನವಿಲ್ಲ; ಬಿಟ್ಟರೂ ಪ್ರಯೋಜನವಿಲ್ಲ; ಶ್ರುತಿ ಸ್ಮೃತಿ ಮುಂತಾದ ವಿಭ್ರಮಗಳಿಂದಲೂ ಪ್ರಯೋಜನವಿಲ್ಲ. ಮಥನಾನಂತರ ಮಂದರಪರ್ವತವನ್ನು ತೆಗೆದುಬಿಟ್ಟಿರುವ ಸಮುದ್ರದಂತೆ, ಅವನು ಯಾವವಿಧವಾಗಿಯೂ ಚಾಂಚಲ್ಯವಿಲ್ಲದೆ ಇರುವನು ॥೧೦.೧೧॥

ಈ ಸಮುದ್ರವಿಷಯದಲ್ಲಿಯೂ ಏಕಾಂಶದಲ್ಲಿ ಮಾತ್ರ ಉಪಮಾನೋಪಮೇಯಗಳಿಗೆ ಸಾದೃಶ್ಯವಭಿಮತವೆಂದು ತಿಳಿಯಬೇಕು. ಇದರಿಂದ ತಿಳಿಯಬೇಕಾದ ವಿಷಯವು ತಿಳಿಯುವುದು. ಅದುಬಿಟ್ಟು, ಬೋಧಚಂಚುವಾಗಿ ಪ್ರಾಜ್ಞನೆಂದು ಪ್ರಸಿದ್ಧನಾಗಬೇಕೆಂದಿರಕೂಡದು ॥೧೨॥

ಅಯ್ಯಾ! ರಾಮ! ಯಾವುದಾದರೊಂದುಪಾಯದಿಂದ, ನೀನು ತಿಳಿಯಬೇಕಾದುದನ್ನು ಮಾತ್ರ ತಿಳಿದುಕೊಳ್ಳುವವನಾಗು. ಪ್ರಜ್ಞಾವಂತರೆಂದು ಕೇವಲ ಪ್ರಸಿದ್ಧಿಗೆ ಬಂದಿರತಕ್ಕವರಾದರೋ, ಯುಕ್ತಾಯುಕ್ತಗಳನ್ನು ತಿಳಿಯಲಾರದವರಾಗಿರುವರು. ಇವರ ಜ್ಞಾನಕ್ಕೆ ಪರಮತಖಂಡನೆಯೊಂದೇ ಫಲವಾಗುವುದು. ಇವರನ್ನು ಬೋಧಚಂಚುಗಳೆಂದು ವ್ಯವಹರಿಸುವರು ॥೧೩॥

ಜ್ಞಾನಾಕಾಶರೂಪವಾದ ಹೃದಯದೊಳಗೆ ವಿಶ್ರಾಂತಿಪಡೆದಿರುವ ಅನುಭವರೂಪ

ವಸ್ತುನ್ಯನರ್ಥಂ ಯಃ ಪ್ರಾಹ ಬೋಧಚಂಚುಃ ಸ ಉಚ್ಯತೇ ||೧೪||
ಅಭಿಮಾನವಿಕಲ್ಪಾಂಶೈಃ ಅಜ್ಞೋ ಜ್ಞಪ್ತಿಂ ವಿಕಲ್ಪಯೇತ್ |
ಬೋಧಂ ಮಲಿನಯತ್ಯನ್ತಃ ಸ್ವಂ ಖಮಬ್ದ ಇವಾಮಲಮ್ ||೧೫||
ಸರ್ವಪ್ರಮಾಣಸತ್ತಾನಾಂ ಪದಮಬ್ಧಿರಪಾಮಿವ |
ಪ್ರಮಾಣಮೇಕಮೇವೇಹ ಪ್ರತ್ಯಕ್ಷಂ ತದತಃ ಶೃಣು ||೧೬||
ಸರ್ವಾಕ್ಷಸಾರಮಧ್ಯಕ್ಷಂ ವೇದನಂ ವಿದುರುತ್ತಮಾಃ |
ನೂನಂ ತತ್ಪ್ರತಿಪತ್ತಿಸಿದ್ಧಂ ತತ್ ಪ್ರತ್ಯಕ್ಷಮುದಾಹೃತಮ್ ||೧೭||
ಅನುಭೂತೇರ್ವೇದನಸ್ಯ ಪ್ರತಿಪತ್ತೇರ್ಯಥಾಭಿಧಮ್ |
ಪ್ರತ್ಯಕ್ಷಮಿತಿ ನಾಮೇಹ ಕೃತಂ ಜೀವಃ ಸ ಏವ ನಃ ||೧೮||

ವಾದ ವಸ್ತುವಿನಲ್ಲಿ ಯಾವನು ಅನರ್ಥವನ್ನು ಹೇಳುವನೋ, (ಅನುಭವವಿಲ್ಲದೆ ಸುಮ್ಮನೆ ಮಾತಾಡತಕ್ಕವನು) ಅವನು ಬೋಧಚಂಚುವೆಂದು ಹೇಳಲ್ಪಡುವನು||೧೪||

ಮತ್ತು, ಅಜ್ಞನಾದ ಬೋಧಚಂಚುವು, ಜ್ಞಾನಫಲವಾದ ಅನುಭವವನ್ನು ವ್ಯತ್ಯಾಸಪಡಿಸುವುದಲ್ಲದೆ, ತಾನು ಪ್ರಾಜ್ಞನೆಂಬ ಅಭಿಮಾನದಿಂದ ನಾನಾವಿಧ ವಿಕಲ್ಪಾಂಶಗಳನ್ನು ಮಾಡುತ, ಜ್ಞಾನವನ್ನೂ ವ್ಯತ್ಯಾಸಪಡಿಸುವನು. ಮೇಘವು ಆಕಾಶವನ್ನು ಮಲಿನಪಡಿಸುವಂತೆ, ಇವನು ನಿರ್ಮಲವಾದ ಅಂತರವಾದ ಆತ್ಮಜ್ಞಾನವನ್ನೂ ಮಲಿನಮಾಡುವನು||

ಹೇ ರಾಮ! ಈಗ ಈ ದೃಷ್ಟಾಂತಾದಿಗಳಿಗೆಲ್ಲ ಮುಖ್ಯವಾದ ಪ್ರತ್ಯಕ್ಷಪ್ರಮಾಣ ಸ್ವರೂಪವನ್ನು ನಿನಗೆ ತಿಳುಹಿಸುವೆನು. ಈ ಲೋಕದಲ್ಲಿ ಸಮಸ್ತ ಜಲಕ್ಕೂ ಸಮುದ್ರವು ಮುಖ್ಯಾಧಾರವಾಗಿರುವಂತೆ, ಸಮಸ್ತ ಪ್ರಮಾಣಗಳಿಗೂ ಪ್ರತ್ಯಕ್ಷಪ್ರಮಾಣವೊಂದೇ ಮುಖ್ಯಾಧಾರವಾಗಿರುವುದು. ಯಾವ ಪ್ರಮಾಣವಾದರೂ ಇದಕ್ಕೆ ವಿರುದ್ಧವಾಗಿದ್ದರೆ ಸಲ್ಲಲಾಗಲಾರದು. ಆದಕಾರಣ ಇಂತಹ ಪ್ರತ್ಯಕ್ಷಪ್ರಮಾಣ ಸ್ವರೂಪವನ್ನು ಕೇಳುವವನಾಗು ||೧೬||

ಪ್ರಪಂಚದಲ್ಲಿ ಪ್ರಾಜ್ಞರಾದವರು, ಪ್ರತ್ಯಕ್ಷಜ್ಞಾನವೇ ಸಕಲೇಂದ್ರಿಯಸಾರವೆಂದು ಹೇಳುವರು. ಹೀಗೆ ಸಕಲೇಂದ್ರಿಯ ಸಾರಭೂತವಾದ ಪ್ರತ್ಯಕ್ಷವು ಜ್ಞಾನದಿಂದ ಸಿದ್ಧವಾಗಿರುವುದು. ಇದು ನಿಶ್ಚಯವು. ಇದನ್ನು (ಇಂದ್ರಿಯಜನ್ಯವಾದ ಜ್ಞಾನವನ್ನು) ಪ್ರತ್ಯಕ್ಷವೆಂದು ಹೇಳಿರುವರು. ಹೀಗೆ ಜ್ಞಾನಿಗಳಿಗೆ ಅನುಭವಗೋಚರನಾದ ಸಾಕ್ಷಿಚೈತನ್ಯವೇ ಪ್ರತ್ಯಕ್ಷವೆನ್ನಿಸಿಕೊಳ್ಳುವುದು ||೧೭||

ಈ ಪ್ರಪಂಚದಲ್ಲಿ ಜ್ಞಾತೃ ಜ್ಞಾನ ಜ್ಞೇಯ (ತಿಳಿಯತಕ್ಕವನು, ತಿಳಿಯುವಿಕೆ, ತಿಳಿಯಲ್ಪಡತಕ್ಕ ಪದಾರ್ಥ) ಗಳೆಂಬುದಾಗಿ ಇರುವುವಷ್ಟೆ! ಇವಕ್ಕೆ ತ್ರಿಪುಟಿಯೆಂದು ವ್ಯವಹಾರವು. ಇದು ಅನೇಕ ರೂಪವಾಗಿ ವ್ಯಾಪಿಸುವುದರಿಂದುಂಟಾಗುವ ಜ್ಞಾನಕ್ಕೇ ಅನುಭವವೆಂದೂ ವೇದನವೆಂದೂ ಪ್ರತಿಪತ್ತಿಯೆಂದೂ ಕ್ರಮವಾಗಿ ಹೆಸರಿರುವುದು. ಇದಕ್ಕೇ ಒಟ್ಟಾಗಿ ಪ್ರತ್ಯಕ್ಷವೆಂದು ನಮ್ಮಲ್ಲಿ ಹೆಸರಿಡಲ್ಪಟ್ಟಿರುವುದು. ಈ ಪ್ರತ್ಯಕ್ಷವೇ ಜೀವನೆನ್ನಿಸಲ್ಪಡುವನು ||೧೮||

ಸ ಏವ ಸಂವಿತ್ ಸ ಪುಮಾನ್ ಅಹನ್ತಾಪ್ರತ್ಯಯಾತ್ಮಕಃ ।
ಸ ಯಯೋದೇತಿ ಸಂವಿತ್ಯಾ ಸಾ ಪದಾರ್ಥ ಇತಿ ಸ್ಮೃತಾ ॥೧೯॥
ಸ ಸಙ್ಕಲ್ಪವಿಕಲ್ಪಾದ್ಯೈಃ ಕೃತನಾನಾಕ್ರಮಭ್ರಮೈಃ ।
ಜಗತ್ತಯಾ ಸ್ಫುರತ್ಯಮ್ಬು ತರಙ್ಗಾದಿತಯಾ ಯಥಾ ॥೨೦॥
ಪ್ರಾಗಕಾರಣಮೇವಾಶು ಸರ್ಗಾದೌ ಸರ್ಗಲೀಲಯಾ ।
ಸ್ಫುರಿತ್ವಾ ಕಾರಣಂ ಭೂತಂ ಪ್ರತ್ಯಕ್ಷಂ ಸ್ವಯಮಾತ್ಮನಿ ॥೨೧॥
ಕಾರಣಂ ತ್ವವಿಚಾರೋತ್ಥಜೀವಸ್ಯಾಸದಪಿ ಸ್ಥಿತಮ್ ।
ಸದಿವಾಸ್ಯಾಂ ಜಗದ್ರೂಪಂ ಪ್ರಕೃತೌ ವ್ಯಕ್ತಿಮಾಗತಮ್ ॥೨೨॥
ಸ್ವಯಮೇವ ವಿಚಾರಸ್ತೇ ಸ್ವತಉತ್ಥಂ ಸ್ವಕಂ ವಪುಃ ।
ನಾಶಯಿತ್ವಾ ಕರೋತ್ಯಾಶು ಪ್ರತ್ಯಕ್ಷಂ ಪರಮಂ ಮಹತ್ ॥೨೩॥
ವಿಚಾರವಾನ್ ವಿಚಾರೋಽಪಿ ಆತ್ಮಾನಮವಗಚ್ಛತಿ ।

ಹೀಗೆ ಸಾಕ್ಷಿಭೂತನಾದ ಜೀವನೇ ಸಂವಿತ್ತೆನ್ನಿಸಿಕೊಳ್ಳುವನು ; ಅವನೇ ಅಹಂಕಾರ ಜ್ಞಾನರೂಪನಾದಾಗ ಪುರುಷನೆನ್ನಿಸುವನು; ಅವನು ಯಾವವಿಧವಾದ ಭಾವನೆಯಿಂದುದಯಿಸುವನೋ, ಅದೇ ಪದಾರ್ಥವೆನ್ನಿಸುವನು. ಹೀಗೆ ಒಬ್ಬನೇ ಜ್ಞಾನಜ್ಞಾತೃಜ್ಞೇಯರೂಪನಾಗಿರುವನು ॥೧೯॥

ವತ್ಸ ! ರಾಮ ! ಸಮಷ್ಟಿಸೃಷ್ಟಿಯೆಂದೂ ವ್ಯಷ್ಟಿಸೃಷ್ಟಿಯೆಂದೂ ಎರಡುಭೇದವಿರುವುದಷ್ಟೆ ! ಹಿರಣ್ಯಗರ್ಭನೇ ಸಮಷ್ಟಿಸೃಷ್ಟಿಯೆಂದೂ, ಇತರ ಜಗತ್ತೇ ವ್ಯಷ್ಟಿಸೃಷ್ಟಿಯೆಂದೂ ತಿಳಿದೇ ಇರುವುದಷ್ಟೆ ! ವ್ಯಷ್ಟಿಸೃಷ್ಟಿಯಲ್ಲಿ ಮೇಲೆ ಹೇಳಿದ ಕ್ರಮವಿರುವಂತೆಯೇ ಸಮಷ್ಟಿಸೃಷ್ಟಿಯಲ್ಲಿಯೂ ಇರುವುದು. ಅವನು ಸಂಕಲ್ಪ ವಿಕಲ್ಪ ಮೊದಲಾದ ನಾನಾವಿಧ ಭ್ರಮೆಗಳಿಂದ—ಜಲವು ತರಂಗಾದಿರೂಪವಾಗಿ ಪ್ರಕಾಶಿಸುವಂತೆ, ಜಗದ್ರೂಪವಾಗಿ ಪ್ರಕಾಶಿಸುವನು ॥೨೦॥

ಹೀಗೆ ಪ್ರತ್ಯಕ್ಷಭೂತವಾದ ಸಾಕ್ಷಿಚೈತನ್ಯವು, ಸೃಷ್ಟಿಗೆ ಮೊದಲು ತಾನೊಂದಕ್ಕೂ ಕಾರಣವಾಗದೆಯೇ, ಸೃಷ್ಟ್ಯಾದಿಯಲ್ಲಿ ಸೃಷ್ಟಿರೂಪವಾದ ಲೀಲೆಯಿಂದ ಪ್ರಕಾಶವಾಗಿ, ತನ್ನಲ್ಲಿ ತಾನೇ ತನ್ನ ಸೃಷ್ಟಿಗೆ ಕಾರಣವೆನ್ನಿಸಿಕೊಳ್ಳುವುದು ॥೨೧॥

ಆದರೆ, ಒಂದೇ ಪದಾರ್ಥವು ಕಾರಣವಾಗಿಯೂ ಕಾರ್ಯವಾಗಿಯೂ ಆಗುವುದು ಅನುಭವವಿರುದ್ಧವೆಂದು ಶಂಕಿಸಬಾರದು ; ಈ ಜೀವನೆಂಬ ಪದಾರ್ಥವು ಅಜ್ಞಾನದಿಂದುತ್ಪನ್ನವಾಗಿರುವುದು ; ಇದಕ್ಕೆ ವಾಸ್ತವವಾಗಿ ಕಾರಣವಲ್ಲದಿದ್ದರೂ, ಸತ್ಯವಾಗಿ ಕಾರಣದಂತೆ ತೋರುವುದು. ಹೀಗೆ ಅವಿಚಾರದಿಂದ ಹಬ್ಬಿಕೊಂಡಿರುವ ಈ ಆತ್ಮಮಾಯೆಯಲ್ಲಿ, ಪ್ರಪಂಚಸ್ವರೂಪವು ವ್ಯಕ್ತವಾಗಿರುವುದು ॥೨೨॥

ಆದರೆ, ವಿಚಾರವೂ ಕೂಡ, ನಿನ್ನಪಾಡಿಗೆ ನೀನೇ ಮಾಡತಕ್ಕುದಾಗಿರುವುದು; ತನಗೆ ತಾನೇ ಉತ್ಪನ್ನವಾಗಿರುವ ತನ್ನ ದೇಹಜ್ಞಾನವನ್ನು, ಆ ವಿಚಾರವು ನಾಶಪಡಿಸಿ, ಅಪರಿಚ್ಛಿನ್ನವಾದ ಪರಮಪದರೂಪವಾದ ಪ್ರತ್ಯಕ್ಷ ಚೈತನ್ಯರೂಪನನ್ನಾಗಿ ಮಾಡುತ್ತದೆ ॥೨೩॥

ಆತ್ಮಸಾಕ್ಷಾತ್ಕಾರವಾಗಿಬಿಟ್ಟಮೇಲೋ—ಎಂದರೆ, ಆಗ ಆ ವಿಚಾರವಿರುವುದಿಲ್ಲ.

ಯದಾ ತದಾ ನಿರುಲ್ಲೇಖಂ ಪರಮೇವಾವಶಿಷ್ಯತೇ ||೨೪||
ಮನಸ್ಯನೀಹಿತೇ ಶಾನ್ತೇ ಸ್ವಬುದ್ಧೀನ್ದ್ರಿಯಕರ್ಮಭಿಃ |
ನ ಹಿ ಕಶ್ಚಿತ್ ಕೃತೈರರ್ಥೋ ನಾಕೃತೈರಪ್ಯಭಾವನಾತ್ ||೨೫||
ಮನಸ್ಯನೀಹಿತೇ ಶಾನ್ತೇ ನ ಪ್ರವರ್ತನ್ತ ಏವ ತೇ |
ಕರ್ಮೇನ್ದ್ರಿಯಾಣಿ ಕರ್ಮಾದೌ ಅಸಙ್ಘಾರಿತಯನ್ತ್ರವತ್ ||೨೬||
ಮನೋಯನ್ತ್ರಸ್ಯ ಚಲನೇ ಕಾರಣಂ ವೇದನಂ ವಿದುಃ |
ಪ್ರಣಾಳೀದಾರುಮೇಷಸ್ಯ ರಜ್ಜುರನ್ತರ್ಗತಾ ಯಥಾ ||೨೭||
ರೂಪಾಲೋಕಮನಸ್ಕಾರಪದಾರ್ಥವ್ಯಾಕುಲಂ ಜಗತ್ |
ವಿದ್ಯತೇ ವೇದನಸ್ಯಾನ್ತಃ ವಾತಾನ್ತಃ ಸ್ಪನ್ದನಂ ಯಥಾ ||೨೮||

ಯಾವಾಗ ವಿಚಾರಶಾಲಿಯು ಆತ್ಮಸ್ವರೂಪಜ್ಞನಾಗುವನೋ, ಆಗ ಆ ವಿಚಾರವೂ ಕೂಡ, ಅದಿದೆಯೆಂಬ ಶಬ್ದಕ್ಕೂ ಅಗೋಚರವಾಗುವಂತೆ, ಕೇವಲ ಪರಮಾತ್ಮಮಾತ್ರಾವಶೇಷ ವಾಗುವುದು ||೨೪||

ಮನಸ್ಸು ವಿಷಯೇಚ್ಛಾಶೂನ್ಯನಾಗಿ—ಬುದ್ಧಿ ಇಂದ್ರಿಯ ಕರ್ಮಗಳೊಡನೆ ತಾನು ಶಾಂತಿಹೊಂದಿರಲು, ಉಪಶಾಂತವಾದ ವಿಷಯದಲ್ಲಿ ಪುನಃ ಸತ್ಯವೆಂದು ಭಾವನೆಯುಂಟಾಗದಿರುವುದರಿಂದ ಯಾವ ಕೆಲಸವನ್ನೂ—ಮಾಡಿದ್ದರಿಂದಲೂ ಯಾವುದೊಂದು ಪ್ರಯೋಜನವೂ ಇಲ್ಲ; ಬಿಟ್ಟದ್ದರಿಂದಲೂ ಇಲ್ಲ ||೨೫||

ರಾಮ! ಹೀಗೆ ಮನಸ್ಸು ಇಚ್ಛಾಶೂನ್ಯವಾಗಿ ಶಾಂತವಾಗಿರಲು, ತಿರುಗಿಸದಿರುವ ಯಂತ್ರಗಳಂತೆ— ನಿನ್ನ ಕರ್ಮೇಂದ್ರಿಯಗಳು ಕಾರ್ಯಮುಂತಾದವುಗಳಲ್ಲಿ ಪ್ರವರ್ತಿಸುವುದೇ ಇಲ್ಲ ||೨೬||

ಲೋಕದಲ್ಲಿ ವಿನೋದಾರ್ಥವಾಗಿ—ಮರದಲ್ಲಿ ದೊಡ್ಡ ಸಲ್ಲಿಯನ್ನು ಮಾಡಿ, ಅದರೊಳಗೆ ಮರದಿಂದಲೇ ಎರಡು ಟಗರುಗಳನ್ನು ಮಾಡಿ, ಆ ಟಗರುಗಳೊಳಗೆ ಒಂದು ದಾರವನ್ನು ಪೋಣಿಸಿದ್ದು, ಬೇಕಾದಾಗ ಆ ದಾರವನ್ನು ಅಳ್ಳಾಡಿಸಿದರೆ, ಆ ಟಗರುಗಳೂ ಒಂದಕ್ಕೊಂದು ಸೇರುತ್ತಲೂ ಮತ್ತೆಮತ್ತೆ ಬಿಡುತ್ತಲೂ ಇರುತ್ತವೆಯಲ್ಲವೆ! ಅಂತು ಆ ಹಗ್ಗವನ್ನು ಅಳ್ಳಾಡಿಸಿದರೆಯೇ ಆ ಟಗರು ಅಳ್ಳಾಡುವುದು; ಇಲ್ಲದಿದ್ದರೆ ಅದೂ ಇಲ್ಲ. ಹೀಗೆ ಮನಸ್ಸೆಂಬ ಯಂತ್ರವು ಚಲಿಸುವುದಕ್ಕೆ ಜ್ಞಾನವು ಕಾರಣವೆಂದು ಪ್ರಾಜ್ಞರು ನಿಶ್ಚಯಿಸಿರುವರು ||೨೭||

ಹೀಗೆ ಹೇಳಿದಾಗ ಒಂದುವಿಧವಾದ ಆಶಂಕೆಯುಂಟಾಗಬಹುದು. ಅದೇನೆಂದರೆ:— ಮನಸ್ಸು ಚಲಿಸುವುದಕ್ಕೆ ಜ್ಞಾನವು ಕಾರಣವಾಗಬೇಕಾದರೆ, ಆ ಜ್ಞಾನವು ನಿರ್ವಿಷಯವಾದರೆ ಆಗಲಾರದು ; ಸವಿಷಯಕಜ್ಞಾನದಿಂದಲೇ ಮನಸ್ಸು ಚಲಿಸುವುದು. ಹೀಗಾದಮೇಲೆ ಮನಶ್ಚಲನೆಗಿಂತ ಮೊದಲೇ ವಿಷಯವಿರುತ್ತದೆಂದು ಒಪ್ಪಬೇಕಾಗುವುದು. ಆದರೆ, ವಿಷಯವೆಲ್ಲವೂ ಮನೋಮಯವೆಂದು ಹಿಂದೆ ಹೇಳಿರುವುದರಿಂದ, ಮನಸ್ಸು ಹುಟ್ಟಿದಮೇಲೆಯೇ ವಿಷಯಗಳು ಹುಟ್ಟುತ್ತವೆಂದು ಹೇಳಬೇಕಾಗುವುದು. ಹೀಗೆ ಮನಸ್ಸಿಗೆ ವಿಷಯವೂ—ವಿಷಯಕ್ಕೆ ಮನಸ್ಸೂ ಕಾರಣವೆಂದು ಅನ್ಯೋನ್ಯಾಶ್ರಯರೂಪವಾದ ದೋಷವುಂಟಾಗುವುದು.

ಸರ್ವಾತ್ಮವೇದನಂ ಶುದ್ಧಂ ಯಥೋದೇತಿ ತದಾತ್ಮಕಮ್ ।
ಭಾತಿ ಪ್ರಸೃತದಿಕ್ಕಾಲಬಾಹ್ಯಾಂತ್ಮರೂಪದೇಹಕಮ್ ॥೨೯॥
ದೃಷ್ಟೈವ ದೃಶ್ಯತಾಭಾಸಂ ಸ್ವರೂಪಂ ಧಾರಯನ್ ಸ್ಥಿತಃ ।
ಸ್ವಂ ಯಥಾ ಯತ್ರ ಯದ್ರೂಪಂ ಪ್ರತಿಭಾತಿ ತಥೈವ ತತ್ ॥೩೦॥
ಸ ಸರ್ವಾತ್ಮಾ ಯಥಾ ಯತ್ರ ಸಮುಲ್ಲಾಸಮುಪಾಗತಃ ।
ತಿಷ್ಠತ್ಯಾಶು ತಥಾ ತತ್ರ ತದ್ರೂಪ ಇವ ರಾಜತೇ ॥೩೧॥
ಸರ್ವಾತ್ಮಕತಯಾ ದ್ರಷ್ಟುಃ ದೃಶ್ಯತ್ವಮಿವ ಯುಜ್ಯತೇ ।
ದೃಶ್ಯತ್ವಂ ದ್ರಷ್ಟೃಸದ್ಭಾವೇ ದೃಶ್ಯತಾಪಿ ನ ವಾಸ್ತವೀ ॥೩೨॥

ಎಂದು ಶಂಕೆ ಹುಟ್ಟುವುದು. ಹೀಗೆ ಶಂಕಿಸಬಾರದು. ಈ ಜಗತ್ತೆಂಬ ವಿಷಯವು ಹೊಸದಾಗಿ ಹುಟ್ಟುವುದಿಲ್ಲ; ಬಾಹ್ಯೇಂದ್ರಿಯಗಳಿಂದ ವಿಷಯಗ್ರಹಣ—ಮನಸ್ಸಿನಿಂದ ವಿಷಯಾನುಸಂಧಾನ—ಈ ಪದಾರ್ಥಗಳಿಂದಲೇ ಅಲ್ಲವೆ ಜಗತ್ತೆಂಬುದು ತುಂಬಿರುವುದು! ಇಂತಹ ಜಗತ್ತು—ಗಾಳಿಯೊಳಗೆ ಚಲನೆಯಿದ್ದೇ ಇರುವಂತೆ—ಜ್ಞಾನದೊಳಗೆ ಇದ್ದೇ ಇರುವುದು. ಆದಕಾರಣ, ಪೂರ್ವೋಕ್ತರೀತಿಯಾದ ಶಂಕೆಗವಕಾಶವಿಲ್ಲ ॥೨೮॥

ಹೀಗೆ ವಿಷಯವು ಇದ್ದೇ ಇರುವ ಪಕ್ಷದಲ್ಲಿ, ಒಂದುವೇಳೆ ಅದು ಹುಟ್ಟಿತೆಂದೂ—ಮತ್ತೊಂದು ವೇಳೆ ಅದು ಹೋಯಿತೆಂದೂ—ಪ್ರಪಂಚದಲ್ಲಿರುವ ವ್ಯವಸ್ಥೆ ಹೇಗುಂಟಾಯಿತೆಂದರೆ:—ಶುದ್ಧವಾದ ಸರ್ವರೂಪವಾಗಿರುವ ಜ್ಞಾನವು ಯಾವರೂಪವಾಗಿ ಉದ್ಭವಿಸುವುದೋ, ಈ ಜಗದ್ರೂಪವಾದ ವಿಷಯವೂ ಕೂಡ ಆಯಾರೂಪವಾಗಿ—ದಿಕ್ಕು ಕಾಲ ಬಹಿರ್ವಿಷಯ ಅಂತರ್ವಿಷಯ—ಈ ವಿಧವಾದ ಆಕಾರವುಳ್ಳದ್ದಾಗಿ ಕಾಣಿಸಿಕೊಳ್ಳುವುದು ॥೨೯॥

ಈ ಸಂಗತಿಯು ಯುಕ್ತವಾಗಿಯೂ ಇರುವುದು. ನಿತ್ಯವಾಗಿರುವ ತನ್ನ ರೂಪವನ್ನು ಧರಿಸಿಕೊಂಡಿರುವ ಆತ್ಮನು, ಪ್ರಪಂಚವೆಂದು ತೋರುವ ತನ್ನ ಆಕಾರವನ್ನೇ ಯಾವ ಕಡೆಯಲ್ಲಿ ಯಾವರೀತಿಯಾಗಿ ನೋಡುವನೋ, ಅದು ಹಾಗೆಯೇ ತೋರುವುದು ॥೩೦॥

ಸರ್ವಸ್ವರೂಪನಾದ ಆ ಆತ್ಮನು, ಎಲ್ಲಿ ಹೇಗೆ ಪ್ರಕಾಶಹೊಂದುವನೋ, ಆಕ್ಷಣವೇ ಅಲ್ಲಿ ಹಾಗೆಯೇ ನೆಲೆಸುವನು; ಬಳಿಕ ಆ ಆಕಾರವುಳ್ಳವನಂತೆ ತೋರುವನು ॥೩೧॥

ದ್ರಷ್ಟೃವಾದ ಆತ್ಮನು ಸರ್ವಸ್ವರೂಪನಾಗಿರುವುದರಿಂದ, ಅವನು ದೃಶ್ಯರೂಪನಾಗಿಯೂ ಇರಬಹುದೆಂಬುದು ಯುಕ್ತವಾಗಿರುವಂತೆಯೇ ತೋರುವುದು; ಆದರೆ ಇದೂ ಸರಿಯಲ್ಲ. ಹೇಗೆಂದರೆ:—ದ್ರಷ್ಟೃ ದೃಶ್ಯ ದೃಕ್ (ನೋಡತಕ್ಕವನು ನೋಡಲ್ಪಡತಕ್ಕುದು ನೋಡುವಿಕೆ) ಎಂದು ಮೂರು ಪದಾರ್ಥವುಂಟಷ್ಟೆ! ದ್ರಷ್ಟೃವು ದೃಶ್ಯವಾಗಿರುವುದು ವಾಸ್ತವ್ಯವಾಗಿದ್ದರೆ,—ದೃಕ್ಸ್ವರೂಪವನ್ನು ಬಿಟ್ಟು ದೃಶ್ಯವಾಗಿರುವನೆ? ಅಥವಾ ಅದನ್ನು ಬಿಡದೆಯೇ ಇರುವನೆ,?—ಎಂದು ಎರಡುಪಕ್ಷವುಂಟಾಗುವುದು. ಅದನ್ನು ಬಿಟ್ಟಿರುತ್ತಾನೆಂದರೆ, ದ್ರಷ್ಟೃವೇ ಇಲ್ಲದಂತಾಗುವುದು; ನೋಡತಕ್ಕವನೇ ಇಲ್ಲದಮೇಲೆ ನೋಡಲ್ಪಡತಕ್ಕುದು ಸಿದ್ಧಿಸುವ ಬಗೆ ಹೇಗೆ? ಹಾಗಲ್ಲದೆ, ಆರೂಪವನ್ನು ಬಿಡದೆಯೇ ದೃಶ್ಯನಾಗಿರುತ್ತಾನೆನ್ನುವಪಕ್ಷದಲ್ಲಿ, ಈ ದೃಶ್ಯವೆಂಬುದು ಅವನ ರೂಪಾಂತರವೇ ಆಗುವುದು. ಅಂತು ಹೇಗಾದರೂ ದೃಶ್ಯತ್ವವೆಂಬುದು ಕಲ್ಪಿತವಲ್ಲದೆ ವಾಸ್ತವ್ಯವಲ್ಲ ॥೩೨॥

ಅಕಾರಣಕಮೇವಾತೋ ಬ್ರಹ್ಮ ಸಿದ್ಧಮಿದಂ ಸ್ಥಿತಮ್ |
ಪ್ರತ್ಯಕ್ಷಮೇವ ನಿರ್ಮಾತೃ ತಸ್ಯಾಂಶಾಸ್ತ್ವನುಮಾದಯಃ ||೩೩||

ಸ್ವಯತ್ನಮಾತ್ರೇ ಯದುಪಾಸಕೋ ಯಃ ತದ್ದೈವಶಬ್ದಾರ್ಥಮುಪಾಸ್ಯ ದೂರೇ |
ಶೂರೇಣ ಸಾಧೋ ಪದಮುತ್ತಮಂ ತತ್ ಸ್ವಪೌರುಷೇಣೈವ ಹಿ ಲಭ್ಯತೇನ್ತಃ ||

ವಿಚಾರಯಾಚಾರ್ಯಪರಮ್ಪರಾಣಾಂ ಮತೇನ ಸತ್ಯೇನ ಸಿತೇನ ತಾವತ್ |
ಯಾವದ್ವಿಶುದ್ಧಂ ಸ್ವಯಮೇವ ಬುದ್ಧ್ವಾ ಹ್ಯನನ್ತರೂಪಂ ಪರಮಭ್ಯುಪೈಷಿ ||೩೫

ಇತಿ ಮುಮುಕ್ಷುವ್ಯವಹಾರಪ್ರಕರಣೇ ಪ್ರಮಾಣನಿರೂಪಣಂ ನಾಮ
ಏಕೋನವಿಂಶಃ ಸರ್ಗಃ.

ಹೀಗೆ ಕಾರ್ಯರೂಪವಾದ ಪ್ರಪಂಚವು ಮಿಥ್ಯಾರೂಪವಾದುದರಿಂದ, ಮಿಥ್ಯಾಪದಾರ್ಥವನ್ನು ಸಾಧಿಸತಕ್ಕ ಕಾರಣವೂ ಮಿಥ್ಯಾರೂಪವೇ ಆಗುವುದು. ಇದರಿಂದ ಈ ಪರಿದೃಶ್ಯಮಾನವಾದ ಪ್ರಪಂಚವೆಲ್ಲವೂ ಬ್ರಹ್ಮವೇ ಎಂದು ಸಿದ್ಧವಾಯ್ತು. ಹೀಗೆ ಪ್ರತ್ಯಕ್ಷ ಪ್ರಮಾಣವಾದ ಬ್ರಹ್ಮವೊಂದೇ ಇತರವಾದ ಸಕಲಜ್ಞಾನವನ್ನೂ ಉಂಟುಮಾಡತಕ್ಕುದು; ಅನುಮಾನಮುತಾಂದುವುಗಳೆಲ್ಲವೂ ಆ ಪ್ರತ್ಯಕ್ಷದ ಅಂಶಭೂತಗಳು ||೩೩||

ಅಯ್ಯಾ ಸಾಧುವಾದ ರಾಮನೇ! ಯಾವ ಮನುಷ್ಯನು, ಕೇವಲ ಸ್ವಪ್ರಯತ್ನಮಾತ್ರದಲ್ಲಿಯೇ ಯಾವ ದೈವವೆಂಬ ಅಭಿಪ್ರಾಯವನಿಟ್ಟುಕೊಂಡು ಅದನ್ನೇ ಸರ್ವದಾ ಸ್ಮರಿಸುತ ಆದಕ್ಕಧೀನನಂತಿರುವನೋ, ಅಂತಹ ಮನುಷ್ಯನು, ಇಂದ್ರಿಯಜಯದಲ್ಲಿ ಶೌರ್ಯವನ್ನು ತೋರಿಸಿ ಆ ಸರ್ವೋತ್ತಮವಾದ ಪರಮಪದವನ್ನು ತನ್ನ ಮನಸ್ಸಿನಲ್ಲಿ ಹೊಂದುವುದು ಪೌರುಷದಿಂದಲೇ ಅಲ್ಲದೆ, ದೈವದಿಂದಲ್ಲ ||೩೪||

ಆದಕಾರಣ, ವಿಶುದ್ಧವಾದ ಆ ಚೈತನ್ಯವನ್ನು ನೀನೇ ತಿಳಿದುಕೊಂಡು ಅನಂತವಾದ ಪರಮಪದವನ್ನು ಹೊಂದುವವರೆಗೂ, ಸತ್ಯವಾಗಿಯೂ ಶಾಸ್ತ್ರೀಯವಾಗಿಯೂ ಇರುವ ಆಚಾರ್ಯರುಗಳ ಅಭಿಪ್ರಾಯಕ್ಕನುಸಾರವಾಗಿ ನೀನು ವಿಚಾರಮಾಡುತಿರಬೇಕು ||೩೫||

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಪ್ರಮಾಣನಿರೂಪಣವೆಂಬ
ಹತ್ತೊಂಭತ್ತನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ವಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಆರ್ಯಸಙ್ಗಮಯುಕ್ತ್ಯಾದೌ ಪ್ರಜ್ಞಾಂ ವೃದ್ಧಿಂ ನಯೇದ್ಬಲಾತ್ ।
ತತೋ ಮಹಾಪುರುಷತಾಂ ಮಹಾಪುರುಷಲಕ್ಷಣೈಃ ॥೧॥
ಯೋಯೋ ಯೇನ ಗುಣೇನೇಹ ಪುರುಷಃ ಪ್ರವಿರಾಜತೇ ।
ಶಿಷ್ಯತೇ ತಂತಮೇವಾಶು ತಸ್ಮಾದ್ಬುದ್ಧಿಂ ವಿವರ್ಧಯೇತ್ ॥೨॥
ಮಹಾಪುರುಷತಾ ಹ್ಯೇಷಾ ಶಮಾದಿಗುಣಶಾಲಿನೀ ।
ಸಮ್ಯಕ್ ಜ್ಞಾನಂ ವಿನಾ ರಾಮ ಸಿದ್ಧಿಮೇತಿ ನ ಕಾಂಚನ ॥೩॥
ಜ್ಞಾನಾಚ್ಛಮಾದಯೋ ಯಾನ್ತಿ ವೃದ್ಧಿಂ ಸತ್ಪುರುಷಕ್ರಮಾಃ ।

ಮುಮುಕ್ಷುವ್ಯವಹಾರಪ್ರಕರಣದಲ್ಲಿ ಇಪ್ಪತ್ತನೆಯ ಸರ್ಗವು.

ಪ್ರಜ್ಞಾಬುದ್ಧಿಪ್ರಕಾರೋತ್ರ ಮಹಾಪುರುಷಲಕ್ಷಣಮ್ ॥
ಸದಾಚಾರಕ್ರಮಾಶ್ಚೋಕ್ತಾಃ ಪರಸ್ಪರವಿವರ್ಧನಾಃ ॥

ಈ ಸರ್ಗದಲ್ಲಿ, ಪ್ರಜ್ಞಾಬುದ್ಧಿಗಳ ರೀತಿಯೂ—ಮಹಾಪುರುಷಲಕ್ಷಣವೂ—ಸದಾಚಾರಪ್ರಕ್ರಮಗಳೂ—ಇವುಗಳು ಒಂದಕ್ಕೊಂದು ಅಭಿವೃದ್ಧಿಯುಂಟುಮಾಡುವುವೆಂಬ ವಿಷಯವೂ ಕೂಡ ಹೇಳಲ್ಪಟ್ಟಿರುವುವು.

ಪೂರ್ವೋಕ್ತವಾದ ಜ್ಞಾನವು ಮಹಾಪುರುಷರಲ್ಲಿಯೇ ನೆಲೆಸಿರುವುದರಿಂದಲೂ; ಮಹಾಪುರುಷರಾಗಬೇಕಾದರೆ ಸದಾಚಾರಸಂಪತ್ತಿಯಿರಬೇಕಾಗಿರುವುದರಿಂದಲೂ, ಆ ಸದಾಚಾರ ಸ್ವರೂಪವನ್ನು ವರ್ಣಿಸಲುಪಕ್ರಮಿಸಿರುವ ಶ್ರೀ ವಸಿಷ್ಠರು—ಮತ್ತೆ ಶ್ರೀರಾಮನನ್ನು ಕುರಿತು ಹೇಳಿದರು.

ಅಯ್ಯಾ! ರಾಮ! ಮನುಷ್ಯನು ಮೊದಲು ಸತ್ಸಹವಾಸಯೋಗದಿಂದ ಬಲಾತ್ಕಾರಪೂರ್ವಕವಾಗಿ ತನ್ನ ಪ್ರಜ್ಞೆಯನ್ನು ವೃದ್ಧಿಹೊಂದಿಸಬೇಕು; ಬಳಿಕ ಮುಂದೆ ಹೇಳುವ ಮಹಾಪುರುಷಲಕ್ಷಣಗಳಿಂದ ಮಹಾಪುರುಷತ್ವವನ್ನು ಸಂಪಾದಿಸಬೇಕು ॥೧॥

ಆದರೆ, ಈ ಪ್ರಪಂಚದಲ್ಲಿ ಸಕಲ ಸದ್ಗುಣಗಳೂ ಇರುವ ಮನುಷ್ಯನು ದುರ್ಲಭನಾಗಬಹುದು; ಅಂತಹ ಸಂದರ್ಭದಲ್ಲಿ, ಯಾವಯಾವ ಪುರುಷನು ಯಾವಯಾವ ಗುಣದಿಂದ ಪ್ರಕಾಶಿಸತಕ್ಕವನಾಗಿಯೂ ಶ್ರೇಷ್ಠನಾಗಿಯೂ ಇರುವನೋ, ಅವನವನನ್ನೇ ಬೇಗನೆ ಸೇವಿಸಿ, ಅವನ ದೆಸೆಯಿಂದ ಆಯಾ ಗುಣವನ್ನು ಸಂಪಾದಿಸಿ, ನಮ್ಮ ಪ್ರಜ್ಞೆಯನ್ನು ಅಭಿವೃದ್ಧಿಪಡಿಸಬೇಕು ॥೨॥

ಅಯ್ಯಾ! ರಾಮ! ಶಮದಮಾದಿಗುಣಗಳಿಂದ ಪ್ರಕಾಶಿಸುವ ಈ ಮಹಾಪುರುಷತೆಯೂ ಕೂಡ, ಉತ್ತಮವಾದ ಜ್ಞಾನವಿಲ್ಲದಿದ್ದರೆ ಯಾವ ಸಿದ್ಧಿಯನ್ನೂ ಹೊಂದುವುದಿಲ್ಲ॥

ಸತ್ಪುರುಷರಿಂದ ಆಚರಿಸಲ್ಪಡುವ ಶಮಾದಿಗುಣಗಳೆಲ್ಲವೂ, ವೃಷ್ಟಿಯಿಂದ ನೂತನ

ಶ್ಲಾಘನೀಯಾಃ ಫಲೇನಾನ್ತಃ ವೃಷ್ಟೇರಿವ ನವಾಙ್ಕುರಾಃ ‖೪‖
ಶಮಾದಿಭ್ಯೋ ಗುಣೇಭ್ಯಶ್ಚ ವರ್ಧತೇ ಜ್ಞಾನಮುತ್ತಮಮ್ ।
ಅನ್ನಾತ್ಮಕೇಭ್ಯೋ ಯಜ್ಞೇಭ್ಯಃ ಶಾಲಿವೃಷ್ಟಿರಿವೋತ್ತಮಾ ‖೫‖
ಗುಣಾಃ ಶಮಾದಯೋ ಜ್ಞಾನಾತ್ ಶಮಾದಿಭ್ಯಸ್ತಥಾ ಜ್ಞತಾ ।
ಪರಸ್ಪರಂ ವಿವರ್ಧನ್ತೇ ತೇ ಅಬ್ಜಸರಸೀ ಇವ ‖೬‖
ಜ್ಞಾನಂ ಸತ್ಪುರುಷಾಚಾರಾತ್ ಜ್ಞಾನಾತ್ ಸತ್ಪುರುಷಕ್ರಮಃ ।
ಪರಸ್ಪರಂ ಗತೌ ವೃದ್ಧಿಂ ಜ್ಞಾನಸತ್ಪುರುಷಕ್ರಮೌ ‖೭‖
ಶಮಪ್ರಜ್ಞಾದಿನಿಪುಣಪುರುಷಾರ್ಥಕ್ರಮೇಣ ಚ ।
ಅಭ್ಯಸೇತ್ ಪುರುಷೋ ಧೀಮಾನ್ ಜ್ಞಾನಸತ್ಪುರುಷಕ್ರಮೌ ‖೮‖
ನ ಯಾವತ್ ಸಮಮಭ್ಯಸ್ತೌ ಜ್ಞಾನಸತ್ಪುರುಷಕ್ರಮೌ ।
ಏಕೋಽಪಿ ನೈತಯೋಸ್ತಾತ ಪುರುಷಸ್ಯೇಹ ಸಿಧ್ಯತಿ ‖೯‖
ಯಥಾ ಕಲಮರಕ್ಷಿಣ್ಯಾ ಗೀತ್ಯಾ ವಿತತತಾಳಯಾ ।

ವಾದ ಅಂಕುರಗಳು ವೃದ್ಧಿಹೊಂದುವಂತೆ, ಫಲಸಂಪತ್ತಿನಿಂದ ಶ್ಲಾಘನೀಯಗಳಾಗಿ ಅಭಿವೃದ್ಧಿಪಡೆಯುವುವು ॥೪॥

ಪ್ರಪಂಚದಲ್ಲಿ ಅನ್ನಮಯವಾದ ಯಜ್ಞಗಳನ್ನು ಮಾಡಿದರೆ—ಆದರಿಂದ ಶಾಲಿ ಮುಂತಾದುವನ್ನು ಬೆಳೆಯಿಸುವ ಉತ್ತಮವೃಷ್ಟಿಯಾಗುವಂತೆ, ಶಮಾದಿ ಗುಣಗಳಿಂದ ಉತ್ತಮವಾದ ಜ್ಞಾನವು ಬೆಳೆಯುವುದು ॥೫॥

ಮತ್ತು, ಕೊಳದಲ್ಲಿ ಹುಟ್ಟಿರುವ ಕಮಲವು ಆ ಕೊಳದಿಂದಲೇ ಪುಷ್ಟಿಹೊಂದುವುದು; ಆ ಕೊಳವೂ ಕೂಡ, ಕಮಲದಿಂದಲೇ ಸೌರಭ್ಯಾದಿಗಳನ್ನು ಪಡೆಯುವುದು. ಹೀಗೆ ಕಮಲವು ಸರಸ್ಸಿನಿಂದಲೂ ಸರಸ್ಸು ಕಮಲದಿಂದಲೂ ಅಭಿವೃದ್ಧಿಪಡೆಯುವಂತೆ, ಶಮಾದಿ ಗುಣಗಳು ಜ್ಞಾನದಿಂದಲೂ—ಜ್ಞಾನವು ಶಮಾದಿಗುಣಗಳಿಂದಲೂ—ಅನ್ಯೋನ್ಯವಾಗಿ ಅಭಿವೃದ್ಧಿಪಡೆಯುವುವು ॥೬॥

ಸತ್ಪುರುಷರ ಆಚಾರದಿಂದ ಜ್ಞಾನವು ಹೆಚ್ಚುವುದು; ಜ್ಞಾನದಿಂದ ಸದಾಚಾರವು ಹೆಚ್ಚುವುದು; ಹೀಗೆ ಜ್ಞಾನ ಸದಾಚಾರಗಳೆರಡೂ ಅನ್ಯೋನ್ಯವಾಗಿ ಅಭಿವೃದ್ಧಿಪಡೆದುವುಗಳಾಗುವುವು ॥೭॥

ಬುದ್ಧಿಶಾಲಿಯಾದ ಮನುಷ್ಯನು, ಶಮ ಪ್ರಜ್ಞೆ ಮುಂತಾದ ಗುಣಗಳಿಂದ ನಿಪುಣವಾದ ಪುರುಷಪ್ರಯತ್ನದಿಂದ, ಜ್ಞಾನವನ್ನೂ ಸದಾಚಾರವನ್ನೂ ಚೆನ್ನಾಗಿ ಅಭ್ಯಸಿಸಬೇಕು ॥೮॥

ವತ್ಸ! ಈ ಜ್ಞಾನವನ್ನೂ ಸದಾಚಾರವನ್ನೂ ಸಮವಾಗಿ ಅಭ್ಯಾಸಮಾಡದಿರುವವರೆಗೂ, ಮನುಷ್ಯನಿಗೆ ಇವೆರಡರಲ್ಲೊಂದೂ ಸಿದ್ಧಿಸುವುದಿಲ್ಲ॥೯॥

ಗದ್ದೆಯಲ್ಲಿ ಪೈರುಕಾಯುವ ಹೆಂಗಸು, ತಾಳಹಾಕುತ ಹಾಡುಹೇಳಿಕೊಂಡು ಕುಳಿತಿರುವುದು ಸ್ವಭಾವಸಿದ್ಧವಲ್ಲವೆ! ಅವಳು ತಾನು ಸಂತೋಷಪಡುವುದಕ್ಕಾಗಿ ಹಾಡುಹೇಳುವಳಲ್ಲದೆ, ಮತ್ತೊಂದುದ್ದೇಶದಿಂದಲ್ಲ. ಆದರೂ, ಅವಳು ಹಾಕುವ ತಾಳದಿಂದಲೂ

ಖಗೋತ್ಪಾದೇನ ಸಹಿತಂ ಗೀತಾನನ್ದಃ ಪ್ರಸಾಧ್ಯತೇ ॥೧೦॥
ಜ್ಞಾನಸತ್ಪುರುಷೇಹಾಭ್ಯಾಂ ಅಕರ್ತ್ರಾ ಕರ್ತೃರೂಪಿಣಾ ।
ತಥಾ ಪುಂಸಾ ನಿರಿಚ್ಛೇನ ಸಮಮಾಸಾದ್ಯತೇ ಪದಮ್ ॥೧೧॥
ಸದಾಚಾರಕ್ರಮಃ ಪ್ರೋಕ್ತೋ ಮಯೈವಂ ರಘುನನ್ದನ ।
ತಥೋಪದಿಶ್ಯತೇ ಸಮ್ಯಕ್ ಏವಂ ಜ್ಞಾನಕ್ರಮೋಽಧುನಾ ॥೧೨॥
ಇದಂ ಯಶಸ್ಯಮಾಯುಷ್ಯಂ ಪುರುಷಾರ್ಥಫಲಪ್ರದಮ್ ।
ತಜ್ಜ್ಞಾದಾಪ್ತಾಚ್ಚ ಸಚ್ಛಾಸ್ತ್ರಂ ಶ್ರೋತವ್ಯಂ ಕಿಲ ಧೀಮತಾ ॥೧೩॥
ಶ್ರುತ್ವಾ ತ್ವಂ ಬುದ್ಧಿನೈರ್ಮಲ್ಯಾತ್ ಬಲಾದ್ಯಾಸ್ಯಸಿ ತತ್ ಪದಮ್ ।
ಯಥಾ ಕತಕಸಂಶ್ಲೇಷಾತ್ ಪ್ರಸಾದಂ ಕಲುಷಂ ಪಯಃ ॥೧೪॥
ವಿದಿತವೇದ್ಯಮಿದಂ ಹಿ ಮನೋ ಮುನೇಃ ವಿವಶಮೇವಹಿ ಯಾತಿ ಪರಂ ಪದಮ್।

ಹಾಡುವ ಹಾಡಿನಿಂದಲೂ ಪಕ್ಷಿಗಳು ಅಲ್ಲಿ ನಿಲ್ಲದೆ ಹಾರಿಹೋಗುವುವು. ಇವಳು ತನ್ನ ಆನಂದಕ್ಕಾಗಿ ಹಾಡುತಿದ್ದರೂ ಪಕ್ಷಿನಿರಾಸಫಲವನ್ನೂ ಹೊಂದಿಯೇ ಹೊಂದುವಳು. ಹೀಗೆಯೇ ಪುರುಷನು ಜ್ಞಾನವನ್ನೂ ಸದಾಚಾರವನ್ನೂ ಆಶ್ರಯಿಸಿದ್ದರೆ, ಅವನು ಜ್ಞಾನಕ್ಕೆ ವಿಘ್ನವಾದ ರಾಗದ್ವೇಷಾದಿಗಳ ನಿರಾಸದಲ್ಲಿಚ್ಛೆಯಿಲ್ಲದವನಾಗಿದ್ದರೂ, ಆತಏವ ಆ ಉದ್ದೇಶದಿಂದ ಕರ್ಮಮಾಡತಕ್ಕವನಲ್ಲದಿದ್ದರೂ, ಪರಮಪದಲಾಭಾರ್ಥವಾಗಿ ಜ್ಞಾನಸದಾಚಾರರೂಪಕರ್ಮಮಾಡಿದ ಮಾತ್ರದಿಂದಲೇ—ಅವನು ರಾಗದ್ವೇಷಾದಿನಿರಾಸದೊಡನೆ ಪರಮಪದವನ್ನೂ ಹೊಂದುವನು ॥೧೦—೧೧॥

ಅಯ್ಯಾ! ರಾಮ! ನಾನು ನಿನಗೆ ಈರೀತಿಯಾಗಿ ಸದಾಚಾರಕ್ರಮವನ್ನು ಹೇಳಿರುವೆನು; ಈಗ ಜ್ಞಾನಕ್ರಮವನ್ನೂ ಉಪದೇಶಿಸುವೆನು ॥೧೨॥

ನಾನು ಉಪದೇಶಿಸುವ ಈ ಉತ್ತಮವಾದ ಶಾಸ್ತ್ರವು, ಯಶಸ್ಕರವಾದುದು; ಆಯುಷ್ಯಾಭಿವೃದ್ಧಿಕರವಾದುದು; ಪರಮಪುರುಷಾರ್ಥರೂಪವಾದ ಫಲವನ್ನು ಕೊಡತಕ್ಕುದು. ಇಂತಹ ಈ ಉತ್ತಮಶಾಸ್ತ್ರವನ್ನು, ಬುದ್ಧಿವಂತನಾದವನು ತತ್ವಜ್ಞನಾಗಿಯೂ ಆಪ್ತನಾಗಿಯೂ ಇರತಕ್ಕವನ ಮುಖದಿಂದ ಕೇಳಬೇಕು ॥೧೩॥

ಚಿಲ್ಲದ ಬೀಜದ ಪುಡಿಯನ್ನು ಹಾಕಿದರೆ——ಮೊದಲು ಕೊಳೆಯಾಗಿದ್ದ ನೀರು ನೈರ್ಮಲ್ಯವನ್ನು ಪಡೆಯುವಂತೆ, ನೀನು ಈ ಗ್ರಂಥವನ್ನು ಕೇಳಿ—ಪ್ರಬಲವಾದ ಬುದ್ಧಿನೈರ್ಮಲ್ಯವನ್ನು ಪಡೆದು—ಆದರಿಂದ ಆ ಪರಮಪದವನ್ನು ಪಡೆಯುವೆ ॥೧೪॥

ವೇದಾಂತವಿಚಾರಕ್ಕಾವಶ್ಯಕವಾದ ಸಾಧನಸಂಪತ್ತಿಯುಳ್ಳವನ ಮನಸ್ಸು, ಈ ಗ್ರಂಥವಿಚಾರಮಹಿಮೆಯಿಂದ ತಿಳಿಯಬೇಕಾದ ತತ್ವವನ್ನು ತಿಳಿದುಕೊಂಡು, ತನಗಿಚ್ಛೆಯಿಲ್ಲದಿದ್ದರೂ ಜ್ಞಾನಪರಾಧೀನವಾಗಿ ಪರಮಪದಲಾಭವನ್ನು ಪಡೆಯುವುದು. ಆದರೆ ಇದು ಕೇವಲ ಸಾಧನಮಹಿಮೆಯೆಂದು ತಿಳಿಯಬಾರದು; ಆ ಪರತತ್ವದ ಸ್ವಭಾವವೂ ಅಂತಹುದಾಗಿಯೇ ಇರುವುದು. ಅಪರಿಚ್ಛಿನ್ನವಾಗಿರುವ ಆ ಪರಮಪದವು ತಿಳಿಯಲ್ಪಟ್ಟಮೇಲೆ,

ಯದವಬುದ್ಧಮಖಣ್ಡಿತಮುತ್ತಮಂ ತದವಬೋಧವಶಾನ್ನ ಜಹಾತಿ ಹಿ ॥೧೫॥

ಇತ್ಯಾರ್ಷೇ ಶ್ರೀವಾಸಿಷ್ಠಮಹಾರಾಮಾಯಣೇ ಶ್ರೀವಾಲ್ಮೀಕೀಯೇ ದೇವದೂತೋಕ್ತೇ ದ್ವಾತ್ರಿಂಶತ್ಸಾಹಸ್ರ್ಯಾಂ ಸಂಹಿತಾಯಾಂ ಮೋಕ್ಷೋಪಾಯೇ ಮುಮುಕ್ಷುವ್ಯವಹಾರಪ್ರಕರಣೇ ಸದಾಚಾರನಿರೂಪಣಂ ನಾಮ ವಿಂಶತಿತಮಃ ಸರ್ಗಃ.

ಮುಮುಕ್ಷುವ್ಯವಹಾರಪ್ರಕರಣಂ ಸಮಾಪ್ತಮ್.

ಓಮ್ ತತ್ ಸತ್.

ಮನಸ್ಸು ಕೇವಲ ಜ್ಞಾನಪರವಶವಾಗಿ, ಅದನ್ನು ಎಂದಿಗೂ ಬಿಡುವುದಿಲ್ಲ. ಆದಕಾರಣ ನೀನು ಈ ಗ್ರಂಥವನ್ನು ಚೆನ್ನಾಗಿ ಪರಿಶೀಲಿಸುವವನಾಗು—ಎಂದು ಶ್ರೀವಸಿಷ್ಠಮಹರ್ಷಿಗಳು ಶ್ರೀರಾಮಚಂದ್ರನನ್ನು ಕುರಿತು ಅಪ್ಪಣೆಕೊಟ್ಟರು ॥೧೫॥

ಇದು ಶ್ರೀ ವಾಲ್ಮೀಕಿಮಹರ್ಷಿವಿರಚಿತವಾದ ದೇವದೂತನಿಂದುಕ್ತವಾದ ದ್ವಾತ್ರಿಂಶತ್ಸಹಸ್ರಸಂಹಿತಾತ್ಮಕವಾದ ಮೋಕ್ಷೋಪಾಯಭೂತವಾದ ಶ್ರೀ ವಾಸಿಷ್ಠರಾಮಾಯಣದ ಮುಮುಕ್ಷುವ್ಯವಹಾರಪ್ರಕರಣದಲ್ಲಿ ಸದಾಚಾರನಿರೂಪಣವೆಂಬ ಇಪ್ಪತ್ತನೆಯ ಸರ್ಗವು.

ಇಂತು ಶ್ರೀಮತ್ಸಮಸ್ತಮಹೀಮಂಡಲ ಮಂಡನಾಯಮಾನ ಶ್ರೀಮನ್ಮಹೀಶೂರ
ಜನಪದಾಧೀಶ ಶ್ರೀಕೃಷ್ಣರಾಜ ಒಡೆಯರ್ ಬಹದೂರ್ ಜಿ.ಸಿ.ಎಸ್.ಐ.
ಯವರ ಮಹಾಸನ್ನಿಧಾನದಿಂದ ಪರಿಪೋಷಿತನಾಗಿ ತದಾಸ್ಥಾನ
ಪಂಡಿತನಾದ ಗುಂಡಶಾಸ್ತ್ರಿಯಿಂದ ರಚಿಸಲ್ಪಟ್ಟ
ಶ್ರೀಕೃಷ್ಣರಾಜವಿಜ್ಞಾನವೈಭವವೆಂಬ ಶ್ರೀಜ್ಞಾನವಾಸಿಷ್ಠ ಟೀಕೆಯಲ್ಲಿ
ಮುಮುಕ್ಷುವ್ಯವಹಾರವೆಂಬ ದ್ವಿತೀಯಪ್ರಕರಣಂ
ಪರಿಪೂರ್ಣಂ.

ಆಸ್ತಿಕಮಹನೀಯರಲ್ಲಿ ವಿಜ್ಞಾಪನೆ.

ನಮ್ಮವರಲ್ಲಿ ಉಂಟಾಗುತ್ತಿರುವ ಆಸ್ತಿಕ್ಯಶೈಥಿಲ್ಯವನ್ನು ಸ್ವಲ್ಪಮಟ್ಟಿಗಾದರೂ ಕಡಮೆಮಾಡಲು ಪ್ರಯತ್ನಪಟ್ಟು "ವಿಜ್ಞಾನವೈಭವ" ಎಂಬ ಮಾಸಪತ್ರಿಕೆಯನ್ನು ಪಕ್ರಮಿಸಿ ಇದರಲ್ಲಿ ಲೋಕೋತ್ತರ ಪ್ರಸಿದ್ಧಗ್ರಂಥವಾದ "ಶ್ರೀ ವಾಸಿಷ್ಠರಾಮಾಯಣ"ವನ್ನು ಕನ್ನಡ ಟೀಕಾ ವಿವರಣೆಗಳೊಡನೆ ಮುದ್ರಿಸುತ್ತಿರುವೆನು. ಇದರ ವಿಷಯವನ್ನೆಲ್ಲ ದಿವ್ಯಚಿತ್ತದಲ್ಲಿ ಪರಾಮರ್ಶಿಸಿ ಧರ್ಮಮಾರ್ಗಾಭಿವೃದ್ಧಿಬದ್ಧಾದರರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರು ಈ ಪತ್ರಿಕೆಗೆ ತಮ್ಮ ದಿವ್ಯನಾಮಾಂಕಿತವನ್ನಿತ್ತು ಅಸಾಧಾರಣ ಗೌರವವುಂಟುಮಾಡಿದಕಾರಣ, ಇದಕ್ಕೆ "ಶ್ರೀ ಕೃಷ್ಣರಾಜ ವಿಜ್ಞಾನವೈಭವ" ಎಂಬ ನಾಮಧೇಯವನ್ನಿಡಲಾಯಿತು. ಕೇವಲ ಮಂದಪ್ರಜ್ಞನಾದನಾನು ರಚಿಸಿರುವ ಟೀಕಿನಲ್ಲಿ ಯಾವುದಾದರೂ ನ್ಯೂನಾತಿರಿಕ್ತಗಳಿದ್ದರೆ, ಪ್ರಾಜ್ಞರಾದವರು ಮನ್ನಿಸಿ ಸೌಹಾರ್ದದಿಂದ ದಯವಿಟ್ಟು ತಿಳಿಸಿದಪಕ್ಷದಲ್ಲಿ, ಕೇವಲ ಕೃತಜ್ಞತೆಯಿಂದ ಸ್ವೀಕರಿಸಿ ಸರ್ವರಿಗೂ ಆ ವಿಷಯವನ್ನು ತಿಳಿಯಪಡಿಸತಕ್ಕವನಾಗಿರುವುದರಿಂದ, ಪ್ರಾಜ್ಞರು ನನ್ನ ವಿಜ್ಞಾಪನೆಯನ್ನು ಸಾರ್ಥಕಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಸಜ್ಜನವಿಧೇಯ,

ಗುಂಡಶಾಸ್ತ್ರೀ.